ಭಾನುವಾರ, ಫೆಬ್ರುವರಿ 4, 2024 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನೋಟ

ಮುಂಬೈನಲ್ಲಿ ಅಂಗಡಿಯೊಂದರ ಉದ್ಘಾಟನೆ ವೇಳೆ ಬಾಲಿವುಡ್ ನಟಿ ಶಿಲ್ಪಾ ಶೆಟ್ಟಿ ಶನಿವಾರ ಕಾಣಿಸಿಕೊಂಡಿದ್ದು ಹೀಗೆ....

ಭಾರತದ ಸಂಚಾರ ದಟ್ಟಣೆ ನಗರಗಳು
(ಸಾಮಾನ್ಯ ದಿನಗಳಲ್ಲಿ 10 ಕಿ.ಮೀ ಸಂಚಾರಕ್ಕೆ ತೆಗೆದುಕೊಳ್ಳುವ ಸಮಯ)

	ಬೆಂಗಳೂರು	ಪುಣೆ	ನವದೆಹಲಿ	ಮುಂಬೈ
ಸಿಬಿಡಿ	24 ನಿಮಿಷ	23 ನಿಮಿಷ	22 ನಿಮಿಷ	19 ನಿಮಿಷ
ಇತರೆ ಪ್ರದೇಶ	22 ನಿಮಿಷ	22 ನಿಮಿಷ	19 ನಿಮಿಷ	23 ನಿಮಿಷ

ಬೆಂಗಳೂರಿನಲ್ಲಿ ವಾರಾಂತ್ಯದಲ್ಲಿ 10 ಕಿ.ಮೀ ಸಂಚಾರಕ್ಕೆ ತೆಗೆದುಕೊಳ್ಳುವ ಸಮಯ

ಬೆಳಿಗ್ಗೆ 46 ನಿಮಿಷ

ಸಂಜೆ 54 ನಿಮಿಷ

2023ರಲ್ಲಿ ಅತಿ ಹೆಚ್ಚು ದಟ್ಟಣೆ ಕಂಡುಬಂದ ಬೆಂಗಳೂರಿನ ರಸ್ತೆ
ರಾಜಾರಾಮ್ ಮೋಹನ್ ರಾಯ್ ರಸ್ತೆ
(ಕಂಠೀರವ ಕ್ರೀಡಾಂಗಣಕ್ಕೆ ಹೊಂದಿಕೊಂಡಿರುವ ರಸ್ತೆ)

ಸಂಚಾರ ದಟ್ಟಣೆ: ಬೆಂಗಳೂರು ಮೊದಲು

ಟಾಮ್ ಟಾಮ್ 2023ರ ವರದಿ • 10 ಕಿ.ಮೀ ಸಂಚರಿಸಲು ಬೇಕಾಗುವ ಸರಾಸರಿ ಸಮಯ 28 ನಿಮಿಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2023ರಲ್ಲಿ ಅತಿ ಹೆಚ್ಚು ಸಂಚಾರ ದಟ್ಟಣೆ ಉಂಟಾಗಿದ್ದ ಭಾರತದ ನಗರಗಳ ಪಟ್ಟಿಯಲ್ಲಿ ಬೆಂಗಳೂರು ಮೊದಲ ಸ್ಥಾನದಲ್ಲಿದೆ. ವಿಶ್ವದ ನಗರಗಳ ಪಟ್ಟಿಯಲ್ಲಿ 6ನೇ ಸ್ಥಾನ ಪಡೆದುಕೊಂಡಿದೆ.

ವಿಶ್ವ ಹಾಗೂ ಭಾರತದ ಸಂಚಾರ ದಟ್ಟಣೆ ಬಗ್ಗೆ ಅಧ್ಯಯನ ನಡೆಸಿದ್ದ ಲಂಡನ್‌ನ 'ಟಾಮ್ ಟಾಮ್' ಸಂಸ್ಥೆಯು 2023ನೇ ಸಾಲಿನ ವರದಿಯನ್ನು ಬಿಡುಗಡೆ ಮಾಡಿದೆ.

ಕೇಂದ್ರ ವಾಣಿಜ್ಯ ಪ್ರದೇಶ (ಸಿಬಿಡಿ) ಹಾಗೂ ಇತರೆ ಪ್ರದೇಶಗಳಲ್ಲೂ ಅತಿ ಹೆಚ್ಚು ದಟ್ಟಣೆ ಉಂಟಾಗಿದ್ದ ನಗರಗಳ ಪಟ್ಟಿಯಲ್ಲಿ ಬೆಂಗಳೂರು ಮೊದಲ ಸ್ಥಾನದಲ್ಲಿದೆ. ಪುಣೆ, ನವದೆಹಲಿ, ಮುಂಬೈ ಕ್ರಮವಾಗಿ ಎರಡು, ಮೂರು ಹಾಗೂ ನಾಲ್ಕನೇ ಸ್ಥಾನದಲ್ಲಿವೆ.

ವಿಶ್ವದ ನಗರಗಳ ಪಟ್ಟಿಯ ಸಿಬಿಡಿ ವಿಭಾಗದಲ್ಲಿ ಬೆಂಗಳೂರು 6ನೇ ಸ್ಥಾನ, ಇತರೆ ಪ್ರದೇಶಗಳ ವಿಭಾಗದಲ್ಲಿ 3ನೇ ಸ್ಥಾನ ಪಡೆದುಕೊಂಡಿದೆ.

ಲಂಡನ್, ಡಬ್ಲಿನ್ ಹಾಗೂ ಟೊರಂಟೊ ನಗರಗಳು ಮೊದಲ, ಎರಡನೇ ಹಾಗೂ ಮೂರನೇ ಸ್ಥಾನದಲ್ಲಿವೆ. ಟಾಮ್ ಟಾಮ್ ಸಂಸ್ಥೆಯ ಪ್ರತಿನಿಧಿಗಳು 55 ದೇಶಗಳ 387 ನಗರಗಳಲ್ಲಿ ಅಧ್ಯಯನ ನಡೆಸಿ ವರದಿ ಸಿದ್ಧ-ಪಡಿಸಿದ್ದಾರೆ.

ಜೆ.ಸಿ. ರಸ್ತೆಯಲ್ಲಿ ಉಂಟಾಗಿದ್ದ ದಟ್ಟಣೆ
ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ.

2ನೇ ಸ್ಥಾನದಿಂದ 6ನೇ ಸ್ಥಾನಕ್ಕೆ

2022ರಲ್ಲಿ ವಿಶ್ವದ ನಗರಗಳ ಸಿಬಿಡಿ ವಿಭಾಗದ ಪಟ್ಟಿಯಲ್ಲಿ ಬೆಂಗಳೂರು 2ನೇ ಸ್ಥಾನದಲ್ಲಿತ್ತು. ಈ ಬಾರಿ 6ನೇ ಸ್ಥಾನಕ್ಕೆ ಬಂದಿದೆ. ಜೊತೆಗೆ, 2022ಕ್ಕೆ ಹೋಲಿಸಿದರೆ 2023ರಲ್ಲಿ ದಟ್ಟಣೆ ಸಂದರ್ಭದ ಪ್ರಯಾಣದ ಅವಧಿ 1 ನಿಮಿಷ ಕಡಿಮೆಯಾಗಿದೆ.

ಬೆಂಗಳೂರಿನಲ್ಲಿ 2022ರಲ್ಲಿ ಪ್ರತಿ ಗಂಟೆಗೆ 14 ಕಿ.ಮೀ ಸಂಚರಿಸಲು ಸಾಧ್ಯವಾಗುತ್ತಿತ್ತು. ಆದರೆ, 2023ರಲ್ಲಿ ಪ್ರತಿ ಗಂಟೆಗೆ 18 ಕಿ.ಮೀ ಸಂಚಾರಕ್ಕೆ ಅವಕಾಶ ಸಿಕ್ಕಿದೆ.

ವಿಶ್ವದ ಪಟ್ಟಿ (ಸಿಬಿಡಿ)

ನಗರ	10 ಕಿ.ಮೀ. ಸಂಚಾರಕ್ಕೆ ತೆಗೆದುಕೊಳ್ಳುವ ಸಮಯ	ದಟ್ಟಣೆ ಮಟ್ಟ	ದಟ್ಟಣೆ ಅವಧಿಯಲ್ಲಿ ಸರಾಸರಿ ವೇಗ (ಕಿ.ಮೀ/ಪ್ರತಿ ಗಂಟೆಗೆ)
ಲಂಡನ್ (ಯುಕೆ)	34 ನಿಮಿಷ 20 ಸೆ.	45 %	14
ಡಬ್ಲಿನ್ (ಐರ್ಲೆಂಡ್)	29 ನಿ. 30 ಸೆ.	66 %	16
ಟೊರಂಟೊ (ಕೆನಡಾ)	29 ನಿ.	42 %	18
ಮಿಲಾನ್ (ಇಟಲಿ)	28 ನಿ. 50 ಸೆ.	45 %	17
ಲಿಮಾ (ಪೆರು)	28 ನಿ. 30 ಸೆ.	61 %	17
ಬೆಂಗಳೂರು (ಭಾರತ)	28 ನಿ. 10 ಸೆ.	63 %	18
ಪುಣೆ (ಭಾರತ)	27 ನಿ. 50 ಸೆ.	57 %	19

ವಿಶ್ವದ ಪಟ್ಟಿ (ಇತರೆ ಪ್ರದೇಶ)

ನಗರ	10 ಕಿ.ಮೀ. ಸಂಚಾರಕ್ಕೆ ತೆಗೆದುಕೊಳ್ಳುವ ಸಮಯ	ದಟ್ಟಣೆ ಮಟ್ಟ	ದಟ್ಟಣೆ ಅವಧಿಯಲ್ಲಿ ಸರಾಸರಿ ವೇಗ (ಕಿ.ಮೀ/ಪ್ರತಿ ಗಂಟೆಗೆ)
ಮನಿಲಾ (ಫಿಲಿಪ್ಪೀನ್ಸ್)	25 ನಿ. 30 ಸೆ.	52 %	19
ಲಿಮಾ (ಪೆರು)	24 ನಿ. 20 ಸೆ.	47 %	20
ಬೆಂಗಳೂರು (ಭಾರತ)	23 ನಿ. 50 ಸೆ.	53 %	21
ಸಪ್ಪೊರೊ (ಜಪಾನ್)	23 ನಿ. 30 ಸೆ.	32 %	23

ಸುದ್ದಿ 2 ನಿಮಿಷ

'ಗೊಂದಲದಲ್ಲಿ 'ಲಕ್ಷ ವಸತಿ' ಯೋಜನೆ'

ಬೆಂಗಳೂರು: 'ಮುಖ್ಯಮಂತ್ರಿಯವರ ಲಕ್ಷ ವಸತಿ ಯೋಜನೆಯಡಿ ಬಡವರಿಗೆ ಮನೆ ಒದಗಿಸುವ ಪ್ರಕ್ರಿಯೆಯಲ್ಲಿ ರಾಜೀವ್ ಗಾಂಧಿ ವಸತಿ ನಿಗಮದ ಅಧಿಕಾರಿಗಳು ಗೊಂದಲವನ್ನುಂಟು ಮಾಡುತ್ತಿದ್ದಾರೆ' ಎಂದು ಇಂಡಿಯನ್ ಫ್ರೀಡಂ ಪ್ಯಾಂಥರ್ಸ್ ರಾಜ್ಯ ಘಟಕದ ಅಧ್ಯಕ್ಷ ಅರುಣ್ ಕುಮಾರ್ ಆರೋಪಿಸಿದ್ದಾರೆ.

'ಫಲಾನುಭವಿಗಳು ವೆಬ್‌ಸೈಟ್‌ನಲ್ಲಿ ಮನೆ ನೋಂದಣಿ ಮಾಡಿಕೊಳ್ಳುವ ಪ್ರಕ್ರಿಯೆಯನ್ನು ರಾಜೀವ್ ಗಾಂಧಿ ವಸತಿ ನಿಗಮದಿಂದ 2 ವಾರಗಳ ಹಿಂದೆ ಆರಂಭಿಸಿ, ಎರಡೇ ದಿನಗಳಲ್ಲಿ ಸ್ಥಗಿತಗೊಳಿಸಿದ್ದರು. ಒಂದು ವಾರ ಬಿಟ್ಟು ಎರಡನೇ ಬಾರಿ ಆರಂಭಿಸಿದ್ದಾರೆ. ಫಲಾನುಭವಿಗಳು ಉಳಿಕೆ ಮೊತ್ತವನ್ನು 30 ದಿನಗಳ ಒಳಗೆ ಪಾವತಿಸಿ ಫ್ಲ್ಯಾಟ್‌ಗಳನ್ನು ನೋಂದಣಿ ಮಾಡಿಕೊಳ್ಳುವಂತೆ ಸೂಚಿಸಿದ್ದಾರೆ. ₹ 1 ಲಕ್ಷವನ್ನು 30 ದಿನಗಳ ಒಳಗೆ ಹೊಂದಿಸುವಷ್ಟು ಸಾಮರ್ಥ್ಯ ಇಲ್ಲದ ಬಡವರಿಗೆ ಇದರಿಂದ ಸಮಸ್ಯೆಯಾಗಿದೆ' ಎಂದು ತಿಳಿಸಿದ್ದಾರೆ.

'ನೋಂದಣಿ ಮಾಡಿಕೊಂಡವರಿಗೆ ಯಾವ ರೀತಿ ಹಂಚಿಕೆ ಮಾಡುತ್ತಾರೆ ಎಂಬ ವಿವರ ಕೂಡ ವೆಬ್‌ಸೈಟ್‌ನಲ್ಲಿಲ್ಲ. ಮುಂಗಡ ಪಾವತಿಯ ಮೊತ್ತವನ್ನು ಕಡಿಮೆ ಮಾಡಬೇಕು. ಹಂಚಿಕೆಯ ವಿವರಗಳನ್ನು ನೀಡಬೇಕು' ಎಂದು ಆಗ್ರಹಿಸಿದ್ದಾರೆ.

'ಜಾತ್ಯತೀತ ಮುಕುಟವನ್ನು ಮಣ್ಣಿಗೆ ಕೆಡವಿದ ಗೌಡರ ಕುಟುಂಬ'

ಮೈಸೂರು: 'ನಾನು ಜನತಾದಳ ಸರ್ಕಾರದಲ್ಲಿ ಸಚಿವೆಯಾಗಿದ್ದಾಗ ಎಚ್‌.ಡಿ. ದೇವೇಗೌಡರು ತಮ್ಮ ಜಾತ್ಯತೀತ ತತ್ವಗಳಿಂದ ನಮಗೆಲ್ಲ ಮಾದರಿಯಾಗಿದ್ದರು. ಆದರೆ ಇಂದು ಅವರು ಹಾಗೂ ಅವರ ಕುಟುಂಬದವರೇ ಕೇಸರಿ ಶಾಲು ಹೊದ್ದು ಆ ಮುಕುಟವನ್ನು ಮಣ್ಣಿಗೆ ಬೀಳಿಸಿದ್ದಾರೆ' ಎಂದು ಹೋರಾಟಗಾರ್ತಿ ಬಿ.ಟಿ. ಲಲಿತಾ ನಾಯಕ್ ವಿಷಾದಿಸಿದರು.

ನಗರದಲ್ಲಿ ಶನಿವಾರ ಜಾಗೃತ ಕರ್ನಾಟಕ ಸಂಘಟನೆಯು ಆಯೋಜಿಸಿದ್ದ 'ಕುವೆಂಪು ಕ್ರಾಂತಿಕಹಳೆ-50' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, 'ಎಲ್ಲರೂ ಕುವೆಂಪು ಸಾಹಿತ್ಯ ಓದಿದ್ದರೆ ಇಂದು ಮಂಡ್ಯದ ಕೆರಗೋಡಿನಲ್ಲಿ ರಾಷ್ಟ್ರಧ್ವಜಕ್ಕೆ ಬದಲಾಗಿ ಧರ್ಮ ಧ್ವಜ ಹಾರಿಸುವ ಪ್ರಯತ್ನ ಮಾಡುತ್ತಿರಲಿಲ್ಲ' ಎಂದು ದೂರಿದರು.

ಪ್ರಧಾನ ಭಾಷಣ ಮಾಡಿದ ಲೇಖಕ ಎಲ್‌.ಎನ್‌. ಮುಕುಂದರಾಜ್, 'ಜೆಡಿಎಸ್ ಅನ್ನು ಕನ್ನಡದ ಪಕ್ಷವೆಂದು ಬೆಂಬಲಿಸಿದ್ದೆವು. ಆದರೆ ಈಗ ಹಸಿರು ಶಾಲು ತೆಗೆದು ಕೇಸರಿ ಶಾಲು ಬದಲಿಸಿದ್ದಾರೆ. ಹೀಗಾದ ಮಾತ್ರಕ್ಕೆ ಕಾರ್ಯಕರ್ತರು ಬದಲಾಗುತ್ತಾರಾ? ಕುಮಾರಸ್ವಾಮಿ ಎಂದಾದರೂ ಬಿಜೆಪಿ ಬಿಟ್ಟು ಬಂದರೂ, ಈಗ ಬಿಜೆಪಿ ಸೇರುತ್ತಿರುವ ಕಾರ್ಯಕರ್ತರು ಬಿಜೆಪಿ ಬಿಟ್ಟು ವಾಪಸ್ ಬರುವುದಿಲ್ಲ. ಈ ಎಚ್ಚರಿಕೆ ಅವರಿಗಿರಬೇಕು' ಎಂದರು.

ಸ್ಪರ್ಧೆ ವಿಜೇತರಿಗೆ ತಲಾ ₹ 60 ಸಾವಿರ ನಗದು, ಸ್ಮರಣಿಕೆ ವಿತರಣೆ

10 ಮಂದಿಗೆ 'ಟೊಟೊ ಪ್ರಶಸ್ತಿ' ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಟೊಟೊ ಫಂಡ್ಸ್ ದಿ ಆರ್ಟ್ಸ್'ನ (ಟಿಎಫ್‌ಎ) ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ಹತ್ತು ಮಂದಿಗೆ 20ನೇ ವರ್ಷದ 'ಟೊಟೊ ಪ್ರಶಸ್ತಿ-2024' ಪ್ರದಾನ ಮಾಡಲಾಯಿತು.

ದೊಮ್ಮಲೂರಿನಲ್ಲಿರುವ ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ)ದಲ್ಲಿ ಶನಿವಾರ ಸಮಾರಂಭ ನಡೆಯಿತು.

ಅಂಗೀರಸ್ ಟೊಟೊ ವೆಲಾನಿ ಅವರ ಸ್ಮರಣಾರ್ಥವಾಗಿ ಟಿಎಫ್‌ಎ 20 ವರ್ಷಗಳಿಂದ ಯುವ ಕಲಾವಿದರನ್ನು ಪ್ರೋತ್ಸಾಹಿಸಲು ವಿವಿಧ ಸ್ಪರ್ಧೆ ಆಯೋಜಿಸುತ್ತಿದೆ.

ಈ ಬಾರಿ ಸಂಗೀತ ಸ್ಪರ್ಧೆಗೆ 259, ಡಿಜಿಟಲ್ ಆರ್ಟ್‌ಗೆ 38, ಕ್ರಿಯಾತ್ಮಕ ಬರಹ (ಇಂಗ್ಲಿಷ್)ಕ್ಕೆ 194, ಕ್ರಿಯಾತ್ಮಕ ಬರಹ (ಕನ್ನಡ)ಕ್ಕೆ 47, ಕಿರುಚಿತ್ರ ಸ್ಪರ್ಧೆಗೆ 130 ಹಾಗೂ ಫೋಟೋಗ್ರಫಿ ಸ್ಪರ್ಧೆಗೆ 91 ಮಂದಿ ದೇಶದ ನಾನಾ ಭಾಗದಿಂದ ಪಾಲ್ಗೊಂಡಿದ್ದರು.

30 ವರ್ಷದ ಒಳಗಿನವರಿಗೆ ಮಾತ್ರ ಭಾಗವಹಿಸಲು ಅವಕಾಶ ಕಲ್ಪಿಸಲಾಗಿತ್ತು.

ನಗರದಲ್ಲಿ ಟೊಟೊ ಫಂಡ್ಸ್ ದಿ ಆರ್ಟ್ಸ್ ಆಯೋಜಿಸಿದ್ದ ಸಮಾರಂಭದಲ್ಲಿ (ಎಡದಿಂದ) ಅದೀಪ್ ದಾಸ್, ನಿಶಾ ತನ್ವರ್, ಕೋಯಿಕ್ಕೋಡ್‌ನ ಧೀರಜ್ ರಬ್ಬಾ, ಕಿನಾರಿ, ಅಮೃತ ರಾಮನಾಥ್, ಫೈಜ್ ಅಹಮದ್, ನವೀನ್ ತೇಜಸ್ವಿ, ಖುಷಿ ಬಾನು, ಆಕೃತಿ ಚಂದ್ರವಂಶಿ ಅವರಿಗೆ 20ನೇ ವರ್ಷದ ಟೊಟೊ ಪ್ರಶಸ್ತಿ ಪ್ರದಾನ ಮಾಡಲಾಯಿತು. (ಎಡದಿಂದ ಏಳನೆಯವರು) ಅಮ್ನೆಸ್ಟಿ ಇಂಟರ್‌ನ್ಯಾಷನಲ್ ವಕ್ತಾರ ಆಕಾರ್ ಪಟೇಲ್ ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

ಅಂತಿಮ ಸುತ್ತಿಗೆ ತಲಾ ನಾಲ್ವರು ಸ್ಪರ್ಧಿಗಳನ್ನು ತೀರ್ಪುಗಾರರು ಆಯ್ಕೆ ಮಾಡಿದ್ದರು. ನಾಮನಿರ್ದೇಶನಗೊಂಡ ಸ್ಪರ್ಧಿಗಳ ಫೋಟೊಗಳು, ಕಿರುಚಿತ್ರಗಳನ್ನು ಇದೇ ವೇಳೆ ಪ್ರದರ್ಶಿಸಲಾಯಿತು. ಕೊನೆಯಲ್ಲಿ ಸಭಿಕರ ಎದುರು ವಿಜೇತರ ಹೆಸರು ಘೋಷಣೆ ಮಾಡಲಾಯಿತು.

ಹತ್ತು ಮಂದಿಗೆ ತಲಾ ₹60 ಸಾವಿರ ಹಾಗೂ ನಾಮನಿರ್ದೇಶನಗೊಂಡ 12 ಮಂದಿಗೆ ತಲಾ ₹15 ಸಾವಿರ ನಗದು ಬಹುಮಾನ ಹಾಗೂ ಸ್ಮರಣಿಕೆ ಪ್ರದಾನ ಮಾಡಲಾಯಿತು.

ಪ್ರಶಸ್ತಿ ಸ್ವೀಕರಿಸಿ ನವೀನ್ ತೇಜಸ್ವಿ ಮಾತನಾಡಿ, 'ಹಿಂದುಳಿದ ಸಮುದಾಯದಿಂದ ಬಂದ ಯಾರೇ ಗೆದ್ದರೂ ಅದು ಅವರ ವೈಯಕ್ತಿಕ ಗೆಲುವು ಆಗಿರುವುದಿಲ್ಲ. ಅದು ಸಮುದಾಯ ಗೆಲುವು ಆಗಿರಲಿದೆ' ಎಂದು ಹೇಳಿದರು.

ಪುರಸ್ಕಾರ ಪಡೆದ ಇತರರು ಸಂಭ್ರಮ ಹಂಚಿಕೊಂಡರು.

ಅಮ್ನೆಸ್ಟಿ ಇಂಟರ್‌ನ್ಯಾಷನಲ್‌ನ ವಕ್ತಾರ ಆಕಾರ್ ಪಟೇಲ್ ಮಾತನಾಡಿ, 'ಈ ಸ್ಪರ್ಧೆ ಗಮನಿಸಿದರೆ ಭವಿಷ್ಯದಲ್ಲಿ ಅತ್ಯುತ್ತಮ ಕಲಾವಿದರು ಬರುತ್ತಾರೆ. ಸ್ಪರ್ಧೆ ಸಹ ಗುಣಮಟ್ಟದಿಂದ ಕೂಡಿದೆ' ಎಂದು ಹೇಳಿದರು.

'ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಕಲೆಗಳ ಮೂಲಕ ತಮ್ಮ ಭಾವನೆಗಳನ್ನು ವ್ಯಕ್ತಪಡಿಸಲು ಸಾಧ್ಯವಿದೆ' ಎಂದು ಹೇಳಿದರು.

ಟಿಎಫ್‌ಎನ ಸ್ಥಾಪಕ ಟ್ರಸ್ಟಿ ಸರಿತಾ ವೆಲಾನಿ ಹಾಗೂ ಟಿಎಫ್‌ಎ ಮುಖ್ಯಸ್ಥೆ ಸಿ.ಕೆ.ಮೀನಾ ಪಾಲ್ಗೊಂಡಿದ್ದರು.

ವಿಜೇತರ ವಿವರ

ಸಂಗೀತ: ಚೆನ್ನೈನ ಅಮೃತ ರಾಮನಾಥ್ ಹಾಗೂ ದೆಹಲಿಯ ಕಿನಾರಿ. ಡಿಜಿಟಲ್ ಆರ್ಟ್ಸ್: ಗುರುಗ್ರಾಮದ ನಿಶಾ ತನ್ವರ್. ಕ್ರಿಯಾತ್ಮಕ ಬರಹ (ಇಂಗ್ಲಿಷ್): ಕೇರಳದ ಕೋಯಿಕ್ಕೋಡ್‌ನ ಜೈನಬ್ ಉಮೇರ್ ಫಾರೂಕ್ ಹಾಗೂ ಮುಂಬೈನ ಫೈಜ್ ಅಹಮದ್. ಕ್ರಿಯಾತ್ಮಕ ಬರಹ (ಕನ್ನಡ): ಶಿವಮೊಗ್ಗದ ಹೊಸಬಾಳೆ ನವೀನ್ ತೇಜಸ್ವಿ. ಫೋಟೊಗ್ರಫಿ: ಅಸ್ಸಾಂನ ಧೀರಜ್ ರಬ್ಬಾ ಹಾಗೂ ಪುಣೆಯ ಆಕೃತಿ ಚಂದ್ರವಂಶಿ. ಕಿರುಚಿತ್ರ: ದೆಹಲಿಯ ಅದೀಪ್ ದಾಸ್ ಹಾಗೂ ಲಖನೌದ ಖುಷಿ ಬಾನು.

ಜೀವನರಾಂ ನರೇಶ್‌ಗೆ ಪ್ರಶಸ್ತಿ

ಜೀವನರಾಂ

ನರೇಶ್ ಡಿಂಗ್ರಿ

ಬೆಂಗಳೂರು: ಶ್ರೀಮಾತಾ ಚಾರಿಟಬಲ್ ಟ್ರಸ್ಟ್ ಹಾಗೂ ಸೆಂಟರ್ ಸ್ಟೇಜ್ ಜಂಟಿಯಾಗಿ ನೀಡುವ 'ಸೆಂಟರ್ ಸ್ಟೇಜ್ ಕಪ್ಪಣ್ಣ ಸಾಂಸ್ಕೃತಿಕ ಪ್ರಶಸ್ತಿ'ಗೆ ರಂಗಭೂಮಿ ಕಲಾವಿದ ಜೀವನರಾಂ ಸುಳ್ಯ ಆಯ್ಕೆಯಾಗಿದ್ದಾರೆ.

'ಸೆಂಟರ್ ಸ್ಟೇಜ್ ಕಪ್ಪಣ್ಣ ಸಾಂಸ್ಕೃತಿಕ ಯುವ ಪ್ರಶಸ್ತಿ'ಗೆ ರಂಗಭೂಮಿ ನಟ ನರೇಶ್ ಡಿಂಗ್ರಿ ಭಾಜನರಾಗಿದ್ದಾರೆ. ಈ ಪ್ರಶಸ್ತಿಗಳು ಕ್ರಮವಾಗಿ ₹ 50 ಸಾವಿರ ಹಾಗೂ ₹ 25 ಸಾವಿರ ನಗದು ಒಳಗೊಂಡಿವೆ. ನಾಡಿನ ಸಾಂಸ್ಕೃತಿಕ ರಂಗದಲ್ಲಿ ಗಮನಾರ್ಹ ಸಾಧನೆ ಮಾಡಿದ ಇಬ್ಬರಿಗೆ ರಂಗಕರ್ಮಿ ಶ್ರೀನಿವಾಸ ಜಿ. ಕಪ್ಪಣ್ಣ ಅವರ ಹೆಸರಿನಲ್ಲಿ ಪ್ರಶಸ್ತಿ ನೀಡಲಾಗುತ್ತಿದೆ.

ಇದೇ 13ರಂದು ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಟ್ರಸ್ಟ್ ಅಧ್ಯಕ್ಷ ಟಿ.ಎಸ್. ನಾಗಾಭರಣ ತಿಳಿಸಿದ್ದಾರೆ.

ಕಾರ್ಯಕ್ರಮದಲ್ಲಿ 'ದಾರಿ ದೀಪಗಳು, 'ಹಾದಿಯ ಹಣತೆಗಳು' ಹಾಗೂ 'ಆಳ ನೀಲ' ಕೃತಿಗಳನ್ನು ನಾಗತಿಹಳ್ಳಿ ಚಂದ್ರಶೇಖರ್ ಬಿಡುಗಡೆ ಮಾಡಿದರು. (ಎಡದಿಂದ) ನವಕರ್ನಾಟಕ ಪ್ರಕಾಶನದ ಕಾರ್ಯನಿರ್ವಾಹಕ ನಿರ್ದೇಶಕ ಎ. ರಮೇಶ ಉಡುಪ, ಜಿ.ಎನ್. ಮೋಹನ್, ಲೇಖಕ ಸಂತೋಷ್ ಅನಂತಪುರ, ನೇಮಿಚಂದ್ರ ಹಾಗೂ ಸಿದ್ದನಗೌಡ ಪಾಟೀಲ ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

ಅಂತರ್ಜಾಲದ ಯುಗದಲ್ಲಿ ಮನುಷ್ಯ ಒಂಟಿ: ನೇಮಿಚಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇಡೀ ಜಗತ್ತು ಅಂತರ್ಜಾಲದಿಂದ ಆವೃತವಾಗಿದ್ದರೂ ಮನುಷ್ಯ ಒಂಟಿಯಾಗಿದ್ದಾನೆ. ಸಾಮಾಜಿಕ ಜಾಲತಾಣದ ಅತಿ ಬಳಕೆಯಿಂದ ಮನುಷ್ಯ ಸಂಬಂಧ ಗಳನ್ನೇ ಕಳೆದುಕೊಳ್ಳುತ್ತಿದ್ದಾನೆ' ಎಂದು ಲೇಖಕಿ ನೇಮಿಚಂದ್ರ ಬೇಸರ ವ್ಯಕ್ತಪಡಿಸಿದರು.

ನವ ಕರ್ನಾಟಕ ಪ್ರಕಾಶನ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಎಚ್‌.ಎನ್‌. ಗೀತಾ ಅವರ 'ದಾರಿ ದೀಪಗಳು', 'ಹಾದಿಯ ಹಣತೆಗಳು' ಹಾಗೂ ಸಂತೋಷ್ ಅನಂತಪುರ ಅವರ 'ಆಳ ನೀಳ' ಪುಸ್ತಕಗಳ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಚಲನಚಿತ್ರ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್, 'ಆಗಾಗ ಕತ್ತಲು ಕವಿಯುವ ನಮ್ಮ ಸಮಾಜಕ್ಕೆ ಸಾಹಿತ್ಯದ ದೀಪಗಳು ಬೇಕಾಗುತ್ತವೆ. ನಮ್ಮ ಕಾಲದ ಸಂದಿಗ್ಧಗಳನ್ನು ವ್ಯಕ್ತಿ ನೆಲೆಯಲ್ಲಿ, ಸಮಷ್ಟಿ ನೆಲೆಯಲ್ಲಿ ಹೇಗೆ ವಿವರಿಸಬೇಕೆಂಬ ಸವಾಲು ಲೇಖಕರಿಗೆ ಇದೆ. ಅಂಕಣ, ಕತೆ, ಕಾವ್ಯ, ಲೇಖನವೇ ಬೇರೆ, ಪ್ರಬಂಧವೇ ಬೇರೆ. ಪ್ರಬಂಧಕಾರ ಕತೆಗಾರನಾಗುವ ಅಪಾಯದಿಂದ ತಪ್ಪಿಸಬೇಕು. ಹಾಗೆಯೇ, ಲೇಖನ ಪ್ರಬಂಧವಾಗದಂತೆ ನೋಡಿಕೊಳ್ಳಬೇಕು' ಎಂದರು.

ನವ ಕರ್ನಾಟಕ ಪ್ರಕಾಶನದ ವ್ಯವಸ್ಥಾಪಕ ನಿರ್ದೇಶಕ ಸಿದ್ದನಗೌಡ ಪಾಟೀಲ, 'ಮೌಲ್ಯಗಳು ಪಲ್ಲಟಗೊಳ್ಳುತ್ತಿವೆ. ಒಂದು ಕಾಲದಲ್ಲಿ ಯಾವುದು ಕ್ರೌರ್ಯವೆಂದು ಕರೆಸಿಕೊಳ್ಳುತ್ತಿತ್ತೋ ಅದನ್ನು ಈಗ ಶೌರ್ಯವೆಂದು ಕರೆಯಲಾಗುತ್ತಿದೆ. ಯಾವುದನ್ನು ವಂಚನೆಯೆಂದು ಕರೆಯುತ್ತಿದ್ದೆವೋ ಅದನ್ನು ಚಾಣಾಕ್ಷತನವೆಂದು ಬಿಂಬಿಸಲಾಗುತ್ತಿದೆ. ವಿಜ್ಞಾನ- ತಂತ್ರಜ್ಞಾನವು ನಮ್ಮಲ್ಲಿ ವೈಚಾರಿಕತೆಯನ್ನು ತರಬೇಕಿತ್ತು. ಆದರೆ, ಇವುಗಳ ಮೂಲಕವೇ ಮೌಢ್ಯಗಳನ್ನು ತುಂಬಲಾಗುತ್ತಿದೆ' ಎಂದು ಬೇಸರ ವ್ಯಕ್ತಪಡಿಸಿದರು.

ಪತ್ರಕರ್ತ ಜಿ.ಎನ್. ಮೋಹನ್ ಅವರು ಕೃತಿಗಳ ಬಗ್ಗೆ ಮಾತನಾಡಿದರು.

ರಾಜೀನಾಮೆಯ ಸಂಗತಿ ಬಹಿರಂಗಪಡಿಸಿದ ಭುಜಬಲ್

ಅಹಮದ್‌ನಗರ (ಪಿಟಿಐ): ಮಹಾರಾಷ್ಟ್ರ ಸರ್ಕಾರವು ಮರಾಠ ಸಮುದಾಯಕ್ಕೆ ಒಬಿಸಿ ಪಟ್ಟಿಗೆ ಹಿಂಬಾಗಿಲಿನ ಮೂಲಕ ಪ್ರವೇಶ ಕಲ್ಪಿಸಿದೆ ಎಂದು ಆರೋಪಿಸಿರುವ ಸಚಿವ ಛಗನ್ ಭುಜಬಲ್ ಅವರು ತಾವು ಸಂಪುಟಕ್ಕೆ ನವೆಂಬರ್ ತಿಂಗಳಿನಲ್ಲಿಯೇ ರಾಜೀನಾಮೆ ಸಲ್ಲಿಸಿರುವುದಾಗಿ ಶನಿವಾರ ಹೇಳಿದರು.



ಛಗನ್ ಭುಜಬಲ್

ಇಲ್ಲಿ ರ‍್ಯಾಲಿಯೊಂದನ್ನು ಉದ್ದೇಶಿಸಿ ಮಾತನಾಡಿದ ಅವರು, 'ಮರಾಠ ಸಮುದಾಯಕ್ಕೆ ಮೀಸಲಾತಿ ಕಲ್ಪಿಸುವುದಕ್ಕೆ ತಮ್ಮ ವಿರೋಧವಿಲ್ಲ; ಬದಲಿಗೆ, ಒಬಿಸಿ ಕೋಟಾ ಅಡಿಯಲ್ಲಿ ಮರಾಠ ಸಮುದಾಯಕ್ಕೆ ಮೀಸಲಾತಿ ನೀಡುವುದಕ್ಕೆ ವಿರೋಧವಿದೆ' ಎಂದು ಸಚಿವರು ಪುನರುಚ್ಚರಿಸಿದರು.

'ನಾನು ಸಚಿವ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಬೇಕು ಎಂದು ಹಲವರು ಆಗ್ರಹಿಸುತ್ತಿದ್ದಾರೆ... ಆದರೆ, ನವೆಂಬರ್ 17ರಂದು ನಡೆದ ಒಬಿಸಿ ಎಲ್ಗಾರ್ ರ‍್ಯಾಲಿಗೂ ಒಂದು ದಿನ ಮೊದಲೇ ನಾನು ಸಚಿವ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದೇನೆ ಎಂಬುದನ್ನು ವಿರೋಧ ಪಕ್ಷಗಳ ನಾಯಕರಿಗೆ, ಸರ್ಕಾರದಲ್ಲಿ ಇರುವವರಿಗೆ ಹಾಗೂ ನನ್ನ ಪಕ್ಷದವರಿಗೆ ಹೇಳಲು ಬಯಸುತ್ತೇನೆ' ಎಂದರು.

ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿ ನೀಡಿದ ಸೂಚನೆಯ ಕಾರಣದಿಂದಾಗಿ ಈ ವಿಚಾರವಾಗಿ ತಾವು ಸುಮ್ಮನೆ ಇದ್ದುದಾಗಿ ಹೇಳಿದರು. 'ನನ್ನನ್ನು ಕಿತ್ತುಹಾಕುವ ಅಗತ್ಯವಿಲ್ಲ. ನಾನೇ ರಾಜೀನಾಮೆ ನೀಡಿದ್ದೇನೆ. ಒಬಿಸಿ ಸಮುದಾಯಗಳಿಗಾಗಿ ಕೊನೆಯವರೆಗೂ ಹೋರಾಟ ನಡೆಸುವೆ' ಎಂದರು.

'ಕಥೆಯನ್ನು ಕೇಳುವುದೂ ಒಂದು ಕಲೆ'

'ಕಥೆ ಕೇಳೋಣ ಬನ್ನಿ' ಕಾರ್ಯಕ್ರಮದಲ್ಲಿ ಸಾಹಿತಿ ತಮ್ಮಣ್ಣ ಬೀಗಾರ ಅಭಿಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಥೆ ಹೇಳುವುದು ಹೇಗೆ ಒಂದು ಕಲೆಯೋ ಹಾಗೆಯೇ ಕಥೆ ಕೇಳುವುದೂ ಒಂದು ಕಲೆ' ಎಂದು ಮಕ್ಕಳ ಸಾಹಿತಿ ತಮ್ಮಣ್ಣ ಬೀಗಾರ ತಿಳಿಸಿದರು.

ಭವನ್ ಬಿಬಿಎಂಪಿ ಶಾಲೆ ಮತ್ತು ಅಭಿನವ ಪ್ರಕಾಶನ ಜಂಟಿಯಾಗಿ ನಗರದಲ್ಲಿ ಶನಿವಾರ ಆಯೋಜಿಸಿದ 'ಕಥೆ ಕೇಳೋಣ ಬನ್ನಿ' ಸರಣಿಯ ಮೂರನೆ ಕಾರ್ಯಕ್ರಮದಲ್ಲಿ ಭಾಗವಹಿಸಿ, ಮಾತನಾಡಿದರು.

'ಕಥೆಗಳಲ್ಲಿ ಜಾನಪದ ಕಥೆಗಳು, ನೀತಿ ಕಥೆಗಳು, ಮೋಜಿನ ಕಥೆಗಳು, ಪ್ರಾಣಿ ಕಥೆಗಳು ಹೀಗೆ ಹಲವು ವಿಧಗಳಿವೆ. ಈ ಕಥೆಗಳೆಲ್ಲವೂ ನಮ್ಮ ಭಾವನೆಗಳನ್ನು ಹರಿತಗೊಳಿಸುತ್ತವೆ' ಎಂದರು.

ಶಾಲೆಯ ಪ್ರಧಾನ ವ್ಯವಸ್ಥಾಪಕಿ ಗಾಯಿತ್ರಿ, 'ಮಕ್ಕಳಲ್ಲಿರುವ ಸುಪ್ತ ಪ್ರತಿಭೆಯನ್ನು ಪ್ರೋತ್ಸಾಹಿಸಲು ನಮ್ಮ ಶಾಲೆ ಪ್ರಯತ್ನಿಸುತ್ತಿದೆ. ಶಾಲಾ ಪಠ್ಯದ ಜತೆಗೆ ಪಠ್ಯೇತರ ಚಟುವಟಿಕೆಗಳಿಗೂ ಆದ್ಯತೆ ನೀಡಲಾಗುತ್ತಿದೆ' ಎಂದು ಹೇಳಿದರು.

ಪ್ರಕಾಶಕ ಅಭಿನವ ರವಿಕುಮಾರ್, 'ನಮ್ಮ ಸುತ್ತಮುತ್ತಲು ಅನೇಕ ಕಥೆಗಳು ನಡೆಯುತ್ತಿರುತ್ತವೆ. ಪ್ರತಿಭಾವಂತರು ಅವುಗಳನ್ನು ಬರೆಯಬೇಕು' ಎಂದರು.

ಶಾಲೆಯ ಪ್ರಾಂಶುಪಾಲರಾದ ವತ್ಸಲಾ ಶಾಸ್ತ್ರಿ, 'ಕಥೆ ಕೇಳುವುದರಿಂದ ನಮ್ಮ ಕಲ್ಪನಾ ಶಕ್ತಿ ಹೆಚ್ಚುತ್ತದೆ. ಮನಸ್ಸು ಸಹ ಉಲ್ಲಸಿತವಾಗಿ, ಭಾವನೆಗಳು ವಿಶಾಲವಾಗುತ್ತವೆ' ಎಂದು ಹೇಳಿದರು.

ಇದೇ ವೇಳೆ, ತಮ್ಮಣ್ಣ ಬೀಗಾರ ಅವರ 'ಬಾವಲಿ ಗುಹೆ' ಪುಸ್ತಕದ ನಾಲ್ಕನೇ ಮುದ್ರಣವನ್ನು ಲೋಕಾರ್ಪಣೆ ಮಾಡಲಾಯಿತು.

ತಮ್ಮಣ್ಣ ಬೀಗಾರ ಅವರನ್ನು ಗಾಯಿತ್ರಿ ಹಾಗೂ ವತ್ಸಲಾ ಶಾಸ್ತ್ರಿ ಗೌರವಿಸಿದರು

ಹೃದಯಾಘಾತದಿಂದ ಆನೆ ಸಾವು?

ಪ್ರಜಾವಾಣಿ ವಾರ್ತೆ

ಗುಂಡ್ಲುಪೇಟೆ (ಚಾಮರಾಜನಗರ): ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಿಂದ ಕೇರಳದ ಕಡೆಗೆ ಹೋಗಿ ಮಾನಂದವಾಡಿ ಪಟ್ಟಣದಲ್ಲಿ ಅರಣ್ಯ ಇಲಾಖೆ ಸೆರೆ ಹಿಡಿದಿದ್ದ 'ತನ್ನೀರ್' ಎಂಬ ಕಾಡಾನೆಯು ಬಂಡೀಪುರದ ರಾಂಪುರ ಆನೆ ಶಿಬಿರಕ್ಕೆ ಕರೆತರುವ ಮಾರ್ಗ ಮಧ್ಯೆ ಮೃತಪಟ್ಟಿದೆ.

ಹೃದಯಾಘಾತ ಮತ್ತು ಟ್ರಾಮಾದಿಂದ (ಆಘಾತ) ಆನೆ ಮೃತಪಟ್ಟಿರಬಹುದು ಎಂದು ಪಶು ವೈದ್ಯಾಧಿಕಾರಿಗಳು ತಿಳಿಸಿದ್ದಾರೆ.

ಜ. 16ರಂದು ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ಬಿಕ್ಕೋಡು ಹೋಬಳಿಯ ಹೆದ್ದರವಳ್ಳಿಯಲ್ಲಿ ಸಲಗವನ್ನು ಸೆರೆ ಹಿಡಿದು ರೇಡಿಯೊ ಕಾಲರ್ ಅಳವಡಿಸಿ ಬಂಡೀಪುರ ಅರಣ್ಯದ ಮೂಲೆಹೊಳೆ ವಲಯದಲ್ಲಿ ಬಿಡಲಾಗಿತ್ತು.

ಅರಣ್ಯದಲ್ಲಿ ಸುತ್ತಾಡುತ್ತಾ ಕಬಿನಿ ದಾಟಿ ಕೇರಳದ ಮಾನಂದ ವಾಡಿಯ ಜನವಸತಿ ಪ್ರದೇಶದಲ್ಲಿ ಆನೆ ಫೆ.1ರಂದು ಕಾಣಿಸಿಕೊಂಡಿತ್ತು. ಶುಕ್ರವಾರ ಮಾನಂದವಾಡಿ ಪಟ್ಟಣ ಪ್ರದೇಶದಲ್ಲಿ ಓಡಾಡಿ ಜನರಲ್ಲಿ ಭಯ ಉಂಟು ಮಾಡಿತ್ತು.

ಹೆಚ್.ಪಿ.ಎಸ್.ಎಲ್ ಇಂಡಿಯನ್ ಡರ್ಬಿ

ಜೆಂಡಾಯಿ ಗೆಲ್ಲುವ ನಿರೀಕ್ಷೆ

ಹೆಚ್.ಪಿ.ಎಸ್.ಎಲ್ ಇಂಡಿಯನ್ ಡರ್ಬಿ ಮುಂಬೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು ಜೆಂಡಾಯಿ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:15ಕ್ಕೆ ಪ್ರಾರಂಭವಾಗಲಿರುವ ದಿನದ ಒಂಬತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ.,

1ನೇ ರೇಸ್: ಕ್ರಿಸ್ಟೊಫಾನಿ 8, ಅಜ್ರಿನಾರ್ಫ್ 4, ಸ್ಟಾರ್ ಪ್ರಾಸ್ಪರಿಟಿ 5
2ನೇ ರೇಸ್: ಮೊಯಿಟೊ 2, ಚಾಪಿನ್ 4, ನಾರ್ದರನ್ ಲೈಟ್ಸ್ 1
3ನೇ ರೇಸ್: ಡೊರೊನ್ 4, ಡಿವೈನ್ ಹೋಪ್ 3, ಡೆಸರ್ಟ್ ಕ್ಲಾಸಿಕ್ 2
4ನೇ ರೇಸ್: ಜೂಲಿಯೆಟ್ 1, ಡಿಫ್ 2, ಸೂಪರ್‌ನ್ಯಾಚುರಲ್ 3
5ನೇ ರೇಸ್: ರನ್ನಿಂಗ್ ಸ್ಟಾರ್ 4, ವಿನ್ಸೆರೊ 2, ಅರ್ಥ್ 3
6ನೇ ರೇಸ್: ಫಿಯೊರೆಂಟಿನಿ 8, ಅಪೆರಾಲ್ 1, ಮುಮ್ತಾರ್ಝ್ 9
7ನೇ ರೇಸ್: ಜೆಂಡಾಯಿ 12, ಎನೆಬ್ಲರ್ 5, ಮೇಡಮ್ ರಿಚ್ 13
8ನೇ ರೇಸ್: ಬಕ್ಲಿ 1. ಐರಿಷ್ ಗೋಲ್ಡ್ 4, ಡೆಕ್ಸಾ 7
9ನೇ ರೇಸ್: ಟಾಸ್ಕಾನ 2, ಲೈಟ್ ಆಫ್ ಲೈಫ್ 1, ಡಫಿ 11

ಉತ್ತಮ ಬೆಟ್: ರನ್ನಿಂಗ್ ಸ್ಟಾರ್

1ನೇ ಜಾಕ್‌ಪಾಟ್: 2,3,4,5,6
2ನೇ ಜಾಕ್‌ಪಾಟ್: 5,6,7,8,9
1ನೇ ಟ್ರಿಬಲ್: 3,4,5
2ನೇ ಟ್ರಿಬಲ್: 6,7,8
3ನೇ ಟ್ರಿಬಲ್: 7,8,9

ನಗರದಲ್ಲಿ ಇಂದು

ಕ್ಯಾನ್ಸರ್ ಜಾಗೃತಿ ಜಾಥಾಗೆ ಚಾಲನೆ: ದಿನೇಶ್ ಗುಂಡೂರಾವ್, ಪ್ರೇಮ್, ಅಭಿಜಿತ್, ವಿನಯ್ ರಾಜ್‌ಕುಮಾರ್, ಗಿರಿರಾಜ್, ಕಾರುಣ್ಯ ರಾಮ್, ಆಯೋಜನೆ: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಸರ್ಜಿಕಲ್ ಸೊಸೈಟಿ ಆಫ್ ಬೆಂಗಳೂರು, ಸ್ಥಳ: ಕಂಠೀರವ ಕ್ರೀಡಾಂಗಣ, ಕಸ್ತೂರಬಾ ರಸ್ತೆ, ಬೆಳಿಗ್ಗೆ 6.30

ಪ್ರೇಮ್

16ನೇ ವರ್ಷದ ಸಂಗೀತಾರಾಧನಾ ಮಹೋತ್ಸವ: ಗಾಯನ: ರಮಾ ಕೆ. ಮೂರ್ತಿ ಅವರ ಶಿಷ್ಯರಿಂದ, ಲಯ ಸೌರಭ, ಅತಿಥಿಗಳು: ಕೆ. ಮೋಹನ್ ದೇವ್ ಆಳ್ವ, ಎಸ್‌.ಆರ್. ಲೀಲಾ, ಆಯೋಜನೆ: ಗುರುಸ್ಮೃತಿ ಕಲಾಕೇಂದ್ರ, ಸ್ಥಳ: ದೇವಗಿರಿ ವರಪ್ರದ ವೆಂಕಟೇಶ್ವರ ದೇವಸ್ಥಾನ, ಬನಶಂಕರಿ 2ನೇ ಹಂತ, ಬೆಳಿಗ್ಗೆ 9ರಿಂದ

ಖಯಾಲ್ ಸಂಗೀತೋತ್ಸವ, 'ಖಯಾಲ್ ಪುರಸ್ಕಾರ' ಪ್ರದಾನ: ಉದ್ಘಾಟನೆ: ಸುರೇಶ್ ಕುಮಾರ್, ಎಸ್. ಷಡಕ್ಷರಿ, ಅತಿಥಿಗಳು: ಅಜಯ್ ಧರ್ಮಸಿಂಗ್, ದಯಾನಂದ ಅಪ್ಪಾಜಿಗೌಡ, ಪ್ರಶಸ್ತಿ ಪುರಸ್ಕೃತರು: ಸತೀಶ್ ಹಂಪಿಹೊಳಿ, ಆಯೋಜನೆ: ಖಯಾಲ್ ಸಂಗೀತ ಅಕಾಡೆಮಿ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 9ರಿಂದ

ಭಕ್ತಿ ಭಾವಾನಂದ: ಅಖಂಡ ಭಜನೆ, ಸ್ಥಳ: ಸತ್ಯಸಾಯಿ ಆಶ್ರಮ, ಬೃಂದಾವನ ಕಾಡುಗೋಡಿ, ಬೆಳಿಗ್ಗೆ 9ರಿಂದ

ವಿಶ್ವ ಕ್ಯಾನ್ಸರ್ ದಿನದ ಅಂಗವಾಗಿ ಜಾಗೃತಿ ಜಾಥಾ: ಆಯೋಜನೆ: ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ, ಸ್ಥಳ: ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಿಂದ ಲಾಲ್‌ಬಾಗ್‌ವರೆಗೆ, ಬೆಳಿಗ್ಗೆ 9.30

'ರಾಮನ್ ಯಂಗ್ ಸೈನ್ಸ್ ಇನ್ನೋವೇಟರ್ ಅವಾರ್ಡ್' ಪ್ರದಾನ: ತೀರ್ಪುಗಾರರು: ಜಯಂತ್ ಮೂರ್ತಿ, ದ್ವಾರಕಾನಾಥ್ ಕೆ.ಎಸ್., ಡಿಸಿವಿ ಮಲ್ಲಿಕ್, ಮೌಸುಮಿ ದಾಸ್, ಪ್ರದೀಪ್ ಮಲ್ಲಿಕ್, ಎಸ್‌.ಪಿ. ರಾಜಗುರು, ಸ್ಥಳ: ಪಂಚವಟಿ, ಸಿ.ವಿ. ರಾಮನ್ ಅವರ ಹಳೆಯ ಮನೆ, ಮಲ್ಲೇಶ್ವರ, ಬೆಳಿಗ್ಗೆ 9.30ರಿಂದ

ವಿಶೇಷ ಸರ್ವಸದಸ್ಯರ ಸಭೆ, ವಾರ್ಷಿಕ ಸರ್ವಸದಸ್ಯರ ಸಭೆ, ಆರ್ಯ ಈಡಿಗರ ವಧು-ವರರ ರಾಜ್ಯಮಟ್ಟದ ಸಮಾವೇಶ: ಆಯೋಜನೆ ಮತ್ತು ಸ್ಥಳ: ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘ, ಈಡಿಗ ಭವನ, ರಾಜೀವ್ ಗಾಂಧಿ ವೃತ್ತ, ಶೇಷಾದ್ರಿಪುರ, ಬೆಳಿಗ್ಗೆ 10ರಿಂದ

ಅಖಿಲ ಭಾರತ ಕಲಾ ಸಾಧಕ ಸಂಗಮ: ಸಮರಸತಾ ಯಾತ್ರೆ ಮತ್ತು ಸಮಾರೋಪ ಸಮಾರಂಭ: ಮೋಹನ್ ಭಾಗವತ್, ಶ್ರೀ ಶ್ರೀ ರವಿಶಂಕರ್ ಗುರೂಜಿ, ಆಯೋಜನೆ: ಸಂಸ್ಕಾರ ಭಾರತಿ, ಸ್ಥಳ: ಆರ್ಟ್ ಆಫ್ ಲಿವಿಂಗ್ ಅಂತರರಾಷ್ಟ್ರೀಯ ಕೇಂದ್ರ, ಕನಕಪುರ ರಸ್ತೆ, ಬೆಳಿಗ್ಗೆ 10

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

'ಸನ್ಮಾನ-ತಾಳಮದ್ದಳೆ': ಉದ್ಘಾಟನೆ: ನರಹಳ್ಳಿ ಬಾಲಸುಬ್ರಹ್ಮಣ್ಯ, ಅತಿಥಿ: ದಿವಾಕರ ಹೆಗಡೆ, ಸನ್ಮಾನ: ಸುಮಾ ಹೆಗಡೆ, ವಿಜಯನಳಿನಿ ರಮೇಶ್, ನಿರ್ಮಲಾ ಹೆಗಡೆ, ಅಧ್ಯಕ್ಷತೆ: ರಜನಿ ನರಹಳ್ಳಿ, 'ಸೀತಾ ಪರಿತ್ಯಾಗ' ತಾಳಮದ್ದಳೆ ಪ್ರದರ್ಶನ, ಆಯೋಜನೆ ಮತ್ತು ಸ್ಥಳ: ಕ.ವಿ.ಪ್ರ.ನಿ.ನಿ. ಲೆಕ್ಕಾಧಿಕಾರಿಗಳ ಸಂಘ, ಆನಂದ ರಾವ್ ವೃತ್ತ, ಬೆಳಿಗ್ಗೆ 10ರಿಂದ

'ಸಮಾಜವಾದಿ ಧುರೀಣ ಶಾಂತವೇರಿ ಗೋಪಾಲಗೌಡ ಸ್ಮಾರಕ ಪ್ರಶಸ್ತಿ ಪ್ರದಾನ': ಪಿ.ಜಿ.ಆರ್. ಸಿಂಧ್ಯ, ಅಧ್ಯಕ್ಷತೆ: ಎಂ. ಪ್ರಕಾಶಮೂರ್ತಿ, ಪ್ರಶಸ್ತಿ ಪುರಸ್ಕೃತರು: ಬಿ. ಅನುಸೂಯಮ್ಮ, ಅತಿಥಿಗಳು: ಪದ್ಮಿನಿ ನಾಗರಾಜು, ಎಸ್. ಶ್ರೀನಾಥ್, ಎಂ. ರಾಘವೇಂದ್ರ, ಆರ್. ಕಿರಣ್‌ಕುಮಾರ್, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಮೈಕೊ ಕನ್ನಡ ಬಳಗ, ಸ್ಥಳ: ಅಕ್ಕಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತಿನ ಆವರಣ, ಚಾಮರಾಜಪೇಟೆ, ಬೆಳಿಗ್ಗೆ 10ರಿಂದ

ದೇವಿಪ್ರಸಾದ್ ಚಟ್ಟೋಪಾಧ್ಯಾಯ ಸ್ಮಾರಕ ಉಪನ್ಯಾಸ, ಜಿ. ರಾಮಕೃಷ್ಣ ಅವರ 'ಹಿಂದುತ್ವ- ಮೆಲೋಡಿ ಆ್ಯಂಡ್ ಮೈಲ್‌ಸ್ಟೋನ್' ಪುಸ್ತಕ ಬಿಡುಗಡೆ: ನಾಗೇಶ ಹೆಗಡೆ, 'ವಿಜ್ಞಾನದ ಸಂಸ್ಕೃತಿ-ವಿಕೃತಿ' ಕುರಿತು ಉಪನ್ಯಾಸ: ಎಂ.ಆರ್. ಎನ್. ಮೂರ್ತಿ, ಆಯೋಜನೆ: ನವ ಕರ್ನಾಟಕ ಪ್ರಕಾಶನ, ಮಾ-ಲೆ ಪ್ರಕಾಶನ, ಸ್ಥಳ: ಎಚ್‌.ಎನ್. ಮಲ್ಟಿಮೀಡಿಯಾ ಸಭಾಂಗಣ, ನ್ಯಾಷನಲ್ ಕಾಲೇಜು, ಬಸವನಗುಡಿ, ಬೆಳಿಗ್ಗೆ 10.30

ಮಾಸದ ಮಂಥನ: 'ವಿಷ್ಣು ಸಹಸ್ರನಾಮ ಸತ್ವ-ತತ್ವ-ಮಹತ್ವ: ಅರಳುಮಲ್ಲಿಗೆ ಪಾರ್ಥಸಾರಥಿ, ಸ್ಥಳ: ನಂ. 17, ಸಾನಿಧ್ಯ, 1ನೇ ಅಡ್ಡರಸ್ತೆ, ದೊಡ್ಡಕನ್ನೆಲ್ಲಿ, ಬೆಳಿಗ್ಗೆ 11

ಅತ್ಯುತ್ತಮ ರಸ್ತೆ ಸುರಕ್ಷತೆಯ ಮಾದರಿಗಳ ಪ್ರದರ್ಶನ: ಅತಿಥಿಗಳು: ಪ್ರಿಯಾಂಕ್ ಖರ್ಗೆ, ರಾಮಲಿಂಗಾರೆಡ್ಡಿ, ಜಯಪಾಲ್ ಆರ್., ಆಯೋಜನೆ: ಟೊಯೊಟಾ, ಸ್ಥಳ: ಆರ್‌.ವಿ. ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಆ್ಯಂಡ್ ಮ್ಯಾನೇಜ್‌ಮೆಂಟ್, ಚೈತನ್ಯ ಲೇಔಟ್, ಜೆ.ಪಿ. ನಗರ, ಮಧ್ಯಾಹ್ನ 2.45

'ಹನ್ಸಿಕಾ' ಒಡಿಸ್ಸಿ ನೃತ್ಯ ಪ್ರದರ್ಶನ: ಶರ್ಮಿಳಾ ಮುಖರ್ಜಿ ಮತ್ತು ತಂಡ, ಆಯೋಜನೆ: ಸಂಜಲಿ ಸೆಂಟರ್ ಫಾರ್ ಒಡಿಸ್ಸಿ ಡಾನ್ಸ್, ಸ್ಥಳ: ಎಡಿಎ ರಂಗಮಂದಿರ, ಜೆ.ಸಿ. ರಸ್ತೆ, ಸಂಜೆ 4.30

'ಪುಕ್ಕಟೆ ಸಲಹೆ' ನಾಟಕ ಪ್ರದರ್ಶನ: ರಚನೆ: ಎಚ್. ಡುಂಡಿರಾಜ್, ನಿರ್ದೇಶನ: ಅಶೋಕ್ ಬಿ., ಪ್ರಸ್ತುತಿ: ವಿಶ್ವಪಥ ಕಲಾ ಸಂಗಮ ಹವ್ಯಾಸಿ ರಂಗತಂಡ, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 5

ಪುರಂದರದಾಸರ ನೃತ್ಯ ನಿರಾಂಜನ: ಉದ್ಘಾಟನೆ: ಗೀತಾ ರಾಮಾನುಜಂ, ಅಧ್ಯಕ್ಷತೆ: ಮಹೇಂದ್ರ ಮುನ್ನೋತ್, ಅತಿಥಿಗಳು: ಸತೀಶ್ ಕೆ., ಸುಧೀಂದ್ರ ರಾವ್, ಲೇಪಾಕ್ಷಿ ಸಂತೋಷ್ ರಾವ್, ಅಂಬಿಕಾ ಪಂಚಾಟೆ, ಆಯೋಜನೆ: ನಾಟ್ಯ ಸನ್ನಿಧಿ, ಸ್ಥಳ: ಬಯಲು ರಂಗಮಂದಿರ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 5ರಿಂದ

ಮೋಹನ್ ನಮನ: ಗಾಯನ: ಶಿವಾನಿ ಮಿರಜ್‌ಕರ್ ಜೈನ್, ತಬಲಾ: ಶ್ರೀವತ್ಸಾ ಕೌಲಗಿ, ಹಾರ್ಮೋನಿಯಂ: ತೇಜಸ್ ಕಟೋಟಿ, ಪಿಟೀಲು: ಕಲಾ ರಾಮನಾಥ್, ತಬಲಾ: ಭೂಷಣ್ ಪರಚೂರೆ, ಆಯೋಜನೆ: ಸಪ್ತಕ್, ಸುರಮಂಡಲ್, ಸ್ಥಳ: ಕೆನರಾ ಯೂನಿಯನ್, ಮಲ್ಲೇಶ್ವರ, 8ನೇ ಮುಖ್ಯರಸ್ತೆ, ಸಂಜೆ 5.30

ಪುರಂದರದಾಸರ ಪುಣ್ಯದಿನ ಮಹೋತ್ಸವ: ಜುಗಲ್‌ಬಂದಿ: ಶ್ರೀವತ್ಸಾ ಕಶ್ಯಪ್ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸೇವಾ ಸಮಿತಿ, ಮಲ್ಲೇಶ್ವರ, ಸಂಜೆ 6.30

ಭಾನುವಾರ, ಫೆಬ್ರುವರಿ 4, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 35 | ಪುಟ 20
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕೇಜ್ರಿವಾಲ್‌ಗೆ ಪೊಲೀಸರ ನೋಟಿಸ್ 9
ತಾಕತ್ತಿದ್ದರೆ ಧ್ವಜ ಇಳಿಸಿ; ಸವಾಲು ಹಾಕಿದ ಬಿಜೆಪಿ
ಆಯ್ಕೆಯಾದ ಪುಸ್ತಕ ಖರೀದಿಗಿಲ್ಲ ಹಣ 6
ಮನೆಗಳ ಮೇಲೆ ಹನುಮಧ್ವಜ 5

"THE LEADER IN RURAL EDUCATION EXCELLENCE"
ನಮ್ಮ ಎಕ್ಸೆಲ್ ಅಕಾಡೆಮಿಕ್ಸ್®
ಬೆಂಗಳೂರು
IIT-Main & Advanced | NEET | BITS | AIIMS | JIPMER | CET | COMED-K
ಆಡಳಿತಾತ್ಮಕ ಕಚೇರಿ : ಎಕ್ಸೆಲ್ ಅಕಾಡೆಮಿಕ್ಸ್,
ನಂ.326, ಪೀಪಲ್ ಟ್ರೀ ಹಾಸ್ಪಿಟಲ್ ಮುಂಭಾಗ, ಶೇಷಾದ್ರಿಪುರಂ ಕಾಲೇಜ್ ರಸ್ತೆ,
ಯಲಹಂಕ ನ್ಯೂ ಟೌನ್ - 560 064, ಬೆಂಗಳೂರು
7676-91-7777, 9513657041, 9535656277
REG. OPEN FOR REGULAR & ONLINE
NEET, K-CET, IIT-JEE
CRASH COURSE
2ND PUC/12TH, +2 STUDYING / PASSED STUDENTS
POSTAL COACHING
1ST PUC & 2ND PUC, 11TH & 12, +1 & +2 STUDYING STUDENTS
BATCH STARTS FROM 19TH MARCH 2024
CELEBRATING 15 SUCCESSFUL YEARS with Hardwork & Dedication
EXCEL ACADAMICS
ವಿಶೇಷ ಸೂಚನೆ : ಅತ್ಯುತ್ತಮ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಹಾಗೂ ಶುಲ್ಕದಲ್ಲಿ 100% ರಿಯಾಯಿತಿ ನೀಡಲಾಗುವುದು
ಹುಡುಗರಿಗೆ ಮತ್ತು ಹುಡುಗಿಯರಿಗೆ ಪ್ರತ್ಯೇಕ ವಸತಿ ಸೌಲಭ್ಯವಿರುತ್ತದೆ

ಅರಣ್ಯ ಒತ್ತುವರಿ ರಾಜ್ಯಕ್ಕೆ ಚಾಟಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದಲ್ಲಿ ಅರಣ್ಯ ಅತಿಕ್ರಮಣ ಪ್ರಕರಣಗಳು ಹೆಚ್ಚುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಿರುವ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ (ಎನ್‌ಜಿಟಿ) ಪ್ರಧಾನ ಪೀಠವು ರಾಜ್ಯ ಸರ್ಕಾರಕ್ಕೆ ಚಾಟಿ ಬೀಸಿದೆ.

ಅರಣ್ಯ ಅತಿಕ್ರಮಣದ ಕುರಿತು ಮಾಧ್ಯಮಗಳ ವರದಿಯ ಹಿನ್ನೆಲೆಯಲ್ಲಿ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿರುವ ನ್ಯಾಯಮೂರ್ತಿ ಸುಧೀರ್ ಅಗರವಾಲ್ ಹಾಗೂ ಎ.ಸೆಂಥಿಲ್ ವೇಲ್ ಅವರ ದ್ವಿಸದಸ್ಯ ಪೀಠ, 'ಅರಣ್ಯ ಒತ್ತುವರಿ ಪತ್ತೆ ಹಚ್ಚಲು ಸರ್ಕಾರ ಸರ್ವೆ ನಡೆಸಿದರೆ ಸಾಲದು. ಒತ್ತುವರಿ ತೆರವುಗೊಳಿಸಿ ಮೌನವಾಗಿರುವುದು ಸರಿಯಲ್ಲ. ಅರಣ್ಯ ಪ್ರದೇಶದಲ್ಲಿ ಸಂಭವಿಸಿದ ಹಾನಿ ಬಗ್ಗೆ ಪರಿಹಾರಾತ್ಮಕ ಕ್ರಮಗಳನ್ನು ಅರಣ್ಯ ಇಲಾಖೆ ಕೈಗೊಳ್ಳಬೇಕು' ಎಂದು ಕಟ್ಟುನಿಟ್ಟಿನ ನಿರ್ದೇಶನ ನೀಡಿದೆ.

6ನೇ ಪುಟ ನೋಡಿ

ಇಂದಿನ ಸಂಚಿಕೆಯೊಂದಿಗೆ
ಪ್ರಜಾವಾಣಿ ಕ್ಲಾಸಿಫೈಡ್ಸ್
ಪುರವಣಿ ಲಭ್ಯವಿರುತ್ತದೆ

ಕಿಯೋನಿಕ್ಸ್ ಅಕ್ರಮ: ತನಿಖಾ ಸಮಿತಿ ನೇಮಕ

ಬೆಂಗಳೂರು: ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮದಲ್ಲಿ (ಕಿಯೋನಿಕ್ಸ್) 2018–19ರಿಂದ 2022–223ನೇ ಆರ್ಥಿಕ ವರ್ಷಗಳ ಅವಧಿಯಲ್ಲಿ ನಡೆದಿವೆ ಎನ್ನಲಾಗಿರುವ ಅಕ್ರಮಗಳ ಕುರಿತು ತನಿಖೆ ನಡೆಸಲು ನಿವೃತ್ತ ಐಎಎಸ್ ಅಧಿಕಾರಿ ಎಸ್.ಡಿ. ಮೀನಾ ಅಧ್ಯಕ್ಷತೆಯಲ್ಲಿ ಸಮಿತಿ ನೇಮಿಸಿ ಶನಿವಾರ ಆದೇಶ ಹೊರಡಿಸಲಾಗಿದೆ.

ಸಮಿತಿಯ ಅಧ್ಯಕ್ಷರು ತನಿಖೆ ನಡೆಸಲು ತಲಾ ಒಬ್ಬ ಹಣಕಾಸು ತಜ್ಞರು ಮತ್ತು ತಾಂತ್ರಿಕ ತಜ್ಞರನ್ನು ಮಾಹಿತಿ ತಂತ್ರಜ್ಞಾನ ಹಾಗೂ ಜೈವಿಕ ತಂತ್ರಜ್ಞಾನ ಸಚಿವರ ಅನುಮೋದನೆಯೊಂದಿಗೆ ನೇಮಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

3ನೇ ಪುಟ ನೋಡಿ

ಕಂದಾಯಕ್ಕೆ ಬೇಕು 'ಚಿಕಿತ್ಸೆ'

17 ಸಾವಿರ	14 ಸಾವಿರ	ಬಾಕಿ ಪ್ರಕರಣ	54,175	1.12 ಲಕ್ಷ	5 ಲಕ್ಷ
ಪೋಡಿಮುಕ್ತ ಗ್ರಾಮಗಳು	ಪೋಡಿಯಾಗದ ಗ್ರಾಮಗಳು		ಪಹಣಿ ತಿದ್ದುಪಡಿ	ಆಕಾರಬಂದು, ಆರ್‌ಟಿಸಿ	ಪೋಡಿ

• ಚಂದ್ರಹಾಸ ಹಿರೇಮಳಲಿ

'ಮೂಡುಬಿದಿರೆಯ ಮಾಂಟ್ರಾಡಿ ಗ್ರಾಮದ ಮಹಿಳೆಯೊಬ್ಬರು ತಮ್ಮ ಜಾಗದ 11–ಇ ನಕ್ಷೆ ಪಡೆಯಲು ಹತ್ತು ವರ್ಷಗಳು ಸರ್ವೆ ಇಲಾಖೆಗೆ ಅಲೆದಿದ್ದರು. ಅವರಿಗೆ ನಕ್ಷೆ ಕೊಡಿಸಲು ಲೋಕಾಯುಕ್ತರೇ ಮಧ್ಯ ಪ್ರವೇಶ ಮಾಡಬೇಕಾಯಿತು!'

–ಇದು ನಿವೇಶನ, ಜಮೀನು ಸೇರಿದಂತೆ ತಮ್ಮ ಭೂ ದಾಖಲೆಗಳನ್ನು ಪಡೆಯಲು, ಸರ್ವೆ ಕೆಲಸಗಳಿಗೆ ಜನರು ಪಡುತ್ತಿರುವ ಬವಣೆಯ ಒಂದು ಉದಾಹರಣೆಯಷ್ಟೆ.

ಭೂ ಪರಿವರ್ತನೆ, ಪಕ್ಕಾ ಪೋಡಿ, ಜಮೀನು ಮಂಜೂರಾತಿಯಂತಹ ಕೆಲಸಗಳಿಗೆ ಲಕ್ಷದಿಂದ ಕೋಟಿಯವರೆಗೂ 'ಕೈಬಿಸಿ' ಮಾಡದೇ ಯಾವ ಕೆಲಸವೂ ಸಮಯಕ್ಕೆ ಸರಿಯಾಗಿ, ಸುಸೂತ್ರವಾಗಿ ನಡೆಯುವುದಿಲ್ಲ. ಭೂಮಾಪನ ಮತ್ತು ಭೂ ದಾಖಲೆಗಳ ಇಲಾಖೆಗಳಲ್ಲಿ ಎಷ್ಟೇ ಸುಧಾರಣೆ ತಂದರೂ ಭ್ರಷ್ಟಾಚಾರ ಎಗ್ಗಿಲ್ಲದೇ ನಡೆಯುತ್ತಿದೆ ಎನ್ನುವ ಆರೋಪದಿಂದ ಮುಕ್ತವಾಗಲು ಕಂದಾಯ ಇಲಾಖೆಗೆ ಸಾಧ್ಯವಾಗಿಲ್ಲ' ಎನ್ನುತ್ತಾರೆ ನಿವೃತ್ತ ಉಪ ವಿಭಾಗಾಧಿಕಾರಿ ರಾಜಪ್ಪ.

ಕಂದಾಯ ಇಲಾಖೆಯಲ್ಲಿ ಸರ್ವೇಯರ್‌ಗಳ ಕೊರತೆ ಇದೆ. ಜಮೀನು ಹದ್ದುಬಸ್ತು ಮಾಡಿಸಿಕೊಳ್ಳಲು ರೈತರು ಹೆಣಗಾಡುವ ಪರಿಸ್ಥಿತಿ ಇದೆ. ಸರ್ವೆ ಶುಲ್ಕ ಕಟ್ಟಿದರೂ ಮುಗಿದ ಮೇಲೆ ಮೇಲೊಂದಿಷ್ಟು ಕೊಡುವುದು ಕಡ್ಡಾಯ ಎನ್ನುವಂತಾಗಿದೆ. ರೈತರ ಜಮೀನುಗಳ

ಸಾಂದರ್ಭಿಕ ಚಿತ್ರ

ಒಳನೋಟ

ಸರ್ವೆ, ಹದ್ದುಬಸ್ತು ಗುರುತಿಸುವುದು, ದಾಖಲೆಗಳನ್ನು ಸರಿಪಡಿಸುವ ಕೆಲಸವನ್ನು ಲಂಚದ ಹಣವಿಲ್ಲದೇ ಮಾಡಿಕೊಡುವುದೇ ಇಲ್ಲ. 11ಇ ನಕ್ಷೆಗೆ ಕಾಲಾವಕಾಶ ಬೇಕಾಗುತ್ತದೆ. ಆದರೆ ₹2 ಸಾವಿರದಿಂದ ₹3 ಸಾವಿರ ಕೊಟ್ಟರೆ ಬೇಗ ಕೆಲಸ ಆಗುತ್ತದೆ. ವಾಲಿಕಾರರು, ಗ್ರಾಮ ಆಡಳಿತಾಧಿಕಾರಿಗಳ ಬಳಿ ಸರ್ವೆ ಅಧಿಕಾರಿಗಳು ಅರ್ಜಿದಾರ ಹೇಗೆ ಎಂಬ ಮಾಹಿತಿ ಪಡೆದು ಹಣ ಕೀಳುವ ಉಪಾಯ ಹೂಡುತ್ತಾರೆ. ಮಧ್ಯವರ್ತಿಗಳ ಮೂಲಕ ಹೋದರೆ ಹಾಗೂ ಹಣ ನೀಡಿದರೆ ಕೆಲಸ ಬೇಗ ಆಗುತ್ತವೆ ಎನ್ನುವುದು ಹಲವು ರೈತರ ಆರೋಪ.

'ಹದ್ದುಬಸ್ತು ಮಾಡಲು ಕೋರುವವರು ವಿದ್ಯಾವಂತರಾದರೆ ಅಥವಾ ರಾಜಕಾರಣಿಗಳಿದ್ದರೆ 'ನಿಮ್ಮ ಖುಷಿ ಕೊಡಿ' ಎಂದು ಕೇಳುತ್ತಾರೆ. ಇಲ್ಲದಿದ್ದರೆ ನೇರವಾಗಿಯೇ ₹5 ಸಾವಿರ ಪೀಕುತ್ತಾರೆ' ಎಂದು ರೈತರು ದೂರುತ್ತಾರೆ.

4ನೇ ಪುಟ ನೋಡಿ

ಭೌತಿಕ ಕಡತಗಳ ನಿರ್ವಹಣೆ ಸ್ಥಗಿತ: ಕೃಷ್ಣ ಬೈರೇಗೌಡ

ಕಂದಾಯ ಸೇವೆಗಳಲ್ಲಿನ ವಿಳಂಬ ತಪ್ಪಿಸಲು, ಭ್ರಷ್ಟಾಚಾರಕ್ಕೆ ಆಸ್ಪದ ನೀಡದಂತೆ ಅರ್ಜಿಗಳ ಜ್ಯೇಷ್ಠತೆಯ ಆಧಾರದಲ್ಲಿ ಪಾರದರ್ಶಕವಾಗಿ ಕೆಲಸಗಳನ್ನು ಮಾಡಿಕೊಡಲು ಅರ್ಜಿಗಳ ಸ್ವೀಕಾರ, ಕಡತಗಳ ನಿರ್ವಹಣೆ, ವಿಲೇವಾರಿ ಪ್ರಕ್ರಿಯೆಯನ್ನು ಫೆ.1ರಿಂದ ಇ–ಆಫೀಸ್ ತಂತ್ರಾಂಶದ ಮೂಲಕವೇ ನಿರ್ವಹಣೆ ಮಾಡಲಾಗುತ್ತದೆ. ಭೌತಿಕ ಕಡತಗಳ ನಿರ್ವಹಣೆಯನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಲಾಗುತ್ತಿದೆ ಎನ್ನುತ್ತಾರೆ ಕಂದಾಯ ಸಚಿವ ಕೃಷ್ಣ ಬೈರೇಗೌಡ.

ಇ–ಆಫೀಸ್ ತಂತ್ರಾಂಶ ಬಳಕೆ ಮಾಡದೇ, ಭೌತಿಕ ಕಡತಗಳನ್ನು ಬಳಸುವ ಅಧಿಕಾರಿಗಳು, ಸಿಬ್ಬಂದಿ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ನೋಟಿಸ್ ನೀಡಲಾಗುವುದು. ಈಗಾಗಲೇ ಬಾಕಿ ಇರುವ ಎಲ್ಲ ಕಡತಗಳ ಸ್ಕ್ಯಾನಿಂಗ್ ಮತ್ತು ಡಿಜಿಟಲೀಕರಣ ಕಾರ್ಯ ನಡೆಯುತ್ತಿದೆ. ಇಲಾಖೆಯ ಪೋರ್ಟಲ್‌ನಿಂದ ದಾಖಲೆಗಳನ್ನು ಸಾರ್ವಜನಿಕರು ನೇರವಾಗಿ ಪಡೆಯಲು ಅವಕಾಶ ಕಲ್ಪಿಸಲಾಗುತ್ತಿದೆ ಎಂದು ಹೇಳಿದರು.

'ಮಂಡಲ್' ರಾಜಕಾರಣಕ್ಕೆ ಮನ್ನಣೆ ಸಿಕ್ಕ ಬೆನ್ನಹಿಂದೆಯೇ 'ಕಮಂಡಲ' ರಾಜಕಾರಣಕ್ಕೂ ಕೇಂದ್ರದಿಂದ ಗೌರವ

ಅಡ್ವಾಣಿ 'ಭಾರತರತ್ನ'

ಪ್ರಜಾವಾಣಿ ವಾರ್ತೆ

ನವದೆಹಲಿ: ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣಕ್ಕಾಗಿ ರಥಯಾತ್ರೆ ನಡೆಸಿ, ಬಿಜೆಪಿ 'ಹೆಮ್ಮರ'ವಾಗಿ ಬೆಳೆಯಲು ಕಾರಣರಾದ ಹಿರಿಯ ನಾಯಕ ಎಲ್.ಕೆ. ಅಡ್ವಾಣಿ ಅವರಿಗೆ ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ 'ಭಾರತರತ್ನ'ವನ್ನು ನೀಡಲು ನಿರ್ಧರಿಸಲಾಗಿದೆ. ಬಿಹಾರದ ಸಮಾಜವಾದಿ ನಾಯಕ ಕರ್ಪೂರಿ ಠಾಕೂರ್ ಅವರನ್ನು ಅತ್ಯುನ್ನತ ಗೌರವಕ್ಕೆ ಆಯ್ಕೆ ಮಾಡಿದ ಹತ್ತು ದಿನಗಳಲ್ಲೇ ಈ ಘೋಷಣೆ ಹೊರಬಿದ್ದಿದೆ.

ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಶನಿವಾರ ಈ ನಿರ್ಧಾರವನ್ನು ಪ್ರಕಟಿಸಿರುವ ಪ್ರಧಾನಿ ನರೇಂದ್ರ ಮೋದಿ, 'ಅಡ್ವಾಣಿ ಅವರು ನಮ್ಮ ಕಾಲದ ಅತ್ಯಂತ ಗೌರವಾನ್ವಿತ ರಾಜಕಾರಣಿ. ದೇಶದ ಬೆಳವಣಿಗೆಗೆ ಅವರು ನೀಡಿದ ಕೊಡುಗೆ ಬಹುಕಾಲ ನೆನಪಿನಲ್ಲಿ ಇರುವಂತಹುದು' ಎಂದು ಹೇಳಿದ್ದಾರೆ.

ರಾಷ್ಟ್ರೀಯ ಏಕತೆ ಮತ್ತು ಸಾಂಸ್ಕೃತಿಕ ಪುನರುತ್ಥಾನಕ್ಕೆ ಅಡ್ವಾಣಿ ಅವರು ಅಪ್ರತಿಮ ಕೊಡುಗೆ ನೀಡಿದ್ದಾರೆ. ಅವರಿಗೆ ಭಾರತರತ್ನ ಪ್ರಶಸ್ತಿ ನೀಡುತ್ತಿರುವುದು ನನಗೆ ಭಾವನಾತ್ಮಕ ಕ್ಷಣವಾಗಿದೆ
ನರೇಂದ್ರ ಮೋದಿ, ಪ್ರಧಾನಿ

ಅಯೋಧ್ಯೆಯಲ್ಲಿ ರಾಮಮಂದಿರ ಸಾಕಾರಗೊಂಡು ಬಾಲರಾಮನ ಪ್ರಾಣ ಪ್ರತಿಷ್ಠಾಪನೆಯಾದ 11 ದಿನಗಳಲ್ಲೇ ಈ ಹೋರಾಟದ ಪ್ರಮುಖ ನೇತಾರ ಅಡ್ವಾಣಿ ಅವರಿಗೆ ಪ್ರಶಸ್ತಿಯನ್ನು ನೀಡಲು ನಿರ್ಧರಿಸಲಾಗಿದೆ. 'ಮಂಡಲ್' ರಾಜಕಾರಣದ ಮೂಲಕ ಛಾಪು ಮೂಡಿಸಿರುವ ಠಾಕೂರ್ ಹಾಗೂ 'ಕಮಂಡಲ' ರಾಜಕಾರಣದ ನೇತಾರ ಅಡ್ವಾಣಿ ಅವರಿಗೆ ಲೋಕಸಭೆ ಚುನಾವಣೆ ಹತ್ತಿರವಾಗಿರುವಾಗಲೇ 'ಭಾರತರತ್ನ' ಪ್ರಶಸ್ತಿ ಘೋಷಿಸಲಾಗಿದೆ.

7ನೇ ಪುಟ ನೋಡಿ



ಪ್ರಶಸ್ತಿ ಪುರಸ್ಕೃತ 50ನೆಯವರು

ಕಳೆದ 10 ವರ್ಷಗಳ ಬಿಜೆಪಿ ನೇತೃತ್ವದ ಸರ್ಕಾರದ ಅವಧಿಯಲ್ಲಿ ಅಟಲ್ ಬಿಹಾರಿ ವಾಜಪೇಯಿ, ಆರ್‌ಎಸ್‌ಎಸ್ ಮುಖಂಡರಾದ ಮದನ್ ಮೋಹನ್ ಮಾಳವೀಯ, ನಾನಾಜಿ ದೇಶಮುಖ್, ಮಾಜಿ ರಾಷ್ಟ್ರಪತಿ ಪ್ರಣವ್ ಮುಖರ್ಜಿ, ಸಂಗೀತ ಮಾಂತ್ರಿಕ ಭೂಪೇನ್ ಹಜಾರಿಕಾ ಹಾಗೂ ಕರ್ಪೂರಿ ಠಾಕೂರ್ ಸೇರಿದಂತೆ ಆರು ಸಾಧಕರಿಗೆ ಭಾರತರತ್ನ ನೀಡಲಾಗಿದೆ. ಅಡ್ವಾಣಿ ಈ ಗೌರವಕ್ಕೆ ಪಾತ್ರರಾದ ಏಳನೇ ಸಾಧಕ. ಒಟ್ಟಾರೆ ಇದುವರೆಗೆ ಭಾರತರತ್ನ ಪ್ರಶಸ್ತಿ ಪುರಸ್ಕೃತರಲ್ಲಿ ಅವರು 50ನೆಯವರು.

ಬೂಮ್ರಾ 'ವೇಗ' ಯಶಸ್ವಿ ಅಮೋಘ

ವಿಶಾಖಪಟ್ಟಣ: ಜಸ್‌ಪ್ರೀತ್ ಬೂಮ್ರಾ ವೇಗದ ದಾಳಿ ಮತ್ತು ಯಶಸ್ವಿ ಜೈಸ್ವಾಲ್ ದ್ವಿಶತಕದ ಆಟದ ಬಲದಿಂದ ಭಾರತ ತಂಡವು ಇಲ್ಲಿ ನಡೆಯುತ್ತಿರುವ ಇಂಗ್ಲೆಂಡ್ ವಿರುದ್ಧದ ಎರಡನೇ ಟೆಸ್ಟ್‌ನಲ್ಲಿ ಶನಿವಾರ ಮೊದಲ ಇನಿಂಗ್ಸ್‌ನಲ್ಲಿ ಮುನ್ನಡೆ ಗಳಿಸಿತು.

ಸ್ಕೋರ್
ಮೊದಲ ಇನಿಂಗ್ಸ್
ಭಾರತ: 396 (112 ಓವರ್)
ಇಂಗ್ಲೆಂಡ್: 253 (55.5 ಓವರ್)
ಎರಡನೇ ಇನಿಂಗ್ಸ್
ಭಾರತ: ವಿಕೆಟ್ ನಷ್ಟವಿಲ್ಲದೇ 28 (5 ಓವರ್)

• ಜಸ್‌ಪ್ರೀತ್ ಬೂಮ್ರಾ ಅವರು 6781 ಎಸೆತಗಳಲ್ಲಿ 150 ವಿಕೆಟ್‌ಗಳನ್ನು ಗಳಿಸುವ ಮೂಲಕ ಅತಿ ವೇಗವಾಗಿ ವಿಕೆಟ್ ಗಳಿಸಿದ ಭಾರತದ ಬೌಲರ್ ಆದರು. ಅವರು ಉಮೇಶ್ ಯಾದವ್ (7661ಎಸೆತ) ದಾಖಲೆ ಮುರಿದರು.

• ಯಶಸ್ವಿ ಜೈಸ್ವಾಲ್ ಅವರು ಟೆಸ್ಟ್ ಕ್ರಿಕೆಟ್‌ನಲ್ಲಿ ದ್ವಿಶತಕ ದಾಖಲಿಸಿದ ಭಾರತದ ಮೂರನೇ ಅತೀ ಕಿರಿಯ ವಯಸ್ಸಿನ ಬ್ಯಾಟರ್. ವಿನೋದ್ ಕಾಂಬ್ಳಿ ಮತ್ತು ಸುನೀಲ್ ಗಾವಸ್ಕರ್ ಕ್ರಮವಾಗಿ ಮೊದಲೆರಡು ಸ್ಥಾನಗಳಲ್ಲಿ ಇದ್ದಾರೆ.

'ಹೊರ ರಾಜ್ಯಗಳಿಗೆ ವಿದ್ಯುತ್ ಮಾರಾಟಕ್ಕೆ ಶೀಘ್ರ ನಿರ್ಬಂಧ'

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: 'ರಾಜ್ಯದಲ್ಲಿ ವಿದ್ಯುತ್ ಉತ್ಪಾದಿಸುತ್ತಿರುವ ಖಾಸಗಿ ಕಂಪನಿಗಳು ಹೊರ ರಾಜ್ಯಗಳಿಗೆ ಮಾರಾಟ ಮಾಡದಂತೆ ಕಾನೂನು ರೂಪಿಸಲು ಸರ್ಕಾರ ಸಿದ್ಧತೆ ನಡೆಸಿದೆ' ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಹೇಳಿದರು.

'ರಾಜ್ಯದಲ್ಲಿ ಈಗ ವಿದ್ಯುತ್ ಅಭಾವ ಇಲ್ಲ. ಆದರೆ, ಬೇಸಿಗೆ ವೇಳೆ ಅಭಾವ ಆಗಬಹುದು ಎಂಬ ಹಿನ್ನೆಲೆಯಲ್ಲಿ ಈ ನಿರ್ಬಂಧದ ಕ್ರಮ ಅನಿವಾರ್ಯ' ಎಂದು ಶನಿವಾರ ಇಂಧನ ಇಲಾಖೆಯ ಪ್ರಗತಿ ಪರಿಶೀಲನೆ ವೇಳೆ ಸಭೆಗೆ ಮಾಹಿತಿ ನೀಡಿದರು.

'ವಾರ್ಷಿಕ ನಿರ್ವಹಣೆಗಾಗಿ ಇತ್ತೀಚೆಗೆ ಉಷ್ಣ ವಿದ್ಯುತ್ ಸ್ಥಾವರಗಳಲ್ಲಿ ಉತ್ಪಾದನೆ ಸ್ಥಗಿತಗೊಳಿಸಲಾಗಿತ್ತು. ಸಾಮಾನ್ಯವಾಗಿ ದಿನಕ್ಕೆ 8,000ರಿಂದ 9,000 ಮೆಗಾವಾಟ್ ಇರುತ್ತಿದ್ದ ವಿದ್ಯುತ್ ಬೇಡಿಕೆ ಈ ವೇಳೆ 16,000 ಮೆಗಾವಾಟ್‌ಗೆ ಏರಿತ್ತು. ಅದನ್ನು ನಿಭಾಯಿಸಲು ಹೊರ ರಾಜ್ಯಗಳಿಂದ ವಿದ್ಯುತ್ ಖರೀದಿಸುವ ಜೊತೆಗೆ ರೈತರಿಗೆ 7 ಗಂಟೆ ಕೊಡುತ್ತಿದ್ದ ವಿದ್ಯುತ್ ಪ್ರಮಾಣ 5 ಗಂಟೆಗೆ ಇಳಿಸಲಾಗಿತ್ತು' ಎಂದು ವಿವರಿಸಿದರು.

ಒಟಿಎಸ್‌ಗೆ ಅವಕಾಶ: ಗ್ರಾಮ ಪಂಚಾಯಿತಿಗಳ ಬಹುತೇಕ ಆದಾಯ ವಿದ್ಯುತ್ ಬಿಲ್ ಪಾವತಿಗೆ ಹೋಗುತ್ತಿದೆ. ಹೀಗಾಗಿ ಬಾಕಿ ಬಿಲ್ ಮನ್ನಾ ಮಾಡುವಂತೆ ಶಾಸಕಿ ಶಾರದಾ ಪೂರ್ಯಾನಾಯ್ಕ ಸಭೆಯಲ್ಲಿ ಮನವಿ ಮಾಡಿದರು.

4ನೇ ಪುಟ ನೋಡಿ



ಗಣಪತಿ ನೃತ್ಯ

ಹಂಪಿ ಉತ್ಸವ ಪ್ರಯುಕ್ತ ಶನಿವಾರ ಗಾಯತ್ರಿ ವೇದಿಕೆಯಲ್ಲಿ ಕೋಲ್ಕತ್ತದ ಗೋಲ್ಡನ್ ಗರ್ಲ್ಸ್ ತಂಡ ಪ್ರದರ್ಶಿಸಿದ ಗಣಪತಿ ನೃತ್ಯ ಮನಸೂರೆಗೊಂಡಿತು
–ಪ್ರಜಾವಾಣಿ ಚಿತ್ರ/ ಲವ ಕೆ.

ಒಳ ಪುಟಗಳು


'ಬಿಜೆಪಿಗೆ 'ಇಂಡಿಯಾ' ಜವಾಬು' 9
ಬದುಕಿದ್ದೇನೆ: ಪೂನಂ ಸ್ಪಷ್ಟನೆ 9

ಚಿನಕುರಳಿ

ಪ್ರಕಾಶ್ ಶೆಟ್ಟಿ

ಪೊಲೀಸ್ ಠಾಣೆಯಲ್ಲಿಯೇ ಬಿಜೆಪಿ ಶಾಸಕನಿಂದ ಗುಂಡು

ಠಾಣೆ/ಮುಂಬೈ (ಪಿಟಿಐ): ಭೂ ವಿವಾದಕ್ಕೆ ಸಂಬಂಧಿಸಿದಂತೆ ಬಿಜೆಪಿ ಶಾಸಕರೊಬ್ಬರು ಪೊಲೀಸ್ ಠಾಣೆಯಲ್ಲಿಯೇ ಶುಕ್ರವಾರ ರಾತ್ರಿ ಶಿವಸೇನಾ (ಶಿಂದೆ ಬಣ) ನಾಯಕರಿಬ್ಬರಿಗೆ ಗುಂಡು ಹಾರಿಸಿದ್ದು, ಅವರ ಸ್ಥಿತಿ ಗಂಭೀರವಾಗಿದೆ.

ಈ ಸಂಬಂಧ ಕಲ್ಯಾಣ್ ಕ್ಷೇತ್ರದ ಬಿಜೆಪಿ ಶಾಸಕ ಗಣಪತ್ ಗಾಯಕವಾಡ್, ಹರ್ಷಲ್ ಕೇನೆ, ಸಂದೀಪ್ ಸರ್ವಾಂಕರ್ ಅವರನ್ನು ಪೊಲೀಸರು ಬಂಧಿಸಿದ್ದಾರೆ. ಅವರ ವಿರುದ್ಧ ಐಪಿಸಿ 307 (ಕೊಲೆ ಯತ್ನ), 120ಬಿ (ಅಪರಾಧ ಸಂಚು) ಸೇರಿದಂತೆ ವಿವಿಧ ಕಲಂಗಳಲ್ಲಿ ಪ್ರಕರಣ ದಾಖಲಿಸಿದ್ದು, ಉಳಿದವರ ಪತ್ತೆಗಾಗಿ ನಾಲ್ಕು ತಂಡ ರಚಿಸಿದ್ದಾರೆ.

ಠಾಣೆಯ ಮ್ಯಾಜಿಸ್ಟ್ರೇಟ್ ನ್ಯಾಯಾಲಯವು ಶಾಸಕ ಗಣಪತ್ ಅವರನ್ನು ಇದೇ 14ರವರೆಗೆ ಪೊಲೀಸ್ ಕಸ್ಟಡಿಗೆ ಒಪ್ಪಿಸಿದೆ.

ಇದರ ಬೆನ್ನಲ್ಲೇ ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟಿದೆ ಎಂದು ಆರೋಪಿಸಿರುವ ವಿರೋಧ ಪಕ್ಷಗಳು ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಅವರ ರಾಜೀನಾಮೆಗೆ ಆಗ್ರಹಿಸಿವೆ.

ಉಪ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು ಈ ಪ್ರಕರಣ ಕುರಿತು ಉನ್ನತಮಟ್ಟದ ತನಿಖೆಗೆ ಆದೇಶ ಹೊರಡಿಸಿದ್ದಾರೆ. 'ಕಾನೂನಿನ ಮುಂದೆ ಎಲ್ಲರೂ ಸಮಾನರು. ಯಾವ ಸಂದರ್ಭದಲ್ಲಿ ಶಾಸಕರು ಗುಂಡು ಹಾರಿಸಿದರು ಎಂಬುದು ತನಿಖೆಯಿಂದ ಗೊತ್ತಾಗಲಿದೆ' ಎಂದು ಫಡಣವೀಸ್ ಹೇಳಿದರು.

4ನೇ ಪುಟ ನೋಡಿ

'ಸಿ.ಸಿ.ಟಿ.ವಿ ದೃಶ್ಯ: ಸತ್ಯ ಹೊರಬರುತ್ತದೆ'

'ಬಿಜೆಪಿ ಶಾಸಕ ಗಣಪತ್ ಗಾಯಕವಾಡ್ ಅವರು ಶುಕ್ರವಾರ ರಾತ್ರಿ ಪೊಲೀಸ್ ಠಾಣೆಯಲ್ಲಿ ನಮ್ಮ ಪಕ್ಷದ ಮಹೇಶ್ ಗಾಯಕವಾಡ್ ಮತ್ತು ರಾಹುಲ್ ಪಾಟೀಲ ಅವರ ಮೇಲೆ ಗುಂಡು ಹಾರಿಸಿರುವ ಕುರಿತ ಪೊಲೀಸ್ ಠಾಣೆಯ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳು ಸಾರ್ವಜನಿಕವಾಗಿ ಬಿತ್ತರವಾಗುತ್ತಿದ್ದು, ಸತ್ಯ ಹೊರಬರಲಿದೆ' ಎಂದು ಮುಖ್ಯಮಂತ್ರಿ ಏಕನಾಥ ಶಿಂದೆ ಅವರ ಮಗನೂ ಆಗಿರುವ ಕಲ್ಯಾಣ್ ಲೋಕಸಭಾ ಕ್ಷೇತ್ರದ ಸಂಸದ ಶ್ರೀಕಾಂತ್ ಶಿಂದೆ ಪ್ರತಿಕ್ರಿಯಿಸಿದ್ದಾರೆ.

ಮಹೇಶ್ ಗಾಯಕವಾಡ್ ಹಾಗೂ ರಾಹುಲ್ ಪಾಟೀಲ ಅವರ ದೇಹದಿಂದ ಗುಂಡುಗಳನ್ನು ವೈದ್ಯರು ತೆಗೆದಿದ್ದಾರೆ ಎಂದು ಸಂಸದರು ಮಾಹಿತಿ ನೀಡಿದ್ದಾರೆ.

₹342 ಕೋಟಿ ಬಾಕಿ: ಸಂಕಷ್ಟದಲ್ಲಿ ಕಾರ್ಮಿಕರು

ನರೇಗಾ: ದುಡಿದರೂ ಸಿಗದ ಕೂಲಿ

• ಇಮಾಮ್‌ಹುಸೇನ್ ಗೂಡುನವರ

ಬೆಳಗಾವಿ: 'ಮೊದ್ಲss ಬರದಿಂದ ಕಂಗೆಟ್ಟೇವ್ರಿ. ಈ ಕೆಲ್ಸಾದ್ರೂ ಕೈಹಿಡಿತೇತ ಅಂತ ನರೇಗಾದಡಿ ದುಡಿದೇವ್ರಿ. ಆದ್ರ, ಎರಡು ತಿಂಗಳಿಂದ ಕೂಲೀನ ಕೊಟ್ಟಿಲ್ಲ. ರೊಕ್ಕ ಇಲ್ಲದ್ದಕ್ಕ ಸಂತಿ ಮಾಡಿಲ್ಲ. ಹೀಂಗಾದ್ರ ತಿನ್ನೂದು, ಉಣ್ಣೂದು ಹೆಂಗ್ರಿ'

ಇದು ಜಿಲ್ಲೆಯ ಸವದತ್ತಿ ತಾಲ್ಲೂಕಿನ ಹಂಚಿನಾಳ ಕಾರ್ಮಿಕರ ನೋವಿನ ಮಾತು. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ (ನರೇಗಾ) ಯೋಜನೆಯಡಿ ರಾಜ್ಯದೆಲ್ಲೆಡೆ ದುಡಿಯುತ್ತಿರುವ ಕಾರ್ಮಿಕರ ಸ್ಥಿತಿ ಇದಕ್ಕಿಂತ ಭಿನ್ನವಿಲ್ಲ. ಬರ ಪರಿಸ್ಥಿತಿಯಿಂದಾಗಿ ಕೃಷಿ ಕಾರ್ಮಿಕರಿಗೆ ಕೆಲಸ ಇಲ್ಲ. ಉದ್ಯೋಗ ಖಾತ್ರಿ ಯೋಜನೆಯಡಿ ಕೆಲಸ ಮಾಡಲು ಬಂದರೂ ಅಲ್ಲಿ ಅವರಿಗೆ ಕೆಲಸ ಸಿಗುತ್ತಿಲ್ಲ.

'ದುಡಿಯಲಿಕ್ಕೆಂದೇ ಬೇರೆ ಊರಿಗೆ ಹೋಗಲು ಹಣ ಇಲ್ಲ. ಉದ್ಯೋಗ ಖಾತ್ರಿ ಯೋಜನೆಯಲ್ಲಿ ಎರಡು ತಿಂಗಳು ಕೆಲಸ ಮಾಡಿದ್ದರೂ ಕೂಲಿ ಸಿಕ್ಕಿಲ್ಲ' ಎಂದು ಹಂಚಿನಾಳದ ಕಾರ್ಮಿಕ ಶಿವಾಜಿ ತಿಳಿಸಿದರು.

₹342 ಕೋಟಿ ಬಾಕಿ: ನರೇಗಾ ಯೋಜನೆಯಡಿ ಬದು, ಶೆಡ್‌ಗಳ ನಿರ್ಮಾಣ, ಕೆರೆ ಮತ್ತು ನಾಲೆಗಳ ಹೂಳೆತ್ತುವಿಕೆ ಸೇರಿ ವಿವಿಧ ಅಭಿವೃದ್ಧಿ ಚಟುವಟಿಕೆಗಳು ಪ್ರಗತಿಯಲ್ಲಿವೆ. ಪ್ರತಿ ಮಾನವ ದಿನ ಸೃಜನೆಗೆ ₹ 316 ಕೂಲಿ ಇದೆ. 2023ರ ನವೆಂಬರ್ 30 ರಿಂದ 2024ರ ಫೆಬ್ರುವರಿ 3ರವರೆಗೆ ದುಡಿದ ಕಾರ್ಮಿಕರಿಗೆ ₹342.56 ಕೋಟಿ ಕೂಲಿ ಪಾವತಿಸಬೇಕು. ಆದರೆ, ಪಾವತಿ ಆಗಿಲ್ಲ' ಎಂದು ಉದ್ಯೋಗ ಖಾತ್ರಿ ಯೋಜನೆ ಅಧಿಕಾರಿಗಳು ತಿಳಿಸಿದರು.

'ಕೇಂದ್ರದಿಂದ ರಾಜ್ಯಕ್ಕೆ ಅನುದಾನ ಬಿಡುಗಡೆ ಆಗುವುದು ವಿಳಂಬವಾಗಿದೆ. ಹೀಗಾಗಿ ಕಾರ್ಮಿಕರಿಗೆ ಕೂಲಿ ಪಾವತಿಸಲು ಸಾಧ್ಯವಾಗಿಲ್ಲ' ಎಂದು ಹೇಳಿದರು.

'ಉದ್ಯೋಗ ಖಾತ್ರಿ ಯೋಜನೆಯಡಿ ಕಾರ್ಮಿಕರಿಗೆ ತ್ವರಿತವಾಗಿ ವೇತನ ಪಾವತಿಸಲು ಅಧಿಕಾರಿಗಳಿಗೆ ಒತ್ತಾಯಿಸಿದ್ದೇವೆ. ಈ ನಿಟ್ಟಿನಲ್ಲಿ ಕ್ರಮ ವಹಿಸಬೇಕು' ಎಂದು ಗ್ರಾಮೀಣ ಕೂಲಿ ಕಾರ್ಮಿಕರ ಸಂಘಟನೆ ಮುಖಂಡ ಯಲ್ಲಪ್ಪ ಕೋಲಕಾರ ತಿಳಿಸಿದರು.

ಉದ್ಯೋಗ ಖಾತ್ರಿ ಯೋಜನೆಯ ಕಾರ್ಮಿಕರಿಗೆ ಕೂಲಿ ಪಾವತಿ ಆಗಬೇಕಿದೆ. ಅನುದಾನ ಬಿಡುಗಡೆಯಾದ ತಕ್ಷಣವೇ ಕೂಲಿ ಪಾವತಿಗೆ ಕ್ರಮ ಕೈಗೊಳ್ಳುತ್ತೇವೆ
ರಾಹುಲ್ ಶಿಂಧೆ, ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯಿತಿ, ಬೆಳಗಾವಿ

ರಾಜ್ಯದಲ್ಲಿ ಬರದ ಛಾಯೆ ಆವರಿಸಿದೆ. ಬದುಕು ಕಷ್ಟವಾಗಿದೆ. ಸಕಾಲಕ್ಕೆ ಕೂಲಿ ಪಾವತಿ ಆಗದಿದ್ದರೆ, ಕಾರ್ಮಿಕರ ಪರಿಸ್ಥಿತಿ ಇನ್ನಷ್ಟು ಶೋಚನೀಯ ಆಗಲಿದೆ
ಮಲ್ಲಿಕಾರ್ಜುನ, ಮುಖಂಡ, ದೇವಲತ್ತಿ

ಹೆಚ್ಚು ಬಾಕಿ ಇರುವ ಜಿಲ್ಲೆಗಳು

ಜಿಲ್ಲೆ	ಕೂಲಿಯ ಮೊತ್ತ (₹ ಕೋಟಿಗಳಲ್ಲಿ)
ಬೆಳಗಾವಿ	35.74
ತುಮಕೂರು	27.80
ಚಿತ್ರದುರ್ಗ	24.64
ಯಾದಗಿರಿ	19.15
ಬೀದರ್	16.41
ಕೊಪ್ಪಳ	16.31
ರಾಯಚೂರು	14.11
ರಾಮನಗರ	13.21
ವಿಜಯನಗರ	13.04
ಕೋಲಾರ	12.46

ಭಾನುವಾರದ ಪುರವಣಿ ಓದಿರಿ

ಕರ್ನಾಟಕ ಸರ್ಕಾರ

ನಗರ ಭೂ ಸಾರಿಗೆ ನಿರ್ದೇಶನಾಲಯ, ನಗರಾಭಿವೃದ್ಧಿ ಇಲಾಖೆ

ಆಯುಕ್ತರ ಕಾರ್ಯಾಲಯ ನಗರ ಭೂ ಸಾರಿಗೆ

ಬಿಎಂಟಿಸಿ, ಟಿಟಿಎಂಸಿ, 'ಬಿ' ಬ್ಲಾಕ್ (ಬಸ್ ಸ್ಟ್ಯಾಂಡ್ ಮೇಲ್ಭಾಗ), 4ನೇ ಮಹಡಿ, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು-560027, ದೂರವಾಣಿ : 080-22226627/6628, ಫ್ಯಾಕ್ಸ್ : 080-22226630, ಇಮೇಲ್ : dultbangalore@gmail.com, dult@karnataka.gov.in

ಸಂಖ್ಯೆ: DULT-ACCT/1/2020 Date: 03.02.2024

ಇ-ಟೆಂಡರ್ ಅಧಿಸೂಚನೆ

ನಗರ ಭೂ ಸಾರಿಗೆ ನಿರ್ದೇಶನಾಲಯವು ಬೆಂಗಳೂರಿನಲ್ಲಿರುವ ನಿರ್ದೇಶನಾಲಯ ಕಛೇರಿಯ ಸೇವೆಗೆ ಬೇಕಾದ ಮಾನವ ಸಂಪನ್ಮೂಲಕ್ಕಾಗಿ 7 ದಿನಗಳ ಅಲ್ಪಾವಧಿ ಟೆಂಡರ್ ಅಧಿಸೂಚನೆಯನ್ನು ಪ್ರಕಟಿಸಿದೆ (ಟೆಂಡರ್ ಸಂಖ್ಯೆ: DULT/2023-24 /SE0002). ಈ ಟೆಂಡರ್ ಪ್ರಕ್ರಿಯೆಯಲ್ಲಿ ಬಿಡ್ ಸಲ್ಲಿಸಲು ಕೊನೆಯ ದಿನಾಂಕ: 15.02.2024. ಹೆಚ್ಚಿನ ಮಾಹಿತಿಗಳನ್ನು https://kppp.karnataka.gov.in ನಿಂದ ಪಡೆದುಕೊಳ್ಳಬಹುದು.

ಸಹಿ/-
ಆಡಳಿತಾಧಿಕಾರಿಗಳು
ನಗರ ಭೂ ಸಾರಿಗೆ ನಿರ್ದೇಶನಾಲಯ
ನಗರಾಭಿವೃದ್ಧಿ ಇಲಾಖೆ, ಬೆಂಗಳೂರು

ವಾಸಾಸಂಇ/ವಾಪ್ರ/3406/ಶಿರಡಿ ಸಾಯಿ/2023-24

ಡಿ.ಕೆ.ಸುರೇಶ್ ವಿರುದ್ಧ ದೂರು

ಮಂಡ್ಯ: 'ದಕ್ಷಿಣ ಭಾರತದ ರಾಜ್ಯಗಳನ್ನೊಳಗೊಂಡ ಪ್ರತ್ಯೇಕ ರಾಷ್ಟ್ರದ ಬೇಡಿಕೆ ಇಡಬೇಕಾಗುತ್ತದೆ ಎಂದು ಹೇಳಿಕೆ ನೀಡಿರುವ ಸಂಸದ ಡಿ.ಕೆ.ಸುರೇಶ್ ವಿರುದ್ಧ ದೇಶದ್ರೋಹದ ಪ್ರಕರಣ ದಾಖಲಿಸಬೇಕು' ಎಂದು ಬಿಜೆಪಿ ಕಾರ್ಯಕರ್ತರು ಶನಿವಾರ ನಗರದ ಪಶ್ಚಿಮ ಠಾಣೆಯಲ್ಲಿ ದೂರು ಸಲ್ಲಿಸಿದರು.

'ದೇಶದ ಅಖಂಡತೆ ಮತ್ತು ಸಾರ್ವಭೌಮತ್ವವನ್ನು ಎತ್ತಿ ಹಿಡಿಯುವುದಾಗಿ ಪ್ರಮಾಣವಚನ ಸ್ವೀಕರಿಸಿರುವ ಸಂಸದರು ಪ್ರತ್ಯೇಕತಾವಾದಗಳಿಗೆ ಕುಮ್ಮಕ್ಕು ನೀಡುವ ಹೇಳಿಕೆ ನೀಡಿದ್ದಾರೆ. ಅವರ ವಿರುದ್ಧ ದೇಶದ್ರೋಹದ ಪ್ರಕರಣ ದಾಖಲಿಸಿ ಕ್ರಮ ಕೈಗೊಳ್ಳಬೇಕು' ಎಂದು ಬಿಜೆಪಿ ಕಾರ್ಯಕರ್ತರಾದ ಸಿ.ಟಿ.ಮಂಜುನಾಥ್, ಶಿವಕುಮಾರ್ ಆರಾಧ್ಯ, ಹೊಸಹಳ್ಳಿ ಶಿವು, ಆನಂದ್, ನಂದೀಶ್, ಶಿವಲಿಂಗಯ್ಯ, ಪ್ರಸನ್ನ ಕುಮಾರ್, ಯೋಗಿ ದೂರು ನೀಡಿದ್ದಾರೆ.

ಲಂಟಾನ ಕಳೆಗಿಡದ ಕಾಂಡದಿಂದ ತಯಾರಿಸಿದ ಆನೆಗಳ ಕಲಾಕೃತಿಗಳ ಮುಂಭಾಗದಲ್ಲಿ ಸಾರ್ವಜನಿಕರು ಛಾಯಾಚಿತ್ರ ತೆಗೆದುಕೊಂಡು ಸಂಭ್ರಮಿಸಿದರು – ಪ್ರಜಾವಾಣಿ ಚಿತ್ರ/ ರಂಜು ಪಿ

ಆನೆಯ ಕಲಾಕೃತಿಯ ಮೇಲೆ ಮಗು ಕೂರಿಸಿ ಖುಷಿಪಟ್ಟ ಕುಟುಂಬ – ಪ್ರಜಾವಾಣಿ ಚಿತ್ರ/ಎಸ್.ಕೆ. ದಿನೇಶ್

ಗಮನ ಸೆಳೆಯುತ್ತಿರುವ ಪ್ರತಿಕೃತಿಗಳು • ಮಾನವ– ವನ್ಯಜೀವಿ ಸಂಘರ್ಷ ತಪ್ಪಿಸಲು ಜಾಗೃತಿ

ಲಾಲ್‌ಬಾಗ್‌ಗೆ ಲಗ್ಗೆ ಇಟ್ಟ 'ಗಜಪಡೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರಣ್ಯದಲ್ಲಿರಬೇಕಾದ 'ಆನೆಗಳು' ಶನಿವಾರ ಬೆಳ್ಳಂಬೆಳಿಗ್ಗೆ ಲಾಲ್‌ಬಾಗ್‌ನ ಗಾಜಿನ ಮನೆಯ ಹಿಂಭಾಗದಲ್ಲಿರುವ ಹುಲ್ಲು ಹಾಸಿನ ಮೇಲೆ ಪ್ರತ್ಯಕ್ಷವಾಗಿದ್ದವು. ವಾಯುವಿಹಾರಿಗಳು ಹಾಗೂ ಪ್ರವಾಸಿಗರು ಅವುಗಳೊಂದಿಗೆ ಸೆಲ್ಫಿ ತೆಗೆಸಿಕೊಳ್ಳುತ್ತಿದ್ದರು...

ಆದರೆ, ಇವು ಜೀವಂತ ಆನೆಗಳಲ್ಲ. ಕಾಡಿನಲ್ಲಿ ಬೆಳೆಯುವ ಲಂಟಾನ ಕಳೆ ಗಿಡಗಳ ಕಾಂಡದಿಂದ ನಿರ್ಮಿಸಿಲಾದ 60 ಆನೆಗಳ ಪ್ರತಿಕೃತಿಗಳು.

ಯುಕೆ ಚಾರಿಟಿ ಎಲಿಫೆಂಟ್ ಫ್ಯಾಮಿಲಿ ಹಾಗೂ ದಿ ರಿಯಲ್ ಎಲಿಫೆಂಟ್ ಕಲೆಕ್ಟಿವ್ ಇನ್ ಇಂಡಿಯಾ ಸಂಸ್ಥೆಗಳ ಸಹಯೋಗದಲ್ಲಿ ಈ ಪ್ರದರ್ಶನ ಆಯೋಜಿಸಲಾಗಿದೆ. ಮಾನವ ಮತ್ತು ವನ್ಯಜೀವಿಗಳ ನಡುವಿನ ಸಂಘರ್ಷ ತಪ್ಪಿಸಿ, ಅವುಗಳೊಂದಿಗೆ ಸಹಬಾಳ್ವೆ ನಡೆಸುವ ಕುರಿತು ಜಾಗೃತಿ ಮೂಡಿಸುವ ಉದ್ದೇಶ ಹೊಂದಲಾಗಿದೆ.

ಗಜಪಡೆಯ ಶಿಸ್ತು, ಮರಿ ಆನೆಗಳು ಅಮ್ಮನೊಂದಿಗೆ ತೆರಳುತ್ತಿರುವ ದೃಶ್ಯ ಹಾಗೂ ಕಾಡಿನಲ್ಲಿ ಅವುಗಳ ಜೀವನಶೈಲಿ ಯಾವ ರೀತಿ ಇರುತ್ತದೆ ಎಂಬುದರ ಕುರಿತು ಪ್ರತಿಕೃತಿಗಳ ಮೂಲಕ ಅನಾವರಣಗೊಳಿಸ ಲಾಗಿದೆ. ಆನೆಯ ಪ್ರತಿಕೃತಿಗಳನ್ನು ಕಂಡ ಮಕ್ಕಳು ಅವುಗಳನ್ನು ಕುತೂಹಲದಿಂದ ನೋಡುವುದರ ಜೊತೆಗೆ ಸ್ಪರ್ಶಿಸುತ್ತಿದ್ದರು. ಅವುಗಳೊಂದಿಗೆ ಫೋಟೊ ತೆಗೆಸಿಕೊಂಡು ಖುಷಿಪಡುತ್ತಿದ್ದರು.

ದೂರದಿಂದ ನೋಡಿದರೆ ನಿಜವಾದ ಗಜಪಡೆಯೇ ಲಾಲ್‌ಬಾಗ್‌ಗೆ ಲಗ್ಗೆ ಇಟ್ಟಿದೆ ಎಂಬಂತೆ ಭಾಸವಾಗುತ್ತದೆ. ಲಂಟಾನ ಕಳೆಗಿಡಗಳ ಕಾಂಡದಿಂದ ಆನೆಗಳನ್ನು ಯಾವ ರೀತಿಯಾಗಿ ತಯಾರಿಸಲಾಗಿದೆ ಎಂಬುದರ ಕುರಿತು ಅರಣ್ಯ ಇಲಾಖೆ ಹಾಗೂ ತೋಟಗಾರಿಕೆ ಇಲಾಖೆಯ ಸಿಬ್ಬಂದಿ ಶಾಲಾ-ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಗೆ ಮಾಹಿತಿ ನೀಡುತ್ತಿದ್ದರು.

> **ಲಂಟಾನ ಕಳೆ ಕಿತ್ತುಹಾಕಿ ಹುಲ್ಲುಗಾವಲುಗಳಾಗಿ ಪರಿವರ್ತಿಸಲಾಗುತ್ತಿದೆ. ಈ ಕಳೆ ಹಾವಳಿ ನಿಯಂತ್ರಿಸಲು ಹೆಚ್ಚುವರಿ ಹಣ ಅಗತ್ಯವಿದೆ.**
> **ಸುಭಾಷ್ ಮಾಲ್ಖೇಡಿ,** ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ)

'ನೀಲಗಿರಿ ಬಯೋಸ್ಪಿಯರ್ ರಿಸರ್ವ್ ಪ್ರದೇಶ, ಮಹದೇಶ್ವರಬೆಟ್ಟ ಪ್ರದೇಶಗಳಲ್ಲಿ ವಾಸಿಸುವ ಸೋಲಿಗ, ಜೇನುಕುರುಬ, ಬೆಟ್ಟ ಕುರುಬ ಸೇರಿದಂತೆ ಬುಡಕಟ್ಟು ಜನಾಂಗದವರು ಲಂಟಾನ ಕಳೆಗಿಡಗಳಿಂದ 250ಕ್ಕೂ ಹೆಚ್ಚು ಆನೆಗಳನ್ನು ಸಿದ್ದಪಡಿಸಿದ್ದಾರೆ. ಈಗಾಗಲೇ 100 ಆನೆಗಳ ಪ್ರತಿಕೃತಿಗಳನ್ನು ಲಂಡನ್ ಬಕಿಂಗ್‌ಹ್ಯಾಮ್ ಅರಮನೆಗೆ ನೀಡಲಾಗಿದೆ. ಲಾಲ್‌ಬಾಗ್‌ನಲ್ಲಿ ಮಾರ್ಚ್ 3ರವರೆಗೆ ಈ ಪ್ರದರ್ಶನ ನಡೆಯಲಿದೆ' ಎಂದು ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಎಂ. ಜಗದೀಶ್ ಮಾಹಿತಿ ನೀಡಿದರು.

'ಲಂಟಾನ ನಿರ್ಮೂಲನೆಗೆ ಕ್ರಮ'

'ಆಕ್ರಮಣಕಾರಿ ಲಂಟಾನ ಕಳೆಗಿಡಗಳನ್ನು ನಿರ್ಮೂಲನೆ ಮಾಡಿ ಅರಣ್ಯ ರಕ್ಷಿಸಿ ವನ್ಯಜೀವಿಗಳ ಆವಾಸಸ್ಥಾನ ಉಳಿಸಲು ಕ್ರಮ ಕೈಗೊಳ್ಳಬೇಕು' ಎಂದು ಕರ್ನಾಟಕ ಪರಿವರ್ತನಾ ರಾಜ್ಯ ಸಂಸ್ಥೆಯ ಉಪಾಧ್ಯಕ್ಷ ರಾಜೀವ್‌ಗೌಡ ಹೇಳಿದರು.

'ಈ ನಿಟ್ಟಿನಲ್ಲಿ ಸರ್ಕಾರ ಕೆಲವು ಮಾನದಂಡಗಳನ್ನು ರೂಪಿಸಬೇಕು. ಯೋಜನಾ ಆಯೋಗದ ಮುಖ್ಯಸ್ಥನಾಗಿ ನಾನು ಏನು ಮಾಡಬಹುದು ಎಂಬುದನ್ನು ಯೋಚಿಸಿ, ಸಂಬಂಧಪಟ್ಟ ಇಲಾಖೆಗಳೊಂದಿಗೆ ಚರ್ಚಿಸಿ ಕಾನೂನಾತ್ಮಕವಾಗಿ ಇದನ್ನು ಸುಗಮಗೊಳಿಸಲು ಪ್ರಯತ್ನಿಸುತ್ತೇನೆ. ಲಂಟಾನ ಕಳೆಗಿಡಗಳಿಂದ ಆನೆಗಳ ಪ್ರತಿಕೃತಿಗಳನ್ನು ತಯಾರಿಸುವುದರಿಂದ ಕಾಡಿನಲ್ಲಿ ವಾಸಿಸುವ ಬುಡಕಟ್ಟು ಸಮುದಾಯಗಳು ಆರ್ಥಿಕವಾಗಿ ಸಬಲರಾಗಲು ಸಹಾಯವಾಗುತ್ತಿದೆ' ಎಂದರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು-560020

ಬೆಂಅಪ್ರಾ/ನಯೋಸ/CLU-203/2439/2023-24 ದಿನಾಂಕ: 01.02.2024

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14-A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ-ಗುಂ	ಪರಿಷ್ಕೃತ ಮಹಾಯೋಜನೆ-2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
M/s, VRK Ventures Pvt Ltd & M/s, Sidvin Developers pvt Ltd	ಬೆಂಗಳೂರು ಪೂರ್ವ	ಬಿದರಹಳ್ಳಿ	ನಿಂಬೇಕಾಯಿ ಪುರ	26/4 32 39/1 39/2	1-35 2-33 1-11 0-13	ವ್ಯವಸಾಯ	ವಸತಿ
				ಒಟ್ಟು	6-12		

ಷರಾ:- ಅರ್ಜಿದಾರರು ಈ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸದ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯದ ಜಾಗಗಳು ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುವುದಾಗಿ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು 'ವ್ಯವಸಾಯ ವಲಯ' ದಿಂದ 'ವಸತಿ ಉಪಯೋಗಕ್ಕೆ' ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಚಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/- ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.

ಪೊಲೀಸರಿಂದ ಚಾಲಕರಿಗೆ ತರಬೇತಿ

ಬೆಂಗಳೂರು: ನಗರದಲ್ಲಿ ಇತ್ತೀಚಿನ ದಿನಗಳಲ್ಲಿ ಬಿಎಂಟಿಸಿ ಬಸ್‌ಗಳಿಂದ ಅಪಘಾತಗಳು ಹೆಚ್ಚಾಗುತ್ತಿದ್ದು, ಇದಕ್ಕೆ ಕಡಿವಾಣ ಹಾಕಲು ಚಾಲಕರಿಗೆ ಸಂಚಾರ ಪೊಲೀಸರು ತರಬೇತಿ ನೀಡುತ್ತಿದ್ದಾರೆ.

'ಸಂಚಾರ ನಿಯಮಗಳ ಬಗ್ಗೆ ತಿಳಿವಳಿಕೆ ಮೂಡಿಸಿ, ಅಪಘಾತಗಳಿಗೆ ಕಡಿವಾಣ ಹಾಕಲು ಚಾಲಕರಿಗೆ ತರಬೇತಿ ನೀಡಲಾಗುತ್ತಿದೆ. ಇದುವರೆಗೂ 3 ಸಾವಿರ ಚಾಲಕರು ತರಬೇತಿ ಪಡೆದಿದ್ದಾರೆ. 12 ಸಾವಿರ ಚಾಲಕರಿಗೆ ತರಬೇತಿ ನೀಡುವ ಗುರಿ ಇದೆ' ಎಂದು ಸಂಚಾರ ವಿಭಾಗದ ಜಂಟಿ ಕಮಿಷನರ್ ಎಂ.ಎನ್. ಅನುಚೇತ್ ತಿಳಿಸಿದ್ದಾರೆ.

'ಪ್ರತಿ ವರ್ಷವೂ ಬಿಎಂಟಿಸಿ ಬಸ್‌ಗಳಿಂದ 30ಕ್ಕೂ ಹೆಚ್ಚು ಅಪಘಾತಗಳು ಸಂಭವಿಸುತ್ತಿವೆ. ಸಂಚಾರ ನಿಯಮ ಉಲ್ಲಂಘನೆಯಿಂದ ಅಪಘಾತಗಳು ಸಂಭವಿಸುತ್ತಿರುವುದು ಗೊತ್ತಾಗಿದೆ. ಇದೇ ಕಾರಣಕ್ಕೆ ಚಾಲಕರಿಗೆ ತರಬೇತಿ ನೀಡಲಾಗುತ್ತಿದೆ. ತರಬೇತಿ ಪಡೆದ ಚಾಲಕರಿಂದ ಇದುವರೆಗೂ ಒಂದೂ ಅಪಘಾತ ಸಂಭವಿಸಿಲ್ಲ' ಎಂದಿದ್ದಾರೆ.

ಹೊಸ ಪ್ರಭೇದದ 'ಬಿಲ ಕಪ್ಪೆ' ಪತ್ತೆ

ಈಶಾನ್ಯ ಮುಂಗಾರು ವೇಳೆ ಕಾಣಿಸಿಕೊಳ್ಳುವ ವಿಶೇಷ ಕಪ್ಪೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ರಾಜಾನುಕುಂಟೆಯಲ್ಲಿ ಹೊಸ ಪ್ರಭೇದದ ಬಿಲ ಕಪ್ಪೆ ಪತ್ತೆಯಾಗಿದ್ದು, ಇದಕ್ಕೆ 'ಸ್ಫೆರೋಥೆಕಾ ವರ್ಷಾಬು' ಎಂದು ನಾಮಕರಣ ಮಾಡಲಾಗಿದೆ.

ವಿವಿಧ ರಾಷ್ಟ್ರೀಯ ಹಾಗೂ ಅಂತರ ರಾಷ್ಟ್ರೀಯ ಸಂಸ್ಥೆಗಳ ನೆರವಿನಿಂದ ಕಪ್ಪೆಯ ನೂತನ ಪ್ರಭೇದವನ್ನು ಗುರುತಿಸಲಾಗಿದೆ. ಈ ಕಪ್ಪೆಯು ಈಶಾನ್ಯ ಮುಂಗಾರಿನ ಅವಧಿಯಲ್ಲಿ ಕಾಣಿಸಿಕೊಳ್ಳುತ್ತದೆ. ಈ ಅವಧಿಯಲ್ಲಿ ಬಿಲದಿಂದ ಹೊರಬರುವ ವಿಶಿಷ್ಟ ಗುಣವನ್ನು ಹೊಂದಿದೆ. ಹೀಗಾಗಿ ಈ ಕಪ್ಪೆಗೆ 'ಸ್ಫೆರೋಥೆಕಾ ವರ್ಷಾಬು' ಎಂದು ನಾಮಕರಣ ಮಾಡಲಾಗಿಗಿದೆ.

'ವರ್ಷಾಬು' ಎನ್ನುವುದು ಸಂಸ್ಕೃತ ಮೂಲದ ಹೆಸರಾಗಿದೆ. ಮಳೆಯ ಸಮಯದಲ್ಲೇ ಈ ತಳಿಯ ಕಪ್ಪೆಗಳು ಸಂತಾನೋತ್ಪತ್ತಿಯನ್ನೂ ಮಾಡುತ್ತವೆಯಾದ್ದರಿಂದ ಈ ಹೆಸರು ಅನ್ವರ್ಥವಾಗಿದೆ ಎಂದು ಜೀವವಿಜ್ಞಾನಿಗಳು ವಿಶ್ಲೇಷಿಸಿದ್ದಾರೆ.

'ಸ್ಫೆರೋಥೆಕಾ ವರ್ಷಾಬು' ಬಿಲ ಕಪ್ಪೆ

ಇಲ್ಲಿನ ಸ್ವಾಯತ್ತ ಸಂಸ್ಥೆಯಾದ ಮೌಂಟ್ ಕಾರ್ಮೆಲ್ ಕಾಲೇಜು, ಜೈನ್ (ಡೀಮ್ಡ್) ವಿಶ್ವವಿದ್ಯಾಲಯ, ಭಾರತೀಯ ವಿಜ್ಞಾನ ಸಂಸ್ಥೆಯ ಪರಿಸರ ವಿಜ್ಞಾನಗಳ ಕೇಂದ್ರ, ಮೈಸೂರು ವಿಶ್ವವಿದ್ಯಾಲಯದ ಯುವರಾಜ ಕಾಲೇಜಿನ ಪ್ರಾಣಿಶಾಸ್ತ್ರ ವಿಭಾಗ, ಪುಣೆಯ ಭಾರತೀಯ ಪ್ರಾಣಿ ಸರ್ವೇಕ್ಷಣಾ ಪ್ರಾದೇಶಿಕ ಕಚೇರಿ, ನ್ಯಾಷನಲ್ ಮ್ಯೂಸಿಯಂ ಆಫ್ ಹಿಸ್ಟರಿ, ಫ್ರಾನ್ಸ್ ಮತ್ತು ಚೀನಾದ ವಿಶ್ವವಿದ್ಯಾಲಯಗಳು ಸೇರಿ ವಿವಿಧ ಸಂಸ್ಥೆಗಳ ನೆರವಿನಿಂದ ಬಿಲ ಕಪ್ಪೆಯ ಹೊಸ ಪ್ರಭೇದವನ್ನು ಪತ್ತೆ ಮಾಡಲಾಗಿದೆ.

ನೀರಿನ ಅಭಾವವಿದ್ದರೂ ಜೀವನ: 'ಪತ್ತೆಯಾಗಿರುವ ಉಭಯವಾಸಿ ಪ್ರಭೇದವು ಅನೇಕ ವಿಶಿಷ್ಟ ಗುಣಲಕ್ಷಣಗಳನ್ನು ಹೊಂದಿದ್ದು, ಈಗಾಗಲೆ ಪತ್ತೆಯಾಗಿರುವ ಕಪ್ಪೆಯ ಪ್ರಭೇದಗಳಿಗಿಂತ ವಿಭಿನ್ನವಾಗಿದೆ. ನೂತನ ಪ್ರಭೇದದ ಈ ಕಪ್ಪೆ ಶುದ್ಧ ನೀರಿನ ಅಭಾವವಿದ್ದರೂ ನಗರದ ಪರಿಸರಕ್ಕೆ ಆಶ್ಚರ್ಯಕರ ರೀತಿಯಲ್ಲಿ ಹೊಂದಿಕೊಂಡು ಜೀವಿಸುತ್ತಿದೆ. ಈ ಹೊಸ ಪ್ರಭೇದದಿಂದಾಗಿ ನಗರ ಪ್ರದೇಶವನ್ನು ಮತ್ತಷ್ಟು ಶೋಧಿಸಲು ಉತ್ತೇಜನ ಸಿಕ್ಕಂತಾಗಿದೆ' ಎಂದು ಸಂಶೋಧಕ ದೀಪಕ್ ಪಿ. ತಿಳಿಸಿದ್ದಾರೆ.

ಭಾರತೀಯ ಪ್ರಾಣಿ ಸರ್ವೇಕ್ಷಣಾ ವಿಜ್ಞಾನಿ ಕೆ.ಪಿ. ದಿನೇಶ್, 'ಭವಿಷ್ಯದಲ್ಲಿ ಇನ್ನಷ್ಟು ಹೊಸ ಪ್ರಭೇದದ ಕಪ್ಪೆಗಳನ್ನು ಪತ್ತೆ ಮಾಡಲಾಗುವುದು. ಈಗಾಗಲೇ ಕಪ್ಪೆಗಳಲ್ಲಿ 451 ಪ್ರಭೇದಗಳನ್ನು ದಾಖಲಿಸಲಾಗಿದೆ' ಎಂದು ಹೇಳಿದ್ದಾರೆ.

ಕಾರ್ಮಿಕರ ಮೇಲೆ ಹಲ್ಲೆ: ನಾಲ್ವರ ಬಂಧನ

ಬೆಂಗಳೂರು: ಕಟ್ಟಡ ನಿರ್ಮಾಣ ಕಾರ್ಮಿಕರೊಬ್ಬರನ್ನು ಅಡ್ಡಗಟ್ಟಿ ಹಲ್ಲೆ ಮಾಡಿದ್ದ ಆರೋಪದಡಿ ಬಾಲಕ ಸೇರಿ ನಾಲ್ವರನ್ನು ಗಿರಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಸುಲಿಗೆಗೆ ಯತ್ನ ಹಾಗೂ ಹಲ್ಲೆ ಸಂಬಂಧ ಕಾರ್ಮಿಕ ಭೀಮರಾಯ ಅವರು ದೂರು ನೀಡಿದ್ದರು. ಆರೋಪಿಗಳಾದ ಹೊಸಕೆರೆಹಳ್ಳಿಯ ಮುತ್ತುರಾಜು (23), ಮಹೇಶ್ (18) ಹಾಗೂ ಹರೀಶ್ (19) ಸೇರಿ ನಾಲ್ವರನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಹೊಸಕೆರೆಹಳ್ಳಿಯ ಸಪ್ತಗಿರಿ ಬಡಾವಣೆಯಲ್ಲಿ ವಾಸವಿದ್ದ ದೂರುದಾರ ಭೀಮರಾಯ, ಫೆ.1ರಂದು ರಾತ್ರಿ 8 ಗಂಟೆ ಸುಮಾರಿಗೆ ಕೆಲಸ ಮುಗಿಸಿ ಮನೆಗೆ ಹೊರಟಿದ್ದರು. ಆಟೊದಲ್ಲಿ ಬಂದಿದ್ದ ಆರೋಪಿಗಳು, ಭೀಮರಾಯ ಅವರನ್ನು ಅಡ್ಡಗಟ್ಟಿ ಹಣ ನೀಡುವಂತೆ ಪೀಡಿಸಿ, ಹಾಕಿ ಸ್ಟಿಕ್‌ನಿಂದ ಭೀಮರಾಯ ಅವರ ತಲೆ, ಕೈಗೆ ಹೊಡೆದು ಪರಾರಿಯಾಗಿದ್ದರು. ಗಾಯಗೊಂಡಿದ್ದ ದೂರುದಾರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದರು' ಎಂದು ತಿಳಿಸಿದರು.

ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್

ಕಾರ್ಪೋರೇಟ್ ಐಡೆಂಟಿಫಿಕೇಶನ್ ನಂಬರ್ (ಸಿಐಎನ್): L18101KA2004PLC033475

ನೋಂದಾಯಿತ ಕಛೇರಿ: ನಂ. 25, 2ನೇ ಅಡ್ಡರಸ್ತೆ, 3ನೇ ಮುಖ್ಯರಸ್ತೆ, ಕೈಗಾರಿಕಾ ಉಪನಗರ, ಯಶವಂತಪುರ, ಬೆಂಗಳೂರು-560022

ದೂ: +91 80 68951000 ಫ್ಯಾಕ್ಸ್: +91 80 68951001 ಇಮೇಲ್: cs@gokaldasexports.com; ವೆಬ್‌ಸೈಟ್: www.gokaldasexports.com

ಸದಸ್ಯರಿಗೆ ನೋಟೀಸ್

ಸದಸ್ಯರುಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್ ("ಕಂಪನಿ")ಯ ಸದಸ್ಯರ ಅಸಾಧಾರಣ ಸಾಮಾನ್ಯ ಸಭೆ ('ಇಜಿಎಂ')ಯನ್ನು ಇಜಿಎಂ ನೋಟೀಸ್‌ನಲ್ಲಿ ತಿಳಿಸಲಾದ ವ್ಯವಹಾರವನ್ನು ನಡೆಸಲು ವಿಡಿಯೋ ಕಾನ್ಫೆರೆನ್ಸಿಂಗ್ / ಅದರ್ ಆಡಿಯೋ ವಿಷುವಲ್ ಮೀನ್ಸ್ ಮೂಲಕ ("ವಿಸಿ") ಮೂಲಕ ನಡೆಯಲಿದ್ದು, ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯದಿಂದ ("ಎಂಸಿಎ") ಹೊರಡಿಸಲಾದ ಸಾಮಾನ್ಯ ಸುತ್ತೋಲೆ ಸಂಖ್ಯೆಗಳು 14/2020 ದಿನಾಂಕ ಏಪ್ರಿಲ್ 08, 2020, 17/2020 ದಿನಾಂಕ ಏಪ್ರಿಲ್ 13, 2020, 22/2020 ದಿನಾಂಕ ಜೂನ್ 15, 2020, 33/2020 ದಿನಾಂಕ ಸೆಪ್ಟೆಂಬರ್ 28, 2020, 39/2020 ದಿನಾಂಕ ಡಿಸೆಂಬರ್ 31, 2020, 10/2021 ದಿನಾಂಕ ಜೂನ್ 23, 2021, 20/2021 ದಿನಾಂಕ ಡಿಸೆಂಬರ್ 08, 2021 03/2022 ದಿನಾಂಕ 5 ಮೇ 2022, 11/2022 ದಿನಾಂಕ ಡಿಸೆಂಬರ್ 28, 2022 ಮತ್ತು 09/2023 ದಿನಾಂಕ ಸೆಪ್ಟೆಂಬರ್ 25, 2023 ಹಾಗೂ ಸೆಕ್ಯೂರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾದಿಂದ ಹೊರಡಿಸಲಾದ ಸಂಖ್ಯೆ SEBI/HO/CFD/PoD-2/P/CIR/2023/167 ದಿನಾಂಕ ಅಕ್ಟೋಬರ್ 07, 2023 (ಒಟ್ಟಾರೆಯಾಗಿ ಇನ್ನುಮುಂದೆ "ಸುತ್ತೋಲೆಗಳು" ಎಂದು ಉಲ್ಲೇಖಿಸಲಾಗುವುದು) ರಂತೆ ಕಂಪನಿಗಳು ಸಾಮಾನ್ಯ ಸ್ಥಳದಲ್ಲಿ ಷೇರುದಾರರ ದೈಹಿಕ ಉಪಸ್ಥಿತಿಯಿಲ್ಲದೆ ವಿಸಿ ಮೂಲಕ ಇಜಿಎಂ ನಡೆಸಲು ಅನುಮತಿಸಲಾಗಿದೆ. ಅದರಂತೆ ದಿನಾಂಕ 01ನೇ ಫೆಬ್ರವರಿ, 2024ರ ಇಜಿಎಂ ನೋಟೀಸ್‌ನಲ್ಲಿ ತಿಳಿಸಲಾದ ವ್ಯವಹಾರವನ್ನು ವ್ಯವಹರಿಸಲು ಕಂಪನಿಯ ಇಜಿಎಂ ಅನ್ನು ವಿಸಿ ಮೂಲಕ ನಡೆಸಲಾಗುವುದು.

ಮೇಲಿನ ಸುತ್ತೋಲೆಗಳನ್ವಯವಾಗಿ ಕಂಪನಿ / ಡೆಪಾಸಿಟರಿ ಪಾರ್ಟಿಸಿಪೆಂಟ್‌ಗಳೊಂದಿಗೆ ತಮ್ಮ ಇಮೇಲ್ ಐಡಿಗಳನ್ನು ನೋಂದಾಯಿಸಿಕೊಂಡಿರುವ ಎಲ್ಲಾ ಸದಸ್ಯರಿಗೆ ಇಜಿಎಂ ನೋಟೀಸನ್ನು ವಿದ್ಯುನ್ಮಾನ ಮೂಲಕವಾಗಿ ರವಾನಿಸಲಾಗುವುದು. ಡಿಮೆಟೀರಿಯಲೈಸ್ಡ್ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು ತಮ್ಮ ಇ-ಮೇಲ್ ವಿಳಾಸ ಮತ್ತು ಮೊಬೈಲ್ ಸಂಖ್ಯೆಗಳನ್ನು ತಮ್ಮ ಡಿಪಾಸಿಟರಿ ಪಾರ್ಟಿಸಿಪೆಂಟ್ಸ್‌ಗಳ ಮೂಲಕ ಸಂಬಂಧಿತ ಡಿಪಾಸಿಟರೀಸ್‌ಗಳೊಂದಿಗೆ ನೋಂದಾಯಿಸಲು ವಿನಂತಿಸಲಾಗಿದೆ. ಮತ್ತು ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು ಕಂಪನಿಯ ರೆಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟ್ ("ಆರ್‌ಟಿಎ") ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್‌ರವರಿಗೆ ('ಕೆಫಿನ್‌ಟೆಕ್') einward.ris@kfintech.comನಲ್ಲಿ ಮಾಹಿತಿಗಳನ್ನು ಕಳುಹಿಸಲು ವಿನಂತಿಸಲಾಗಿದೆ. ಇಜಿಎಂ ನೋಟೀಸನ್ನು ಕಂಪನಿಯ ವೆಬ್‌ಸೈಟ್ www.gokaldasexports.comನಲ್ಲಿ, ಸ್ಟಾಕ್‌ಎಕ್ಸ್‌ಚೇಂಜ್ ವೆಬ್‌ಸೈಟ್‌ಗಳು ಅಂದರೆ, ಬಿಎಸ್‌ಇ ಲಿಮಿಟೆಡ್ ಮತ್ತು ನ್ಯಾಷನಲ್ ಸ್ಟಾಕ್‌ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್‌ನ ವೆಬ್‌ಸೈಟ್‌ಗಳಲ್ಲಿ ಕ್ರಮವಾಗಿ www.bseindia.com ಮತ್ತು www.nseindia.com ಲಭ್ಯವಾಗುವಂತೆ ಮಾಡಲಾಗುವುದು.

ತಮ್ಮ ಇ-ಮೇಲ್ ವಿಳಾಸಗಳನ್ನು ನೋಂದಾಯಿಸದ ಸದಸ್ಯರು ಇಜಿಎಂ ನೋಟೀಸ್‌ನಲ್ಲಿ ನೀಡಿರುವ ವ್ಯವಹಾರಗಳಿಗೆ ರಿಮೋಟ್ ಇ-ವೋಟಿಂಗ್ ಮೂಲಕ ಅಥವಾ ಇಜಿಎಂ ಸಂದರ್ಭದಲ್ಲಿ ಇ-ವೋಟಿಂಗ್ ವ್ಯವಸ್ಥೆಯ ಮೂಲಕ ಮತಚಲಾಯಿಸುವ ಅವಕಾಶವನ್ನು ಕಲ್ಪಿಸಲಾಗುವುದು. ಡಿಮೆಟೀರಿಯಲೈಸ್ಡ್ ಹಾಗೂ ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರಿಗೆ ರಿಮೋಟ್ ಮತದಾನದ ವಿಧಾನವನ್ನು ಇಜಿಎಂನ ನೋಟೀಸ್‌ನಲ್ಲಿ ಒದಗಿಸಲಾಗುವುದು.

ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್ ಪರವಾಗಿ
ಸಹಿ/-
ಗೌರೀಶ್ ಹೆಗಡೆ
ಕಂಪನಿ ಕಾರ್ಯದರ್ಶಿ

ಸ್ಥಳ : ಬೆಂಗಳೂರು
ದಿನಾಂಕ : ಫೆಬ್ರವರಿ 03, 2024

ಧೋನಿ ವ್ಯವಸ್ಥಾಪಕನಿಗೆ ವಂಚನೆ

ತಿರುಪತಿ ದೇವಸ್ಥಾನದಲ್ಲಿ ವಿಶೇಷ ದರ್ಶನದ ವ್ಯವಸ್ಥೆಯ ಭರವಸೆ: ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಿರುಪತಿ ವೆಂಕಟೇಶ್ವರ ದೇವಸ್ಥಾನದಲ್ಲಿ ವಿಶೇಷ ದರ್ಶನ ಹಾಗೂ ವಸತಿಗೆ ವ್ಯವಸ್ಥೆ ಮಾಡಿಸುವುದಾಗಿ ಹೇಳಿ ಕ್ರಿಕೆಟ್ ಆಟಗಾರ ಎಂ.ಎಸ್. ಧೋನಿ ಅವರ ವ್ಯವಸ್ಥಾಪಕ ಸ್ವಾಮಿನಾಥನ್ ಶಂಕರ್ ಅವರನ್ನು ವಂಚಿಸಲಾಗಿದ್ದು, ಈ ಸಂಬಂಧ ಎಚ್‌ಎಸ್‌ಆರ್ ಲೇಔಟ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'₹6.33 ಲಕ್ಷ ವಂಚನೆ ಆಗಿರುವುದಾಗಿ ಸ್ವಾಮಿನಾಥನ್ ಅವರು ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'2023ರ ಅಕ್ಟೋಬರ್ ನಲ್ಲಿ ದೂರುದಾರ ಸ್ವಾಮಿನಾಥನ್ ಅವರಿಗೆ ಕರೆ ಮಾಡಿದ್ದ ವ್ಯಕ್ತಿಯೊಬ್ಬ, ತಾನು ಹಣಕಾಸು ಸಚಿವರ ಆಪ್ತ ಸಹಾಯಕನೆಂದು ಹೇಳಿದ್ದ. ತಮ್ಮ ಪರಿಚಯಸ್ಥರು ಬೆಂಗಳೂರಿನಲ್ಲಿ ಭೇಟಿಯಾಗುತ್ತಾರೆಂದು ತಿಳಿಸಿದ್ದ. ಅಕ್ಟೋಬರ್ 29ರಂದು ಸಂದೀಪ್ ಹಾಗೂ ಸಲ್ಮಾನ್ ಅವರು ಬೆಂಗಳೂರಿನಲ್ಲಿ ಸ್ವಾಮಿನಾಥನ್ ಅವರನ್ನು ಭೇಟಿಯಾಗಿದ್ದರು. 'ತಿರುಪತಿ ತಿಮ್ಮಪ್ಪ ದೇವಸ್ಥಾನದಲ್ಲಿ ಎಲ್ಲರೂ ಪರಿಚಯ. ವಿಶೇಷ ದರ್ಶನ ಹಾಗೂ ವಸತಿಗೆ ವ್ಯವಸ್ಥೆ ಮಾಡುತ್ತೇವೆ' ಎಂಬುದಾಗಿ ಆರೋಪಿಗಳು ಹೇಳಿದ್ದರು. ಅಗತ್ಯವಿದ್ದರೆ ಹೇಳುವುದಾಗಿ ಸ್ವಾಮಿನಾಥನ್ ತಿಳಿಸಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ನ. 30ರಂದು ಕರೆ ಮಾಡಿದ್ದ ಆರೋಪಿಗಳು, '12 ಮಂದಿಗೆ ದರ್ಶನಕ್ಕೆ ಪಾಸ್ ಇದೆ. ಬೇಕಾದರೆ ತೆಗೆದುಕೊಳ್ಳಿ' ಎಂದಿದ್ದರು. ತಾವು ದುಬೈನಲ್ಲಿ ಇರುವುದಾಗಿ ಹೇಳಿದ್ದ ಸ್ವಾಮಿನಾಥನ್, ಬೆಂಗಳೂರಿನಲ್ಲಿರುವ ಸ್ನೇಹಿತನಿಗೆ ಪಾಸ್ ನೀಡುವಂತೆ ತಿಳಿಸಿದ್ದರು. ಸ್ವಾಮಿನಾಥನ್ ಅವರ ಸ್ನೇಹಿತ, ತಿರುಪತಿ ದೇವಸ್ಥಾನದಲ್ಲಿ ವಿಶೇಷ ದರ್ಶನ ಸಿಗುವುದೆಂದು ಆರೋಪಿಗಳಿಗೆ ಹಂತ ಹಂತವಾಗಿ ₹6.33 ಲಕ್ಷ ನೀಡಿದ್ದರು. ಇದಾದ ನಂತರ ಆರೋಪಿಗಳು, ಯಾವುದೇ ದರ್ಶನಕ್ಕೆ ವ್ಯವಸ್ಥೆ ಮಾಡಿಲ್ಲ' ಎಂದು ಮೂಲಗಳು ತಿಳಿಸಿವೆ.

'ತಿರುಪತಿ ದೇವಸ್ಥಾನದಲ್ಲಿ ದರ್ಶನದ ಹೆಸರಿನಲ್ಲಿ ವಂಚನೆ ಮಾಡುವ ಜಾಲ ಸಕ್ರಿಯವಾಗಿದೆ. ಈ ಜಾಲದಿಂದ ಹಲವರಿಗೆ ವಂಚನೆಯಾಗಿರುವ ದೂರುಗಳು ದಾಖಲಾಗುತ್ತಿವೆ' ಎಂದು ಮೂಲಗಳು ಹೇಳಿವೆ.

ಅಪರಾಧ ಸುದ್ದಿ

ಅಂಚೆ ಮೂಲಕ ಡ್ರಗ್ಸ್ ಸಾಗಣೆ: ಆರೋಪಿ ಬಂಧನ

ಬೆಂಗಳೂರು: ಅಂಚೆ ಮೂಲಕ ಡ್ರಗ್ಸ್ ಪಾರ್ಸೆಲ್ ತರಿಸಿಕೊಂಡು ನಗರದಲ್ಲಿ ಮಾರುತ್ತಿದ್ದ ಜಾಲ ಭೇದಿಸಿರುವ ಸಿಸಿಬಿ ಪೊಲೀಸರು, ಆರೋಪಿ ರಿತಿಕ್‌ರಾಜ್ ಎಂಬಾತನನ್ನು ಬಂಧಿಸಿದ್ದಾರೆ.

'ಜಾರ್ಖಂಡ್‌ನ ರಿತಿಕ್ ರಾಜ್ ಹಲವು ತಿಂಗಳಿನಿಂದ ಡ್ರಗ್ಸ್ ಮಾರಾಟದಲ್ಲಿ ತೊಡಗಿದ್ದ ಮಾಹಿತಿ ಇದೆ. ಜಾಲದ ಪ್ರಮುಖ ಆರೋಪಿ ತಲೆಮರೆಸಿಕೊಂಡಿದ್ದಾನೆ' ಎಂದು ಪೊಲೀಸರು ಹೇಳಿದರು.

'ಹೊರ ರಾಜ್ಯಗಳಿಂದ ಅಂಚೆ ಮೂಲಕ ಡ್ರಗ್ಸ್ ಪಾರ್ಸೆಲ್ ತರಿಸುತ್ತಿದ್ದ ಮಾಹಿತಿ ಲಭ್ಯವಾಗಿತ್ತು. ಹುಳಿಮಾವು ಠಾಣೆ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ನಡೆಸಲಾಯಿತು. ಉಡುಗೊರೆ ನೆಪದಲ್ಲಿ ಅಂಚೆ ಮೂಲಕ ಡ್ರಗ್ಸ್ ಪಾರ್ಸೆಲ್ ಬಂದಿತ್ತು. ಅದನ್ನು ಪಡೆಯಲು ಬಂದಿದ್ದ ಸಂದರ್ಭದಲ್ಲಿಯೇ ರಿತಿಕ್ ರಾಜ್‌ನನ್ನು ಸೆರೆ ಹಿಡಿಯಲಾಯಿತು' ಎಂದು ತಿಳಿಸಿದರು.

'₹ 6.50 ಲಕ್ಷ ಮೌಲ್ಯದ 130 ಗ್ರಾಂ ಚರಸ್ ಪಾರ್ಸೆಲ್‌ನಲ್ಲಿತ್ತು. 'ಕೇರಳದ ವ್ಯಕ್ತಿಯೊಬ್ಬ ಪಾರ್ಸೆಲ್ ಕಳುಹಿಸುತ್ತಿದ್ದ. ಅದನ್ನು ಪಡೆದು ಮಧ್ಯವರ್ತಿಗಳ ಮೂಲಕ ಗ್ರಾಹಕರಿಗೆ ಡ್ರಗ್ಸ್ ಮಾರುತ್ತಿದ್ದೆ' ಎಂಬುದಾಗಿ ಆರೋಪಿ ರಿತಿಕ್‌ರಾಜ್ ಹೇಳಿಕೆ ನೀಡಿದ್ದಾನೆ. ಕೇರಳದ ವ್ಯಕ್ತಿಯನ್ನು ಪತ್ತೆ ಮಾಡಬೇಕಿದೆ' ಎಂದು ಪೊಲೀಸರು ಹೇಳಿದರು.

ನಿಧನ ವಾರ್ತೆ

ಶಿವಾನಂದ ಹಿರೇಮಠ



ಬೆಂಗಳೂರು: ಭಾರತೀಯ ವಾಯುಪಡೆಯ ಮಾಜಿ ಸೈನಿಕ ಶಿವಾನಂದ ದುಂಡಯ್ಯ ಹಿರೇಮಠ (70) ಅವರು ಶುಕ್ರವಾರ ನಿಧನರಾದರು. ಡಾಲರ್ಸ್ ಕಾಲೊನಿ ನಿವಾಸಿಯಾಗಿದ್ದ ಅವರಿಗೆ ಪತ್ನಿ, ಇಬ್ಬರು ಪುತ್ರರು, ಪುತ್ರಿ ಇದ್ದಾರೆ.

ಚಾಮರಾಜಪೇಟೆಯ ಹಿಂದೂ ರುದ್ರಭೂಮಿಯಲ್ಲಿ ಶನಿವಾರ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಸದಸ್ಯರು ತಿಳಿಸಿದರು.

ಶ್ರೀನಿವಾಸಯ್ಯ



ಬೆಂಗಳೂರು: ಐಟಿಐ ಕಂಪನಿಯ ನಿವೃತ್ತ ಎಂಜಿನಿಯರ್ ಡಿ.ಎಂ. ಶ್ರೀನಿವಾಸಯ್ಯ (78) ಅವರು ಶನಿವಾರ ತಮ್ಮ ನಿವಾಸದಲ್ಲಿ ನಿಧನರಾದರು.

ಅವರಿಗೆ ಪತ್ನಿ, ಪುತ್ರಿ ಮತ್ತು ಪುತ್ರರೂ ಆದ ರಾಜ್ಯ ವಕೀಲರ ಪರಿಷತ್ ಸದಸ್ಯ ಎಸ್.ಹರೀಶ್ ಇದ್ದಾರೆ.

ಅಂತ್ಯಕ್ರಿಯೆ ಹೆಬ್ಬಾಳ ಚಿತಾಗಾರದಲ್ಲಿ ಭಾನುವಾರ ಸಂಜೆ 4ಕ್ಕೆ ನೆರವೇರಲಿದೆ. **ಸಂಪರ್ಕ ಸಂಖ್ಯೆ:** 98455-38833

ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ

ಎಸ್.ಎನ್. ಕಾಂಪ್ಲೆಕ್ಸ್, ಮೊದಲನೇ ಮಹಡಿ, ನಗರ ಪೊಲೀಸ್ ಠಾಣೆ ಎದುರು, 'ಡಿ' ಕ್ರಾಸ್, ದೊಡ್ಡಬಳ್ಳಾಪುರ- 561203, ದೂ: 080-29562046

ಸಂಖ್ಯೆ: DPA/TP/ಭೂಉನಿ/04/2023-24 ದಿನಾಂಕ: 02.02.2024

ಪ್ರಕಟಣೆ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69(3)ರ ತಿದ್ದುಪಡಿ ಕಾಯ್ದೆಯಂತೆ)

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 95 ಬಿಎಂಆರ್ 2016 ದಿನಾಂಕ: 30-11-2017 ರನ್ವಯ ದೊಡ್ಡಬಳ್ಳಾಪುರ ತಾಲ್ಲೂಕು, ಕಸಬಾ ಹೋಬಳಿ, ಬಾಶೆಟ್ಟಿಹಳ್ಳಿ ಗ್ರಾಮವು "ದೊಡ್ಡಬಳ್ಳಾಪುರ ಸ್ಥಳೀಯ ಯೋಜನಾ ಪ್ರದೇಶ" ವ್ಯಾಪ್ತಿಗೆ ಒಳಪಟ್ಟಿದ್ದು, ಈ ಹಿಂದೆ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 157 ಬಿಎಂಆರ್ ದಿನಾಂಕ: 27-01-2009 ಮತ್ತು ತಿದ್ದುಪಡಿ ಆದೇಶ ದಿನಾಂಕ: 29-01-2009ರಲ್ಲಿ ಅನುಮೋದನೆಗೊಂಡಿರುವ ಮಹಾಯೋಜನೆಯಲ್ಲಿ ದೊಡ್ಡಬಳ್ಳಾಪುರ ತಾಲ್ಲೂಕು, ಕಸಬಾ ಹೋಬಳಿ, **ಬಾಶೆಟ್ಟಿಹಳ್ಳಿ ಗ್ರಾಮದ ಸರ್ವೆ ನಂ. 3/5ರಲ್ಲಿ 00-5.50 ಗುಂಟೆ** ವಿಸ್ತೀರ್ಣದ ಪ್ರದೇಶವನ್ನು 'ಉದ್ಯಾನವನ ಉದ್ದೇಶಕ್ಕಾಗಿ' ಕಾಯ್ದಿರಿಸಲಾಗಿರುತ್ತದೆ. ಮಹಾಯೋಜನೆ ಅನುಮೋದನೆಗೊಂಡು ಐದು ವರ್ಷಗಳ ಅವಧಿಯು ಪೂರ್ಣಗೊಂಡಿದ್ದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69 (2) ರನ್ವಯ ಉದ್ಯಾನವನ ಉದ್ದೇಶಕ್ಕಾಗಿ ಕಾಯ್ದಿರಿಸಲಾದ ಭೂ ಉಪಯೋಗ ರದ್ದಾಗುತ್ತದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 ರನ್ವಯ ಈ ಕೆಳಕಂಡಂತೆ 'ವಾಣಿಜ್ಯ' ಭೂ ಉಪಯೋಗ ನಿಗದಿಪಡಿಸಲು ಅರ್ಜಿದಾರರು ಕೋರಿರುವಂತೆ ಕಲಂ 69 (4) ರ ಅಡಿಯಲ್ಲಿ 'ವಾಣಿಜ್ಯ' ಭೂ ಉಪಯೋಗ ನಿಗದಿಪಡಿಸುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ, ದೊಡ್ಡಬಳ್ಳಾಪುರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ	ವಿಸ್ತೀರ್ಣ (ಎ-ಗು)	ಬೆಂ.ಅ.ರಾ.ವಿ.ನಿ ಪ್ರ.ಯೋ.ಪ್ರಾಧಿಕಾರದ ಅನುಮೋದಿತ ಮಹಾ ಯೋಜನೆಯಂತೆ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1.	ಶ್ರೀಮತಿ ಆರ್.ಎನ್. ಸೌಭಾಗ್ಯಮ್ಮ ಕೋಂ ಡಿ.ಆರ್. ನಾಗರಾಜು	ದೊಡ್ಡಬಳ್ಳಾಪುರ	ಕಸಬಾ	ಬಾಶೆಟ್ಟಿಹಳ್ಳಿ	3/5	0-5.50	ಉದ್ಯಾನವನ	ವಾಣಿಜ್ಯ

ಸಹಿ/- ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು, ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ, ದೊಡ್ಡಬಳ್ಳಾಪುರ.

ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಮುರಿಗೆಪ್ಪ ಅಭಿಮತ

‘ಚರ್ಚೆ ಇಲ್ಲದೇ ಎನ್‌ಇಪಿ ಜಾರಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಯಾವುದೇ ಚರ್ಚೆಗಳನ್ನು ನಡೆಸದೇ ತರಾತುರಿಯಲ್ಲಿ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು (ಎನ್‌ಇಪಿ) ಜಾರಿ ಮಾಡಲಾಗಿತ್ತು. ಇದರಿಂದ ವಿದ್ಯಾರ್ಥಿಗಳು ಸಮಸ್ಯೆ ಎದುರಿಸುವಂತಾಯಿತು’ ಎಂದು ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಎ. ಮುರಿಗೆಪ್ಪ ಅವರು ಹೇಳಿದರು.

ಜನಪರ ಶಿಕ್ಷಣ ನೀತಿ ರಚಿಸಲು ಆಗ್ರಹಿಸಿ ಎಐಡಿಎಸ್‌ಒ ನಡೆಸಿದ್ದ ಸಮೀಕ್ಷೆಯ ಕಿರುಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಸರ್ಕಾರವು ವಿದ್ಯಾರ್ಥಿಗಳಿಂದ, ಶಿಕ್ಷಕರಿಂದ ಅಭಿಪ್ರಾಯ ಸಂಗ್ರಹಿಸಿಲ್ಲ. ಶಾಲೆ–ಕಾಲೇಜುಗಳಲ್ಲಿ ಅಗತ್ಯ ಇರುವಷ್ಟು ಕೊಠಡಿಗಳಿವೆಯೇ, ಪೂರ್ಣಕಾಲಿಕ ಬೋಧಕರು ಇದ್ದಾರೆಯೇ ಎಂದು ಪರಿಶೀಲಿಸಿಲ್ಲ. ಮೌಲಸೌಕರ್ಯಗಳನ್ನು ಕಲ್ಪಿಸದೇ ಎನ್‌ಇಪಿ ಜಾರಿ ಮಾಡಲಾಗಿದೆ. ಮೂರು ವರ್ಷದ ಪದವಿಯನ್ನು ನಾಲ್ಕು ವರ್ಷಗಳಿಗೆ ಏರಿಸಿ ವಿದ್ಯಾರ್ಥಿಗಳಿಗೆ ತೊಂದರೆ ನೀಡಲಾಗಿದೆ’ ಎಂದು ವಿಷಾದಿಸಿದರು.

ತುಮಕೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ರಾಜಾಸಾಬ್ ಮಾತನಾಡಿ, ‘ಸಾರ್ವಜನಿಕ ಶಿಕ್ಷಣ ಉಳಿಸಲು ಜನಪರ ಶಿಕ್ಷಣ ನೀತಿ ರೂಪಿಸಲು ಮಾಡಿರುವ ಈ ಸಮೀಕ್ಷೆ ಚಾರಿತ್ರಿಕವಾದುದು. ತಾರ್ಕಿಕ, ವೈಜ್ಞಾನಿಕವಾಗಿ ಯೋಚನೆ ಮಾಡುವ ವಿದ್ಯಾರ್ಥಿ ಸಮುದಾಯದ ಅವಶ್ಯಕತೆ ಸಮಾಜಕ್ಕೆ ಇದೆ’ ಎಂದರು.

ಎಐಡಿಎಸ್‌ಒ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ಮಾತನಾಡಿ, ‘ಎನ್‌ಇಪಿ- 2020 ವಿರೋಧಿಸಿ ರಾಜ್ಯದಾದ್ಯಂತ ಸಮೀಕ್ಷೆ ನಡೆಸಲಾಗಿತ್ತು. ವಿದ್ಯಾರ್ಥಿಗಳು, ಪೋಷಕರು ಹಾಗೂ ಶಿಕ್ಷಕರ ನಡುವೆ ನಡೆಸಲಾಗಿದ್ದ ಈ ಸಮೀಕ್ಷೆಯಲ್ಲಿ 21 ಸಾವಿರ ವಿದ್ಯಾರ್ಥಿಗಳು ಭಾಗಿಯಾಗಿದ್ದಾರೆ’ ಎಂದು ವಿವರಿಸಿದರು.

ಎಐಡಿಎಸ್‌ಒ ರಾಜ್ಯ ಘಟಕದ ಅಧ್ಯಕ್ಷೆ ಅಶ್ವಿನಿ ಕೆ.ಎಸ್. ಮಾತನಾಡಿ, ‘ಸರ್ಕಾರವು ಶಿಕ್ಷಣವನ್ನು ಎನ್‌ಇಪಿ ಮೂಲಕ ವಿಶ್ವದ ಮಾರುಕಟ್ಟೆಯನ್ನಾಗಿಸಲು ಹೊರಟಿದೆ. ಬಡ ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗುತ್ತಾರೆ. ಇಂತಹ ವಿದ್ಯಾರ್ಥಿ ವಿರೋಧಿ ಶಿಕ್ಷಣ ನೀತಿಯ ವಿರುದ್ಧ ಚಳವಳಿ ಕಟ್ಟುವ ಅವಶ್ಯಕತೆ ಇದೆ’ ಎಂದು ತಿಳಿಸಿದರು.

‘ಸುಧಾ’ ವಾರಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕ ರಘುನಾಥ ಚ.ಹ., ಎಐಡಿಎಸ್‌ಒ ರಾಜ್ಯ ಉಪಾಧ್ಯಕ್ಷರಾದ ಹನಮಂತು, ಅಭಯಾ ದಿವಾಕರ್ ಉಪಸ್ಥಿತರಿದ್ದರು.

ಎಐಡಿಎಸ್‌ಒ ನೇತೃತ್ವದಲ್ಲಿ ನಡೆದ ಸಮೀಕ್ಷೆಯ ಕಿರುಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಎ. ಮುರಿಗೆಪ್ಪ ಮಾತನಾಡಿದರು. ಎಐಡಿಎಸ್‌ಒ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್, ರಾಜ್ಯ ಉಪಾಧ್ಯಕ್ಷೆ ಅಭಯಾ ದಿವಾಕರ್, ತುಮಕೂರು ವಿಶ್ವವಿದ್ಯಾಲಯದ ನಿವೃತ್ತ ಕುಲಪತಿ ರಾಜಾಸಾಬ್ ಭಾಗವಹಿಸಿದ್ದರು.

> **ಶಿಕ್ಷಣವು ಉದ್ಯೋಗ ಗಳಿಕೆಗೆ ಸೀಮಿತವಲ್ಲ. ಬದಲಿಗೆ, ಜೀವನವನ್ನು ಸ್ವತಂತ್ರವಾಗಿ ನಿಭಾಯಿಸಲು ವ್ಯಕ್ತಿಯೊಬ್ಬನಿಗೆ ಧೈರ್ಯ ತುಂಬುವ ಪ್ರಕ್ರಿಯೆ**
> **ಎ. ಮುರಿಗೆಪ್ಪ**
> ವಿಶ್ರಾಂತ ಕುಲಪತಿ, ಹಂಪಿ ಕನ್ನಡ ವಿ.ವಿ

ಆರ್‌ಎಸ್‌ಎಸ್ ಸರಸಂಘಚಾಲಕ ಭಾಗವತ್ ಅಭಿಮತ

‘ಕಲೆಯಿಂದ ವಿಶ್ವ ಸುಸಂಸ್ಕೃತ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಕಾರಗಳಿಂದ ನಮ್ಮನ್ನು ಮೇಲಕ್ಕೆತ್ತಿ ಸಮಾಜದ ವಿಚಾರ, ಸಂವೇದನೆಗಳನ್ನು ಅರ್ಥ ಮಾಡಿಸಿಕೊಡಲು ಕಲೆ ಪ್ರಮುಖ ಪಾತ್ರ ವಹಿಸುತ್ತದೆ. ಕಲೆಯಿಂದ ವಿಶ್ವವು ಸುಸಂಸ್ಕೃತಗೊಳ್ಳುತ್ತದೆ’ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಮೋಹನ್ ಭಾಗವತ್ ಹೇಳಿದರು.

ಮೋಹನ್ ಭಾಗವತ್

ಸಂಸ್ಕಾರ ಭಾರತಿ ವತಿಯಿಂದ ಬೆಂಗಳೂರಿನ ಆರ್ಟ್ ಆಫ್ ಲಿವಿಂಗ್ ಆವರಣದಲ್ಲಿ ನಡೆಯುತ್ತಿರುವ ಅಖಿಲ ಭಾರತೀಯ ಕಲಾಸಾಧಕ ಸಂಗಮದಲ್ಲಿ, ಮೂರನೇ ದಿನ ನಡೆದ ‘ಭರತ ಮುನಿ’ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಕಲೆ ಒಂದು ವಿದ್ಯೆಯಾಗಿದ್ದು, ಅಂತ್ಯದಲ್ಲಿ ನಮ್ಮ ಮುಕ್ತಿಗೂ ಕಾರಣವಾಗುತ್ತದೆ. ಭಾರತೀಯತೆಯನ್ನು ಉಳಿಸುವ ಕೆಲಸವನ್ನು ಕಲೆಯ ಮೂಲಕ ಕಲಾವಿದರು ಮಾಡುತ್ತಿದ್ದಾರೆ. ಅವರ ಸಂಖ್ಯೆ ಇನ್ನೂ ಹೆಚ್ಚಾಗಬೇಕು’ ಎಂದು ಆಶಿಸಿದರು.

‘ಭಾರತೀಯರನ್ನು ಗುರುತಿಸುವುದು ಭಾರತೀಯತೆಯ ಸ್ವಭಾವದ ಮೂಲಕವೇ ಹೊರತು ಭೌಗೋಳಿಕ ಗಡಿಯ ಚೌಕಟ್ಟಿನ ಮೂಲಕವಲ್ಲ. ಭಾರತೀಯರ ವಿಶೇಷತೆಯೇ ಅವರ ಸ್ವಭಾವ. ಮನುಷ್ಯರ ಸ್ವಭಾವವೇ ಸಂಸ್ಕೃತಿ ಎನಿಸಿಕೊಂಡು ಅದು ಸಮಾಜದ ಸ್ವಭಾವವಾಗುತ್ತದೆ. ಸಂಸ್ಕೃತಿ ಎನ್ನುವುದು ಮೌಲ್ಯಯುತ ಆಚರಣೆ’ ಎಂದು ವಿಶ್ಲೇಷಿಸಿದರು.

‘ಸಂಸ್ಕಾರವನ್ನು ರಕ್ಷಿಸುವುದೆಂದರೆ, ಅದನ್ನು ಕಲಿಸುವ ಜನರ ರಕ್ಷಣೆ. ಅವರಲ್ಲಿ ಕಲಾವಿದರು ಪ್ರಮುಖರು. ಆದ್ದರಿಂದಲೇ ಕಾರ್ಮಿಕರಿಗಾಗಿ ಮಜ್ದೂರ್ ಸಂಘ, ವಿದ್ಯಾರ್ಥಿಗಳಿಗಾಗಿ ವಿದ್ಯಾರ್ಥಿ ಪರಿಷತ್, ಕ್ರೀಡಾ ಕ್ಷೇತ್ರಕ್ಕಾಗಿ ಕ್ರೀಡಾಭಾರತಿ ಎಂದು ಕರೆದರೆ, ಕಲೆಯನ್ನು ಒಳಗೊಂಡ ಸಂಘಟನೆಯನ್ನು ಕಲಾಭಾರತಿ ಎನ್ನದೆ ಅದನ್ನು ಸಂಸ್ಕಾರ ಭಾರತಿ ಎಂದು ಕರೆಯಲಾಯಿತು’ ಎಂದು ಅಭಿಪ್ರಾಯಪಟ್ಟರು.

ಜನಪದ ಕಲಾವಿದರಾದ ಗಣಪತ್ ಸಖಾರಾಮ್ ಮಸಗೆ ಮತ್ತು ಚಿತ್ರ ಕಲಾವಿದ ವಿಜಯ ದಶರಥ್ ಆಚ್ರೇಕರ್ ಅವರಿಗೆ ಪ್ರಥಮ ವರ್ಷದ ‘ಭರತ ಮುನಿ’ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಸಂಸ್ಕಾರ ಭಾರತಿಯ ಅಖಿಲ ಭಾರತೀಯ ಅಧ್ಯಕ್ಷ ವಾಸುದೇವ ಕಾಮತ್, ಕ್ಷೇತ್ರೀಯ ಪ್ರಚಾರಕ್ ಸುಧೀರ್ ಉಪಸ್ಥಿತರಿದ್ದರು.

ಕಿಯೋನಿಕ್ಸ್ ಅಕ್ರಮ: ತನಿಖಾ ಸಮಿತಿ ನೇಮಕ

ಒಂದನೇ ಪುಟದಿಂದ...

2018–19ರಿಂದ 2022–23ರ ಅವಧಿಯಲ್ಲಿ ಕಿಯೋನಿಕ್ಸ್‌ನಲ್ಲಿ ನಡೆದಿರುವ ಖರೀದಿಯಲ್ಲಿ ನಿಯಮಗಳ ಪಾಲನೆ, ಭೌತಿಕವಾಗಿ ಸರಕುಗಳ ಪೂರೈಕೆಯನ್ನು ಖಾತರಿಪಡಿಸಿಕೊಂಡಿರುವುದು, ನಿಗದಿತ ಮಾನದಂಡಗಳಿಗೆ ಅನುಗುಣವಾಗಿಯೇ ಖರೀದಿ ಪ್ರಕ್ರಿಯೆ ನಡೆಸಿರುವುದು, ಹಣ ಪಾವತಿ ಕುರಿತು ತನಿಖೆ ನಡೆಸಿ ವರದಿ ಸಲ್ಲಿಸುವಂತೆ ವಿಚಾರಣಾ ಸಮಿತಿಗೆ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ ಆದೇಶಿಸಿದೆ.

‘ತನಿಖೆಗೆ ಸೂಚಿಸಿರುವ ಅವಧಿಯಲ್ಲಿ ಸರಕುಗಳ ಖರೀದಿಯಲ್ಲಿ ಭಾರಿ ಪ್ರಮಾಣದ ಅವ್ಯವಹಾರಗಳು ನಡೆದಿವೆ ಎಂದು ಅಕೌಂಟೆಂಟ್ ಜನರಲ್ ವರದಿ ನೀಡಿದ್ದರು. ವರದಿಯನ್ನು ಪರಿಶೀಲಿಸಿದ್ದ ಕಿಯೋನಿಕ್ಸ್ ವ್ಯವಸ್ಥಾಪಕ ನಿರ್ದೇಶಕರು, ಖರೀದಿ ಪ್ರಕ್ರಿಯೆಯಲ್ಲಿ ನಿಯಮಗಳ ಉಲ್ಲಂಘನೆ, ಕಳಪೆ ಗುಣಮಟ್ಟದ ಸರಕುಗಳ ಪೂರೈಕೆ, ದಾಖಲೆಗಳನ್ನು ಪರಿಶೀಲಿಸದೇ ಬಿಲ್ ಪಾವತಿಸಿರುವುದು ಕಂಡುಬಂದಿದೆ.

ಈ ಕುರಿತು ಉನ್ನತಮಟ್ಟದ ತನಿಖೆ ನಡೆಸುವುದು ಅಗತ್ಯವಿದೆ ಎಂಬ ಶಿಫಾರಸು ಮಾಡಿದ್ದರು. ಅದರ ಅನುಸಾರ ತನಿಖೆಗೆ ಆದೇಶಿಸಲಾಗಿದೆ’ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಅಕ್ರಮದಲ್ಲಿ ಭಾಗಿಯಾಗಿರುವ ಕಿಯೋನಿಕ್ಸ್ ಅಧಿಕಾರಿಗಳು, ಸಿಬ್ಬಂದಿ ಹಾಗೂ ವೆಂಡರ್‌ದಾರರನ್ನು ಪತ್ತೆಹಚ್ಚಿ ವರದಿ ಸಲ್ಲಿಸಬೇಕು.

ನಿಗಮದ ಆಡಳಿತ ಹಾಗೂ ಹಣಕಾಸು ನಿರ್ವಹಣೆಯಲ್ಲಿ ಸುಧಾರಣೆ ತರುವುದಕ್ಕೆ ಪೂರಕವಾದ ಶಿಫಾರಸುಗಳನ್ನೂ ನೀಡಬೇಕು ಎಂದು ತನಿಖಾ ಸಮಿತಿಗೆ ಸೂಚಿಸಲಾಗಿದೆ.

ಕಲಾ ಸಮ್ಮೇಳನ 6ಕ್ಕೆ

ಬೆಂಗಳೂರು: ‘ರಾಜ್ಯಮಟ್ಟದ ಸವಿತಾ ಕಲಾ ಸಮ್ಮೇಳನ’ವನ್ನು ಇದೇ 6ರಂದು ಬೆಂಗಳೂರಿನ ಪುಟ್ಟಣ್ಣಶೆಟ್ಟಿ ಪುರಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ರಾಜ್ಯ ಸವಿತಾ ಕಲಾ ಸಂಘ ತಿಳಿಸಿದೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಕೆ. ಚಂದ್ರಶೇಖರ್, ‘ಸವಿತಾ ಸಮಾಜ ಆರ್ಥಿಕ, ಶೈಕ್ಷಣಿಕ, ರಾಜಕೀಯ ಹಾಗೂ ಸಾಮಾಜಿಕವಾಗಿ ಹಿಂದುಳಿದಿದೆ. ಆದ್ದರಿಂದ, 2024–25ನೇ ಸಾಲಿನ ಬಜೆಟ್‌ನಲ್ಲಿ ಸಮುದಾಯದ ಅಭಿವೃದ್ಧಿಗೆ ₹50 ಕೋಟಿ ಅನುದಾನವನ್ನು ನೀಡಬೇಕು’ ಎಂದು ಒತ್ತಾಯಿಸಿದರು.

‘ಸವಿತಾ ಸಮುದಾಯವನ್ನು 2ಎ ಪ್ರವರ್ಗದಿಂದ ಬೇರ್ಪಡಿಸಿ, 1ಬಿ ಎಂದು ಪರಿಗಣಿಸಿ ಪ್ರತ್ಯೇಕ ಮೀಸಲಾತಿ ಸೌಲಭ್ಯವನ್ನು ನೀಡಬೇಕು’ ಎಂದು ಆಗ್ರಹಿಸಿದರು.

‘ಕ್ಯಾನ್ಸರ್ ಪೀಡಿತರಲ್ಲಿ ಮಹಿಳೆಯರೇ ಅಧಿಕ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ವಾರ್ಷಿಕ ಸರಾಸರಿ 6,380 ಪುರುಷರು ಹಾಗೂ 8,350 ಮಹಿಳೆಯರು ಕ್ಯಾನ್ಸರ್ ಪೀಡಿತರಾಗುತ್ತಿದ್ದಾರೆ ಎಂದು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ತಿಳಿಸಿದೆ.

ವಿಶ್ವ ಕ್ಯಾನ್ಸರ್ ದಿನದ ಪ್ರಯುಕ ಸಂಸ್ಥೆ ನಗರದಲ್ಲಿ ಭಾನುವಾರ ಜಾಗೃತಿ ಕಾರ್ಯಕ್ರಮ ಹಮ್ಮಿಕೊಂಡಿದೆ.

‘ನಮ್ಮ ರಾಷ್ಟ್ರದಲ್ಲಿ ಕ್ಯಾನ್ಸರ್ ಒಂದು ಪ್ರಮುಖ ಸಮಸ್ಯೆಯಾಗಿದೆ. ದೇಶದಲ್ಲಿ ಪ್ರತಿ ವರ್ಷ 13.9 ಲಕ್ಷಕ್ಕೂ ಹೆಚ್ಚು ಕ್ಯಾನ್ಸರ್ ಪ್ರಕರಣಗಳು ಹೊಸದಾಗಿ ಪತ್ತೆಯಾಗುತ್ತಿವೆ. ಕರ್ನಾಟಕದಲ್ಲಿ 87,400 ಸಕ್ರಿಯ ಪ್ರಕರಣಗಳಿವೆ. ಆರಂಭದಲ್ಲಿಯೇ ಈ ರೋಗವನ್ನು ಪತ್ತೆಮಾಡಿ, ಸೂಕ್ತ ಚಿಕಿತ್ಸೆ ನೀಡಿದರೆ ಗುಣಪಡಿಸಬಹುದಾಗಿದೆ. ಹೆಚ್ಚಿನ ರೋಗಿಗಳು ಉಲ್ಬಣಾವಸ್ಥೆ ತಲುಪಿದ ನಂತರವೇ ಕ್ಯಾನ್ಸರ್ ಚಿಕಿತ್ಸೆಗಾಗಿ ಆಸ್ಪತ್ರೆಗೆ ಭೇಟಿ ನೀಡುತ್ತಾರೆ.

ಇದರಿಂದ ಅವರಿಗೆ ಸಮಸ್ಯೆಯಾಗುತ್ತಿದೆ’ ಎಂದು ಸಂಸ್ಥೆಯ ನಿರ್ದೇಶಕ ಡಾ.ವಿ. ಲೋಕೇಶ್ ತಿಳಿಸಿದ್ದಾರೆ.

‘ಪಾಶ್ಚಾತ್ಯ ಜೀವನಶೈಲಿ, ತಂಬಾಕು ಉತ್ಪನ್ನಗಳ ಸೇವನೆ ಸೇರಿ ವಿವಿಧ ಕಾರಣಗಳಿಂದ ರೋಗ ಕಾಣಿಸಿಕೊಳ್ಳುತ್ತಿದೆ. ಆದ್ದರಿಂದ ಉತ್ತಮ ಜೀವನಶೈಲಿಯನ್ನು ಅಳವಡಿಸಿಕೊಳ್ಳಬೇಕು. ದೀರ್ಘಕಾಲ ವಾಸಿಯಾಗದ ಹುಣ್ಣು, ಅಸಮಾನ್ಯ ರಕ್ತಸ್ರಾವ ಸೇರಿ ಕ್ಯಾನ್ಸರ್‌ನ ವಿವಿಧ ಲಕ್ಷಣಗಳನ್ನು ಗುರುತಿಸಿ, ಚಿಕಿತ್ಸೆ ಪಡೆದುಕೊಳ್ಳಬೇಕು’ ಎಂದು ಹೇಳಿದ್ದಾರೆ.

‘ಕಾಂಗ್ರೆಸ್ ಪಕ್ಷಕ್ಕೆ ಮರ್ಮಾಘಾತ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯ ವಿಧಾನಸಭಾ ಚುನಾವಣೆ ಬಳಿಕ ಭ್ರಮೆಯಲ್ಲಿ ತೇಲುತ್ತಿದ್ದ ಕಾಂಗ್ರೆಸ್ ಪಕ್ಷಕ್ಕೆ, ಐದು ರಾಜ್ಯಗಳ ಚುನಾವಣಾ ಫಲಿತಾಂಶದ ಬಳಿಕ ಮರ್ಮಾಘಾತವಾಗಿದೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಶನಿವಾರ ಹೇಳಿದರು.

ಬಿಜೆಪಿ ಬೆಂಗಳೂರು ದಕ್ಷಿಣ ಜಿಲ್ಲಾ ಘಟಕದ ನೂತನ ಅಧ್ಯಕ್ಷ, ಶಾಸಕ ಸಿ.ಕೆ. ರಾಮಮೂರ್ತಿ ಅವರ ಪದಗ್ರಹಣ ಸಮಾರಂಭದಲ್ಲಿ ಮಾತನಾಡಿದ ಅವರು, ‘ಗ್ಯಾರಂಟಿ ಯೋಜನೆಗಳ ಹೆಸರಿನಲ್ಲಿ ಲೋಕಸಭಾ ಚುನಾವಣೆಯನ್ನೂ ಗೆಲ್ಲಬಹುದು ಎಂಬ ಭ್ರಮೆ ಕಾಂಗ್ರೆಸ್ ನಾಯಕರನ್ನು ಆವರಿಸಿತ್ತು. ಐದು ರಾಜ್ಯಗಳ ಚುನಾವಣಾ ಫಲಿತಾಂಶವು ಅವರನ್ನು ಕಂಗೆಡಿಸಿದೆ’ ಎಂದರು.

‘ನರೇಂದ್ರ ಮೋದಿಯವರು ಮತ್ತೊಮ್ಮೆ ಪ್ರಧಾನಿ ಆಗಬೇಕು ಎಂಬುದು ದೇಶದ ಜನರ ಬಯಕೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರೂ ಅದನ್ನು ಹೇಳಿದ್ದಾರೆ. ಇದಕ್ಕಾಗಿ ಖರ್ಗೆಯವರನ್ನು ಅಭಿನಂದಿಸುತ್ತೇನೆ’ ಎಂದು ಹೇಳಿದರು.

‘ಕಾಂಗ್ರೆಸ್ ಪಕ್ಷವು ದೇಶದ ಅಲ್ಲಲ್ಲಿ ಅವಶೇಷಗಳ ರೂಪದಲ್ಲಿ ಉಳಿದುಕೊಂಡಿದೆ. ಬಿಜೆಪಿಯು ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಭಾರಿ ಬಹುಮತದೊಂದಿಗೆ ಮತ್ತೊಮ್ಮೆ ಅಧಿಕಾರಕ್ಕೆ ಬರಲಿದೆ’ ಎಂದರು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ, ಬಿಜೆಪಿ ಯುವ ಮೋರ್ಚಾ ರಾಷ್ಟ್ರೀಯ ಅಧ್ಯಕ್ಷ ಮತ್ತು ಸಂಸದ ತೇಜಸ್ವಿಸೂರ್ಯ, ಶಾಸಕರಾದ ಸತೀಶ್ ರೆಡ್ಡಿ, ಎಂ. ಕೃಷ್ಣಪ್ಪ, ಎಲ್.ಎ. ರವಿಸುಬ್ರಹ್ಮಣ್ಯ, ಉದಯ ಗರುಡಾಚಾರ್, ವಿಧಾನಪರಿಷತ್ ಸದಸ್ಯ ಗೋಪಿನಾಥ್ ರೆಡ್ಡಿ ಉಪಸ್ಥಿತರಿದ್ದರು.

ಬಿಜೆಪಿಯ ಬೆಂಗಳೂರು ಉತ್ತರ ಮತ್ತು ಬೆಂಗಳೂರು ಕೇಂದ್ರ ಜಿಲ್ಲಾ ಘಟಕಗಳ ಅಧ್ಯಕ್ಷರ ಪದಗ್ರಹಣ ಹಾಗೂ ಕಾರ್ಯಕಾರಿ ಸಮಿತಿ ಸಭೆಗಳೂ ಶನಿವಾರ ಪ್ರತ್ಯೇಕವಾಗಿ ನಡೆದವು.

ಬಿಜೆಪಿ ಬೆಂಗಳೂರು ದಕ್ಷಿಣ ಜಿಲ್ಲಾ ಘಟಕದ ನೂತನ ಅಧ್ಯಕ್ಷರಾದ ಶಾಸಕ ಸಿ.ಕೆ. ರಾಮಮೂರ್ತಿ ಅವರಿಗೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಪಕ್ಷದ ಬಾವುಟ ನೀಡುವ ಮೂಲಕ ಅಧಿಕಾರ ಹಸ್ತಾಂತರಿಸಿದರು. ಶಾಸಕ ಎಂ. ಕೃಷ್ಣಪ್ಪ, ಸಂಸದ ತೇಜಸ್ವಿ ಸೂರ್ಯ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ, ಶಾಸಕ ಸತೀಶ್ ರೆಡ್ಡಿ ಇದ್ದರು

ಬಿಎಂಟಿಸಿ ಹೊಸ ಮಾರ್ಗ ನಾಳೆ ಆರಂಭ

ಬೆಂಗಳೂರು: ವಿಜಯನಗರ ಟಿಟಿಎಂಸಿಯಿಂದ ಎಲೆಕ್ಟ್ರಾನಿಕ್ ಸಿಟಿ ವಿಪ್ರೊ ಗೇಟ್‌ಗೆ ಹೊಸ ಮಾರ್ಗದಲ್ಲಿ ಬಿಎಂಟಿಸಿ 2 ಬಸ್‌ಗಳ ಸಂಚಾರ ಫೆ.5ರಂದು ಆರಂಭಗೊಳ್ಳಲಿದೆ. ಚಂದ್ರಾ ಲೇಔಟ್, ನೈಸ್ ರಸ್ತೆ ಮೂಲಕ ಸಂಚರಿಸಲಿವೆ ಎಂದು ಬಿಎಂಟಿಸಿ ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದ್ದಾರೆ.

ಸರ್ ಎಂ. ವಿಶ್ವೇಶ್ವರಯ್ಯ ಬಡಾವಣೆಯ 7ನೇ ಬ್ಲಾಕ್ ವ್ಯಾಪ್ತಿಯಲ್ಲಿ 32 ಗುಂಟೆ ಒತ್ತುವರಿಯನ್ನು ಬಿಡಿಎ ಸಿಬ್ಬಂದಿ ತೆರವುಗೊಳಿಸಿದರು

₹35 ಕೋಟಿ ಮೌಲ್ಯದ ಆಸ್ತಿ ವಶ

ಬೆಂಗಳೂರು: ಹೇರೋಹಳ್ಳಿಯಲ್ಲಿ ಬಿಡಿಎ ಭೂಮಿ ಒತ್ತುವರಿ ಮಾಡಿಕೊಂಡು ನಿರ್ಮಿಸಲಾಗಿದ್ದ ಶೆಡ್‌ಗಳನ್ನು ಶನಿವಾರ ತೆರವು ಮಾಡಲಾಯಿತು.

ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಹೇರೋಹಳ್ಳಿ ಗ್ರಾಮದ ಸರ್ವೆ ನಂಬರ್ 64ರಲ್ಲಿನ 32.45 ಗುಂಟೆ ಜಮೀನಿನಲ್ಲಿ ನಿರ್ಮಾಣಗೊಂಡಿದ್ದ ಶೆಡ್‌ಗಳು ಹಾಗೂ ಕಟ್ಟಡಗಳನ್ನು ತೆರವುಗೊಳಿಸಿ ಸುಮಾರು ₹35 ಕೋಟಿ ಮೌಲ್ಯದ ಜಮೀನನ್ನು ಬಿಡಿಎ ವಶಕ್ಕೆ ಪಡೆದುಕೊಂಡಿದೆ.

ಸರ್ ಎಂ. ವಿಶ್ವೇಶ್ವರಯ್ಯ ಬಡಾವಣೆಯ 7ನೇ ಬ್ಲಾಕ್‌ನಲ್ಲಿ ಈ ಒತ್ತುವರಿಯನ್ನು ತೆರವು ಮಾಡಲಾಯಿತು ಎಂದು ಬಿಡಿಎ ಎಂಜಿನಿಯರ್ ತಿಳಿಸಿದರು.

ಬಿಡಿಎ ಪಶ್ಚಿಮ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ರವಿಕುಮಾರ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಚಂದ್ರಶೇಖರ್ ಹಾಗೂ ಆರಕ್ಷಕ ಉಪಾಧೀಕ್ಷಕ ಯು.ಡಿ. ಕೃಷ್ಣಕುಮಾರ್ ಮತ್ತು ಪೊಲೀಸ್ ಇನ್‌ಸ್ಪೆಕ್ಟರ್ ಟಿ. ಸಂಜೀವರಾಯಪ್ಪ ಅವರ ನೇತೃತ್ವದಲ್ಲಿ ಸಿಬ್ಬಂದಿ ತೆರವು ಕಾರ್ಯಾಚರಣೆ ನಡೆಸಿದರು.

ಕಂದಾಯಕ್ಕೆ ಬೇಕು 'ಚಿಕಿತ್ಸೆ'



ಒಂದನೇ ಪುಟದಿಂದ..

ಜಮೀನುಗಳನ್ನು ಮಾರಾಟ ಮಾಡುವ ಅಥವಾ ತಮ್ಮ ಸಂಬಂಧಿಗಳಿಂದ ಪಾಲು ಪಡೆಯುವ ಹೊತ್ತಿನಲ್ಲಿ ಸರ್ವೆ ಮಾಡಿಸುವುದು ಸಾಮಾನ್ಯ. ಇದಕ್ಕಾಗಿ ಅರ್ಜಿ ಸಲ್ಲಿಸಿ ನಿಗದಿತ ಶುಲ್ಕವನ್ನು ಭರ್ತಿ ಮಾಡಿ ನಿಯಮದಂತೆ 40 ದಿನಗಳು ಕಾಯ್ದರೂ ಅತ್ತ ಕಡೆ ಸರ್ವೇಯರ್‌ಗಳು ಸುಳಿಯುವುದಿಲ್ಲ. ಮಾಮೂಲು ತಲುಪಿಸಿದ ಬಳಿಕವಷ್ಟೇ ಬರುತ್ತಾರೆ. ಅವರಿಗೆ ವಾಹನ ವ್ಯವಸ್ಥೆ, ಊಟದ ವ್ಯವಸ್ಥೆಯನ್ನೂ ನಾವೇ ಮಾಡಬೇಕು ಎಂದು ಆರೋಪಿಸುತ್ತಾರೆ ರೈತರು.

'ಕಲಬುರಗಿ ಜಿಲ್ಲೆ ಚಿತ್ತಾಪುರ ತಾಲ್ಲೂಕಿನ ಹಲಕರ್ಟಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಿಂದ ಕೆಲ ಗ್ರಾಮಗಳು ಬೇರೆ ಪಂಚಾಯಿತಿಗೆ ಹಸ್ತಾಂತರವಾದವು. ಆಗ ಆ ಗ್ರಾಮಗಳ ರೈತರ ಜಮೀನುಗಳ ಸರ್ವೆ ನಂಬರ್‌ಗಳು ಬದಲಾವಣೆಯಾದವು. ಇದಕ್ಕಾಗಿ ಸರ್ವೆ ಮಾಡಿಕೊಡಲು ಸರ್ವೇಯರ್‌ಗಳು ಹಣಕ್ಕೆ ಬೇಡಿಕೆ ಇಟ್ಟರು. ಯಾರು ಹಣ ಕೊಡುತ್ತಾರೋ ಅವರ ಜಮೀನುಗಳನ್ನು ಮಾತ್ರ ಸರ್ವೆ ಮಾಡಿದರು. ಪ್ರಕರಣ ಉಪವಿಭಾಗಾಧಿಕಾರಿಗಳ ತನಕ ಹೋದ ಬಳಿಕವೂ 400 ರೈತರ ಪೈಕಿ ಕೇವಲ 100 ರೈತರ ಸರ್ವೆಗಳು ಮುಗಿದಿವೆ' ಎಂದು ಎಐಕೆಕೆಎಂಎಸ್ ರೈತ ಸಂಘಟನೆಯ ಜಿಲ್ಲಾ ಘಟಕದ ಅಧ್ಯಕ್ಷ ಗಣಪತರಾವ್ ಮಾನೆ ಆರೋಪಿಸುತ್ತಾರೆ.

ರಾಜ್ಯದ ಬಹುತೇಕ ತಾಲ್ಲೂಕುಗಳಲ್ಲಿ ಕಾಯಂ ಸರ್ವೆ ಸಿಬ್ಬಂದಿ ಕೊರತೆ ಇದೆ. ಪರವಾನಗಿ ಪಡೆದ ಖಾಸಗಿ ಸರ್ವೆಯರ್‌ಗಳ ಮೇಲೆ ಅವಲಂಬನೆ ಹೆಚ್ಚಾಗಿದೆ. ಹಣ ಕೊಡದೇ ಇದ್ದರೆ ಹತ್ತು ನೆಪಗಳನ್ನು ಹೇಳಿ ಸರ್ವೆ ಕಾರ್ಯವನ್ನು ಮುಂದೂಡುತ್ತಾರೆ. ಇಲ್ಲವೇ ತಪ್ಪು ವಿವರ ನಮೂದಿಸುತ್ತಾರೆ. ರೈತರು ಮತ್ತೆ ಹೊಸದಾಗಿ ಅರ್ಜಿ ಸಲ್ಲಿಸುವ ಸ್ಥಿತಿ ನಿರ್ಮಿಸುತ್ತಾರೆ ಎನ್ನುವ ಆರೋಪಗಳಿವೆ.

'ರೈತ ಒಂದು ಬಾರಿ ಅರ್ಜಿ ಕೊಟ್ಟರೆ ಅದೇ ಅರ್ಜಿಯಲ್ಲಿ ಸರ್ವೆ ಕಾರ್ಯ ಪರಿಪೂರ್ಣವಾಗಬೇಕು. ತಾಂತ್ರಿಕ ಕಾರಣಗಳಿಂದ ಪೂರ್ಣವಾಗದೇ ಇದ್ದರೆ ಮತ್ತೆ ಅರ್ಜಿ ಸಲ್ಲಿಸಬಾರದು ಎಂಬ ನೀತಿ ರೂಪಿಸಬೇಕು. ನೆರೆಹೊರೆಯ ರೈತರಿಗೆ, ನಿವಾಸಿಗಳಿಗೆ ಒಂದು ಬಾರಿ ನೋಟಿಸ್ ಕೊಟ್ಟು ಅವರು ಬಾರದೇ ಇದ್ದರೆ ಎರಡನೇ ಬಾರಿ ಸರ್ವೆ ಮಾಡಬೇಕು. ಒಂದು ಕ್ಲಿಷ್ಟಕರ ಸಮಸ್ಯೆ ಬಗೆಹರಿಸಿಕೊಳ್ಳಲು ಭೂದಾಖಲೆಗಳ ಉಪನಿರ್ದೇಶಕರ (ಡಿಡಿಎಲ್‌ಆರ್) ಕೋರ್ಟ್ ಸೇರಿದಂತೆ ಕಚೇರಿಗಳಿಗೆ ಅಲೆದರೆ ಒಂದು ತಲೆಮಾರು ಕಳೆದು ಹೋಗುತ್ತದೆ!, ಖಾತೆ ಬದಲಾವಣೆಗೆ ಉಪ ನೋಂದಣಾಧಿಕಾರಿ ಕಚೇರಿಗಳಲ್ಲಿ ಕಾಯುವವರ ಸಂಖ್ಯೆ ಆಸ್ಪತ್ರೆಯಲ್ಲಿ ವೈದ್ಯರನ್ನು ಕಾಯುವವರನ್ನು ಮೀರಿಸುವಂತಿದೆ. ಇದಕ್ಕೆ ಪ್ರತಿ ಹಂತದಲ್ಲೂ ಉಸ್ತುವಾರಿ ಆಗಬೇಕು' ಎನ್ನುತ್ತಾರೆ ರೈತ ಮುಖಂಡ ತೇಜಸ್ವಿ ಪಟೇಲ್.

'ಕಂದಾಯ ಇಲಾಖೆಯಿಂದ ರೈತರಿಗೆ ಸರಿಯಾದ ಮಾಹಿತಿ ಸಿಗುತ್ತಿಲ್ಲ. ರೈತರು ಹೋಗಿ ಕೇಳಿದರಷ್ಟೇ ಅರ್ಜಿ ಏನಾಗಿದೆ ಎಂದು ಗೊತ್ತಾಗುತ್ತಿದೆ. ಸಿಬ್ಬಂದಿ ಕೊರತೆಯಿಂದ ಅರ್ಜಿ ಸಲ್ಲಿಸಿದರೂ ಸರಿಯಾದ ಸಮಯಕ್ಕೆ ಕೆಲಸ ಆಗುತ್ತಿಲ್ಲ. ಸರ್ಕಾರ ಸಿಬ್ಬಂದಿ ನೇಮಕಕ್ಕೆ ಕ್ರಮ ಕೈಗೊಳ್ಳಬೇಕು. ಕೆಲಸ ಮಾಡಿಸಿಕೊಳ್ಳಲು ಕಂದಾಯ ಇಲಾಖೆ ತಿರುಗಿ ತಿರುಗಿ ಸಾಕಾಗ್ತದೆ' ಎನ್ನುತ್ತಾರೆ ಚಾಮರಾಜನಗರ ರೈತ ಸಂಘ ಮತ್ತು ಹಸಿರು ಸೇನೆ ಜಿಲ್ಲಾಧ್ಯಕ್ಷ ಹೊನ್ನೂರು ಬಸವಣ್ಣ.

ಎಲ್ಲೆಡೆ ಜಾರಿಯಾಗದ ಇ-ಸ್ವತ್ತು ತಂತ್ರಾಂಶ: ಗ್ರಾಮ ಠಾಣೆಗಳ ಒಳಗಿನ ಹಾಗೂ ಹೊರಗಿನ ಜಮೀನು, ನಿವೇಶನಗಳನ್ನು ಅಳತೆ ಮಾಡಿಸುವ ಪ್ರಕ್ರಿಯೆಯನ್ನು ಸರಳಗೊಳಿಸಿ, ಸಾರ್ವಜನಿಕರಿಗೆ ನಿಗದಿತ ಸಮಯಕ್ಕೆ ಸರ್ವೆ ಮಾಡಿಕೊಟ್ಟು ಖಾತೆಯ ದಾಖಲೆಗಳನ್ನು (ನಮೂನೆ 9/11 ಎ) ನೀಡಲು ಇ-ಸ್ವತ್ತು ತಂತ್ರಾಂಶ ಒಳಗೊಂಡ ದಿಶಾಂಕ್ ಆ್ಯಪ್ ಅಭಿವೃದ್ಧಿಪಡಿಸಲಾಗಿತ್ತು. ಜನರು ಗ್ರಾಮ ಪಂಚಾಯಿತಿಗಳಿಗೆ ಅರ್ಜಿ ಸಲ್ಲಿಸಿದ ತಕ್ಷಣ ದಿಶಾಂಕ್ ಆ್ಯಪ್ ಮೂಲಕ ಆಸ್ತಿಯ ಸರ್ವೆಗಾಗಿ ಕೋರಿಕೆ ಹೋಗುತ್ತದೆ. ಇದರಿಂದ ತ್ವರಿತವಾಗಿ ಕೆಲಸಗಳಾಗುತ್ತವೆ.

ಪ್ರಾಯೋಗಿಕವಾಗಿ ಚಿಕ್ಕಬಳ್ಳಾಪುರ ಜಿಲ್ಲೆಯ 152 ಗ್ರಾಮ ಪಂಚಾಯಿತಿಗಳಲ್ಲಿ ಇದನ್ನು ಅನುಷ್ಠಾನಗೊಳಿಸಲಾಗಿತ್ತು. ತಾಂತ್ರಾಂಶವನ್ನು ಇನ್ನಷ್ಟು ಉನ್ನತೀಕರಿಸಿದ ನಂತರ ಉಳಿದ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸುವುದಾಗಿ ಸರ್ಕಾರ ಭರವಸೆ ನೀಡಿತ್ತು. ಈ ಭರವಸೆಯು ಮೂರು ವರ್ಷಗಳಾದರೂ ಜಾರಿಯಾಗಿಲ್ಲ. ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಸಿಬ್ಬಂದಿಗೆ ತರಬೇತಿಯನ್ನೂ ನೀಡಿಲ್ಲ.

ಭ್ರಷ್ಟಾಚಾರಕ್ಕೆ ರಿಯಲ್ ಎಸ್ಟೇಟ್ ಕೊಡುಗೆ: ಬೆಂಗಳೂರು ಸೇರಿದಂತೆ ರಿಯಲ್ ಎಸ್ಟೇಟ್ ಉದ್ಯಮದ ಚಟುವಟಿಕೆಗಳು ಹೆಚ್ಚಾಗಿರುವ ಮೈಸೂರು, ಹುಬ್ಬಳ್ಳಿ, ಮಂಗಳೂರು, ಶಿವಮೊಗ್ಗದಂತಹ ಪ್ರದೇಶಗಳಲ್ಲಿ ಪಕ್ಕಾ ಪೋಡಿಗೆ ಅರ್ಜಿ ಸಲ್ಲಿಸುವವರು ಜಮೀನಿನ ಮೌಲ್ಯದ ಒಂದು ಭಾಗವನ್ನೇ ಲಂಚಕ್ಕಾಗಿ ತೆಗೆದಿರಿಸಬೇಕಾದ ಸ್ಥಿತಿ ಇದೆ. ಬೆಂಗಳೂರು ಮತ್ತು ಸುತ್ತಮುತ್ತ ಪಕ್ಕಾಪೋಡಿ ಪ್ಯಾಕೇಜ್ ದರ ಪ್ರತಿ ಎಕರೆಗೆ ₹ 50 ಲಕ್ಷದವರೆಗೂ ಇದೆ. ಇತರ ನಗರಗಳು, ಜಿಲ್ಲಾಕೇಂದ್ರಗಳಲ್ಲೂ ಪೋಡಿಗೆ ಲಕ್ಷಗಟ್ಟಲೆ ಖರ್ಚು ಮಾಡಬೇಕಾದ ಸ್ಥಿತಿ ಇದೆ ಎಂದು ಆರೋಪಿಸುತ್ತಾರೆ ರಿಯಲ್ ಎಸ್ಟೇಟ್ ಉದ್ಯಮಿಗಳು.

'ಪಕ್ಕಾಪೋಡಿ ಪ್ರಕ್ರಿಯೆ ಗ್ರಾಮ ಲೆಕ್ಕಿಗ, ಕಂದಾಯ ನಿರೀಕ್ಷಕ, ತಹಶೀಲ್ದಾರ್, ಉಪ ವಿಭಾಗಾಧಿಕಾರಿ ಹಾಗೂ ಭೂದಾಖಲೆಗಳು ಮತ್ತು ಭೂ ಮಾಪನ ಇಲಾಖೆಯ ಅಧಿಕಾರಿಗಳ ವ್ಯಾಪ್ತಿಗೆ ಬರುತ್ತದೆ. ಎಲ್ಲರಿಗೂ ಸೇರಿ 'ಪ್ಯಾಕೇಜ್' ನಿಗದಿ ಮಾಡುವ ವ್ಯವಸ್ಥೆ ಈಗ ಚಾಲ್ತಿಯಲ್ಲಿದೆ. ಪ್ರತಿ ತಾಲ್ಲೂಕು, ಜಿಲ್ಲೆ, ನಗರಗಳಿಗೆ ಅನುಗುಣವಾಗಿ ಪ್ಯಾಕೇಜ್ ನಿಗದಿಯಾಗಿದೆ' ಎನ್ನುತ್ತಾರೆ ಅವರು.

ರಾಜ್ಯದಲ್ಲೀಗ ಐದು ಲಕ್ಷಕ್ಕೂ ಹೆಚ್ಚು ಪೋಡಿ ಅರ್ಜಿಗಳು ವಿಲೇವಾರಿಗೆ ಬಾಕಿ ಇವೆ. ಕೆಲ ಅರ್ಜಿಗಳು ಮೂರು ವರ್ಷಕ್ಕೂ ಹೆಚ್ಚು ಕಾಲದಿಂದ ಬಾಕಿ ಉಳಿದಿವೆ. ಜ್ಯೇಷ್ಠತೆ ಆಧಾರದಲ್ಲಿ ಅರ್ಜಿ ವಿಲೇವಾರಿ ಆಗಬಹುದು ಎಂದು ಲಕ್ಷಾಂತರ ಮಂದಿ ಕಾಯುತ್ತಲೇ ಇದ್ದಾರೆ. ಅಧಿಕಾರಿಗಳ 'ಬೇಡಿಕೆ' ಪೂರೈಸಿದವರ ಅರ್ಜಿಗಳು ಬೇಗ ಮುಂದಕ್ಕೆ ಸಾಗಿ ಪಕ್ಕಾಪೋಡಿ ಮುಗಿಸಿ, ಹೊಸ ನಕ್ಷೆ ಮತ್ತು ಸರ್ವೆ ಸಂಖ್ಯೆ ಪಡೆಯುತ್ತಿವೆ.

'ಸರ್ಕಾರದಿಂದ ಮಂಜೂರಾದ ಜಮೀನುಗಳ ಪಕ್ಕಾಪೋಡಿ ಪ್ರಕ್ರಿಯೆ ಬೆಂಗಳೂರು ಸೇರಿದಂತೆ ಕೆಲವು ಜಿಲ್ಲೆಗಳಲ್ಲಿ ಅಧಿಕಾರಿಗಳ ಪಾಲಿಗೆ ಹುಲ್ಲುಗಾವಲು ಇದ್ದಂತೆ. ನಾಪತ್ತೆಯಾದ ದಾಖಲೆಗಳ ದೃಢೀಕರಣ ಸಮಿತಿ, ಭೂ ದಾಖಲೆಗಳ ಇಲಾಖೆಯ ಉಪ ನಿರ್ದೇಶಕರು, ಸಹಾಯಕ ನಿರ್ದೇಶಕರು, ತಹಶೀಲ್ದಾರ್, ಉಪ ವಿಭಾಗಾಧಿಕಾರಿ, ಜಿಲ್ಲಾಧಿಕಾರಿಗಳ ಕಚೇರಿಯವರೆಗೆ ಎಲ್ಲ ಹಂತಗಳಲ್ಲೂ 'ಗಂಟು' ತಲುಪಿಸಿದರಷ್ಟೇ ಪೋಡಿ ಕಡತ ಕೊನೆಯ ಹಂತ ತಲುಪುವುದು' ಎಂದು ಕಂದಾಯ ಇಲಾಖೆಯೊಳಗಿನ ಭ್ರಷ್ಟಾಚಾರದ ವಿವರ ನೀಡುತ್ತಾರೆ ಅದೇ ಇಲಾಖೆಯೊಳಗಿರುವ ಅಧಿಕಾರಿಗಳು.

ರಾಜ್ಯದ ಎರಡನೇ ಹಂತದ ನಗರಗಳು, ಜಿಲ್ಲಾ ಕೇಂದ್ರಗಳು, ವೇಗದಲ್ಲಿ ಅಭಿವೃದ್ಧಿ ಹೊಂದುತ್ತಿರುವ ತಾಲ್ಲೂಕು ಕೇಂದ್ರಗಳು, ಸಣ್ಣ ನಗರ ಹಾಗೂ ಪಟ್ಟಣಗಳ ವ್ಯಾಪ್ತಿಯಲ್ಲಿ ನಿವೇಶನ, ಮನೆಗಳಿಗೆ ಬೇಡಿಕೆ ಹೆಚ್ಚಿದಂತೆ ಭೂ ಪರಿವರ್ತನೆ ಆದೇಶ ಕೋರಿದ ಅರ್ಜಿಗಳೂ ಹೆಚ್ಚುತ್ತಿವೆ. ಎಲ್ಲ ಕಡೆಗಳಲ್ಲೂ ಭೂ ಪರಿವರ್ತನೆ ಆದೇಶಕ್ಕೆ ಎಕರೆ ಲೆಕ್ಕದಲ್ಲಿ ಅಘೋಷಿತ ದರ ಪಟ್ಟಿಗಳಿವೆ. ಗ್ರಾಮ ಲೆಕ್ಕಿಗನಿಂದ ಹಿಡಿದು ಹಿರಿಯ ಅಧಿಕಾರಿವರೆಗೂ ಇದರಲ್ಲಿ ಪಾಲು ಪಡೆಯುತ್ತಿದ್ದಾರೆ ಎನ್ನುವುದು ಹಲವರ ಬಲವಾದ ಆರೋಪ.

ಪರಿಹಾರ ಒದಗಿಸದ ಸುಧಾರಣೆಗಳು: ಕಂದಾಯ ಇಲಾಖೆಯಲ್ಲಿನ ನ್ಯೂನತೆಗಳನ್ನು ಸರಿಪಡಿಸಲು, ತ್ವರಿತವಾಗಿ ಸಾರ್ವಜನಿಕರು, ರೈತರಿಗೆ ಸೇವೆಗಳು ಲಭಿಸುವಂತೆ ಮಾಡಲು ರಾಜ್ಯ ಸರ್ಕಾರ ಹಲವು ಸುಧಾರಣಾ ಕ್ರಮಗಳನ್ನು ಕೈಗೊಂಡಿದೆ. ಆದರೂ, ನಿಯಮಗಳನ್ನೇ ಮುಂದಿಟ್ಟುಕೊಂಡು ಅಧಿಕಾರಿ, ನೌಕರರು ತಮ್ಮ 'ಕೆಲಸ' ಮಾಡಿಕೊಳ್ಳುತ್ತಿದ್ದಾರೆ.

ಗ್ರಾಮೀಣ ಜನರು ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆಗೆ ಸಂಬಂಧಿಸಿದ ಕಾರ್ಯಗಳಿಗೆ ಆಯಾ ಗ್ರಾಮ ಪಂಚಾಯಿತಿಗಳ ಬಾಪೂಜಿ ಸೇವಾ ಕೇಂದ್ರಗಳಲ್ಲೇ ಅರ್ಜಿ ಸಲ್ಲಿಸಲು ಈಚೆಗೆ ಕಂದಾಯ ಇಲಾಖೆ ಅವಕಾಶ ಕಲ್ಪಿಸಿದೆ. ಜಮೀನು ನಕ್ಷೆ ತ್ವರಿತವಾಗಿ ಪಡೆಯಲು ಸ್ವಾವಲಂಬಿ ಡಿಜಿಟಲೀಕರಣ ಆಕಾರ್ ಬಂದ್ ಯೋಜನೆ ರೂಪಿಸಲಾಗಿದೆ.

ಭೂ ಪರಿವರ್ತನೆ, ತತ್ಕಾಲ್ ಪೋಡಿ, ಹದ್ದುಬಸ್ತು, 11-ಇ ನಕ್ಷೆ ಸೇರಿದಂತೆ ಇಲಾಖೆ ಒದಗಿಸುವ ಸೇವೆಗಳಿಗೆ ಅರ್ಜಿ ಸಲ್ಲಿಸಲು ಇದುವರೆಗೂ ಹೋಬಳಿಮಟ್ಟದ ನಾಡಕಚೇರಿ, ಇಲ್ಲವೇ ತಾಲ್ಲೂಕು ಕಚೇರಿಗಳಲ್ಲಿನ ಅಟಲ್‌ಜಿ ಜನಸ್ನೇಹಿ ಕೇಂದ್ರಗಳಿಗೆ ತೆರಳಬೇಕಿತ್ತು. ಪ್ರತಿ ತಾಲ್ಲೂಕು ಸುಮಾರು 30ರಿಂದ 40 ಹಾಗೂ ಹೋಬಳಿಗಳು ಐದಾರು ಗ್ರಾಮ ಪಂಚಾಯಿತಿಗಳನ್ನು ಒಳಗೊಂಡಿದ್ದು, ಸಾವಿರಾರು ಜನರು ಸೇವೆ ಪಡೆಯಲು ಸರದಿಯಲ್ಲಿ ನಿಲ್ಲುವ ಸ್ಥಿತಿ ಇತ್ತು. ಬಾಪೂಜಿ ಕೇಂದ್ರಗಳಲ್ಲೇ ಅರ್ಜಿ ಸಲ್ಲಿಕೆಗೆ ಅವಕಾಶ ನೀಡುವುದರಿಂದ ಅನಗತ್ಯ ಅಲೆದಾಟ ತಪ್ಪಲಿದೆ. ಸಮಯ, ವೆಚ್ಚದ ಉಳಿತಾಯವಾಗಲಿದೆ ಎಂದು ಸರ್ಕಾರ ಹೇಳಿತ್ತು. ಅರ್ಜಿ ಸಲ್ಲಿಕೆ ಸುಲಭವಾದರೂ, ದಾಖಲೆ ಪಡೆಯಲು ಅಲೆದಾಟ ತಪ್ಪಿಲ್ಲ.

ಮುಖ್ಯಮಂತ್ರಿ ಎರಡು ತಿಂಗಳ ಹಿಂದೆ (ನವೆಂಬರ್) ನಡೆಸಿದ್ದ ಜನತಾದರ್ಶನದಲ್ಲಿ ಒಟ್ಟಾರೆ 3,812 ಅರ್ಜಿಗಳು ಸಲ್ಲಿಕೆಯಾಗಿದ್ದವು. ಅವುಗಳಲ್ಲಿ ಹೆಚ್ಚಿನವು ಜಮೀನಿನ ಪಕ್ಕಾ ಪೋಡಿ, ಖಾತೆ ಬದಲಾವಣೆಯಂತಹ ಅಹವಾಲುಗಳಿಗೆ ಸಂಬಂಧಿಸಿದ್ದ ದೂರುಗಳು ಎನ್ನುವುದು ಕಂದಾಯ ಇಲಾಖೆಯ ವೈಫಲ್ಯಕ್ಕೆ ಕನ್ನಡಿಯಾಗಿದೆ. ಅಧಿಕಾರಿಗಳ ಇಚ್ಛಾಶಕ್ತಿ ಕೊರತೆ, ಭ್ರಷ್ಟಾಚಾರ, ಇಲಾಖೆಗೆ ಅಗತ್ಯವಿರುವಷ್ಟು ಸಿಬ್ಬಂದಿ ಇಲ್ಲದಿರುವುದು ಸೇರಿ ಬೇರೆ ಬೇರೆ ಕಾರಣಗಳಿಂದ ಕಂದಾಯ ಇಲಾಖೆಯಲ್ಲಿ ಹಲವು ವರ್ಷಗಳಿಂದ ಸಮಸ್ಯೆಗಳು ತಾಂಡವವಾಡುತ್ತಿವೆ. ಇದರಿಂದ ರೈತ ಸಮುದಾಯ ತೀವ್ರ ಸಂಕಷ್ಟಕ್ಕೆ ಸಿಲುಕಿದೆ. ❖

ನಗರದ ಸೆರಗಿನ ಆಸ್ತಿಗಳ ಕಬಳಿಕೆ

ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಜಿಲ್ಲಾಧಿಕಾರಿ, ಪ್ರಾಧಿಕಾರಗಳಿಂದ ಅನುಮೋದನೆ ಪಡೆಯದೆ ಕ್ರಮಬದ್ಧವಲ್ಲದ ಆಸ್ತಿಗಳಲ್ಲಿ ಮನೆ ಕಟ್ಟಿಕೊಂಡಿದ್ದು, 2013ಕ್ಕೂ ಮೊದಲು ಪಂಚತಂತ್ರದಲ್ಲಿ ದಾಖಲಿಸಿದ್ದರೆ ಅಂಥವರಿಗೆ ನಮೂನೆ 11 ಬಿ ಅಡಿ ಆಸ್ತಿಯ ಖಾತಾ ನೀಡಲಾಗುತ್ತದೆ. ಆದರೆ, ನಗರದ ಸೆರಗಿನ ಭೂಮಿಗೆ ಭಾರಿ ಬೇಡಿಕೆ ಇರುವ ಕಾರಣ ಪಟ್ಟಭದ್ರರು ಸಾರ್ವಜನಿಕ ಉದ್ದೇಶಗಳಿಗೆ ಮೀಸಲಿಟ್ಟ ಗ್ರಾಮ ಠಾಣಾ ವ್ಯಾಪ್ತಿಯ ಜಮೀನು, ನಿವೇಶನಗಳನ್ನು ಕಬಳಿಸುತ್ತಿದ್ದಾರೆ. ಗುಡಿಸಲು ರೀತಿ ತಾತ್ಕಾಲಿಕ ಸೂರು ಕಟ್ಟಿಕೊಂಡು ಖಾತಾ ಪಡೆದ ನಂತರ ಸಣ್ಣ ಉಗ್ರಾಣ, ವಾಣಿಜ್ಯ ಮಳಿಗೆಗಳನ್ನು ಕಟ್ಟಿಕೊಂಡು ಹಣ ಗಳಿಸುತ್ತಿದ್ದಾರೆ.

'2013ರ ಒಳಗೆ ಪಂಚತಂತ್ರದಲ್ಲಿ ನಮೂದಾಗದಿದ್ದರೂ ಪಿಡಿಒಗಳು ಹಣ ಪಡೆದು ಖಾತೆ ನೀಡುತ್ತಿದ್ದಾರೆ. ಶಿವಮೊಗ್ಗ ಜಿಲ್ಲೆಯ ಪುರದಾಳು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಆರು ತಿಂಗಳಲ್ಲೇ ಇಂತಹ ಹಲವು ನಿವೇಶನಗಳಿಗೆ ನಿಯಮ ಉಲ್ಲಂಘಿಸಿ ನಗರ ಪ್ರದೇಶದ ಪಟ್ಟಭದ್ರರಿಗೆ ಖಾತೆ ನೀಡಲಾಗಿದೆ' ಎನ್ನುತ್ತಾರೆ ಪುರದಾಳು ಗ್ರಾಮದ ರಾಜಪ್ಪ.

ರೈತರು ಜಮೀನು ಸರ್ವೆ ಮಾಡಿಸಬೇಕೆಂದರೆ ಸರ್ವೆ ಕಚೇರಿಗೆ ತಿಂಗಳಾನುಗಟ್ಟಲೇ ಅಲೆದಾಡಬೇಕಾಗುತ್ತಿದೆ. ಲಂಚ ಕೊಡದೇ ಇದ್ದರೆ ರೈತರನ್ನು ಮಾತನಾಡಿಸುವುದೂ ಇಲ್ಲ. ಸರ್ವೇಯರ್‌ಗಳ ಕೊರತೆಯ ನೆಪ ಹೇಳಿ ಉದ್ದೇಶಪೂರ್ವಕವಾಗಿ ವಿಳಂಬ ಮಾಡುತ್ತಾರೆ.

ಭೀಮಾಶಂಕರ ಮಾಡಿಯಾಳ, ಮುಖಂಡ, ಅಖಿಲ ಭಾರತ ಕಿಸಾನ್ ಸಭಾ, ಕಲಬುರಗಿ



ತಾಲ್ಲೂಕು ಕಚೇರಿಗಳಲ್ಲಿ ಮಧ್ಯವರ್ತಿಗಳ ಹಾವಳಿ ಹೆಚ್ಚುತ್ತಿದೆ. ಒಂದು ಸರ್ವೆ ನಂಬರ್‌ನಲ್ಲಿ ಎರಡಕ್ಕಿಂತ ಹೆಚ್ಚು ಜನರ ಹೆಸರಿದ್ದರೆ ಅದನ್ನು ಪ್ರತ್ಯೇಕ (ಪೋಡಿ) ಮಾಡಲು ರೈತರಿಂದ ದುಪ್ಪಟ್ಟು ಹಣಕ್ಕೆ ಬೇಡಿಕೆ ಇಡಲಾಗುತ್ತದೆ. ಇಲ್ಲಿ ಸರ್ವೆ ಕಾರ್ಯಕ್ಕೆ ಸಿಬ್ಬಂದಿ ನೇಮಕ ಆಗದ ಹೊರತು ಸಮಸ್ಯೆ ಬಗೆಹರಿಯುವುದಿಲ್ಲ.

ಎಚ್.ಆರ್.ಬಸವರಾಜಪ್ಪ, ರೈತ ಸಂಘ ರಾಜ್ಯ ಘಟಕ ಅಧ್ಯಕ್ಷ

ಕಂದಾಯ ಇಲಾಖೆ ಎಂದರೆ ಜನರನ್ನು ಸತಾಯಿಸುವ ಇಲಾಖೆ ಎಂದೇ ಕುಖ್ಯಾತಿ ಪಡೆದಿದೆ. ರೈತರಿಗೆ ಅಗತ್ಯದ ಕೆಲಸಗಳನ್ನು ಮಾಡಿಸಿಕೊಳ್ಳಲು ಕಷ್ಟವಾಗುತ್ತಿದೆ. ಆರ್‌ಟಿಸಿ ನೋಂದಣಿ, ಖಾತೆ ಬದಲಾವಣೆ ಮುಂತಾದ ಕೆಲಸಗಳು ಇದ್ದರೆ ದಿನಗಟ್ಟಲೆ ಕಾಯಬೇಕಾದ ಸ್ಥಿತಿ ನಿರ್ಮಾಣವಾಗಿದೆ. ಅಲೆದಾಡಿ ಅರ್ಜಿದಾರರು ಸುಸ್ತಾಗಿರುತ್ತಾರೆ.

ಎಂ.ಸುಬ್ರಹ್ಮಣ್ಯ ಭಟ್, ರೈತ ಸಂಘದ ಬಂಟ್ವಾಳ ತಾಲ್ಲೂಕು ಘಟಕದ ಅಧ್ಯಕ್ಷ, ದಕ್ಷಿಣ ಕನ್ನಡ ಜಿಲ್ಲೆ

ನಡೆಯದ ಜಂಟಿ ಸರ್ವೆ; ಸಮಸ್ಯೆ ಜೀವಂತ

ವೈಜ್ಞಾನಿಕವಾಗಿ ಸರ್ವೆ ಮಾಡಿಸಿ, ರಾಜ್ಯದಲ್ಲಿನ ಅರಣ್ಯ, ಕಂದಾಯ ಹಾಗೂ ಖಾಸಗಿ ಭೂಮಿಯ ಗಡಿಗಳನ್ನು ನಿರ್ದಿಷ್ಟವಾಗಿ ಗುರುತಿಸದೇ ಇರುವುದರಿಂದ ಹಲವು ಸಮಸ್ಯೆಗಳು ಇಂದಿಗೂ ಜೀವಂತವಾಗಿವೆ.

ಡ್ರೋನ್ ಸೇರಿದಂತೆ ಆಧುನಿಕ ತಂತ್ರಜ್ಞಾನ ಬಳಸಿಕೊಂಡು ಅರಣ್ಯ ಹಾಗೂ ಕಂದಾಯ ಭೂಮಿಯ ಜಂಟಿ ಸರ್ವೆ ಕಾರ್ಯ ನಡೆಸಲಾಗುವುದು. ನಿಖರವಾಗಿ ಕಂದಾಯ, ಅರಣ್ಯ, ಖಾಸಗಿ ಭೂಮಿ ಗುರುತಿಸಲಾಗುವುದು ಎಂದು ಸರ್ಕಾರ ಹತ್ತಾರು ವರ್ಷಗಳಿಂದ ಹೇಳುತ್ತಾ ಬಂದಿದ್ದರೂ, ಇಂದಿಗೂ ಜಂಟಿ ಸರ್ವೆ ಕಾರ್ಯಗಳು ಪೂರ್ಣ ಪ್ರಮಾಣದಲ್ಲಿ ಮಾಡಲು ಸಾಧ್ಯವಾಗಿಲ್ಲ.

ಬಿಳಿಗಿರಿರಂಗನ ಅಭಯಾರಣ್ಯದಲ್ಲಿ ಕಂದಾಯ ಹಾಗೂ ಅರಣ್ಯ ಇಲಾಖೆಯ ಜಂಟಿ ಸರ್ವೆ ಎರಡು ವರ್ಷದ ಹಿಂದೆ ನಡೆದರೂ ಒತ್ತುವರಿಯಾದ ಭೂಮಿಯನ್ನು ವಶಪಡಿಸಿಕೊಳ್ಳಲು ಮತ್ತು ಅರಣ್ಯ ಭೂಮಿಯನ್ನು ಇಲಾಖೆಯ ಸುಪರ್ದಿಗೆ ನೀಡಲು ಕಂದಾಯ ಇಲಾಖೆಗೆ ಸಾಧ್ಯವಾಗಿಲ್ಲ. ಕಂದಾಯ ಭೂಮಿಯಲ್ಲಿ ಅನಧಿಕೃತವಾಗಿ ನಿರ್ಮಿಸಿದ ರೆಸಾರ್ಟ್ ಮತ್ತು ಹೋಂಸ್ಟೇ ತೆರವು ಮಾಡಿ ಎಂದು ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ ಆದೇಶಿಸಿದೆ. ಪೋಲೀಸ್ ಇಲಾಖೆಯಿಂದಲೂ ಮುಖ್ಯ ಕಾರ್ಯದರ್ಶಿಗೆ ವರದಿ ಹೋದರೂ ಯಾವುದೇ ಪ್ರಯೋಜನವಾಗಿಲ್ಲ. ಇದು ಕಂದಾಯ ಇಲಾಖೆಯ ಕಾರ್ಯವೈಖರಿ.

ಜಂಟಿ ಸರ್ವೆ ಆಗದೇ ಅರಣ್ಯ ಹಾಗೂ ಕಂದಾಯ ಭೂಮಿಯ ನಿಖರ ವ್ಯಾಪ್ತಿ ನಿಗದಿಯಾಗುವುದಿಲ್ಲ. ಶರಾವತಿ ಮುಳುಗಡೆ ಸಂತ್ರಸ್ತರ ಬದುಕು ಇದಕ್ಕೆ ಒಂದು ಉದಾಹರಣೆ. ಖಚಿತವಾಗಿ ಭೂ ವರ್ಗೀಕರಣ ಮಾಡದೆ ಭೂ ಕಬಳಿಕೆ ನಿಷೇಧ ಕಾಯ್ದೆ ಜಾರಿಗೆ ತಂದ ಪರಿಣಾಮ ಗ್ರಾಮೀಣ ರೈತರು ಸಂಕಷ್ಟ ಅನುಭವಿಸಿದರು.

ಅವೈಜ್ಞಾನಿಕ ಸರ್ವೆ ನಡೆಯದ ಅಂಶಗಳನ್ನೇ ಪ್ರಮುಖವಾಗಿ ಇಟ್ಟುಕೊಂಡು ಖಾಸಗಿ ವ್ಯಕ್ತಿಗಳು ಸಾಕಷ್ಟು ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡಿದ್ದಾರೆ. ಕೆಲವರು ವಾಣಿಜ್ಯ ಉದ್ದೇಶ, ವೈಯಕ್ತಿಕ ಲಾಭಕ್ಕಾಗಿ ಸರ್ಕಾರಿ ಭೂಮಿ ಒತ್ತುವರಿ ಮಾಡಿದ್ದಾರೆ. ಬೆಂಗಳೂರು ಸುತ್ತಮುತ್ತ ಸುಮಾರು 75 ಸಾವಿರ ಎಕರೆ ಸರ್ಕಾರಿ ಭೂಮಿ ಒತ್ತುವರಿಯಾಗಿದೆ. ಅಕ್ರಮ ದಾಖಲೆಗಳ ಮೂಲಕ ಭೂಮಿ ಕಬಳಿಸಿದ್ದಾರೆ. ಎ.ಟಿ.ರಾಮಸ್ವಾಮಿ, ವಿ.ಬಾಲಸುಬ್ರಹ್ಮಣ್ಯನ್ ಸಮಿತಿಗಳು ನೀಡಿರುವ ವರದಿಯಲ್ಲೂ ಭೂ ಕಬಳಿಕೆ ಪ್ರಕರಣ ಉಲ್ಲೇಖವಾಗಿದೆ ಒತ್ತುವರಿ ಕುರಿತು ಭೂ ಆಡಿಟಿಂಗ್ ಮಾಡಲು ಕ್ರಮಕೈಗೊಳ್ಳುವಂತೆ ಸರ್ಕಾರ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿಗೆ ಸೂಚಿಸಿದ್ದರೂ, ಆಡಿಟಿಂಗ್ ಕಾರ್ಯ ಆರಂಭವಾಗಿಲ್ಲ. ಸ್ವಾತಂತ್ರ್ಯಾ ನಂತರ ವೈಜ್ಞಾನಿಕ ಸರ್ವೆ ನಡೆಯದ ಕಾರಣ ಆರ್‌ಟಿಸಿ, ಆಕಾರಬಂದು ವ್ಯತ್ಯಾಸಗಳು, ಬಗರ್‌ಹುಕುಂ ಅರ್ಜಿಗಳ ಇತ್ಯರ್ಥವೂ ವಿಳಂಬವಾಗಿದೆ.

'ವಿದ್ಯುತ್ ಮಾರಾಟಕ್ಕೆ ಶೀಘ್ರ ನಿರ್ಬಂಧ'

ಒಂದನೇ ಪುಟದಿಂದ...

ಅದಕ್ಕೆ ಸಚಿವರು, 'ಬಿಲ್ ಸಂಪೂರ್ಣ ಮನ್ನಾ ಸಾಧ್ಯವಿಲ್ಲ. ಆದರೆ, ಒನ್ ಟೈಮ್ ಸೆಟಲ್‌ಮೆಂಟ್‌ಗೆ ಅವಕಾಶ ಕೊಟ್ಟು ಬಡ್ಡಿ ಮನ್ನಾ ಮಾಡುವ ಭರವಸೆ ನೀಡಿದರು.

ಅಕ್ರಮ-ಸಕ್ರಮ ಯೋಜನೆಯಡಿ ವಿದ್ಯುತ್ ಸಂಪರ್ಕ ಕಲ್ಪಿಸಲು ಕೋರಿದ್ದ 4 ಲಕ್ಷ ಅರ್ಜಿಗಳು ಬಾಕಿ ಉಳಿದಿವೆ. ಅವುಗಳ ವಿಲೇವಾರಿಗೆ 4ರಿಂದ 5 ವರ್ಷ ಬೇಕಿದೆ. ನಂತರ ಹೊಸ ಅರ್ಜಿ ಸ್ವೀಕರಿಸಲಾಗುವುದು ಎಂದು ಸಚಿವರು ತಿಳಿಸಿದರು.

ಸೋಲಾರ್; ಸಬ್ಸಿಡಿ ಪ್ರಮಾಣ ಶೇ 80ಕ್ಕೆ ಹೆಚ್ಚಳ: 'ರೈತರ ಪಂಪ್‌ಸೆಟ್‌ಗಳಿಗೆ ಸೌರಶಕ್ತಿ ವಿದ್ಯುತ್ ಅಳವಡಿಸಲು ಈ ಮೊದಲು ಶೇ 60ರಷ್ಟು ಇದ್ದ ಸಹಾಯಧನ ಸೌಲಭ್ಯವನ್ನು ಶೇ 80ಕ್ಕೆ ಹೆಚ್ಚಿಸಲಾಗಿದೆ. ರಾಜ್ಯ ಸರ್ಕಾರ ಶೇ 50 ಹಾಗೂ ಕೇಂದ್ರ ಶೇ 30 ಹಾಗೂ ರೈತರು ಶೇ 20ರಷ್ಟು ಹಣ ಭರಿಸಬೇಕಿದೆ. ಯೋಜನೆಯಡಿ ಪಂಪ್‌ಸೆಟ್ ಕೂಡ ವಿತರಿಸಲಾಗುವುದು. 15 ದಿನಗಳಲ್ಲಿ ಈ ಯೋಜನೆಯ ವಿಸ್ತೃತ ಮಾಹಿತಿ ಪ್ರಕಟಿಸಿ ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸಲಾಗುವುದು' ಎಂದು ಕೆ.ಜೆ.ಜಾರ್ಜ್ ತಿಳಿಸಿದರು.

6,000 ಲೈನ್‌ಮನ್ ನೇಮಕ ಶೀಘ್ರ

ಇಂಧನ ಇಲಾಖೆಯಿಂದ 6,000 ಲೈನ್‌ಮನ್‌ಗಳ ನೇಮಕಕ್ಕೆ ಶೀಘ್ರ ಅಧಿಸೂಚನೆ ಹೊರಡಿಸಲಾಗುವುದು ಎಂದು ಸಚಿವ ಕೆ.ಜೆ. ಜಾರ್ಜ್ ಹೇಳಿದರು. ಆಯಾ ವಿದ್ಯುತ್ ಕಂಪನಿಗಳ ವ್ಯಾಪ್ತಿಯವರು ಅಲ್ಲಿಯೇ ಅರ್ಜಿ ಸಲ್ಲಿಸಲು ಅನುವಾಗುವಂತೆ ನೇಮಕಾತಿ ನಿಯಮಾವಳಿ ರೂಪಿಸಿ ಶೀಘ್ರ ಪ್ರಕ್ರಿಯೆ ಆರಂಭಿಸಲಾಗುವುದು ಎಂದರು.

ಠಾಣೆಯಲ್ಲಿಯೇ ಬಿಜೆಪಿ ಶಾಸಕನಿಂದ ಗುಂಡು

ಒಂದನೇ ಪುಟದಿಂದ...

ಆಸ್ಪತ್ರೆಗೆ ತೆರಳಿ ಗಾಯಗೊಂಡವರ ಯೋಗ ಕ್ಷೇಮ ವಿಚಾರಿಸಿದ ಮುಖ್ಯಮಂತ್ರಿ ಏಕನಾಥ ಶಿಂದೆ ಅವರು, 'ಇದು ದುರದೃಷ್ಟಕರ ಘಟನೆ' ಎಂದರು.

ಘಟನೆ ವಿವರ: ಉಲ್ಲಾಸ್‌ನಗರ ಪ್ರದೇಶದ ಹಿಲ್‌ಲೈನ್ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಕೊಠಡಿಯೊಳಗೆ ಈ ಘಟನೆ ನಡೆದಿದೆ. ಕಲ್ಯಾಣ ಕ್ಷೇತ್ರದಲ್ಲಿ ಶಿಂದೆ ನೇತೃತ್ವದ ಶಿವಸೇನಾದ ಮುಖ್ಯಸ್ಥ ಮಹೇಶ್ ಗಾಯಕವಾಡ್ ಅವರ ಮೇಲೆ ಬಿಜೆಪಿಯ ಶಾಸಕ ಗಣಪತ್ ಗಾಯಕವಾಡ್ ಗುಂಡು ಹಾರಿಸಿದ್ದಾರೆ ಎಂದು ಹೆಚ್ಚುವರಿ ಪೊಲೀಸ್ ಆಯುಕ್ತ ದತ್ತಾತ್ರೇಯ ಶಿಂದೆ ಸುದ್ದಿಗಾರರಿಗೆ ತಿಳಿಸಿದರು.

ಜಮೀನು ವಿವಾದಕ್ಕೆ ಸಂಬಂಧಿಸಿದಂತೆ ಶಾಸಕ ಗಣಪತ್ ಅವರ ಮಗ ದೂರು ನೀಡಲು ಪೊಲೀಸ್ ಠಾಣೆಗೆ ಬಂದಿದ್ದರು. ಅದೇ ವೇಳೆ ಮಹೇಶ್ ತನ್ನ ಜನರೊಂದಿಗೆ ಅಲ್ಲಿಗೆ ಬಂದರು. ಕೆಲ ಹೊತ್ತಿನಲ್ಲಿ ಶಾಸಕ ಗಣಪತ್ ಕೂಡ ಬಂದರು. ಈ ವೇಳೆ ಶಾಸಕರು ಮತ್ತು ಶಿವಸೇನಾ ನಾಯಕರ ನಡುವೆ ಮಾತಿನ ಚಕಮಕಿ ನಡೆಯಿತು. ಇನ್‌ಸ್ಪೆಕ್ಟರ್ ಕೊಠಡಿಯೊಳಗೆ ಶಾಸಕರು ಮಹೇಶ್ ಅವರ ಮೇಲೆ ಗುಂಡು ಹಾರಿಸಿದರು. ಈ ವೇಳೆ ಮಹೇಶ್ ಮತ್ತು ಅವರ ಆಪ್ತ ರಾಹುಲ್ ಪಾಟೀಲ ಗಾಯಗೊಂಡರು. ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಅವರ ಸ್ಥಿತಿ ಗಂಭೀರವಾಗಿದೆ ಎಂದು ಅವರು ವಿವರಿಸಿದರು.

'ಮಗನನ್ನು ಥಳಿಸುತ್ತಿದ್ದರು': ಬಂಧನಕ್ಕೂ ಮುನ್ನ ಖಾಸಗಿ ಸುದ್ದಿವಾಹಿನಿಯೊಂದಿಗೆ ಪ್ರತಿಕ್ರಿಯಿಸಿದ ಶಾಸಕ ಗಣಪತ್ ಗಾಯಕವಾಡ್, 'ಪೊಲೀಸ್ ಠಾಣೆಯಲ್ಲಿ ಮಗನನ್ನು ಥಳಿಸಲಾಗುತ್ತಿತ್ತು. ಹೀಗಾಗಿ ನಾನು ಬಂದೂಕನ್ನು ಬಳಸಿದ್ದೇನೆ. ಮುಖ್ಯಮಂತ್ರಿ ಏಕನಾಥ ಶಿಂದೆ ಅವರು ಮಹಾರಾಷ್ಟ್ರದಲ್ಲಿ ಅಪರಾಧಿಗಳ ಸಾಮ್ರಾಜ್ಯ ಸ್ಥಾಪಿಸಲು ಯತ್ನಿಸುತ್ತಿದ್ದಾರೆ' ಎಂದು ಆರೋಪಿಸಿದರು.

'ಏಕನಾಥ ಶಿಂದೆ ಅವಧಿಯಲ್ಲಿ ಮಹಾರಾಷ್ಟ್ರದಲ್ಲಿ ಅಪರಾಧಿಗಳು ಮಾತ್ರ ಹುಟ್ಟುತ್ತಾರೆ. ನನ್ನಂತಹ ಒಳ್ಳೆಯ ವ್ಯಕ್ತಿಯನ್ನೂ ಅವರು ಇಂದು ಅಪರಾಧಿಯನ್ನಾಗಿ ಮಾಡಿದ್ದಾರೆ' ಎಂದ ಅವರು, ಆತ್ಮರಕ್ಷಣೆಗಾಗಿ ಈ ಕ್ರಮ ತೆಗೆದುಕೊಳ್ಳಬೇಕಾಯಿತು ಎಂದರು.

ಗುಂಡಣ್ಣ

25 ವರ್ಷಗಳ ಹಿಂದೆ

ಗುರುವಾರ, 4-2-1999

● **ವಿಧಾನಸಭೆಯ ವಿಸರ್ಜನೆಗೆ ಮುಖ್ಯಮಂತ್ರಿ ಶಿಫಾರಸು**

ಪಣಜಿ, ಫೆ. 3– ಇಬ್ಬರು ಸಚಿವರ ರಾಜೀನಾಮೆಯೊಂದಿಗೆ 68 ದಿನಗಳ, ಗೋವಾದ ಲೂಜಿನೋ ಫೆಲಿರೋ ಅವರ ಸರ್ಕಾರ ಬಿಕ್ಕಟ್ಟಿಗೆ ಸಿಲುಕಿದ್ದು, ವಿಧಾನಸಭೆ ವಿಸರ್ಜಿಸುವಂತೆ ಅವರು ರಾಜ್ಯಪಾಲರಿಗೆ ಶಿಫಾರಸು ಮಾಡಿದ್ದಾರೆ.

ರಾಜೀನಾಮೆ ನೀಡಿರುವ ಇಬ್ಬರು ಸಚಿವರು ಮಾಜಿ ಮುಖ್ಯಮಂತ್ರಿ ವಿಲ್‌ಫ್ರೆಡ್ ಡಿಸೋಜಾ ಅವರಿಗೆ ಬೆಂಬಲ ನೀಡಿದ್ದು, ಸಮ್ಮಿಶ್ರ ಸರ್ಕಾರ ರಚಿಸಲು ತಮಗೆ ಅವಕಾಶ ನೀಡಬೇಕೆಂದು ಡಿಸೋಜಾ ಅವರು ರಾಜ್ಯಪಾಲರಿಗೆ ಕೋರಿದ್ದಾರೆ.

50 ವರ್ಷಗಳ ಹಿಂದೆ

ಸೋಮವಾರ, 4-2-1974

● **'ಇತಿಹಾಸ ಬದಲಿಸುವ ಹೊಸ ಕ್ರಾಂತಿಯತ್ತ ರಾಷ್ಟ್ರದ ಗತಿ'**

ಕಾನ್ಪುರ, ಫೆ. 3– ಹೊಸ ಕ್ರಾಂತಿಯತ್ತ ರಾಷ್ಟ್ರವು ತೀವ್ರಗತಿಯಲ್ಲಿ ಸಾಗುತ್ತಿದೆ ಎಂದು ಇಂದು ಇಲ್ಲಿ ಹೇಳಿದ ಸರ್ವೋದಯ ನಾಯಕ ಜಯ ಪ್ರಕಾಶ್ ನಾರಾಯಣ್ ಅವರು, 'ಇತಿಹಾಸ ಬದಲಿಸುವ ಮತ್ತೊಂದು 1947ರ ಚಳವಳಿ ಕಂಡುಬರುತ್ತಿದೆ' ಎಂದು ಹೇಳಿದರು.

ಬೆಲೆ ಏರಿಕೆ, ಭ್ರಷ್ಟಾಚಾರ, ನೈತಿಕ ನಿರಾಸೆ, ಹತಾಶೆ ಮತ್ತು ಅಸಹಾಯ ಕತೆ ಇಂದು ತಾಂಡವವಾಡುತ್ತಿದೆ. ಈ ವೇಳೆ ಅಹಿಂಸೆಯ ಸೂಕ್ತ ಮಾರ್ಗ ದರ್ಶನ ನೀಡದಿದ್ದಲ್ಲಿ ರಾಷ್ಟ್ರ ಹಿಂಸೆಯಲ್ಲಿ ಧುಮುಕಿ ಪ್ರಜಾಸತ್ತಾತ್ಮಕ ಜೀವನ ವಿಧಾನದ ಅಸ್ತಿತ್ವವನ್ನೇ ನಾಶ ಮಾಡಬಹುದು ಎಂದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಭಾನುವಾರ ಫೆಬ್ರುವರಿ 4, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಹೇಮಂತ ಋತು ತಿಥಿ: ಪುಷ್ಯ ಕೃಷ್ಣ ನವಮಿ ಗಂ. 17-50 ನಕ್ಷತ್ರ: ವಿಶಾಖಾ ಗಂ. 07-21 ಯೋಗ: ವೃದ್ಧಿ ಗಂ. 12-12 ಕರಣ: ಗರ ಗಂ. 17-50, ಮಕರ ಮಾಸದ 19 ನೇ ದಿನ, ಮಳೆನಕ್ಷತ್ರ: ಶ್ರವಣ 4.
ರಾಹುಕಾಲ: ಸಾಯಂಕಾಲ 04-30 – 06-00
ಸೂರ್ಯೋದಯ: 07-00 ಸೂರ್ಯಾಸ್ತ: 06-29
ಮುಸ್ಲಿಂ ದಿನಾಂಕ: 23 ರಜಬ್
ಅದೃಷ್ಟ ಸಂಖ್ಯೆ: 5, 10

ಮೇಷ: ಮಗಳ ಮದುವೆಯ ವಿಚಾರದಲ್ಲಿ ಈ ದಿನ ನೀವು ಇಡುವ ಹೆಜ್ಜೆ ಬಹಳ ಪ್ರಮುಖವಾಗಿರುತ್ತದೆ. ಸ್ವಂತ ಉದ್ಯೋಗಸ್ಥರಿಗೆ ಅಲ್ಪ ಶ್ರಮದಿಂದ ಹೆಚ್ಚಿನ ಗಳಿಕೆಯಾಗಲಿದೆ. ಸಾಲದ ಮರುಪಾವತಿಯ ಬಗ್ಗೆ ಹೆಚ್ಚಿನ ಗಮನವಿರಲಿ.

ವೃಷಭ: ಧಾರ್ಮಿಕ ವ್ಯಕ್ತಿಯ ಭೇಟಿಯು ನಿಮ್ಮ ಬದುಕಿನಲ್ಲಿ ಆಶ್ಚರ್ಯಕರ ಬದಲಾವಣೆ ಮಾಡಲಿದೆ. ಎಷ್ಟೇ ಅನುಭವ ಇದ್ದರೂ ಇನ್ನೂ ಜೀವನದ ಪಾಠ ಕಲಿಯುವುದು ಅಗತ್ಯವೆನಿಸಲಿದೆ. ಹನುಮಂತನ ನಾಮ ಸ್ಮರಣೆ ಮಾಡಿ.

ಮಿಥುನ: ನಿಮ್ಮ ಚಟುವಟಿಕೆಗಳಿಂದ ಸಮಾಜದಲ್ಲಿ ಉತ್ತಮ ಸಂಪರ್ಕಗಳು ಸಿಗಲಿವೆ. ಏಕಾಗ್ರತೆ ಹೆಚ್ಚಿಸಲು ಧ್ಯಾನ ಅಭ್ಯಾಸ ಮಾಡಿಕೊಳ್ಳಿ. ಔಷಧ ಮಾರಾಟಗಾರರಿಗೆ ಅಥವಾ ಪ್ರತಿನಿಧಿಗಳಿಗೆ ಕಾರ್ಯಾನುಕೂಲವಿದೆ.

ಕರ್ಕಾಟಕ: ನೂತನ ಮನೆ ಖರೀದಿ ಅಥವಾ ನಿವೇಶನಗಳ ಖರೀದಿ ಆಲೋಚನೆಗಳಿಗೆ ಪೂರಕವಾದ ವಾತಾವರಣ ಸ್ನೇಹಿತರಿಂದ ಸಿಗಲಿದೆ. ನೀವು ಕೈಗೊಂಡ ಕೆಲವು ನಿರ್ಧಾರವನ್ನು ಬದಲಿಸಬೇಕಾಗಬಹುದು.

ಸಿಂಹ: ವ್ಯಾಪಾರ ವ್ಯವಹಾರದಲ್ಲಿ ನಡೆದಂತಹ ಆಂತರಿಕ ಒಪ್ಪಂದಗಳಿಂದ ಲಾಭ ಹೊಂದುವಿರಿ. ವಾಸ ಸ್ಥಾನ ಬದಲಾವಣೆಯಾಗುವ ಲಕ್ಷಣ ಹೆಚ್ಚಾಗಿದೆ. ವಿದೇಶಿ ವಸ್ತುಗಳ ಖರೀದಿ ಮನಸ್ಸಿಗೆ ಸಂತೋಷ ತರಲಿದೆ.

ಕನ್ಯಾ: ಕೆಲಸದಲ್ಲಿ ಪ್ರಮುಖ ಬದಲಾವಣೆ ಮಾಡಿಕೊಳ್ಳಬೇಕು. ಇಲ್ಲವಾದಲ್ಲಿ ನಷ್ಟದ ಪರಿಸ್ಥಿತಿಯು ಗಮನಕ್ಕೆ ಬರಲಿದೆ. ಮೌನ ನಿಮಗೆ ಈ ದಿನದ ಕಿವಿ ಮಾತು, ವಿನಾ ಕಾರಣ ಯಾವುದೇ ವಿವಾದಕ್ಕೆ ಸಿಲುಕದಿರಿ.

ತುಲಾ: ಸ್ವತ್ತಿನ ವಿಚಾರದಲ್ಲಿ ಬಂಧುಗಳು ನೆರವಿಗೆ ಬರಲಿದ್ದಾರೆ. ಆದರೆ ನೀವು ಸಹೋದರನ ಮಾತಿನಂತೆ ನಡೆಯುವುದು ಉತ್ತಮ. ಆಧ್ಯಾತ್ಮಿಕ ವಿಷಯಗಳ ಬಗ್ಗೆ ಹೆಚ್ಚಿನ ಗಮನ ನೀಡುವುದರಿಂದ ಮನಃಶಾಂತಿ ಸಿಗಲಿದೆ.

ವೃಶ್ಚಿಕ: ದಿನದ ಪೂರ್ವಾರ್ಧದಲ್ಲಿ ಶುಭಫಲ ಅನುಭವಿಸುವ ನಿಮಗೆ ಉತ್ತರಾರ್ಧದಲ್ಲಿ ಸಿಹಿ-ಕಹಿಯ ಮಿಶ್ರ ಫಲ ಸವಿಯಬೇಕಾಗುತ್ತದೆ. ಬಂಧುಗಳ ಹಲವು ದಿನದ ನಂತರದ ಆಗಮನ ಸಂತೋಷ ತರಲಿದೆ.

ಧನು: ಕಾರ್ಯಕ್ಷೇತ್ರದಲ್ಲಿ ಅತಿಯಾದ ಚಾಣಾಕ್ಷತನದಿಂದಾಗಿ ಊರಿನಲ್ಲಿ ಅಥವಾ ವಂಶದಲ್ಲಿ ಮುಖ್ಯಸ್ಥನಾಗುವ ಯೋಗವಿದೆ. ಯೋಗಾಭ್ಯಾಸದಿಂದ ಆಸ್ಪತ್ರೆ ಖರ್ಚುಗಳು ತಗ್ಗುವುದು. ಮಕ್ಕಳೊಡನೆ ದಿನ ಕಾಲ ಕಳೆಯುವಿರಿ.

ಮಕರ: ನಿಮ್ಮ ಮಾತುಗಾರಿಕೆಯಿಂದಾಗಿ ಸಹೋದರರಿಗೆ ನೋವಾಗಬಹುದು ಅಥವಾ ಕಲಹ ಉಂಟಾಗಬಹುದು. ವಿದೇಶ ಪ್ರಯಾಣಕ್ಕೆ ಬೇಕಾದ ಹಣಕಾಸು ಹೊಂದಿಕೆಯಾಗಲಿದೆ. ಸ್ವಂತ ವ್ಯಾಪಾರ ಮಾಡಲು ಯೋಚಿಸಬಹುದು.

ಕುಂಭ: ನಿಮ್ಮ ಮನಸ್ಸಿನ ಭಾವನೆಗಳನ್ನು ಆತ್ಮೀಯರೊಡನೆ ವ್ಯಕ್ತಪಡಿಸಲು ಈ ದಿನ ಸೂಕ್ತವಾಗಿದೆ. ಚರ್ಮಕ್ಕೆ ಸಂಬಂಧಿಸಿದ ರೋಗಗಳು ಎದುರಾಗಬಹುದು. ಶೀಘ್ರ ಹಾಗೂ ಸಕಾಲಿಕ ನಿರ್ಧಾರಗಳು ಹಣಕಾಸಿನ ಲಾಭ ತರುತ್ತವೆ.

ಮೀನ: ಸಾಂಸಾರಿಕವಾಗಿ ಕೊಟ್ಟ ಮಾತು ಉಳಿಸಿಕೊಳ್ಳಲು ಆರ್ಥಿಕ ಸಹಾಯ ಬೇಕಾಗುವುದು. ವಿದ್ಯಾರ್ಥಿಗಳು ಕೇವಲ ಶೈಕ್ಷಣಿಕ ಪಾಠವಲ್ಲದೆ, ಇತರೆ ಚಟುವಟಿಕೆಗಳಿಗೂ ಸಮಯ ನೀಡಿ. ಮಾನಸಿಕವಾಗಿ ಸದೃಢರಾಗುವಿರಿ.

ಪದಬಂಧ 5581

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

2. ಮಳೆಯಲ್ಲಿರುವ ಹೆಂಗಸು (3)
4. ಒಳ್ಳೆಯ ಅಥವಾ ಕೆಟ್ಟ ನಾತ (3)
5. ಅಂಗಣಕ್ಕೇರಿದಾಗ ಕಾಣಿಸಿದ ಮಂಗಳಗ್ರಹ (4)
6. ಇದು ಮಾತಿಗೆ ನಿಲುಕದ್ದು (4)
7. ವಾನರನನ್ನು ಹೋಲುತ್ತಿರುವ ಮನುಷ್ಯ (2)
9. ಕವಿಪುಂಗವರು ಹೊಕ್ಕಿರುವ ಗುಹೆ (2)
13. ಹೊಸಯುಗ ಈ ತರ ಬಂದಿದೆ! (4)
14. ಅವಶ್ಯವಿಲ್ಲದ ಖರ್ಚು (4)
15. ಚಂದಾಹಣವನ್ನು ಹೀಗೆಂದು ವಸೂಲು ಮಾಡಿ (3)
16. ಕಡಿದಾದ ಕೊರಕಲು (3)

ಮೇಲಿಂದ ಕೆಳಕ್ಕೆ

1. ಜರಿಯಲ್ಲಿಟ್ಟ ರತ್ನ ಖಚಿತವಾದ ಒಡವೆ (4)
2. ಮಗಳ ಗಂಡನನ್ನು ಗೃಹದಲ್ಲಿ ಇಟ್ಟುಕೊಳ್ಳುವುದು (5)
3. ನೆನಪಿನಲ್ಲಿ ಉಳಿಯದಿರುವುದು (3)
5. ತರಂಗ ಎಬ್ಬಿಸಿದ ಒಳಮನಸ್ಸು! (4)
8. ನೀರಸವಲ್ಲ! ದ್ರವದಿಂದ ತುಂಬಿರುವುದು (4)
10. ಚಾರನ ಹತ್ತಿರವಿರುವ ಈತ ವಿವೇಕಶಾಲಿ (5)
11. ನೇರವಲ್ಲದ ಗೀಟು (4)
12. ಅತಿಯಾದ ಬಯಕೆ (3)



5580ರ ಪದಬಂಧದ ಉತ್ತರ

ಎಡದಿಂದ ಬಲಕ್ಕೆ
1.ಸಂಸ್ಥಾನ 4.ದೀನಭಾವ 6.ಶತಮಾನ 7.ರಜತ 10.ಮಡದಿ 12.ಹಸುಗೂಸು 15.ಮಲಯಜ 16.ಯಕೃತ್ತು

ಮೇಲಿಂದ ಕೆಳಕ್ಕೆ
1.ಸಂಹಿತೆ 2.ನದೀತೀರ 3.ವಿಮಾನಯಾನ 5.ವಶ 8.ತತ್ವಮ 9.ಉದಾಹರಣೆ 11.ದಿಗ್ವಿಜಯ 13.ಸುಮ 14.ನಿಯತ್ತು

ಸುಡೊಕು 5966

	2			6	7	4		
3								2
	7			4	8		6	
	4						8	
8		9		7	1			6
	5		8		4		9	
2				9			3	
4		3		5	2			8
	1		4			5	2	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5965 ಸುಡೊಕು

9	6	5	8	7	3	4	1	2
2	8	3	1	4	6	9	7	5
7	1	4	9	5	2	8	3	6
3	4	6	7	1	8	5	2	9
5	7	9	3	2	4	6	8	1
8	2	1	5	6	9	3	4	7
4	5	7	6	8	1	2	9	3
1	3	2	4	9	5	7	6	8
6	9	8	2	3	7	1	5	4

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ದಾವಣಗೆರೆಯಲ್ಲಿ ಆರಂಭವಾದ ಪತ್ರಕರ್ತರ ರಾಜ್ಯಮಟ್ಟದ ಸಮ್ಮೇಳನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಶನಿವಾರ ಉದ್ಘಾಟಿಸಿದರು. ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಶಿವಾನಂದ ತಗಡೂರು, ಇ.ಎಂ. ಮಂಜುನಾಥ್, ಸಚಿವರಾದ ಎಸ್.ಎಸ್.ಮಲ್ಲಿಕಾರ್ಜುನ್, ರಾಮಲಿಂಗಾರೆಡ್ಡಿ, ಶಾಸಕ ಶಾಮನೂರು ಶಿವಶಂಕರಪ್ಪ ಭಾಗವಹಿಸಿದ್ದರು – ಪ್ರಜಾವಾಣಿ ಚಿತ್ರ

‘ಮೌಢ್ಯ, ಕಂದಾಚಾರ ತಿರಸ್ಕರಿಸಿ’

ಪ್ರಜಾವಾಣಿ ವಾರ್ತೆ

ದಾವಣಗೆರೆ: ‘ಪತ್ರಕರ್ತರು ಮೌಢ್ಯ, ಕಂದಾಚಾರ, ಕರ್ಮಸಿದ್ಧಾಂತಗಳನ್ನು ವೈಭವೀಕರಿಸದೆ ಜನಜಾಗೃತಿ ಮೂಡಿಸುವಂಥ ಸುದ್ದಿಗಳನ್ನು ಪ್ರಸಾರ ಮಾಡಲು ಒಲವು ತೋರಬೇಕು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸಲಹೆ ನೀಡಿದರು.

ಶನಿವಾರ ಇಲ್ಲಿ ಆರಂಭವಾದ ಪತ್ರಕರ್ತರ 38ನೇ ರಾಜ್ಯಮಟ್ಟದ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

ಜನರು ಪತ್ರಿಕೋದ್ಯಮದ ಮೇಲೆ ನಂಬಿಕೆ ಇಟ್ಟುಕೊಂಡಿದ್ದಾರೆ. ಆ ನಿರೀಕ್ಷೆ ಹುಸಿಯಾಗದಂತೆ ವೃತ್ತಿಪರತೆ ಇರಬೇಕು. ಓದುಗರಿಗೆ ಸತ್ಯ ಹೇಳುವ ಧೈರ್ಯಬೇಕು. ಪತ್ರಿಕೋದ್ಯಮದ ಉದ್ದೇಶ ಸಫಲವಾಗಬೇಕು. ದನಿ ಇಲ್ಲದವರ, ಅವಕಾಶ ವಂಚಿತರ ದನಿಯಾಗಬೇಕು’ ಎಂದು ಕಿವಿಮಾತು ಹೇಳಿದರು.

‘ಬಡವರು ಮತ್ತು ಮಧ್ಯಮ ವರ್ಗದವರ ಆರ್ಥಿಕ ಶಕ್ತಿ ಹೆಚ್ಚಿಸುವ ಗ್ಯಾರಂಟಿ ಯೋಜನೆಗಳನ್ನು ಬಿಟ್ಟಿ ಗ್ಯಾರಂಟಿ ಎಂದು ಹೀಗಳೆಯುವುದನ್ನೇ ಮಾಧ್ಯಮಗಳು ವೈಭವೀಕರಿಸುತ್ತವೆ’ ಎಂದು ಬೇಸರ ವ್ಯಕ್ತಪಡಿಸಿದರು. ‘ಈ ಯೋಜನೆಗಳ ಕುರಿತು ವಾಸ್ತವಾಂಶ ಪರಿಶೀಲಿಸಿ ಸುದ್ದಿ ಮಾಡಿ’ ಎಂದರು.

> **ಗ್ರಾಮೀಣ ಪತ್ರಕರ್ತರಿಗೆ ಉಚಿತ ಬಸ್ ಪಾಸ್ ಸೌಲಭ್ಯ ನೀಡುವ ಬಗ್ಗೆ ಚರ್ಚಿಸಿ, ಬಜೆಟ್‌ನಲ್ಲಿ ಘೋಷಿಸಲಾಗುವುದು**
> **ಸಿದ್ದರಾಮಯ್ಯ**, ಮುಖ್ಯಮಂತ್ರಿ

‘ಗ್ಯಾರಂಟಿ ಯೋಜನೆಗಳಿಂದ ಸಮಸಮಾಜ ನಿರ್ಮಾಣವಾಗಿ, ಬಡವರು ಆರ್ಥಿಕವಾಗಿ ಸಬಲರಾದರೆ ಶೋಷಣೆಗೆ ಅವಕಾಶ ಇರುವುದಿಲ್ಲ ಎಂದು ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಅವುಗಳ ವಿರುದ್ಧ ಮಾತನಾಡುತ್ತವೆ’ ಎಂದು ಅವರು ದೂರಿದರು.

‘ವೈಚಾರಿಕತೆ, ವೈಜ್ಞಾನಿಕತೆ ಮೂಲಕ ಸಮಾಜದಲ್ಲಿ ಬದಲಾವಣೆ ತರಲು ಸಾಧ್ಯ. ಆ ನಿಟ್ಟಿನಲ್ಲಿ ಪತ್ರಕರ್ತರು ಕಾರ್ಯ ನಿರ್ವಹಿಸಬೇಕು’ ಎಂದರು.

‘ಪತ್ರಿಕಾ ವಿತರಕರನ್ನು ಮೊದಲ ಬಾರಿ ರಾಜ್ಯೋತ್ಸವ ಪ್ರಶಸ್ತಿಗೆ ಪರಿಗಣಿಸಿದ್ದು ನಮ್ಮ ಸರ್ಕಾರ. ಪತ್ರಕರ್ತರ ಮಾಸಾಶನ ₹6000ದಿಂದ ₹12,000ಕ್ಕೆ ಹೆಚ್ಚಿಸಿದೆ. ಮೃತ ಪತ್ರಕರ್ತರ ಕುಟುಂಬದವರ ಮಾಸಾಶನವನ್ನು ₹ 6000ಕ್ಕೆ ಹೆಚ್ಚಿಸಿದೆ’ ಎಂದರು.

‘ಗ್ರಾಮೀಣ ಪತ್ರಕರ್ತರಿಗೆ ಉಚಿತ ಬಸ್ ಪಾಸ್ ಸೌಲಭ್ಯ, ಪತ್ರಕರ್ತರಿಗೆ ಆರೋಗ್ಯ ಯೋಜನೆ ಘೋಷಿಸಬೇಕು. ಪತ್ರಕರ್ತರ ಶ್ರೇಯೋಭಿವೃದ್ಧಿ ನಿಧಿಗೆ ₹ 50 ಕೋಟಿ ಮೀಸಲಿರಿಸಬೇಕು’ ಎಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಶಿವಾನಂದ ತಗಡೂರು ಆಗ್ರಹಿಸಿದರು.

ಸಚಿವರಾದ ರಾಮಲಿಂಗಾರೆಡ್ಡಿ, ಎಸ್.ಎಸ್.ಮಲ್ಲಿಕಾರ್ಜುನ್, ಶಾಸಕರಾದ ಶಾಮನೂರು ಶಿವಶಂಕರಪ್ಪ, ಡಿ.ಜಿ.ಶಾಂತನಗೌಡ, ಬಿ.ದೇವೇಂದ್ರಪ್ಪ, ಕೆ.ಎಸ್. ಬಸವಂತಪ್ಪ, ಮುಖ್ಯಮಂತ್ರಿಯವರ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್, ಇನ್‌ಸೈಟ್ಸ್ ಐಎಎಸ್ ಸಂಸ್ಥಾಪಕ ಜಿ.ಬಿ.ವಿನಯಕುಮಾರ್, ಜಿಲ್ಲಾಧಿಕಾರಿ ಎಂ.ವಿ. ವೆಂಕಟೇಶ್ ಭಾಗವಹಿಸಿದ್ದರು.

‘ದೇಗುಲ ತೊಳೆದ ಪ್ರಕರಣ: ವರದಿಗೆ ಸೂಚನೆ’

ದಾವಣಗೆರೆ: ಕನಕಧಾಮ ಪೀಠದ ಈಶ್ವರಾನಂದ ಪುರಿ ಸ್ವಾಮೀಜಿ ಅವರಿಗೆ ಬಾಗೂರು ಚನ್ನಕೇಶವ ದೇವಸ್ಥಾನದ ಗರ್ಭಗುಡಿಗೆ ಪ್ರವೇಶ ನಿರಾಕರಿಸಿದ ಹಾಗೂ ಭೇಟಿ ನಂತರ ದೇಗುಲ ಸ್ವಚ್ಛಗೊಳಿಸಿದ ಆರೋಪದ ಕುರಿತು ಪರಿಶೀಲಿಸಿ ವರದಿ ನೀಡುವಂತೆ ಇಲಾಖೆ ಆಯುಕ್ತರಿಗೆ ಸೂಚಿಸಿರುವುದಾಗಿ ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ದೇವಸ್ಥಾನಗಳಿಗೆ ಎಲ್ಲರಿಗೂ ಪ್ರವೇಶ ನೀಡಬೇಕು ಎನ್ನುವ ಕಾನೂನಿದೆ. ಕೆಲ ದೇಗುಲಗಳ ಗರ್ಭಗುಡಿಗೆ ಹೋಗಲು ಅವಕಾಶವಿಲ್ಲ. ನಾನು ಇತ್ತೀಚೆಗೆ ಚಾಮುಂಡಿ ಬೆಟ್ಟಕ್ಕೆ ಹೋದಾಗ ಗರ್ಭಗುಡಿಯವರೆಗೆ ಮಾತ್ರ ಕರೆದೊಯ್ದರು’ ಎಂದು ಉದಾಹರಣೆ ನೀಡಿದರು.

‘ಸ್ವಾಮೀಜಿ ಬಂದು ಹೋದ ನಂತರ ದೇವಸ್ಥಾನ ಸ್ವಚ್ಛಗೊಳಿಸಿದ್ದರೆ ಅದು ತಪ್ಪಾಗುತ್ತದೆ. ಹಾಗೆ ಮಾಡಬಾರದು. ಈ ಕುರಿತು ಪರಿಶೀಲಿಸಿ ವರದಿ ಸಲ್ಲಿಸುವಂತೆ ಇಲಾಖೆಯ ಆಯುಕ್ತ ಬಸವರಾಜೇಂದ್ರ ಅವರಿಗೆ ಸೂಚಿಸಲಾಗಿದೆ’ ಎಂದು ಪ್ರತಿಕ್ರಿಯೆ ನೀಡಿದರು.

ಯಾವ ದೇವಸ್ಥಾನಗಳಿಗೆ ಎಷ್ಟು ಅನುದಾನ ಬಿಡುಗಡೆಯಾಗಿದೆ ಎಂಬ ವಿವರವನ್ನು ನಾಲ್ಕೈದು ದಿನಗಳಲ್ಲಿ ಬಿಡುಗಡೆ ಮಾಡಲಾಗುವುದು ಎಂದು ತಿಳಿಸಿದರು.

ಮಂಗನ ಕಾಯಿಲೆ: ವ್ಯಕ್ತಿ ಸಾವು

ಪ್ರಜಾವಾಣಿ ವಾರ್ತೆ

ಶೃಂಗೇರಿ (ಚಿಕ್ಕಮಗಳೂರು): ಮಂಗನ ಕಾಯಿಲೆ (ಕೆಎಫ್‌ಡಿ) ದೃಢಪಟ್ಟಿದ್ದ ಶೃಂಗೇರಿ ತಾಲ್ಲೂಕಿನ ಧರೇಕೊಪ್ಪ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೃಷಿಕ ಸುಬ್ಬಯ್ಯ ಗೌಡ (79) ಮಣಿಪಾಲ್‌ನ ಆಸ್ಪತ್ರೆಯಲ್ಲಿ ಶುಕ್ರವಾರ ನಿಧನರಾದರು. ಮೃತರಿಗೆ ಇಬ್ಬರು ಪುತ್ರರು ಇದ್ದಾರೆ.

ಸುಬ್ಬಯ್ಯಗೌಡ ಎರಡು ವಾರದ ಹಿಂದೆ ಶೃಂಗೇರಿಯ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದರು. ಜ್ವರ ಉಲ್ಬಣಗೊಂಡಿದ್ದರಿಂದ ಮಣಿಪಾಲ್‌ನ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿದ್ದರು.

‘ಸುಬ್ಬಯ್ಯಗೌಡರ ಅವರ ಮನೆಯ ಸುತ್ತಮುತ್ತಲಿನ ನಿವಾಸಿಗಳು, ಕಾರ್ಮಿಕರನ್ನು ಪರೀಕ್ಷಿಸಲಾಗಿದೆ. ಯಾರಿಗೂ ಕಾಯಿಲೆ ದೃಢಪಟ್ಟಿಲ್ಲ’ ಎಂದು ತಾಲ್ಲೂಕು ಆರೋಗ್ಯಾಧಿಕಾರಿ ದಯಾನಂದ್ ‘ಪ್ರಜಾವಾಣಿ’ಗೆ ತಿಳಿಸಿದರು.

ಕೆರಗೋಡು: ಅಭಿಯಾನಕ್ಕೆ ಚಾಲನೆ • ತಾಕತ್ತಿದ್ದರೆ ಧ್ವಜ ಇಳಿಸಲು ಬಿಜೆಪಿ ಜಿಲ್ಲಾಧ್ಯಕ್ಷರ ಸವಾಲು

ಮನೆಗಳ ಮೇಲೆ ಹನುಮಧ್ವಜ

ಪ್ರಜಾವಾಣಿ ವಾರ್ತೆ

ಮಂಡ್ಯ: ತಾಲ್ಲೂಕಿನ ಕೆರಗೋಡು ಗ್ರಾಮದಲ್ಲಿ ಹನುಮ ಧ್ವಜ ತೆರವುಗೊಳಿಸಿದ್ದನ್ನು ಖಂಡಿಸಿ ಬಿಜೆಪಿ, ಜೆಡಿಎಸ್ ಹಾಗೂ ಸಂಘಪರಿವಾರದ ಕಾರ್ಯಕರ್ತರು ಶನಿವಾರ ಗ್ರಾಮದಲ್ಲಿ ಮನೆಗಳ ಮೇಲೆ ಹನುಮಧ್ವಜ ಹಾರಿಸುವ ಆಂದೋಲನಕ್ಕೆ ಚಾಲನೆ ನೀಡಿದರು.

108 ಅಡಿ ಧ್ವಜಸ್ತಂಭದ ಸಮೀಪದಲ್ಲೇ ಇರುವ ಆಂಜನೇಯ ಸ್ವಾಮಿ ದೇವಾಲಯದಲ್ಲಿ ಧ್ವಜಗಳಿಗೆ ಪೂಜೆ ಸಲ್ಲಿಸಿ ಆಂದೋಲನಕ್ಕೆ ಚಾಲನೆ ನೀಡಲಾಯಿತು. 300ಕ್ಕೂ ಹೆಚ್ಚು ಮನೆಗಳ ಮೇಲೆ ಯುವಕರು, ಮಹಿಳೆಯರು, ಮಕ್ಕಳು ಸ್ವಯಂ ಪ್ರೇರಿತವಾಗಿ ಧ್ವಜ ಹಾರಿಸಿದರು.

ಹಲವು ಮನೆಗಳ ಮುಂದೆ ಕಂಬ ನೆಟ್ಟು ಧ್ವಜ ಹಾರಿಸಿದರು. ಜೈಶ್ರೀರಾಮ್ ಘೋಷಣೆ ಕೂಗಿದರು. ಅಕ್ಕಪಕ್ಕದ ಗ್ರಾಮಗಳಲ್ಲೂ ಜನ ಮನೆಗಳ ಮುಂದೆ ಧ್ವಜ ಹಾರಿಸಿದರು.

ಆಂದೋಲನಕ್ಕೆ ಚಾಲನೆ ನೀಡಿದ ವಿಶ್ವ ಹಿಂದೂ ಪರಿಷತ್ ಜಿಲ್ಲಾ ಘಟಕದ ಅಧ್ಯಕ್ಷ ಭಾನುಪ್ರಕಾಶ್ ಶರ್ಮಾ, ‘ಜಿಲ್ಲೆಯಲ್ಲಿ ಫೆ.9ರವರೆಗೆ ಆಂದೋಲನ ನಡೆಸಿ, ನಂತರ ರಾಜ್ಯದಾದ್ಯಂತ ವಿಸ್ತರಿಸಲಾಗುವುದು’ ಎಂದರು.

ಜಿಲ್ಲಾಧಿಕಾರಿ ನ್ಯಾಯಾಲಯಕ್ಕೆ ಅರ್ಜಿ

‘ಲೋಕಸಭೆ ಚುನಾವಣೆ ಘೋಷಣೆಯಾಗುವವರೆಗೆ ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಸೇರಿದಂತೆ ಯಾವುದೇ ಧರ್ಮದ ಧ್ವಜ, ಬ್ಯಾನರ್, ಬಂಟಿಂಗ್ಸ್ ಹಾಕುವುದನ್ನು ನಿಷೇಧಿಸಬೇಕು’ ಎಂದು ಒತ್ತಾಯಿಸಿ ಅಖಿಲ ಭಾರತ ವಕೀಲರ ಒಕ್ಕೂಟ ಒತ್ತಾಯಿಸಿದೆ.

ಒಕ್ಕೂಟದ ಪದಾಧಿಕಾರಿಗಳು ಶನಿವಾರ ಈ ಸಂಬಂಧ ಜಿಲ್ಲಾಧಿಕಾರಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದರು. ‘ಪ್ರಚೋದನಕಾರಿ ಭಾಷಣ ಮಾಡುವವರಿಗೆ ಮಂಡ್ಯ ಪ್ರವೇಶಿಸಲು ಅವಕಾಶ ಕೊಡಬಾರದು’ ಎಂದು ಕೋರಿದ್ದಾರೆ.

ಒಕ್ಕೂಟದ ಕಾರ್ಯದರ್ಶಿ ಚಂದನ್ ಕುಮಾರ್, ವಿದ್ಯಾರ್ಥಿ ಘಟಕದ ಮುಖಂಡ ಆಕಾಶ್, ಪ್ರಗತಿಪರ ಒಕ್ಕಲಿಗರ ವೇದಿಕೆ ಜಿಲ್ಲಾ ಘಟಕದ ಅಧ್ಯಕ್ಷ ಸಾಗರ್ ಅರ್ಜಿ ಸಲ್ಲಿಸಿದರು. ಒಕ್ಕೂಟದ ಅಧ್ಯಕ್ಷ ಬಿ.ಟಿ.ವಿಶ್ವನಾಥ್, ವಕೀಲರಾದ ಪಲ್ಲವಿ, ಚೇತನ್ ಆತಗೂರು ವಕಾಲತ್ತು ಸಲ್ಲಿಸಿದರು.

‘ಜಿಲ್ಲೆಯಲ್ಲಿ ಬಿಜೆಪಿ– ಜೆಡಿಎಸ್ ಒಂದುಗೂಡಿದ ನಂತರ ಕೋಮು ಸೌಹಾರ್ದಕ್ಕೆ ಧಕ್ಕೆ ಉಂಟಾಗುತ್ತಿದೆ. ಅದನ್ನು ತಡೆಯಲು ಈಗ ಅರ್ಜಿ ಸಲ್ಲಿಸಲಾಗಿದೆ’ ಎಂದು ಒಕ್ಕೂಟದ ಅಧ್ಯಕ್ಷ ಬಿ.ಟಿ.ವಿಶ್ವನಾಥ್ ತಿಳಿಸಿದರು.

ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಡಾ.ಇಂದ್ರೇಶ್ ಕುಮಾರ್ ಅವರು, ‘ಕಾಂಗ್ರೆಸ್ ಸರ್ಕಾರ ಒಂದು ಹನುಮಧ್ವಜ ತೆರವುಗೊಳಿಸಿತು. ಆದರೆ ಮನೆಮನೆಯಲ್ಲೂ ಹಾರಾಡುತ್ತಿವೆ. ತಾಕತ್ತಿದ್ದರೆ ತೆರವುಗೊಳಿಸಲಿ’ ಎಂದರು.

ಶಾಂತಿ ಸಭೆ ವಿಫಲ: ‘ಜಿಲ್ಲಾಧಿಕಾರಿ ಕುಮಾರ ಅವರು ಪೊಲೀಸ್ ಠಾಣೆಯಲ್ಲಿ ಶುಕ್ರವಾರ ನಡೆಸಿದ ಶಾಂತಿ ಸಭೆ ವಿಫಲವಾಯಿತು’ ಎಂದು ಅಧಿಕಾರಿಗಳು ತಿಳಿಸಿದರು. ‘ಫೆ.9ರ ನಂತರ ಮತ್ತೆ ಸಭೆ ನಡೆಸಿ ಗೊಂದಲ ನಿವಾರಿಸಲು ಪ್ರಯತ್ನಿಸಲಾಗುವುದು’ ಎಂದು ಜಿಲ್ಲಾಧಿಕಾರಿ ಕುಮಾರ ತಿಳಿಸಿದರು.

‘ಗ್ರಾಮದ ಧ್ವಜಸ್ತಂಭದಲ್ಲಿ ಹನುಮಧ್ವಜ ಹಾರಿದ ನಂತರವಷ್ಟೇ ಶಾಂತಿ ಸಭೆ ಕರೆಯಬೇಕು. ಅಲ್ಲಿಯವರೆಗೂ ಮಾತುಕತೆ ಅವಶ್ಯಕತೆ ಇಲ್ಲವೆಂದು ಗ್ರಾಮಸ್ಥರು ಪ್ರತಿಪಾದಿಸಿದರು’ ಎಂದು ಮೂಲಗಳು ತಿಳಿಸಿವೆ.

ಕೆರಗೋಡು ಗ್ರಾಮದ ಮನೆಯೊಂದರ ಮುಂದೆ ಹನುಮ ಧ್ವಜ ಹಾರಿಸಲಾಯಿತು

ಗರ್ಭಗುಡಿ, ಸುಕನಾಸಿಗೆ ಅನ್ಯರಿಗೆ ಪ್ರವೇಶ ಇಲ್ಲ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ‘ಅರ್ಚಕರು, ಅವರ ಕುಟುಂಬದವರು, ಬ್ರಾಹ್ಮಣರನ್ನು ಹೊರತುಪಡಿಸಿ ದೇಗುಲದ ಗರ್ಭಗುಡಿ ಮತ್ತು ಸುಕನಾಸಿಗೆ ಅನ್ಯರಿಗೆ ಪ್ರವೇಶವಿಲ್ಲ. ಗರ್ಭಗುಡಿ ಪ್ರವೇಶಿಸುವುದಾಗಿ ಮಠಾಧೀಶರು ಸೇರಿ ಯಾರೊಬ್ಬರೂ ಕೋರಿಕೊಂಡಿಲ್ಲ’ ಎಂದು ಜಿಲ್ಲೆಯ ಹೊಸದುರ್ಗ ಬಳಿಯ ಬಾಗೂರು ಚನ್ನಕೇಶವ ದೇಗುಲದ ಅರ್ಚಕ ಶ್ರೀನಿವಾಸ್ ಅಯ್ಯಂಗಾರ್ ಸ್ಪಷ್ಟಪಡಿಸಿದ್ದಾರೆ.

‘ವಿಗ್ರಹದ ಪ್ರತಿಷ್ಠಾಪನೆ ಬಳಿಕ ಅನ್ಯರಿಗೆ ಗರ್ಭಗುಡಿ ಪ್ರವೇಶವಿಲ್ಲ. ಉತ್ಸವಮೂರ್ತಿ ಕೂರಿಸುವ ಸುಕನಾಸಿಗೆ ಬ್ರಾಹ್ಮಣರು ಅಥವಾ ಅರ್ಚಕರ ಕುಟುಂಬದ ಸದಸ್ಯರಿಗೆ ಮಾತ್ರ ಅವಕಾಶವಿದೆ. ಸ್ತ್ರೀಯರಿಗೆ ಸುಕನಾಸಿ ಬಳಿ ಪ್ರವೇಶವಿದೆಯೇ ಹೊರತು, ಗರ್ಭಗುಡಿಗೆ ಅಲ್ಲ’ ಎಂದು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

‘ದೇವರಿಗೆ ಅಭಿಷೇಕ, ಅಲಂಕಾರ, ಪೂಜೆ ಹಾಗೂ ಮಹಾಮಂಗಳಾರತಿ ಮುಗಿದ ಬಳಿಕ ಯಾವುದೇ ಕಾರಣಕ್ಕೂ ದೇಗುಲ ಸ್ವಚ್ಛತೆ ಮಾಡುವುದಿಲ್ಲ. ಗ್ರಾಮದಲ್ಲಿ ಯಾರದ್ದಾದರೂ ಸಾವು ಸಂಭವಿಸಿದಾಗಷ್ಟೇ ಗರ್ಭಗುಡಿ ಆವರಣದಲ್ಲಿ ಪ್ರೋಕ್ಷಣೆ ಮಾಡಿ, ಶುದ್ಧೀಕರಿಸಲಾಗುತ್ತದೆ. ಕನಕ ಗುರುಪೀಠದ ಈಶ್ವರಾನಂದಪುರಿ ಸ್ವಾಮೀಜಿ ಎಷ್ಟು ವರ್ಷಗಳ ಹಿಂದಿನ ಘಟನೆ ಬಗ್ಗೆ ಮಾತನಾಡಿದ್ದಾರೆ ಎಂಬುದು ಗೊತ್ತಿಲ್ಲ’ ಎಂದರು.

‘ಮಠಾಧೀಶರು ಆರು ವರ್ಷಗಳಿಂದ ಬರುತ್ತಿದ್ದಾರೆ. ಗರ್ಭಗುಡಿ ಹೊರಗೆ ಕೈಮುಗಿದು ತೆರಳುತ್ತಾರೆ. ಒಳಬರುವ ಇಂಗಿತವನ್ನು ವ್ಯಕ್ತಪಡಿಸಿಲ್ಲ. ಜಾತಿಯ ಕಾರಣಕ್ಕೆ ಗರ್ಭಗುಡಿಗೆ ಬಿಡಲಿಲ್ಲ ಎಂಬ ಆರೋಪದಲ್ಲಿ ಹುರುಳಿಲ್ಲ. ಇಲ್ಲಿ, ಜಾತಿ ಕಾರಣಕ್ಕೆ ಭೇದಭಾವ ಮಾಡಿಲ್ಲ’ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಫೆ.6ರಿಂದ ಸುತ್ತೂರು ಜಾತ್ರೆ

ಪ್ರಜಾವಾಣಿ ವಾರ್ತೆ

ಮೈಸೂರು: ಜಿಲ್ಲೆಯ ನಂಜನಗೂಡು ತಾಲ್ಲೂಕಿನ ಸುತ್ತೂರಿನಲ್ಲಿ ಫೆ.6ರಿಂದ 11ರವರೆಗೆ ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವ (ಸುತ್ತೂರು ಜಾತ್ರೆ) ಆಯೋಜಿಸಲಾಗಿದೆ.

ಸುತ್ತೂರು ವೀರಸಿಂಹಾಸನ ಮಹಾಸಂಸ್ಥಾನ ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯದಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, ತಯಾರಿ ಭರದಿಂದ ಸಾಗಿದೆ.

‘ಬರಗಾಲದಲ್ಲಿ ಕಡಿಮೆ ನೀರು ಬಳಸಿ ಲಾಭದಾಯಕ ಕೃಷಿ ಮಾಡುವ ಬಗೆ’ ತಿಳಿಸುವ ಪ್ರಾತ್ಯಕ್ಷಿಕೆ ಒಳಗೊಂಡ ಕೃಷಿ ಮೇಳ, ಕೃಷಿ ಪರಿಕರಗಳ ವಸ್ತು ಪ್ರದರ್ಶನ, ಆರೋಗ್ಯ ತಪಾಸಣೆ ಶಿಬಿರ, ಸಾಂಸ್ಕೃತಿಕ ಮೇಳ, ಸಾಮೂಹಿಕ ವಿವಾಹ, ರಾಜ್ಯಮಟ್ಟದ ಭಜನಾ ಮೇಳ, ದೇಸಿ ಆಟಗಳು, ಸೋಬಾನೆ ಪದ, ರಂಗೋಲಿ ಸ್ಪರ್ಧೆ, ಧಾರ್ಮಿಕ ಸಭೆ, ಚಿತ್ರಸಂತೆ, ಚಿತ್ರಕಲೆ ಹಾಗೂ ಗಾಳಿಪಟ ಸ್ಪರ್ಧೆ, ಕುಸ್ತಿ ಪಂದ್ಯಾವಳಿ, ತೆಪ್ಪೋತ್ಸವ, ಕಪಿಲಾರತಿ, ಲಕ್ಷ ದೀಪೋತ್ಸವ ಜರುಗಲಿದೆ.

> **ಮುಖ್ಯಾಂಶಗಳು**
> - ಫೆ.11ರವರೆಗೆ ಜಾತ್ರೋತ್ಸವ
> - ರಾಜ್ಯ ಮಟ್ಟದ ಭಜನಾ ಸ್ಪರ್ಧೆ
> - ಸಾಮೂಹಿಕ ವಿವಾಹ, ದೇಸಿ ಆಟಗಳು

‘ಎಲ್ಲ ಜಾತಿಗಳ ಮಠಾಧೀಶರು, ಧರ್ಮಗುರುಗಳು, ಕೇಂದ್ರ, ರಾಜ್ಯ ಸಚಿವರು ಸೇರಿ ಹಲವು ಗಣ್ಯರು ಭಾಗವಹಿಸಲಿದ್ದಾರೆ. ಒಟ್ಟು 25 ಲಕ್ಷ ಮಂದಿ ಪಾಲ್ಗೊಳ್ಳುವ ನಿರೀಕ್ಷೆ ಇದೆ’ ಮೂರು ಹೊತ್ತೂ ಪ್ರಸಾದದ ವ್ಯವಸ್ಥೆ ಇರಲಿದೆ’ ಎಂದು ಜೆಎಸ್‌ಎಸ್ ಮಹಾವಿದ್ಯಾ ಪೀಠದ ಕಾರ್ಯದರ್ಶಿ ಎಸ್.ಮಂಜುನಾಥ್ ತಿಳಿಸಿದರು.

ಫೆ.7ರಂದು ಬೆಳಿಗ್ಗೆ 10ಕ್ಕೆ ಸಾಮೂಹಿಕ ವಿವಾಹಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಲಿದ್ದಾರೆ. ಫೆ.8ರಂದು ಬೆಳಿಗ್ಗೆ 10.30ಕ್ಕೆ ರಥೋತ್ಸವ ನೆರವೇರಲಿದೆ. ನಂತರ ಧಾರ್ಮಿಕ ಸಭೆ, ಸಂಜೆ 4ಕ್ಕೆ ದನಗಳ ಜಾತ್ರೆ ನಡೆಯಲಿದೆ ಎಂದು ತಿಳಿಸಿದ್ದಾರೆ.

ಫೆ.9ರಂದು ಬೆಳಿಗ್ಗೆ 10.30ಕ್ಕೆ ಕೃಷಿ ವಿಚಾರ ಸಂಕಿರಣ ನಡೆಯಲಿದೆ. ಜೈವಿಕ ಗೊಬ್ಬರ ಉತ್ಪಾದನಾ ಘಟಕದ ಶಿಲಾನ್ಯಾಸವನ್ನು ಕೇಂದ್ರ ರಾಸಾಯನಿಕ ಹಾಗೂ ರಸಗೊಬ್ಬರ ಸಚಿವ ಭಗವಂತ್ ಖೂಬಾ ನೆರವೇರಿಸಲಿದ್ದಾರೆ.

ಫೆ.9ರಂದು ಕುಸ್ತಿ ಪಂದ್ಯಾವಳಿ ನಡೆಯಲಿದ್ದು, ವಿಜೇತರಿಗೆ ‘ಸುತ್ತೂರು ಕುಮಾರ’ ಹಾಗೂ ‘ಸುತ್ತೂರು ಕೇಸರಿ’ ಪ್ರಶಸ್ತಿ ನೀಡಲಾಗುವುದು. ಕಾಂಗ್ರೆಸ್ ಶಾಸಕ ಶಾಮನೂರು ಶಿವಶಂಕರಪ್ಪ ಕುಟುಂಬದವರು ನಿರ್ಮಿಸಿಕೊಟ್ಟಿರುವ ‘ಪಾರ್ವತಮ್ಮ ಮತ್ತು ಶಾಮನೂರು ಶಿವಶಂಕರಪ್ಪ ಅತಿಥಿಗೃಹ’ವನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಫೆ.10ರಂದು ಸಂಜೆ 5ಕ್ಕೆ ಉದ್ಘಾಟಿಸಲಿದ್ದಾರೆಎಂದುಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಿದರು.

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಹೆಲ್ಮೆಟ್ ಜೀವ ಉಳಿಸುತ್ತವೆ

ಯಾವಾಗಲೂ ಹೆಲ್ಮೆಟ್ ಧರಿಸಿ ಜೊತೆಗೆ ಹೆಲ್ಮೆಟ್ ಬೆಲ್ಟ್ ಕಟ್ಟಿಕೊಳ್ಳಿ

- ಇಡೀ ಮುಖವನ್ನು ಮುಚ್ಚುವ ಅಥವಾ ಅರ್ಧ ಮುಖವನ್ನು ಮುಚ್ಚುವ ಹೆಲ್ಮೆಟ್ ಅನ್ನು ಧರಿಸಿ, ಅದರ ಬೆಲ್ಟ್ ಅನ್ನು ಕಟ್ಟಿಕೊಂಡರೆ ಮಾತ್ರ ಹೆಲ್ಮೆಟ್ ಅನ್ನು ಸರಿಯಾಗಿ ಧರಿಸಲಾಗಿದೆ ಎಂದು ಪರಿಗಣಿಸಲಾಗುತ್ತದೆ. ಅರ್ಧ ತಲೆ ಹೆಲ್ಮೆಟ್‌ಗೆ ಕಾನೂನು ಪ್ರಕಾರ ಮಾನ್ಯತೆ ಇಲ್ಲ.
- ಮೋಟಾರು ವಾಹನಗಳ ಕಾಯ್ದೆ 1988 ರ ಪರಿಚ್ಛೇದ 129 ಪ್ರಕಾರ ಹೆಲ್ಮೆಟ್‌ಗಳ ಬೆಲ್ಟ್ / ಸ್ಟ್ರಾಪ್‌ಗಳನ್ನು ಕಟ್ಟಿಕೊಳ್ಳುವುದು ಕಡ್ಡಾಯ. ದ್ವಿಚಕ್ರ ವಾಹನ ಚಲಾಯಿಸುವಾಗ ಹೆಲ್ಮೆಟ್‌ಗಳನ್ನು ಧರಿಸದೇ ಇರುವುದು ಮೋಟಾರು ವಾಹನಗಳ ಕಾಯ್ದೆ 1988 ರ ಪರಿಚ್ಛೇದ 194ಡಿ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವಾಗಿದೆ.

ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರಾದ ಶ್ರೀ ರಾಮಲಿಂಗಾರೆಡ್ಡಿ ರವರು ಇಲಾಖಾ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಸಂದರ್ಭ

* https://ksp.karnataka.gov.in/storage/pdf-files/Road_Accident–Report_2022.pdf

ದೇಶದ ಕಾಡು, ವನ್ಯಜೀವಿ ನದಿಗಳು ಸೇರಿ ಪರಿಸರ ಉಳಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನ ಬದ್ಧ ಮೂಲಭೂತ ಕರ್ತವ್ಯ.

ರಸ್ತೆ ಸುರಕ್ಷತೆ–ನಮ್ಮ ಆದ್ಯತೆ

ಡಾ. ಎನ್.ವಿ. ಪ್ರಸಾದ್ ಭಾ.ಆ.ಸೇ
ಕಾರ್ಯದರ್ಶಿಗಳು ಸಾರಿಗೆ ಇಲಾಖೆ

ಯೋಗೀಶ್ ಎ.ಎಂ. ಭಾ.ಆ.ಸೇ
ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ ಬೆಂಗಳೂರು

ಜೆ. ಪುರುಷೋತ್ತಮ್
ಅಪರ ಆಯುಕ್ತರು ಮತ್ತು ಸದಸ್ಯ ಕಾರ್ಯದರ್ಶಿ ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ

ವಧು ಬೇಡಿಕೆ ಇಟ್ಟು ಶಾಸಕರಿಗೆ ರೈತನಿಂದ ಮನವಿ

ಕಡೂರು (ಚಿಕ್ಕಮಗಳೂರು): ತಾಲ್ಲೂಕಿನ ಪಂಚನಹಳ್ಳಿಯಲ್ಲಿ ಶನಿವಾರ ನಡೆದ ಹೋಬಳಿ ಮಟ್ಟದ ಜನಸ್ಪಂದನ ಕಾರ್ಯಕ್ರಮದಲ್ಲಿ ವಧು ಹುಡುಕಿ ಕೊಡುವಂತೆ ಯುವ ರೈತರೊಬ್ಬರು ಶಾಸಕ ಕೆ.ಎಸ್.ಆನಂದ್ ಅವರಿಗೆ ಮನವಿ ಸಲ್ಲಿಸಿದರು.

‘33 ವರ್ಷವಾದರೂ ಮದುವೆಯಾಗಿಲ್ಲ. ರೈತ ಎಂಬ ಕಾರಣದಿಂದ ಯಾರೂ ಹೆಣ್ಣು ಕೊಡುತ್ತಿಲ್ಲ. ಯಾವ ಜಾತಿಯಾದರೂ ಸರಿ, ಮದುವೆಯಾಗಲು ಸಿದ್ಧ. ದಯವಿಟ್ಟು ಹೆಣ್ಣು ಕೊಡಿಸಿ’ ಎಂದು ಬಿಟ್ಟೇನಹಳ್ಳಿಯ ನಿವಾಸಿಯಾದ ಬಿ.ಜಿ.ವಿಜಯಕುಮಾರ್ ವಿನಂತಿಸಿದರು.

‘ರಾಜ್ಯದಲ್ಲಿರುವ ಆರು ಮಹಿಳಾ ನಿಲಯಗಳಲ್ಲಿ ಅನಾಥ ಹೆಣ್ಣು ಮಕ್ಕಳನ್ನು ಸರ್ಕಾರ ಪೋಷಿಸುತ್ತಿದೆ. ಅಲ್ಲಿಗೆ ಅರ್ಜಿ ಸಲ್ಲಿಸಿದರೆ ಅಧಿಕಾರಿಗಳು ವರನ ಹಿನ್ನೆಲೆ ಪರಿಶೀಲಿಸಿ ಅವಕಾಶವಿದ್ದರೆ ಮದುವೆ ಮಾಡಿಕೊಡಲು ಮುಂದಾಗುತ್ತಾರೆ. ಸಿಡಿಪಿಒ ಅವರು ಇದರ ಬಗ್ಗೆ ಮಾಹಿತಿ ನೀಡುತ್ತಾರೆ’ ಎಂದು ಶಾಸಕರು ಉತ್ತರಿಸಿದರು.

2020ರ ಪುಸ್ತಕ ಖರೀದಿಗೆ ಸಲ್ಲಿಸಲಾಗಿದ್ದ ₹24 ಕೋಟಿ ಪ್ರಸ್ತಾವನೆಯಲ್ಲಿ ₹7 ಕೋಟಿ ಬಿಡುಗಡೆ

ಆಯ್ಕೆಯಾದ ಪುಸ್ತಕ ಖರೀದಿಗಿಲ್ಲ ಹಣ

• ವರುಣ ಹೆಗಡೆ

ಬೆಂಗಳೂರು: ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಏಕಗವಾಕ್ಷಿ ಯೋಜನೆಯಡಿ ಆಯ್ಕೆಯಾದ 2020ನೇ ಸಾಲಿನ ಪುಸ್ತಕ ಖರೀದಿಗೆ ಅಗತ್ಯ ಅನುದಾನ ಬಿಡುಗಡೆಯಾಗಿಲ್ಲ. ಇದರಿಂದ ಪುಸ್ತಕಗಳ ಸಾವಿರಾರು ಪ್ರತಿಗಳಿಗೆ ಗೋದಾಮಿನಲ್ಲಿಯೇ ದೂಳು ಹಿಡಿಯುತ್ತಿದೆ.

ಇಲಾಖೆಯು ಏಕಗವಾಕ್ಷಿ ಯೋಜನೆಯಡಿ ಆಯ್ಕೆಯಾದ ಪುಸ್ತಕಗಳ ಪ್ರತಿ ಶೀರ್ಷಿಕೆಯ 300 ಪ್ರತಿಗಳನ್ನು ಖರೀದಿಸುತ್ತದೆ. ಈ ಯೋಜನೆಯಡಿ ಸಾಹಿತಿ ದೊಡ್ಡರಂಗೇಗೌಡ ಅವರ ಅಧ್ಯಕ್ಷತೆಯ ಈ ಹಿಂದಿನ ರಾಜ್ಯಮಟ್ಟದ ಪುಸ್ತಕ ಆಯ್ಕೆ ಸಮಿತಿ ಎರಡು ವರ್ಷಗಳ ಹಿಂದೆಯೇ 2020ನೇ ಸಾಲಿನ ಪುಸ್ತಕಗಳ ಪಟ್ಟಿಯನ್ನು ಸಿದ್ಧಪಡಿಸಿತ್ತು. ಆದರೆ, ಸರ್ಕಾರದ ಅನುಮೋದನೆ ದೊರೆತಿರಲಿಲ್ಲ. ಕಳೆದ ಬಜೆಟ್‌ನಲ್ಲಿ ₹ 10 ಕೋಟಿ ಅನುದಾನ ಘೋಷಿಸಿದ್ದ ಕಾಂಗ್ರೆಸ್ ಸರ್ಕಾರ, ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯನ್ನು ಪುನರ್ ರಚಿಸಿತ್ತು. ಸಾಹಿತಿ ಕರೀಗೌಡ ಬೀಚನಹಳ್ಳಿ ಅವರ ಅಧ್ಯಕ್ಷತೆಯ ನೂತನ ಸಮಿತಿಯು ಇಲಾಖೆಯ ಸೂಚನೆ ಮೇರೆಗೆ ಅಂತಿಮಗೊಂಡಿದ್ದ ಪುಸ್ತಕಗಳ ಪಟ್ಟಿಯನ್ನು ಮರುಪರಿಶೀಲನೆ ನಡೆಸಿತ್ತು. ಈ ಪಟ್ಟಿಗೆ 2023ರ ನವೆಂಬರ್‌ನಲ್ಲಿ ಸರ್ಕಾರ ಅನುಮೋದನೆ ನೀಡಿತ್ತು. ಆದರೆ, ಅಗತ್ಯ ಅನುದಾನ ನೀಡದಿದ್ದರಿಂದ ಖರೀದಿ ನಡೆದಿಲ್ಲ.

2020ನೇ ಸಾಲಿನ ಪುಸ್ತಕ ಖರೀದಿಗೆ 4,791 ಶೀರ್ಷಿಕೆಗಳು ಆಯ್ಕೆಯಾಗಿದ್ದವು. ಇಷ್ಟು ಪುಸ್ತಕಗಳ ತಲಾ 300 ಪ್ರತಿಗಳನ್ನು ಸಾರ್ವಜನಿಕ ಗ್ರಂಥಾಲಯ ಇಲಾಖೆ ಖರೀದಿಸಿ, ರಾಜ್ಯದ ಗ್ರಂಥಾಲಯಗಳಿಗೆ ಪೂರೈಕೆ ಮಾಡಬೇಕಾಗಿತ್ತು. ಆಯ್ಕೆಯಾದ ಪುಸ್ತಕಗಳ 300 ಪ್ರತಿಗಳನ್ನು ಪ್ರಕಾಶನ ಸಂಸ್ಥೆಗಳು ಹಾಗೂ ಲೇಖಕರು ಇಲಾಖೆಯ ಸೂಚನೆ ಮೇರೆಗೆ ಇಲಾಖೆಯ ಗೋದಾಮಿಗೆ ಕಳೆದ ವರ್ಷಾಂತ್ಯಕ್ಕೇ ಸರಬರಾಜು ಮಾಡಿದ್ದರು. ಈ ಪುಸ್ತಕಗಳ ಖರೀದಿಗೆ ಇಲಾಖೆ ₹ 24 ಕೋಟಿ ಪ್ರಸ್ತಾವನೆ ಕಳಿಸಿದ್ದು, ಬಜೆಟ್‌ನಲ್ಲಿ ಘೋಷಣೆ ಮಾಡಿದ್ದ ₹ 10 ಕೋಟಿಯಲ್ಲಿ ₹ 7.18 ಕೋಟಿ ಬಿಡುಗಡೆಯಾಗಿದೆ. ಇದರಿಂದ ಬಹುತೇಕ ಪುಸ್ತಕಗಳು ಖರೀದಿಯಾಗದೆ ಉಳಿದಿವೆ.

ಪುಸ್ತಕೋದ್ಯಮಕ್ಕೆ ಹಿನ್ನಡೆ: ಕರೀಗೌಡ ಬೀಚನಹಳ್ಳಿ ಅವರ ಅಧ್ಯಕ್ಷತೆಯ ಪುಸ್ತಕ ಆಯ್ಕೆ ಸಮಿತಿಯು ಈಗ 2021ರ ಪುಸ್ತಕ ಆಯ್ಕೆ ಪ್ರಕ್ರಿಯೆ ನಡೆಸುತ್ತಿದೆ. 2020ರ ಪುಸ್ತಕಗಳ ಖರೀದಿಯೇ ಪೂರ್ಣಗೊಳ್ಳದಿದ್ದರಿಂದ 2021ರ ಖರೀದಿಯೂ ವಿಳಂಬ ಆಗಲಿದೆ. 2022 ಹಾಗೂ 2023ರ ಆಯ್ಕೆ ಹಾಗೂ ಖರೀದಿ ಮುಂದಿನ ದಿನಗಳಲ್ಲಿ ನಡೆಯಬೇಕಾಗಿದೆ. ಇದರಿಂದಾಗಿ ರಾಜ್ಯದ ಗ್ರಂಥಾಲಯಗಳಲ್ಲಿ ನಾಲ್ಕು ವರ್ಷಗಳ ಪುಸ್ತಕ ಸಿಗದಂತಾಗಿದೆ.

ರಾಜ್ಯದಲ್ಲಿ ಸುಮಾರು 500 ಪ್ರಕಾಶನ ಸಂಸ್ಥೆಗಳಿವೆ. ಕೆಲವು ಲೇಖಕರು ಕೂಡ ಪ್ರಕಾಶನ ಕಾರ್ಯದಲ್ಲಿ ನಿರತರಾಗಿದ್ದಾರೆ. ಪ್ರತಿ ವರ್ಷ ಸುಮಾರು 8 ಸಾವಿರ ಪುಸ್ತಕಗಳು ಪ್ರಕಟವಾಗುತ್ತಿವೆ. ಬಹುತೇಕ ಪ್ರಕಾಶಕರು ಗ್ರಂಥಾಲಯ ಇಲಾಖೆಯ ಸಗಟು ಖರೀದಿಯನ್ನೇ ಅವಲಂಬಿಸಿದ್ದಾರೆ. ಇದಕ್ಕಾಗಿ ಪ್ರತಿವರ್ಷ ₹ 15 ಕೋಟಿ ವೆಚ್ಚ ಮಾಡಲಾಗುತ್ತಿತ್ತು. ಆದರೆ, ನಿರ್ದಿಷ್ಟ ಬಜೆಟ್ ಘೋಷಿಸದಿರುವುದು, ಪುಸ್ತಕಗಳ ಖರೀದಿಗೆ ಅಗತ್ಯವಿರುವ ಅನುದಾನಕ್ಕೆ ಅನುಮೋದನೆ ದೊರೆಯದಿರುವುದು ಸೇರಿ ವಿವಿಧ ಕಾರಣದಿಂದ ಪುಸ್ತಕೋದ್ಯಮ ಹಿನ್ನಡೆ ಅನುಭವಿಸಿದೆ.

₹ 705 ಕೋಟಿ ಗ್ರಂಥಾಲಯ ಕರ ಬಾಕಿ

ಸಾರ್ವಜನಿಕ ಗ್ರಂಥಾಲಯ ಇಲಾಖೆಯ ವಿವಿಧ ಕಾಯಂ ಸಿಬ್ಬಂದಿ ವೇತನ ಹೊರತುಪಡಿಸಿ, ಗ್ರಂಥಾಲಯ ನಿರ್ವಹಣೆ ಮತ್ತು ಅಭಿವೃದ್ಧಿ ಕಾರ್ಯಗಳು ಗ್ರಂಥಾಲಯ ಕರದಿಂದಲೇ ನಡೆಯಲಿವೆ. ದಿನಪತ್ರಿಕೆಗಳ ಬಿಲ್, ಬಾಡಿಗೆ, ವಿದ್ಯುತ್ ಬಿಲ್, ದೂರವಾಣಿ ಬಿಲ್, ನೀರು ಸರಬರಾಜು, ಲೇಖಕರು–ಪ್ರಕಾಶಕರಿಗೆ ಪಾವತಿಯಾಗಬೇಕಾದ ಬಿಲ್, ಪೀಠೋಪಕರಣ ಖರೀದಿ ಬಿಲ್ ಇತ್ಯಾದಿಯನ್ನೂ ಗ್ರಂಥಾಲಯ ಕರದಿಂದಲೇ ಪಾವತಿಸಬೇಕು. ಆದರೆ, ಕಳೆದ 5 ವರ್ಷಗಳಲ್ಲಿ ಬಿಬಿಎಂಪಿಯ ₹ 638 ಕೋಟಿ ಸೇರಿ ಒಟ್ಟು ₹ 705 ಕೋಟಿ ಗ್ರಂಥಾಲಯ ಕರವನ್ನು ಸ್ಥಳೀಯ ಸಂಸ್ಥೆಗಳು ಇಲಾಖೆಗೆ ಪಾವತಿಸದೆ ಬಾಕಿ ಉಳಿಸಿಕೊಂಡಿವೆ.

2020ರ ಪುಸ್ತಕ ಖರೀದಿಗೆ ಅಗತ್ಯ ಇರುವ ಅನುದಾನಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಹಣ ಬಿಡುಗಡೆಯಾದ ಬಳಿಕ ಆಯ್ಕೆಯಾದ ಎಲ್ಲ ಪುಸ್ತಕಗಳನ್ನು ಖರೀದಿಸಲಾಗುತ್ತದೆ.
ಸತೀಶ್ ಕುಮಾರ್ ಹೊಸಮನಿ, ಸಾರ್ವಜನಿಕ ಗ್ರಂಥಾಲಯ ಇಲಾಖೆ ನಿರ್ದೇಶಕ

ಬಹುತೇಕ ಪ್ರಕಾಶಕರು ಗ್ರಂಥಾಲಯ ಇಲಾಖೆಯ ಪುಸ್ತಕ ಖರೀದಿಯನ್ನೇ ಅವಲಂಬಿಸಿದ್ದಾರೆ. ಆದ್ದರಿಂದ ಆಯ್ಕೆಯಾದ ಪುಸ್ತಕಗಳ ಖರೀದಿಗೆ ಅಗತ್ಯ ಅನುದಾನ ಬಿಡುಗಡೆ ಮಾಡಿ, ಪುಸ್ತಕೋದ್ಯಮಕ್ಕೆ ನೆರವಾಗಬೇಕು.
ಪ್ರಕಾಶ್ ಕಂಬತ್ತಳ್ಳಿ, ಕರ್ನಾಟಕ ಪ್ರಕಾಶಕರ ಸಂಘದ ಅಧ್ಯಕ್ಷ

ಈಗಾಗಲೇ ಪುಸ್ತಕ ಖರೀದಿ ಸಾಕಷ್ಟು ವಿಳಂಬವಾಗಿದೆ. ಇನ್ನಷ್ಟು ವಿಳಂಬ ಮಾಡಿದಲ್ಲಿ ಪ್ರಕಾಶಕರು ಸಂಕಷ್ಟಕ್ಕೆ ಸಿಲುಕಿ, ಬೀದಿಗೆ ಬೀಳುತ್ತಾರೆ.
ಸೃಷ್ಟಿ ನಾಗೇಶ್, ಕರ್ನಾಟಕ ಪ್ರಕಾಶಕರ ಸಂಘದ ಸಂಘಟನಾ ಕಾರ್ಯದರ್ಶಿ

ಸುದ್ದಿ 2 ನಿಮಿಷ

‘ಲಿಂಗತ್ವ ಅಲ್ಪಸಂಖ್ಯಾತರ ನೀತಿ ಅನುಷ್ಠಾನ: ಪ್ರಮಾಣ ಪತ್ರ ಸಲ್ಲಿಸಿ’

ಬೆಂಗಳೂರು: ‘ಲಿಂಗತ್ವ ಅಲ್ಪಸಂಖ್ಯಾತರ ನೀತಿ-2017 ಅನ್ನು ಹೇಗೆ ಜಾರಿಗೆ ತರಲಾಗುತ್ತಿದೆ ಎಂಬ ಬಗ್ಗೆ ಪ್ರಮಾಣ ಪತ್ರ ಸಲ್ಲಿಸಿ’ ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

ನಗರದ ರಾಷ್ಟ್ರೀಯ ಕಾನೂನು ಶಾಲೆಯಲ್ಲಿ (ಎನ್‌ಎಲ್‌ಎಸ್‌ಐಯು) ಕಾನೂನು ಪದವಿ ಪ್ರವೇಶ ನಿರಾಕರಿಸಿದ್ದನ್ನು ಆಕ್ಷೇಪಿಸಿ ಮತ್ತು ರಾಜ್ಯ ಲಿಂಗತ್ವ ಅಲ್ಪಸಂಖ್ಯಾತರ ನೀತಿಯನ್ನು ಜಾರಿಗೊಳಿಸುವಂತೆ ಕೋರಿ ಮುಗಿಲ್ ಅನ್ಬು ವಸಂತ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ರವಿ ವಿ.ಹೊಸಮನಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

‘ಲಿಂಗತ್ವ ಅಲ್ಪಸಂಖ್ಯಾತರಾದ ಅರ್ಜಿದಾರರು, ನಗರದ ರಾಷ್ಟ್ರೀಯ ಕಾನೂನು ಶಾಲೆಯಲ್ಲಿ ಕಾನೂನು ಪದವಿ ಅಧ್ಯಯನದ ಶುಲ್ಕ ಪಾವತಿಸಲಾಗದೇ ತೊಂದರೆ ಅನುಭವಿಸಿರುವುದು ದುರದೃಷ್ಟಕರ’ ಎಂದು ನ್ಯಾಯಪೀಠ ಕಳವಳ ವ್ಯಕ್ತಪಡಿಸಿದೆ.

‘ರಾಜ್ಯ ಸರ್ಕಾರವು ಲಿಂಗತ್ವ ಅಲ್ಪಸಂಖ್ಯಾತರ ನೀತಿಯನ್ನು ಹೇಗೆ ಅನುಷ್ಠಾನಗೊಳಿಸುತ್ತಿದೆ. ಹಣಕಾಸಿನ ನೆರವನ್ನು ಅವರಿಗೆ ಯಾವ ರೀತಿ ಒದಗಿಸಲಾಗುತ್ತಿದೆ, ಒಂದೊಮ್ಮೆ ನೀಡುತ್ತಿದ್ದರೆ ಎಷ್ಟು ನೆರವು ನೀಡಲಾಗುತ್ತಿದೆ ಮತ್ತು ಅದನ್ನು ಪಡೆಯುವುದು ಹೇಗೆ ಎಂಬುದೂ ಸೇರಿದಂತೆ ಅಗತ್ಯ ವಿಚಾರಗಳನ್ನು ಪ್ರಮಾಣ ಪತ್ರದಲ್ಲಿ ಉಲ್ಲೇಖಿಸಬೇಕು’ ಎಂದು ನ್ಯಾಯಪೀಠ ನಿರ್ದೇಶಿಸಿದೆ.

ಪೊಲೀಸರಿಗೆ ಒಂದೇ ಸ್ಥಳದಲ್ಲಿ 2 ವರ್ಷ ಕೆಲಸ ಮಾಡಲು ಅವಕಾಶ

ತುಮಕೂರು: ಪೊಲೀಸರು ಒಂದೇ ಸ್ಥಳದಲ್ಲಿ ಎರಡು ವರ್ಷ ಕೆಲಸ ಮಾಡಲು ಅವಕಾಶ ಮಾಡಿಕೊಡುವ ಬಗ್ಗೆ ಚಿಂತನೆ ನಡೆಸಲಾಗಿದೆ ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದ್ದಾರೆ.

ನಗರದಲ್ಲಿ ಶನಿವಾರ ಸರ್ಕಾರಿ ನೌಕರರು, ಅಧಿಕಾರಿಗಳಿಗೆ ಹಮ್ಮಿಕೊಂಡಿದ್ದ ಆರೋಗ್ಯ ತಪಾಸಣೆ ಶಿಬಿರದಲ್ಲಿ ಮಾತನಾಡಿದ ಅವರು, ಪೊಲೀಸರ ವರ್ಗಾವಣೆಗೆ ಸಂಬಂಧಿಸಿದ ಸೇವಾ ನಿಯಮಾವಳಿ ಸಡಿಲಿಸಲಾಗುವುದು ಎಂದರು. ಪೊಲೀಸರು ಒಂದು ಕಡೆ ಒಂದು ವರ್ಷ ಕೆಲಸ ಮಾಡಿದರೆ ವರ್ಗಾವಣೆಗೆ ಅವಕಾಶವಿದೆ. ಈ ನಿಯಮ ಸಡಿಲಿಸಿ ಕನಿಷ್ಠ ಎರಡು ವರ್ಷ ಸೇವೆ ಸಲ್ಲಿಸಲು ಅವಕಾಶ ಕಲ್ಪಿಸಲಾಗುವುದು.

‘ಆಡಳಿತದಲ್ಲಿ ಚುರುಕು ತರಲು ವರ್ಗಾವಣೆಯೊಂದೇ ಅಸ್ತ್ರವಲ್ಲ. ಅದರಲ್ಲಿ ನನಗೆ ನಂಬಿಕೆ ಇಲ್ಲ. ಒಂದೇ ಸ್ಥಳದಲ್ಲಿ ಕನಿಷ್ಠ ಮೂರು ವರ್ಷ ಕೆಲಸ ಮಾಡಲು ಅವಕಾಶ ನೀಡಿದರೆ ಜನಸಾಮಾನ್ಯರಿಗೆ ಉತ್ತಮ ಸೇವೆ ಸಲ್ಲಿಸಲು ಸಾಧ್ಯವಾಗುತ್ತದೆ. ಅನಿವಾರ್ಯ ಸಂದರ್ಭದಲ್ಲಿ ಮಾತ್ರ ವರ್ಗಾವಣೆ ಮಾಡಬೇಕಾಗುತ್ತದೆ’ ಎಂದರು. ನೌಕರರಿಗೆ ವರ್ಗಾವಣೆ ಹೆಸರಿನಲ್ಲಿ ತೊಂದರೆ ಕೊಡುವುದಿಲ್ಲ. ಆದರೆ, ಅಧಿಕಾರಿಗಳು ಯಾರಿಗೂ ಅನ್ಯಾಯ ಮಾಡದೆ, ಮೇಲು,ಕೀಳು ಭೇದ,ಭಾವ ತೋರದೆ ಕೆಲಸ ಮಾಡಬೇಕು. ಸಾಮಾನ್ಯ ಜನರಿಗೂ ಸ್ಪಂದಿಸಬೇಕು ಎಂದು ಸಲಹೆ ಮಾಡಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ವಿಜಯನಗರ ವಿಭಾಗ,
1ನೇ ಮಹಡಿ, ಶಾಸಕರ ಭವನ, 3ನೇ ಮುಖ್ಯರಸ್ತೆ, ವಿಜಯನಗರ, ಬೆಂಗಳೂರು – 560040.

ಸಂಖ್ಯೆ: ಕಾ.ಪಾ.ಅ(ವಿಜನ)/ಸ.ಅ/ಟಿ.ಎನ್/ಜಿಎಲ್–07/2023–24 ದಿನಾಂಕ: 03–02–2024

ತಿದ್ದುಪಡಿ–1

ವಿಷಯ: ಟೆಂಡರ್ ಪ್ರಕಟಣೆಯಲ್ಲಿ ಕಾಮಾಗರಿಯ ಹೆಸರನ್ನು ತಪ್ಪಾಗಿ ನಮೂದಿಸಿದ್ದು, ತಿದ್ದುಪಡಿ ಮಾಡಿರುವ ಬಗ್ಗೆ.
ಉಲ್ಲೇಖ: ಟೆಂಡರ್ ಪ್ರಕಟಣೆ ಸಂಖ್ಯೆ. ಕಾಅ/ವಿನ/ಸ.ಅ/ಟಿ.ಎನ್/ಜಿಎಲ್–07/2023–24, ದಿನಾಂಕ: 01–02–2024.
ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಟೆಂಡರ್ ಪ್ರಕಟಣೆಯಲ್ಲಿ ಕ್ರಮ ಸಂಖ್ಯೆ. 1 ಮತ್ತು 2 ರ ಕಾಮಗಾರಿಯ ಹೆಸರನ್ನು ತಪ್ಪಾಗಿ ನಮೂದಿಸಲಾಗಿರುತ್ತದೆ. ಆದ್ದರಿಂದ ಸದರಿ ಕಾಮಗಾರಿಗಳ ಹೆಸರನ್ನು ಈ ಕೆಳಕಂಡಂತೆ ತಿದ್ದುಪಡಿ ಮಾಡಲಾಗಿರುತ್ತದೆ. ಉಳಿದಂತೆ ಟೆಂಡರ್ ನಿಯಮಾವಳಿಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಕ್ರ. ಸಂ.	ಟೆಂಡರ್ ಪ್ರಕಟಣೆಯಲ್ಲಿ ನಮೂದಿಸಿರುವ ಕಾಮಗಾರಿಯ ಹೆಸರು	ನಿಜವಾದ ಕಾಮಗಾರಿಯ ಹೆಸರು
1	ವಿಜಯನಗರ ವಿಧಾನಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ. 122, ಕೆ.ಪಿ. ಅಗ್ರಹಾರ, ವಾರ್ಡ್ ಸಂಖ್ಯೆ. 123, ವಿಜಯನಗರ, ವಾರ್ಡ್ ಸಂಖ್ಯೆ. 124, ಹೊಸಹಳ್ಳಿ ಮತ್ತು ವಾರ್ಡ್ ಸಂಖ್ಯೆ. 134, ಬಾಪೂಜಿನಗರ ಇಲ್ಲಿ ರಸ್ತೆಗಳು ಮತ್ತು ಚರಂಡಿಗಳ ಸಮಗ್ರ ಅಭಿವೃದ್ಧಿ ಹಾಗೂ ಸುಧಾರಣೆಗಳು. **(13 ಕಾಮಗಾರಿಗಳು) ಪ್ಯಾಕೇಜ್ – 01**	ವಿಜಯನಗರ ವಿಧಾನಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ. 122, ಕೆ.ಪಿ. ಅಗ್ರಹಾರ ಮತ್ತು ವಾರ್ಡ್ ಸಂಖ್ಯೆ. 123, ವಿಜಯನಗರ ಇಲ್ಲಿನ ರಸ್ತೆಗಳು ಮತ್ತು ಚರಂಡಿಗಳ ಸಮಗ್ರ ಅಭಿವೃದ್ಧಿ ಹಾಗೂ ಸುಧಾರಣೆಗಳು. **ಪ್ಯಾಕೇಜ್ – 01 (6 ಕಾಮಗಾರಿಗಳು)** ಮತ್ತು ವಿಜಯನಗರ ವಿಧಾನಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ. 124, ಹೊಸಹಳ್ಳಿ ಮತ್ತು ವಾರ್ಡ್ ಸಂಖ್ಯೆ. 134, ಬಾಪೂಜಿನಗರ ಇಲ್ಲಿನ ರಸ್ತೆಗಳು ಮತ್ತು ಚರಂಡಿಗಳ ಸಮಗ್ರ ಅಭಿವೃದ್ಧಿ ಹಾಗೂ ಸುಧಾರಣೆಗಳು. **ಪ್ಯಾಕೇಜ್ – 02 (7 ಕಾಮಗಾರಿಗಳು)**
2	ವಿಜಯನಗರ ವಿಧಾನಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ. 132, ಅತ್ತಿಗುಪ್ಪೆ, ವಾರ್ಡ್ ಸಂಖ್ಯೆ. 133, ಹಂಪಿನಗರ, ವಾರ್ಡ್ ಸಂಖ್ಯೆ. 157 ಗಾಳಿ ಆಂಜನೇಯ ಟೆಂಪಲ್ ಮತ್ತು ವಾರ್ಡ್ ಸಂಖ್ಯೆ. 158, ದೀಪಾಂಜಲಿನಗರ ಇಲ್ಲಿ ರಸ್ತೆಗಳು ಮತ್ತು ಚರಂಡಿಗಳ ಸಮಗ್ರ ಅಭಿವೃದ್ಧಿ ಹಾಗೂ ಸುಧಾರಣೆಗಳು ಮತ್ತು ವಾರ್ಡ್ ಸಂಖ್ಯೆ. 133 ಇಲ್ಲಿ ಬಿಬಿಎಂಪಿ ಕಟ್ಟಡದ ನವೀಕರಣ. **(13 ಕಾಮಗಾರಿಗಳು) ಪ್ಯಾಕೇಜ್ – 02**	ವಿಜಯನಗರ ವಿಧಾನಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ. 132, ಅತ್ತಿಗುಪ್ಪೆ ಮತ್ತು ವಾರ್ಡ್ ಸಂಖ್ಯೆ. 133, ಹಂಪಿನಗರ ಇಲ್ಲಿನ ರಸ್ತೆಗಳು ಮತ್ತು ಚರಂಡಿಗಳ ಸಮಗ್ರ ಅಭಿವೃದ್ಧಿ ಹಾಗೂ ಸುಧಾರಣೆಗಳು ಹಾಗೂ ವಾರ್ಡ್ ಸಂಖ್ಯೆ. 133 ಇಲ್ಲಿ ಬಿಬಿಎಂಪಿ ಕಟ್ಟಡದ ನವೀಕರಣ. **ಪ್ಯಾಕೇಜ್ – 03 (7 ಕಾಮಗಾರಿಗಳು)** ಮತ್ತು ವಿಜಯನಗರ ವಿಧಾನಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ. 157, ಗಾಳಿ ಆಂಜನೇಯ ಟೆಂಪಲ್ ಮತ್ತು ವಾರ್ಡ್ ಸಂಖ್ಯೆ. 158, ದೀಪಾಂಜಲಿನಗರ ಇಲ್ಲಿನ ರಸ್ತೆಗಳು ಮತ್ತು ಚರಂಡಿಗಳ ಸಮಗ್ರ ಅಭಿವೃದ್ಧಿ ಹಾಗೂ ಸುಧಾರಣೆಗಳು. **ಪ್ಯಾಕೇಜ್ – 04 (6 ಕಾಮಗಾರಿಗಳು)**

ಸಹಿ/– ಕಾರ್ಯಪಾಲಕ ಅಭಿಯಂತರರು, ವಿಜಯನಗರ ವಿಭಾಗ, ಬಿಬಿಎಂಪಿ.

ಅರ್ಚಕರ ಸಮಾವೇಶ ಮುಂದೂಡಿಕೆ

ಬೆಂಗಳೂರು: ಅಖಿಲ ಕರ್ನಾಟಕ ಹಿಂದೂ ದೇವಾಲಯಗಳ ಅರ್ಚಕರ–ಆಗಮಿಕರ ಮತ್ತು ಉಪಾಧಿವಂತರ ಒಕ್ಕೂಟದ ಸುವರ್ಣ ಮಹೋತ್ಸವದ ಅಂಗವಾಗಿ ಮತ್ತು ಅರ್ಚಕರ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಫೆ.7ಕ್ಕೆ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ಬೃಹತ್ ಸಮಾವೇಶವನ್ನು ಮುಂದೂಡಲಾಗಿದೆ.

ಅನಿವಾರ್ಯ ಕಾರಣಗಳಿಂದ ಮುಂದೂಡಲಾಗಿದೆ. ಮುಂದೆ ನಡೆಯಲಿರುವ ಸಮಾವೇಶದ ದಿನಾಂಕವನ್ನು ಶೀಘ್ರದಲ್ಲಿ ತಿಳಿಸಲಾಗುವುದು ಎಂದು ಅಖಿಲ ಕರ್ನಾಟಕ ಹಿಂದು ದೇವಾಲಯಗಳ ಅರ್ಚಕರ ಆಗಮಿಕರ ಮತ್ತು ಉಪಾಧಿವಂತರ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಕೆ.ಎಸ್. ಎನ್ ದೀಕ್ಷಿತ್ ತಿಳಿಸಿದ್ದಾರೆ.

ರಾಜಭವನದ ಗಾಜಿನ ಮನೆಯಲ್ಲಿ ಶನಿವಾರ ನಡೆದ ಸಮಾರಂಭದಲ್ಲಿ ರಾಜ್ಯ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ಪ್ರಮಾಣವಚನ ಸ್ವೀಕರಿಸಿದ ಪಿ.ಎಸ್. ದಿನೇಶ್ ಕುಮಾರ್ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪುಷ್ಪಗುಚ್ಛ ನೀಡಿ ಶುಭ ಹಾರೈಸಿದರು. ರಾಜ್ಯಪಾಲ ಥಾವರಚಂದ್ ಗೆಹಲೋತ್ (ಮಧ್ಯದಲ್ಲಿರುವವರು) ಪ್ರಮಾಣವಚನ ಬೋಧಿಸಿದರು

‘ಪ್ರತಿಭಟನೆ ನಡೆಸಬೇಕಾದ ಸ್ಥಿತಿ ಬಂದಿದೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬರ ಪರಿಹಾರ ವಿಚಾರದಲ್ಲಿ ಕೇಂದ್ರ ಸರ್ಕಾರ ರಾಜ್ಯದ ಮೇಲೆ ಮಲತಾಯಿ ಧೋರಣೆ ತೋರಿಸುತ್ತಿದೆ. ರಾಜ್ಯದ ಸಚಿವರ ಭೇಟಿಗೂ ಕೇಂದ್ರದ ಸಚಿವರು ಸಮಯ ಕೊಡುತ್ತಿಲ್ಲ. ಈ ಕಾರಣಕ್ಕೆ ದೆಹಲಿಗೆ ತೆರಳಿ ಪ್ರತಿಭಟನೆ ನಡೆಸಲಿದ್ದೇವೆ’ ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಜಿ.ಪರಮೇಶ್ವರ

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, ‘ಬಿಜೆಪಿಯವರು ರಾಜ್ಯ ಸರ್ಕಾರದ ವಿರುದ್ಧ ಧರಣಿ ನಡೆಸುವುದೇ ಹಾಸ್ಯಾಸ್ಪದ. ತಮ್ಮಲ್ಲಿ ಯಾವ ನೈತಿಕತೆ ಉಳಿದಿದೆ ಎಂದು ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿಯವರು ಪ್ರತಿಭಟನೆ ನಡೆಸುತ್ತಾರೆ’ ಎಂದು ಪ್ರಶ್ನಿಸಿದರು.

‘ನ್ಯಾಯಸಮ್ಮತವಾಗಿ ರಾಜ್ಯಕ್ಕೆ ಬರಬೇಕಾದ ಬರ ಪರಿಹಾರ ನಿಧಿ ಬಿಡುಗಡೆ ಮಾಡುವಂತೆ ಬಿಜೆಪಿ ಪ್ರತಿಭಟಿಸಲಿ. ಅದನ್ನು ಬಿಟ್ಟು ಇಲ್ಲಿ ಪ್ರತಿಭಟನೆ ನಡೆಸಿದರೆ ಏನು ಅರ್ಥ? ರಾಜ್ಯ ಸರ್ಕಾರ ತನ್ನ ಹೊಣೆಗಾರಿಕೆಯನ್ನು ಸಮರ್ಪಕವಾಗಿ ನಿಭಾಯಿಸುತ್ತಿದೆ. ಬರ ಪರಿಹಾರ ಬಿಡುಗಡೆ ಮಾಡುವಂತೆ ರಾಜ್ಯದ 27 ಸಂಸದರು ಪ್ರಧಾನಿ, ಗೃಹ ಸಚಿವರಿಗೆ ಏಕೆ ಮನವಿ ಮಾಡುವುದಿಲ್ಲ’ ಎಂದೂ ಕೇಳಿದರು.

‘ಬರದಿಂದ ಕಂಗೆಟ್ಟ ರೈತರ ಬ್ಯಾಂಕ್ ಖಾತೆಗಳಿಗೆ ತಲಾ ₹ 2 ಸಾವಿರದಂತೆ ಈಗಾಗಲೇ ಹಣ ವರ್ಗಾಯಿಸಲಾಗಿದೆ. ಕುಡಿಯುವ ನೀರು ಮತ್ತು ಇತರ ಸೌಲಭ್ಯಗಳನ್ನು ಒದಗಿಸಲು ಎಲ್ಲ ಜಿಲ್ಲಾಧಿಕಾರಿಗಳಿಗೆ ಹಣ ನೀಡಲಾಗಿದೆ. ಆದರೆ, ಬೊಕ್ಕಸದಲ್ಲಿ ಹಣ ಇಲ್ಲ ಎಂದು ಬಿಜೆಪಿ ನಾಯಕರು ಅಪಪ್ರಚಾರ ಮಾಡುತ್ತಿದ್ದಾರೆ’ ಎಂದು ಹರಿಹಾಯ್ದರು.

‘ಕೇಂದ್ರದಿಂದ ರಾಜ್ಯಕ್ಕೆ ಅನುದಾನ: ಶ್ವೇತಪತ್ರ ಹೊರಡಿಸಿ’

ಬೆಂಗಳೂರು: ‘ಮನಮೋಹನ್ ಸಿಂಗ್ ಪ್ರಧಾನಿಯಾಗಿದ್ದ ಅವಧಿಯಲ್ಲಿ ಮತ್ತು ನರೇಂದ್ರ ಮೋದಿ ಅವರ ಅವಧಿಯಲ್ಲಿ ಕೇಂದ್ರದಿಂದ ರಾಜ್ಯಕ್ಕೆ ಒಟ್ಟು ಎಷ್ಟು ಅನುದಾನ ಬಂದಿದೆ ಎಂಬ ಬಗ್ಗೆ ಶ್ವೇತ ಪತ್ರ ಹೊರಡಿಸಿ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಸವಾಲು ಹಾಕಿದರು.

ಆರ್.ಅಶೋಕ

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, ‘ಮನಮೋಹನ್ ಸಿಂಗ್ ಪ್ರಧಾನಿಯಾಗಿದ್ದಾಗ ರಾಜ್ಯಕ್ಕೆ ಎಷ್ಟು ಹಣ ಬಿಡುಗಡೆ ಮಾಡಿದ್ದರು? ಮೋದಿಯವರು ಕಳೆದ ಹತ್ತು ವರ್ಷಗಳಲ್ಲಿ ಎಷ್ಟು ಬಿಡುಗಡೆ ಮಾಡಿದ್ದಾರೆ ಎನ್ನುವುದು ಎಲ್ಲರಿಗೂ ಗೊತ್ತಾಗಲಿ. ಜನರು ತೀರ್ಮಾನ ಮಾಡಲಿ’ ಎಂದರು.

‘ಕರ್ನಾಟಕದಿಂದ ಕೇಂದ್ರಕ್ಕೆ ಹೆಚ್ಚು ತೆರಿಗೆ ಕಟ್ಟುತ್ತಿದ್ದೇವೆ ನಿಜ. ಮಹಾರಾಷ್ಟ್ರದಿಂದ ಅತಿ ಹೆಚ್ಚು ತೆರಿಗೆ ಹೋಗುತ್ತಿದೆ. ಆ ರಾಜ್ಯಕ್ಕೆ ಕೇಂದ್ರ ಎಷ್ಟು ಅನುದಾನ ಕೊಟ್ಟಿದೆ? ದೆಹಲಿಗೆ ಎಷ್ಟು ಕೊಟ್ಟಿದೆ? ಎಂಬುದು ಎಲ್ಲರಿಗೂ ತಿಳಿಯಲಿ’ ಎಂದು ತಾಕೀತು ಮಾಡಿದರು. ತಾರತಮ್ಯ ವಿಚಾರವಾಗಿ ಪ್ರತಿಕ್ರಿಯಿಸಿದ ಅಶೋಕ, ‘ರಾಜ್ಯಕ್ಕೆ ಬೆಂಗಳೂರಿನಿಂದ ಶೇ 65 ತೆರಿಗೆ ಬರುತ್ತದೆ. ಆದರೆ, ಬೆಂಗಳೂರಿಗೆ ಸರ್ಕಾರದಿಂದ ಶೇ 5ರಷ್ಟು ಅನುದಾನವೂ ಸಿಗುತ್ತಿಲ್ಲ. ಯಾವ ಜಿಲ್ಲೆಯಿಂದ ಎಷ್ಟು ಬರುತ್ತದೆಯೊ, ಅಷ್ಟು ಅನುದಾನ ಕೊಡಲು ಸಾಧ್ಯವೇ? ಎಲ್ಲಿ ಜನ ಕಷ್ಟದಲ್ಲಿದ್ದಾರೆ, ಎಲ್ಲಿ ಅಭಿವೃದ್ಧಿ ಆಗಿಲ್ಲವೋ ಅಲ್ಲಿಗೆ ನೆರವಾಗಬೇಕು ಎಂಬುದು ಸಂವಿಧಾನದ ಆಶಯ. ಯಾವ ಮಕ್ಕಳು ಎಷ್ಟು ಸಂಪಾದನೆ ಮಾಡುತ್ತಾರೆ ಎಂಬುದರ ಮೇಲೆ ತಾಯಿ ಊಟ ನೀಡಲ್ಲ. ಮುಖ್ಯಮಂತ್ರಿಗೆ ಈ ಸಾಮಾನ್ಯ ಜ್ಞಾನ ಇರಬೇಕು’ ಎಂದು ಕಿಡಿಕಾರಿದರು.

ಪ್ರಲ್ಹಾದ ಜೋಶಿ ವ್ಯಂಗ್ಯ

ಹುಬ್ಬಳ್ಳಿ: ‘ಕುಣಿಯಲು ಬಾರದವರು ನೆಲ ಡೊಂಕು ಅಂದರಂತೆ ಎಂಬ ಗಾದೆ ರೀತಿ ಆರ್ಥಿಕ ನಿರ್ವಹಣೆ ಮಾಡಲಾಗದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೇಂದ್ರ ಸರ್ಕಾರದ ವಿರುದ್ಧ ಧರಣಿ ಮಾಡಲು ಹೊರಟಿದ್ದಾರೆ’ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ವ್ಯಂಗ್ಯವಾಡಿದರು.

‘ಪೂರ್ವತಯಾರಿ ಇಲ್ಲದೇ ಗ್ಯಾರಂಟಿ ಯೋಜನೆಗಳನ್ನು ಘೋಷಿಸಿದರು. ಅದಕ್ಕೆ ಹಣ ಹೊಂದಿಸಲು ಪರದಾಡುತ್ತಿದ್ದಾರೆ. ಆರ್ಥಿಕ ಶಿಸ್ತು ಪಾಲಿಸದೇ ಈಗ ಕೇಂದ್ರ ಸರ್ಕಾರದ ವಿರುದ್ಧ ಪ್ರತಿಭಟಿಸಲು ಸಿದ್ಧತೆ ನಡೆಸಿದ್ದಾರೆ. ಇದರಲ್ಲಿ ರಾಜ್ಯದ ಹಿತವೇನೂ ಇಲ್ಲ’ ಎಂದು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

‘ದಕ್ಷಿಣ ಭಾರತಕ್ಕೆ ತಾರತಮ್ಯ ಏಕೆ?’

ಗದಗ: ‘ಕೇಂದ್ರ ಸರ್ಕಾರ ಬಜೆಟ್‌ನಲ್ಲಿ ದಕ್ಷಿಣ ಭಾರತದ ಐದು ರಾಜ್ಯಗಳಿಗೆ ಕೇವಲ ₹1.8 ಲಕ್ಷ ಕೋಟಿ ನೀಡಿದೆ. ಆದರೆ, ಉತ್ತರ ಪ್ರದೇಶ ಒಂದೇ ರಾಜ್ಯಕ್ಕೆ ₹2 ಲಕ್ಷ ಕೋಟಿ ನೀಡಿದೆ. ಈ ತಾರತಮ್ಯ ಏಕೆ’ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಪ್ರಶ್ನಿಸಿದರು.



ರಾಮಲಿಂಗಾ ರೆಡ್ಡಿ

ಪ್ರತ್ಯೇಕ ರಾಷ್ಟ್ರದ ಬೇಡಿಕೆ ಇಟ್ಟ ಸಂಸದ ಡಿ.ಕೆ.ಸುರೇಶ್ ಹೇಳಿಕೆಗೆ ಶನಿವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ‘ದಕ್ಷಿಣ ಭಾಗದ ಐದು ರಾಜ್ಯಗಳಿಗೆ ಬಜೆಟ್‌ನಲ್ಲಿ ಅನುದಾನ ತಾರತಮ್ಯ ಮಾಡಿದ್ದರಿಂದ ಅವರಿಗೆ ನೋವಾಗಿದೆ’ ಎಂದರು.

‘ರಾಜ್ಯದಲ್ಲಿ ಬರ ಆವರಿಸಿದೆ. ಆದರೂ ಕೇಂದ್ರದಿಂದ ಬಿಡಿಗಾಸು ಬಂದಿಲ್ಲ. ಕೇಂದ್ರ ಸರ್ಕಾರದ ಮಲತಾಯಿ ಧೋರಣೆಯಿಂದ ನೊಂದು ಡಿ.ಕೆ.ಸುರೇಶ್ ಆ ರೀತಿ ಹೇಳಿದ್ದಾರೆ’ ಎಂದರು.

‘ರಾಜ್ಯದಿಂದ ಕೇಂದ್ರ ಸರ್ಕಾರಕ್ಕೆ ₹4 ಲಕ್ಷ ಕೋಟಿ ಜಿಎಸ್‌ಟಿ ಹೋಗುತ್ತದೆ. ಆದರೆ, ಬಜೆಟ್‌ನಲ್ಲಿ ಕೇವಲ ₹50 ಸಾವಿರ ಕೋಟಿ ರಾಜ್ಯಕ್ಕೆ ಮೀಸಲಿಟ್ಟಿದ್ದಾರೆ. ದೇಶ ಅಖಂಡವಾಗಿಯೇ ಇರಬೇಕು. ಆದರೆ, ನಮಗೆ ಕೊಡಬೇಕಾಗಿದ್ದು ಕೊಡಲೇಬೇಕು’ ಎಂದು ಅವರು ಆಗ್ರಹಿಸಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರವರ ಕಛೇರಿ, ಯಲಹಂಕ ವಿಭಾಗ, ಬೆಂಗಳೂರು–560 064.

ಸಂಖ್ಯೆ:ಬೃಬೆಂಮಪಾ/ಕಾಪಾಅ/ಯಲಹಂಕ ವಿಭಾಗ/ಇ–ಪ್ರೊ/10/2023–24 ದಿನಾಂಕ: 03–02–2024

ಅಲ್ಪಾವಧಿ ಟೆಂಡರ್‌ಗೆ ಆಹ್ವಾನ (ಐಎಫ್‌ಟಿ)
ದ್ವಿ ಲಕೋಟೆ ಪದ್ಧತಿ (ಕೆಡಬ್ಲ್ಯೂ–1 ರಿಂದ 4) (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಯಲಹಂಕ ವಿಭಾಗ ಬೃಬೆಂಮಪಾ ಬೆಂಗಳೂರು ರವರು ಈ ಕೆಳಕಂಡ ನಿರ್ಮಾಣ ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕೆಲಸದ ಹೆಸರು / ವರ್ಗ
1)	ವಾರ್ಡ್ ನಂ.01 ಮತ್ತು ವಾರ್ಡ್ ನಂ.03ರ ಯಲಹಂಕ ವಿಭಾಗದ 110 ಗ್ರಾಮಗಳಿಗೆ ಕೊಳವೆ ಬಾವಿಗಳನ್ನು ಕೊರೆಯುವುದು ಪಂಪ್, ಮೋಟಾರ್ ಮತ್ತು ವಿದ್ಯುದ್ದೀಕರಣ ಒದಗಿಸುವ ಕಾಮಗಾರಿಗಳು. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): ರೂ.80.00. ಇಎಂಡಿ ಮೊತ್ತ: ರೂ.160000/–. (ಇತರೆ)
2)	ವಾರ್ಡ್ ನಂ.03ರ ಯಲಹಂಕ ಸ್ಯಾಟಲೈಟ್ ಟೌನ್ ಉಪ ವಿಭಾಗದ ಅತ್ತೂರಿನ ಚಿಕ್ಕಬೆಟ್ಟಹಳ್ಳಿ, ದೊಡ್ಡಬೆಟ್ಟಹಳ್ಳಿ ಮತ್ತು ಅಂತಾಪುರ ಗ್ರಾಮಗಳ ಪ್ರದೇಶಗಳಿಗೆ ಕೊಳವೆ ಬಾವಿಗಳನ್ನು ಕೊರೆಯುವುದು ಪಂಪ್‌ಸೆಟ್ ಅಳವಡಿಸುವುದು, ಮೋಟಾರ್ ಮತ್ತು ವಿದ್ಯುದ್ದೀಕರಣ ಒದಗಿಸುವ ಕಾಮಗಾರಿಗಳು. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): ರೂ.80.00. ಇಎಂಡಿ ಮೊತ್ತ: ರೂ.160000/–. (ಇತರೆ)
3)	ವಾರ್ಡ್ ನಂ.01ರ ಯಲಹಂಕ ಉಪ ವಿಭಾಗದ ಕೆಂಪೇಗೌಡ ವಾರ್ಡ್‌ನಲ್ಲಿರುವ ನಾಗೇನಹಳ್ಳಿ, ಹಾರೋಹಳ್ಳಿ, ಕೆಂಚೇನಹಳ್ಳಿ ಗ್ರಾಮಗಳ ಪ್ರದೇಶಗಳಿಗೆ ಕೊಳವೆ ಬಾವಿಗಳನ್ನು ಕೊರೆಯುವುದು ಪಂಪ್‌ಸೆಟ್ ಅಳವಡಿಸುವುದು, ಮೋಟಾರ್ ಮತ್ತು ವಿದ್ಯುದ್ದೀಕರಣ ಒದಗಿಸುವ ಕಾಮಗಾರಿಗಳು. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): ರೂ.70.00. ಇಎಂಡಿ ಮೊತ್ತ: ರೂ.140000 – (ಇತರೆ)
4)	ವಾರ್ಡ್ ನಂ.03ರ ಅತ್ತೂರಿನಲ್ಲಿ ಹಾಲಿ ಇರುವ ಕೊಳವೆ ಬಾವಿಗಳ ದುರಸ್ತಿ ಮತ್ತು ನಿರ್ವಹಣೆ. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): ರೂ.25.00. ಇಎಂಡಿ ಮೊತ್ತ: ರೂ.50000/–. (ಇತರೆ)
5)	ವಾರ್ಡ್ ನಂ.01ರ ಕೆಂಪೇಗೌಡ ಹಾಲಿ ಇರುವ ಕೊಳವೆ ಬಾವಿಗಳ ದುರಸ್ತಿ ಮತ್ತು ನಿರ್ವಹಣೆ. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): ರೂ.20.00. ಇಎಂಡಿ ಮೊತ್ತ: ರೂ.50000/–. (ಇತರೆ)
6)	ವಾರ್ಡ್ ನಂ.04ರ ಯಲಹಂಕ ಉಪ ವಿಭಾಗದಲ್ಲಿ ನ್ಯಾಯಾಂಗ ಬಡಾವಣೆಯ ರಸ್ತೆಗಳನ್ನು ಮರು ನಿರ್ಮಾಣ ಮಾಡುವುದು. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): ರೂ.100.00. ಇಎಂಡಿ ಮೊತ್ತ: ರೂ.200000/–. (ಇತರೆ)
7)	ವಾರ್ಡ್ ನಂ.04ರ ಯಲಹಂಕ ಉಪ ವಿಭಾಗದಲ್ಲಿ ಎ ಸೆಕ್ಟರ್ ಮತ್ತು ಬಿ ಸೆಕ್ಟರ್‌ಗಳ ರಸ್ತೆಗಳನ್ನು ಮರು ನಿರ್ಮಾಣ ಮಾಡುವುದು. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): ರೂ.100.00. ಇಎಂಡಿ ಮೊತ್ತ: ರೂ.200000/–. (ಇತರೆ)
8)	ವಾರ್ಡ್ ನಂ.01ರ ಯಲಹಂಕ ಉಪ ವಿಭಾಗದ ಮಾರುತಿ ನಗರದ ರಸ್ತೆಗಳು ಮತ್ತು ಒಳಚರಂಡಿಗಳ ಸುಧಾರಣಾ ಕಾಮಗಾರಿಗಳು. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): ರೂ.100.00. ಇಎಂಡಿ ಮೊತ್ತ: ರೂ.100000/–. (ಪರಿಶಿಷ್ಟ ಜಾತಿ).
9)	ವಾರ್ಡ್ ನಂ.01ರ ಯಲಹಂಕ ಉಪ ವಿಭಾಗದ ಯಲಹಂಕ ಓಲ್ಡ್ ಟೌನ್ ಮತ್ತು ಸುರಭಿ ಬಡಾವಣೆಯ ರಸ್ತೆಗಳು ಮತ್ತು ಒಳಚರಂಡಿಗಳ ಸುಧಾರಣಾ ಕಾಮಗಾರಿಗಳು. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): ರೂ.100.00. ಇಎಂಡಿ ಮೊತ್ತ: ರೂ.100000/–. (ಪರಿಶಿಷ್ಟ ಜಾತಿ).
10)	ವಾರ್ಡ್ ನಂ.02ರ ಚೌಡೇಶ್ವರಿ ಬಡಾವಣೆ, ಕೊಂಡಪ್ಪ ಬಡಾವಣೆಯ ರಸ್ತೆಗಳು ಮತ್ತು ಒಳಚರಂಡಿಗಳ ಸುಧಾರಣಾ ಕಾಮಗಾರಿಗಳು. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): ರೂ.100.00. ಇಎಂಡಿ ಮೊತ್ತ: ರೂ.100000/–. (ಪರಿಶಿಷ್ಟ ಜಾತಿ).
11)	ವಾರ್ಡ್ ನಂ.02ರ ಕಾಮಾಕ್ಷಮ್ಮ ಬಡಾವಣೆ ಹಾಗೂ ವಿನಾಯಕ ಬಡಾವಣೆಯ ರಸ್ತೆಗಳು ಮತ್ತು ಒಳಚರಂಡಿಗಳ ಸುಧಾರಣಾ ಕಾಮಗಾರಿಗಳು. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): ರೂ.100.00. ಇಎಂಡಿ ಮೊತ್ತ: ರೂ.100000/–. (ಪರಿಶಿಷ್ಟ ಪಂಗಡ).
12)	ವಾರ್ಡ್ ನಂ.01ರ ಯಲಹಂಕ ಉಪ ವಿಭಾಗದ ಜನಗಣತಿ ಬ್ಲಾಕ್ ನಂ.96ರ ಕೆಂಚೇನಹಳ್ಳಿ ಸರ್ಕಾರಿ ಶಾಲೆಗೆ ಹೆಚ್ಚುವರಿ ತರಗತಿ ಕೊಠಡಿಗಳ ನಿರ್ಮಾಣ ಕಾಮಗಾರಿಗಳು. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): ರೂ.12.68. ಇಎಂಡಿ ಮೊತ್ತ: ರೂ.31700/–. (ಇತರೆ).
13)	ವಾರ್ಡ್ ನಂ.02ರ ಯಲಹಂಕ ಉಪ ವಿಭಾಗದ ಚೌಡೇಶ್ವರಿ ಜನಗಣತಿ ಬ್ಲಾಕ್ ನಂ.89/1, ನಂ.89/2ರ ಜೆಪಿ ಎನ್ ಕಾಲೋನಿಯಲ್ಲಿ ಆರ್‌ಓ ಪ್ಲಾಂಟ್‌ನ ನಿರ್ಮಾಣ ಮತ್ತು ಇತರ ಅಭಿವೃದ್ಧಿ ಕಾಮಗಾರಿಗಳು. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): ರೂ.25.36. ಇಎಂಡಿ ಮೊತ್ತ: ರೂ.50720/–. (ಇತರೆ).
14)	ವಾರ್ಡ್ ನಂ.02ರ ಯಲಹಂಕ ಉಪ ವಿಭಾಗದ ಚೌಡೇಶ್ವರಿ ವಾರ್ಡ್‌ನ ಜನಗಣತಿ ಬ್ಲಾಕ್ ನಂ.21ರ ಸುಗಪ್ಪ ಬಡಾವಣೆಯ ರಸ್ತೆಗಳು ಮತ್ತು ಒಳಚರಂಡಿಗಳ ಸುಧಾರಣಾ ಕಾಮಗಾರಿಗಳು. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): ರೂ.12.68. ಇಎಂಡಿ ಮೊತ್ತ: ರೂ.15850/–. (ಪರಿಶಿಷ್ಟ ಜಾತಿ)
15)	ವಾರ್ಡ್ ನಂ.04ರ ಯಲಹಂಕ ಹೊಸ ನಗರದ ಜನಗಣತಿ ಬ್ಲಾಕ್ ನಂ.130/1, 130/2ರ ಮತ್ತು 131/2ರ ಎಲ್‌ಬಿಎಸ್ ನಗರದಲ್ಲಿ ಬಿಡಬ್ಲ್ಯೂಎಸ್‌ಎಸ್‌ಬಿನ ರಸ್ತೆ ಕತ್ತರಿಸುವ ಭಾಗಗಳ ಪುನರ್‌ಸ್ಥಾಪನೆಗೊಳಿಸುವುದು. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): ರೂ.38.04. ಇಎಂಡಿ ಮೊತ್ತ: ರೂ.38040/–. (ಪರಿಶಿಷ್ಟ ಪಂಗಡ)
16)	ವಾರ್ಡ್ ನಂ.04ರ ಯಲಹಂಕ ಹೊಸ ನಗರದ ಜನಗಣತಿ ಬ್ಲಾಕ್ ನಂ.128 ಮತ್ತು 132ರ ಅಂಬೇಡ್ಕರ್ ನಗರದ ಸಮುದಾಯ ಭವನಕ್ಕೆ ಕುರ್ಚಿಗಳು ಮತ್ತು ಊಟದ ಟೇಬಲ್‌ಗಳು ಹಾಗೂ ಇತರ ಅವಶ್ಯಕ ಪಿಠೋಪಕರಗಳ ಸರಬರಾಜು ಮತ್ತು ಒದಗಿಸುವುದು.ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): ರೂ.12.68. ಇಎಂಡಿ ಮೊತ್ತ: ರೂ.31700/–. (ಇತರೆ).
17)	ವಾರ್ಡ್ ನಂ.03ರ ಅಟ್ಟೂರಿನ ಎಸ್ಪಾರ್ಟ್ಸ್ ಬಡಾವಣೆಯ 2ನೇ ಎ ಅಡ್ಡರಸ್ತೆಯಲ್ಲಿ ಆರ್‌ಸಿಸಿ ಡ್ರೈನ್‌ನ ನಿರ್ಮಾಣ ಕಾಮಗಾರಿ. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): ರೂ.100.00. ಇಎಂಡಿ ಮೊತ್ತ: ರೂ.200000/–. (ಇತರೆ).
18)	ವಾರ್ಡ್ ನಂ.02ರ ಚೌಡೇಶ್ವರಿ ವಾರ್ಡ್‌ನ 407, 707 ಎಸ್‌ಎಫ್‌ಎಸ್‌ನ ಉಳಿದ ಉದ್ಯಾನವನಗಳ ಅಭಿವೃದ್ಧಿ ಕಾಮಗಾರಿಗಳು. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): ರೂ.100.00. ಇಎಂಡಿ ಮೊತ್ತ: ರೂ.200000/–. (ಇತರೆ).
19)	ವಾರ್ಡ್ ನಂ.03ರ ಯಲಹಂಕ ಉಪ ನಗರ ಉಪ ವಿಭಾಗದ ಸೋಮೇಶ್ವರ ವಾರ್ಡ್‌ನ ವಿವಿಧ ಉದ್ಯಾನವನಗಳಲ್ಲಿ ಅಳವಡಿಸಿರುವ ಹೊರಾಂಗಣ ವ್ಯಾಯಾಮ ಉಪಕರಣಗಳ ದುರಸ್ತಿ ಮತ್ತು ನಿರ್ವಹಣಾ ಕಾಮಗಾರಿಗಳು. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): ರೂ.10.00. ಇಎಂಡಿ ಮೊತ್ತ: ರೂ.25000/–. (ಇತರೆ). 2ನೇ ಕರೆ.

ಟೆಂಡರ್‌ನ ಕಾರ್ಯಸೂಚಿ: 1. ಟೆಂಡರ್‌ಗಳನ್ನು ಆನ್‌ಲೈನ್ ಮೂಲಕ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ: 16–02–2024 ರಂದು ಸಂಜೆ 4:00 ಗಂಟೆಗೆ ಅಥವಾ ಮುಂಚಿತವಾಗಿ. 2. ಪೂರ್ವ ಬಿಡ್ ಸಭೆಯನ್ನು ದಿನಾಂಕ 07.02.2024 ರಂದು ಸಂಜೆ 4:00 ಗಂಟೆಗೆ. 3. ಬಿಡ್‌ಗಳನ್ನು ತೆರೆಯುವ ದಿನಾಂಕ: 17–02–2024 ರ ಸಂಜೆ 4:00 ಗಂಟೆಯ ನಂತರ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಅಥವಾ https://kppp.karnataka.gov.in ಇಲ್ಲಿಗೆ ಲಾಗಿನ್‌ಮಾಡಿ ಪಡೆಯಬಹುದು.
ಸಹಿ/–, ಕಾರ್ಯಪಾಲಕ ಅಭಿಯಂತರರು, ಯಲಹಂಕ ವಿಭಾಗ, ಬೃಬೆಂಮಪಾ.

ಪರೀಕ್ಷಾ ವೆಚ್ಚ: ಸುತ್ತೋಲೆ ವಾಪಸ್‌ಗೆ ಎಚ್‌ಡಿಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಪೂರ್ವಸಿದ್ಧತಾ ಪರೀಕ್ಷಾ ವೆಚ್ಚದ ಬಾಬ್ತು ಪ್ರತಿ ವಿದ್ಯಾರ್ಥಿಯಿಂದ ₹ 50 ಶುಲ್ಕ ಸಂಗ್ರಹಕ್ಕೆ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ ಹೊರಡಿಸಿರುವ ಸುತ್ತೋಲೆಯನ್ನು ವಾಪಸ್ ಪಡೆಯುವಂತೆ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಆಗ್ರಹಿಸಿದ್ದಾರೆ.

ಸುತ್ತೋಲೆಯನ್ನು ತಮ್ಮ ‘ಎಕ್ಸ್’ ಖಾತೆಯಲ್ಲಿ ಶನಿವಾರ ಹಂಚಿಕೊಂಡಿರುವ ಅವರು, ‘ರಾಜ್ಯದ ಜನರಿಗೆ ಐದು ಗ್ಯಾರಂಟಿ ಕೊಟ್ಟಿರುವುದಾಗಿ ಬಡಾಯಿ ಕೊಚ್ಚಿಕೊಳ್ಳುತ್ತಿರುವ ಕಾಂಗ್ರೆಸ್ ಸರ್ಕಾರ, ಶಾಲಾ ಮಕ್ಕಳ ಕಿಸೆಗೂ ಕೈ ಹಾಕಿದೆ’ ಎಂದು ವಾಗ್ದಾಳಿ ನಡೆಸಿದ್ದಾರೆ.

ಎಸ್‌ಎಸ್‌ಎಲ್‌ಸಿ ಪೂರ್ವ ಸಿದ್ಧತಾ ಪರೀಕ್ಷಾ ವೆಚ್ಚವನ್ನೂ ಮಕ್ಕಳಿಂದಲೇ ವಸೂಲಿ ಮಾಡಲು ನಾಚಿಕೆಗೆಟ್ಟ ಸರ್ಕಾರ ಹೊರಟಿದೆ. ಪ್ರಶ್ನೆಪತ್ರಿಕೆ ತಯಾರಿ, ಮುದ್ರಣ, ಸಾಗಣೆ ವೆಚ್ಚವನ್ನು ವಿದ್ಯಾರ್ಥಿಗಳ ಮೇಲೆ ಹೇರಲು ಮಂಡಳಿ ಅಧ್ಯಕ್ಷರು ಆದೇಶಿಸಿದ್ದಾರೆ. ಇದು ಈ ಸರ್ಕಾರ ದಿವಾಳಿ ಆಗಿರುವುದಕ್ಕೆ ಸಾಕ್ಷಿ ಎಂದು ಟೀಕಿಸಿದ್ದಾರೆ.

ಗ್ಯಾರಂಟಿ ಯೋಜನೆ ಕೊಟ್ಟಿರುವುದಾಗಿ ಬೀಗುತ್ತಿರುವ ಸರ್ಕಾರಕ್ಕೆ ಮಕ್ಕಳ ಪರೀಕ್ಷೆಗಾಗಿ ತಲಾ ₹ 50 ವೆಚ್ಚ ಮಾಡಲು ಶಕ್ತಿ ಇಲ್ಲವೇ? ಬರದಿಂದ ಸಂಕಷ್ಟದಲ್ಲಿರುವ ಜನರಿಗೆ ಪರೀಕ್ಷಾ ವೆಚ್ಚದ ಹೊರೆ ಹೇರಬಾರದು. ತಕ್ಷಣ ಸುತ್ತೋಲೆ ಹಿಂಪಡೆಯಬೇಕು ಎಂದು ಆಗ್ರಹಿಸಿದ್ದಾರೆ.

‘2023ರಲ್ಲೇ ಹೊರಡಿಸಿದ್ದ ಆದೇಶ’

‘ಎಸ್‌ಎಸ್‌ಎಲ್‌ಸಿ ಪೂರ್ವ ಸಿದ್ಧತಾ ಪರೀಕ್ಷೆಯನ್ನು ನಾಲ್ಕು ವರ್ಷಗಳಿಂದ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಮೂಲಕ ನಡೆಸಲಾಗುತ್ತಿದೆ. ಪೂರ್ವ ಸಿದ್ಧತಾ ಪರೀಕ್ಷೆಗೆ ವಿದ್ಯಾರ್ಥಿಗಳಿಂದ ತಲಾ ₹ 50 ಶುಲ್ಕ ಸಂಗ್ರಹಿಸುವ ಆದೇಶವನ್ನು 2023ರ ಫೆಬ್ರುವರಿಯಲ್ಲೇ ಹೊರಡಿಸಲಾಗಿತ್ತು’ ಎಂದು ಮಂಡಳಿ ಅಧ್ಯಕ್ಷೆ ಎನ್. ಮಂಜುಶ್ರೀ ತಿಳಿಸಿದ್ದಾರೆ.

ಈ ಕುರಿತು ಸ್ಪಷ್ಟೀಕರಣ ನೀಡಿರುವ ಅವರು, ‘ಶುಲ್ಕ ಸಂಗ್ರಹಿಸುವ ತೀರ್ಮಾನದ ಬಗ್ಗೆ ಕೆಲವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. 2023ರ ಆದೇಶದಂತೆ ಈ ವರ್ಷವೂ ಶುಲ್ಕ ಸಂಗ್ರಹಿಸಲಾಗುತ್ತಿದೆ’ ಎಂದು ಹೇಳಿದ್ದಾರೆ.

ಆದೇಶ ಹೊರಡಿಸಿದ ಅವಧಿಯಲ್ಲಿ ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರವೇ ಅಧಿಕಾರದಲ್ಲಿತ್ತು.

ಅರಣ್ಯ ಒತ್ತುವರಿ: ರಾಜ್ಯಕ್ಕೆ ಚಾಟಿ

ಒಂದನೇ ಪುಟದಿಂದ...

‘ಸರ್ವೆ ಕಾರ್ಯ ಕೈಗೊಂಡ ಬಳಿಕ ನಿರ್ದಾಕ್ಷಿಣ್ಯವಾಗಿ ಒತ್ತುವರಿ ತೆರವುಗೊಳಿಸಬೇಕು. ಅತಿಕ್ರಮಣದಿಂದ ಅರಣ್ಯಕ್ಕೆ ಹಾನಿಯಾಗಿದ್ದರೆ ಯಾವುದೇ ವಿಳಂಬವಿಲ್ಲದೆ ಪರಿಹಾರಾತ್ಮಕ ಕ್ರಮಗಳನ್ನು ಕೈಗೊಳ್ಳಬೇಕು. ಜತೆಗೆ, ಕೈಗೊಂಡ ಕ್ರಮಗಳ ವರದಿಯನ್ನು ಪ್ರಾಧಿಕಾರಕ್ಕೆ ಸಲ್ಲಿಸಬೇಕು’ ಎಂದು ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅವರಿಗೆ ಪೀಠ ಆದೇಶ ನೀಡಿದೆ. ಈ ಸಂಬಂಧ ಅರಣ್ಯ ಇಲಾಖೆಯು ಒಂದು ತಿಂಗಳಲ್ಲಿ ವರದಿ ಸಿದ್ಧಪಡಿಸಬೇಕು. ವರದಿ ಸಲ್ಲಿಸಿದ 2 ತಿಂಗಳಲ್ಲಿ ಪರಿಹಾರಾತ್ಮಕ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಪೀಠ ಸೂಚಿಸಿದೆ. ಹೆಚ್ಚಿನ ವಿಚಾರಣೆಗಾಗಿ ಪ್ರಕರಣವನ್ನು ದಕ್ಷಿಣ ವಲಯ ಪೀಠಕ್ಕೆ ವರ್ಗಾಯಿಸಿದೆ.

ಒತ್ತುವರಿ– ಅರಣ್ಯ ಸಚಿವರಿಗೆ ದೂರು: ವರ್ಷದಿಂದ ವರ್ಷಕ್ಕೆ ಅರಣ್ಯ ಒತ್ತುವರಿ ಪ್ರಕರಣಗಳು ಹೆಚ್ಚುತ್ತಿದ್ದರೂ ಅಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಆರೋಪಿಸಿ ಬೆಂಗಳೂರಿನ ನಿವಾಸಿ ಅವಿನಾಶ್ ಎಂಬವರು ಕೇಂದ್ರ ಅರಣ್ಯ ಸಚಿವಾಲಯ ಹಾಗೂ ಕರ್ನಾಟಕದ ಅರಣ್ಯ ಸಚಿವ ಈಶ್ವರ ಖಂಡ್ರೆ ಅವರಿಗೆ ದೂರು ಸಲ್ಲಿಸಿದ್ದಾರೆ.

‘ಅರಣ್ಯ ಇಲಾಖೆಯ 2022–23ರ ವಾರ್ಷಿಕ ವರದಿ ಪ್ರಕಾರ, ರಾಜ್ಯದಲ್ಲಿ ವರ್ಷದಲ್ಲಿ 992 ಒತ್ತುವರಿ ಪ್ರಕರಣಗಳು ಪತ್ತೆಯಾಗಿವೆ. ಬೆಳಗಾವಿ, ಬೆಂಗಳೂರು, ಹಾಸನ, ಕೆನರಾ, ಶಿವಮೊಗ್ಗ, ಕಲಬುರ್ಗಿ ಹಾಗೂ ಧಾರವಾಡ ಅರಣ್ಯ ವೃತ್ತಗಳು ಹೆಚ್ಚಿನ ಪ್ರಕರಣಗಳು ಬೆಳಕಿಗೆ ಬಂದಿವೆ. ಹೊಸದಾಗಿ ಅರಣ್ಯ ಒತ್ತುವರಿ ಪ್ರಕರಣಗಳನ್ನು ತಡೆಯುವ ಬಗ್ಗೆ ಹಾಗೂ ಈ ಕುರಿತು ಕರ್ತವ್ಯ ನಿರ್ವಹಣೆಯಲ್ಲಿ ವಿಫಲರಾಗುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರು 2018ರಲ್ಲೇ ಸುತ್ತೋಲೆ ಹೊರಡಿಸಿದ್ದಾರೆ. ಆದರೆ, ಆ ಬಳಿಕ ಒತ್ತುವರಿ ಪ್ರಕರಣಗಳು ಗಣನೀಯವಾಗಿ ಹೆಚ್ಚಿವೆ. ತಪ್ಪಿತಸ್ಥ ಅಧಿಕಾರಿಗಳ ವಿರುದ್ಧವೂ ಕ್ರಮ ಆಗಿಲ್ಲ’ ಎಂದು ಅವರು ದೂರಿನಲ್ಲಿ ತಿಳಿಸಿದ್ದಾರೆ.

ಅಸ್ಸಾಂ ಬಿಟ್ಟರೆ ರಾಜ್ಯದಲ್ಲೇ ಹೆಚ್ಚು ಒತ್ತುವರಿ

ಕರ್ನಾಟಕದಲ್ಲಿ 76,196 ಹೆಕ್ಟೇರ್ ಅರಣ್ಯ ಒತ್ತುವರಿಯಾಗಿದೆ ಎಂದು ಕೇಂದ್ರ ಅರಣ್ಯ, ಪರಿಸರ ಹಾಗೂ ತಾಪಮಾನ ಬದಲಾವಣೆ ಸಚಿವಾಲಯ ತಿಳಿಸಿದೆ.

ಈ ಸಂಬಂಧ ಲೋಕಸಭೆಗೆ ಲಿಖಿತ ಉತ್ತರ ನೀಡಿರುವ ಇಲಾಖೆಯ ಸಚಿವರು, ‘ಅಸ್ಸಾಂ ಬಿಟ್ಟರೆ ಹೆಚ್ಚು ಅರಣ್ಯ ಒತ್ತುವರಿಯಾಗಿರುವುದು ಕರ್ನಾಟಕದಲ್ಲೇ’ ಎಂದು ಮಾಹಿತಿ ನೀಡಿದ್ದಾರೆ.

‘ಅರಣ್ಯ ಅತಿಕ್ರಮಣ ತಡೆಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಹಾಗೂ ಮುಂದಿನ ದಿನಗಳಲ್ಲಿ ಅತಿಕ್ರಮಣ ನಡೆಯದಂತೆ ಕಟ್ಟೆಚ್ಚರ ವಹಿಸುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಲಾಗಿದೆ’ ಎಂದು ಅವರು ತಿಳಿಸಿದ್ದಾರೆ.

₹ 1.10 ಕೋಟಿ ವಂಚನೆ: ಆರೋಪಿ ಬಂಧನ

ಬೆಳಕವಾಡಿ (ಮಂಡ್ಯ ಜಿಲ್ಲೆ): ₹ 25 ಕೋಟಿ ದೇಣಿಗೆ ನೀಡುವುದಾಗಿ ಶ್ಯಾಲೋಮ್ ಎಜುಕೇಷನಲ್ ಮತ್ತು ಚಾರಿಟೇಬಲ್ ಟ್ರಸ್ಟ್ ಪದಾಧಿಕಾರಿಗಳನ್ನು ನಂಬಿಸಿ ₹1.10 ಕೋಟಿ ಪಡೆದು ಪರಾರಿಯಾಗಿದ್ದ ಆರೋಪಿಯನ್ನು ಬೆಳಕವಾಡಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಆರೋಪಿಯನ್ನು ಟ್ರಸ್ಟ್ ಪದಾಧಿಕಾರಿಗಳಿಗೆ ಪರಿಚಯಿಸಿದ್ದ, ಮಳವಳ್ಳಿ ತಾಲ್ಲೂಕಿನ ಹೆಬ್ಬಣಿ ಗ್ರಾಮದ ವಿರಕ್ತ ಮಠದ ಪೀಠಾಧ್ಯಕ್ಷ ಶಂಭುಲಿಂಗ ಸ್ವಾಮೀಜಿ ತಲೆಮರೆಸಿಕೊಂಡಿದ್ದು, ಬಂಧನಕ್ಕೆ ಪೊಲೀಸರು ಬಲೆ ಬೀಸಿದ್ದಾರೆ.

ಆಂಧ್ರಪ್ರದೇಶದ ವೆಲ್ಲೂರು ಜಿಲ್ಲೆ, ಕುಪ್ಪಂ ಮೂಲದ ಸೂರ್ಯ ಬಂಧಿತ ಆರೋಪಿ. ಆತನನ್ನು ಮೈಸೂರಿನಲ್ಲಿ ಬಂಧಿಸಿ ₹ 43,88,500 ನಗದು, ಕೃತ್ಯಕ್ಕೆ ಬಳಸಿದ ಕಾರು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್ ತಿಳಿಸಿದರು.

ಪ್ರಧಾನಿಗಿರಿ ದಕ್ಕದ ಮುತ್ಸದ್ಧಿಗೆ 'ಭಾರತರತ್ನ'

ಬಿಜೆಪಿಯ ಹಿರಿಯ ಧುರೀಣ ಲಾಲ್‌ಕೃಷ್ಣ ಅಡ್ವಾಣಿ ಅವರ ಜನ್ಮದಿನದ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಅಭಿನಂದಿಸಿದ ಸಂದರ್ಭ —ಪಿಟಿಐ ಸಂಗ್ರಹ ಚಿತ್ರ

ನವದೆಹಲಿ: ದೇಶದ ಅತ್ಯುನ್ನತ 'ಭಾರತರತ್ನ' ಪ್ರಶಸ್ತಿ ಪುರಸ್ಕೃತರ ಪಟ್ಟಿಗೆ ಹೊಸ ಸೇರ್ಪಡೆ ಲಾಲ್ ಕೃಷ್ಣ ಅಡ್ವಾಣಿ. ಸ್ವಾತಂತ್ರ್ಯಾ ನಂತರದ ರಾಜಕಾರಣದಲ್ಲಿ ಮತ್ತು ಬಿಜೆಪಿಯು ಅಧಿಕಾರದ ಹೊಸ್ತಿಲವರೆಗೆ ಸಾಗಿಬಂದ ಹಾದಿಯಲ್ಲಿ ಉಲ್ಲೇಖಿಸಬೇಕಾದ ಪ್ರಮುಖ ಹೆಸರು ಅವರದ್ದು.

ಈಗ 96 ವರ್ಷ ವಯಸ್ಸಿನ ಎಲ್.ಕೆ. ಅಡ್ವಾಣಿ ಅವರು 90ರ ದಶಕದಲ್ಲಿ ಹಲವರ ಪಾಲಿನ 'ಹಿಂದೂ ಹೃದಯ ಸಾಮ್ರಾಟ' ಆಗಿದ್ದವರು. ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣಕ್ಕಾಗಿ ದೊಡ್ಡ ಧ್ವನಿ ಮೊಳಗಿಸಿ, ಭದ್ರ ತಳಹದಿಯನ್ನು ಒದಗಿಸಿದ ರಥಯಾತ್ರೆಯ ಸಾರಥಿ.

ಪ್ರಸ್ತುತ, ಅಯೋಧ್ಯೆಯ ರಾಮಮಂದಿರದಲ್ಲಿ ಬಾಲರಾಮನ ಪ್ರತಿಷ್ಠಾಪನೆಯಾದ ಕೆಲವೇ ದಿನಗಳಲ್ಲಿ ಅತ್ಯುನ್ನತ ಪ್ರಶಸ್ತಿಗೆ ಅಡ್ವಾಣಿ ಅವರ ಹೆಸರು ಘೋಷಣೆಯಾಗಿದೆ. ಇದು ಕಾಕತಾಳೀಯವೇನೂ ಅಲ್ಲ. ಅಡ್ವಾಣಿ ಅವರು ಅಟಲ್ ಬಿಹಾರಿ ವಾಜಪೇಯಿ ಅವರ ಸಚಿವ ಸಂಪುಟದಲ್ಲಿ ಉಪಪ್ರಧಾನಿ ಆಗಿದ್ದವರು.

ಪಕ್ಷದಲ್ಲಿ ಪ್ರಭಾವಿ ಮತ್ತು ಉನ್ನತ ನಾಯಕರಾಗಿದ್ದರೂ ಪ್ರಧಾನಿಯಾಗುವ ಗುರಿ ಈಡೇರದ ಹಿರಿಯ ಮುತ್ಸದ್ಧಿಗೆ, ಈಗ 'ಭಾರತರತ್ನ' ಪ್ರಶಸ್ತಿಯ ಗರಿ ದಕ್ಕಿದೆ. ರಾಜಕೀಯ ನೇಪಥ್ಯಕ್ಕೆ ಸರಿದಿದ್ದ ಲಾಲ್ ಕೃಷ್ಣ ಅಡ್ವಾಣಿ ಈ ಮೂಲಕ ಮತ್ತೆ ಸುದ್ದಿಯ ಕೇಂದ್ರವಾಗಿದ್ದಾರೆ. ಈ ಪ್ರಶಸ್ತಿಗೆ ಪಾತ್ರರಾದ 50ನೇ ಮಹನೀಯ ಎಂಬ ಹಿರಿಮೆಗೆ ಅವರು ಪಾತ್ರರಾಗಿದ್ದಾರೆ.

ರಥಯಾತ್ರೆ ಸೇರಿದಂತೆ ಹೋರಾಟದ ಛಲದಿಂದಾಗಿ ಪಕ್ಷದ ವಲಯದಲ್ಲಿ ಹಿಂದುತ್ವದ ಬದ್ಧ ಪ್ರತಿಪಾದಕ, 'ಲೋಹ ಪುರುಷ' ಎಂದೇ ಗುರುತಿಸಿಕೊಂಡಿದ್ದ ಅಡ್ವಾಣಿ ನವೆಂಬರ್ 8, 1927ರಂದು ಅವಿಭಜಿತ ಭಾರತದ ಕರಾಚಿಯಲ್ಲಿ (ಈಗಿನ ಪಾಕಿಸ್ತಾನ) ಜನಿಸಿದರು.

ಬಿಜೆಪಿಯ ಸ್ಥಾಪಕ ಸದಸ್ಯ: ಕರಾಚಿಯ ಸೇಂಟ್ ಪ್ಯಾಟ್ರಿಕ್ ಪ್ರೌಢಶಾಲೆಯಲ್ಲಿ ಪ್ರಾಥಮಿಕ, ಪ್ರೌಢ ಶಿಕ್ಷಣ, ಮುಂದೆ ಸಿಂಧ್ ಪ್ರಾಂತ್ಯದ ಹೈದರಾಬಾದ್‌ನ ಡಿ.ಜಿ.ನ್ಯಾಷನಲ್ ಕಾಲೇಜಿನಲ್ಲಿ ಪದವಿ, ಬಳಿಕ ಬಾಂಬೆಯ (ಈಗಿನ ಮುಂಬೈ) ಸರ್ಕಾರಿ ಕಾಲೇಜಿನಲ್ಲಿ ಕಾನೂನು ಶಿಕ್ಷಣ ಪಡೆದರು. 1947ರಲ್ಲಿ ಆರ್‌ಎಸ್‌ಎಸ್ ಸೇರಿದ ಅವರು, ರಾಜಸ್ಥಾನದಲ್ಲಿ ಸಂಘದ ಉಸ್ತುವಾರಿ ವಹಿಸಿಕೊಂಡರು.

ಅಡ್ವಾಣಿ ಬಿಜೆಪಿಯ ಸ್ಥಾಪಕ ಸದಸ್ಯರೂ ಹೌದು. ಶ್ಯಾಂ ಪ್ರಸಾದ್ ಮುಖರ್ಜಿ ಅವರು 1951ರಲ್ಲಿ ಆರ್‌ಎಸ್‌ಎಸ್ ರಾಜಕೀಯ ಘಟಕವಾಗಿ ಭಾರತೀಯ ಜನಸಂಘ ಸ್ಥಾಪಿಸಿದಾಗ ಅಡ್ವಾಣಿ ಅದರ ರಾಜಸ್ಥಾನ ಘಟಕದ ಕಾರ್ಯದರ್ಶಿಯಾದರು. 1970ರಲ್ಲಿ ದೆಹಲಿಗೆ ಸ್ಥಳಾಂತರಗೊಂಡರು.

ರಾಮಮಂದಿರ ನಿರ್ಮಾಣಕ್ಕೆ ಬುನಾದಿ ಹಾಕಿದ ರಥಯಾತ್ರೆಗೂ ಮೊದಲು ದೆಹಲಿಯಲ್ಲಿದ್ದು, ಪಕ್ಷವನ್ನು ಬಲಪಡಿಸುವಲ್ಲಿ ಕೊಡುಗೆ ನೀಡಿದರು. ಮುಂದೆ ರಥಯಾತ್ರೆ ಕೈಗೊಂಡಾಗ, ಅದರ ಸಂಘಟನೆಯ ಮುಂಚೂಣಿಯಲ್ಲಿ ಇದ್ದವರು ಈಗಿನ ಪ್ರಧಾನಿ ನರೇಂದ್ರ ಮೋದಿ.

ರಾಮಮಂದಿರ ಹೋರಾಟದ ಅಸ್ತ್ರ: ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣವಾಗಬೇಕು ಎಂಬುದನ್ನು 1989ರ ಬಳಿಕ ಹೋರಾಟದ ಅಸ್ತ್ರವಾಗಿಸಿಕೊಂಡರು. ಲೋಕಸಭೆಯಲ್ಲಿ ಆಗ ಬಿಜೆಪಿ ಸಂಖ್ಯೆ ಕೇವಲ ಎರಡು. 1990ರಲ್ಲಿ ಕೈಗೊಂಡ ರಾಮರಥ ಯಾತ್ರೆಯು ಪಕ್ಷದ ಬೇರುಗಳು ಆಳ–ಅಗಲ ವಿಸ್ತರಿಸಲು ನೆರವಾಯಿತು.

ರಥಯಾತ್ರೆ ಸಮಾಪ್ತಿಗೊಳ್ಳಲು ಅಯೋಧ್ಯೆ ತಲುಪಿದಾಗ, 1992ರಲ್ಲಿ ಬಾಬರಿ ಮಸೀದಿ ನೆಲಸಮಗೊಳಿಸಿದ ಘಟನೆಯೂ ನಡೆಯಿತು. 'ಅದು ನನ್ನ ಜೀವನದ ದುಃಖದ ದಿನ' ಎಂದು ಅಡ್ವಾಣಿ ಮುಂದೊಮ್ಮೆ ಹೇಳಿಕೊಂಡಿದ್ದರು.

ಹಿಂದೆ, 1995ರಲ್ಲಿ ಇಡೀ ಪಕ್ಷ ತಮಗೆ ಬೆಂಬಲವಾಗಿದ್ದರೂ, ಪಕ್ಷದ ಪ್ರಧಾನಿ ಸ್ಥಾನದ ಅಭ್ಯರ್ಥಿಯಾಗಿ ಅಟಲ್ ಬಿಹಾರಿ ವಾಜಪೇಯಿ ಅವರ ಹೆಸರನ್ನು ಅಡ್ವಾಣಿ ಅವರೇ ಉಲ್ಲೇಖಿಸಿದ್ದರು. ಅವರ ಈ ನಡೆ 'ಪಕ್ಷವೇ ಮೊದಲು' ಎಂಬ ನಿರ್ಧಾರಕ್ಕೆ ಪೂರಕವಾಗಿತ್ತು ಎಂದು ನಾಯಕರೊಬ್ಬರು ಸ್ಮರಿಸಿದರು.

ಜಿನ್ನಾ ಹೊಗಳಿಕೆ ನಂತರ ಹಳಸಿದ ಆರ್‌ಎಸ್‌ಎಸ್ ಬಾಂಧವ್ಯ

2005ರಲ್ಲಿ ಹುಟ್ಟೂರೂ ಆಗಿದ್ದ ಪಾಕಿಸ್ತಾನದ ಕರಾಚಿಗೆ ಭೇಟಿ ನೀಡಿದ್ದರು. ಪಾಕಿಸ್ತಾನದ ಸ್ಥಾಪಕ ಎಂದು ಗುರುತಿಸಲಾಗುವ ಎಂ.ಎ.ಜಿನ್ನಾ ಅವರ ಬಗೆಗೆ ಆಗ ಮೆಚ್ಚುಗೆಯ ಮಾತನಾಡಿದ್ದರು. ಅವರನ್ನು ಹಿಂದೂ–ಮುಸ್ಲಿಂ ಏಕತೆಯ ರಾಯಭಾರಿ ಎಂದಿದ್ದರು. ಈ ಹೇಳಿಕೆಗೆ ತೀವ್ರ ವಿರೋಧ ವ್ಯಕ್ತವಾಗಿತ್ತು. ಹಿಂದುತ್ವದ ಪ್ರತಿಪಾದಕ ಎಂಬ ಅವರ ಹಿರಿಮೆಗೆ ಧಕ್ಕೆ ತಂದಿತು. ಆರ್‌ಎಸ್‌ಎಸ್ ಜೊತೆಗಿನ ಬಾಂಧವ್ಯ ಹಳಸಲೂ ಕಾರಣವಾಯಿತು.

2009ರ ಚುನಾವಣೆಯಲ್ಲಿ ಬಿಜೆಪಿಯ ಪ್ರಧಾನಿ ಸ್ಥಾನದ ಅಭ್ಯರ್ಥಿಯಾಗಿದ್ದರೂ ಅದಕ್ಕೆ ಆರ್‌ಎಸ್‌ಎಸ್ ಬೆಂಬಲ ಇರಲಿಲ್ಲ. ಮುಂದೆ ಆರ್‌ಎಸ್‌ಎಸ್ 2014ರ ಚುನಾವಣೆ ವೇಳೆಗೆ ಮೋದಿಯವರನ್ನೇ ಮುಂಚೂಣಿಗೆ ತರುವ ಮೂಲಕ ಅಡ್ವಾಣಿ ಇಳಿಹಾದಿ ಆರಂಭವಾಯಿತು.

ಆಗ ಮೋದಿ ವಿರುದ್ಧ ಬಹಿರಂಗವಾಗಿಯೇ ಅಡ್ವಾಣಿ ಅಸಮಾಧಾನ ಹೊರಹಾಕಿದ್ದರು. ಆದರೆ, ಆ ವೇಳೆಗೆ ಪಕ್ಷ ಬಹುತೇಕ ಮೋದಿ ಪರವಾಗಿ ಹೊರಳಿತ್ತು. ಅಡ್ವಾಣಿ ಪ್ರಾಬಲ್ಯ ಕುಗ್ಗಿತ್ತು. ಅದು ರಾಜಕೀಯವಾಗಿ ಮೋದಿಯವರ ಏರುಹಾದಿ ಮತ್ತು ಅಡ್ವಾಣಿಯವರ ಇಳಿಹಾದಿಯ ಅವಧಿ. ಹಿಂದೆ ಈ ಇಬ್ಬರದೂ ಗುರು–ಶಿಷ್ಯನ ಬಾಂಧವ್ಯ. ಆದರೆ, 2014ರ ನಂತರ ಮೋದಿ ಮತ್ತು ಅಡ್ವಾಣಿ ಮುಖಾಮುಖಿಯಾದುದು ಕಡಿಮೆ. ಮಾತುಕತೆ ನಡೆದದ್ದೂ ಕಡಿಮೆ. ಈಗ ಪ್ರಧಾನಿ, ತಮ್ಮ ಎರಡನೇ ಅವಧಿಯ ಅಂತ್ಯದಲ್ಲಿ 'ಭಾರತರತ್ನ' ಪ್ರಶಸ್ತಿ ಘೋಷಿಸಿ ವ್ಯಕ್ತಿತ್ವ ಕೊಂಡಾಡಿದ್ದಾರೆ.

ಅಡ್ವಾಣಿ ಅವರನ್ನು ಭಾರತ ರತ್ನಕ್ಕೆ ಆಯ್ಕೆ ಮಾಡಿದ್ದನ್ನು ಸ್ವಾಗತಿಸುತ್ತೇವೆ. ತುಮಕೂರಿನ ಸಿದ್ದಗಂಗಾ ಮಠದ ಶಿವಕುಮಾರ ಸ್ವಾಮೀಜಿಗೂ ಭಾರತರತ್ನ ಗೌರವ ನೀಡಬೇಕು ಎಂಬುದು ನಮ್ಮ ಆಗ್ರಹ
ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಆಧುನಿಕ ಭಾರತ ನಿರ್ಮಾಣದಲ್ಲಿ ನಿರ್ಣಾಯಕ ಪಾತ್ರ ವಹಿಸಿದವರು ಅಡ್ವಾಣಿ. ಭಾರತೀಯರ ಸಾಂಸ್ಕೃತಿಕ ಅಸ್ಮಿತೆಗಾಗಿ ಹೋರಾಟ ನಡೆಸಿದ್ದಾರೆ
ಆರ್. ಅಶೋಕ
ವಿಧಾನಸಭೆ ವಿರೋಧ ಪಕ್ಷದ ನಾಯಕ

ರಾಮ ಮಂದಿರ ನಿರ್ಮಾಣಕ್ಕೆ ಅಡ್ವಾಣಿಯೇ ಕಾರಣ: ಬಿಎಸ್‌ವೈ

ಬೆಂಗಳೂರು: ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ನಿರ್ಮಾಣವಾಗಲು ಎಲ್.ಕೆ. ಅಡ್ವಾಣಿಯವರೇ ಪ್ರಮುಖ ಕಾರಣ ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಹೇಳಿದರು.

ಅಡ್ವಾಣಿ ಅವರಿಗೆ ಭಾರತ ರತ್ನ ಪುರಸ್ಕಾರ ಘೋಷಿಸಿದ ಕೇಂದ್ರ ಸರ್ಕಾರದ ತೀರ್ಮಾನದ ಕುರಿತು ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, 'ಅಯೋಧ್ಯೆಯಲ್ಲಿ ಬಾಬರಿ ಮಸೀದಿ ನೆಲಸಮಗೊಳಿಸುವ ಹೋರಾಟದಲ್ಲಿ ಅಡ್ವಾಣಿಯವರು ಭಾಗವಹಿಸಿದ್ದರು. ರಾಮ ಮಂದಿರ ನಿರ್ಮಾಣಕ್ಕಾಗಿ ರಥ ಯಾತ್ರೆಯನ್ನೂ ನಡೆಸಿದ್ದರು. ಎರಡೂ ಹೋರಾಟಗಳಲ್ಲಿ ನಾನು ಅವರೊಂದಿಗೆ ಭಾಗವಹಿಸಿದ್ದೆ' ಎಂದು ಹೇಳಿದರು.

'ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣಕ್ಕೆ ಸ್ಫೂರ್ತಿ ತುಂಬಿದ್ದ ಅಡ್ವಾಣಿಯವರಿಗೆ ಭಾರತ ರತ್ನ ಪುರಸ್ಕಾರ ನೀಡುವ ಪ್ರಧಾನಿ ನರೇಂದ್ರ ಮೋದಿಯವರ ನಿರ್ಧಾರ ಶ್ಲಾಘನೀಯವಾದುದು' ಎಂದರು.

ಯಾರು, ಏನೆಂದರು?'

ಅಡ್ವಾಣಿ ಅವರಿಗೆ ಭಾರತರತ್ನ ಪ್ರಶಸ್ತಿ ಸಂದಿರುವುದು ನನಗೆ ಖುಷಿ ನೀಡಿದೆ. ರಾಷ್ಟ್ರದ ಅಭಿವೃದ್ಧಿಗೆ ಅವರು ಅಗಣಿತ ಕೊಡುಗೆ ನೀಡಿದ್ದಾರೆ. ನನ್ನ, ಅವರ ರಾಜಕೀಯ ಸಿದ್ಧಾಂತಗಳು ಭಿನ್ನವಾಗಿದ್ದವು. ಆದರೆ, ಅವರೊಬ್ಬ ಉತ್ತಮ ಸಂಸದೀಯ ಪಟುವಾಗಿದ್ದರು.
ಶರದ್ ಪವಾರ್, ಅಧ್ಯಕ್ಷ, ರಾಷ್ಟ್ರೀಯವಾದಿ ಕಾಂಗ್ರೆಸ್ ಪಕ್ಷ (ಎಸ್‌ಪಿ)

ರಾಷ್ಟ್ರ ನಿರ್ಮಾಣದಲ್ಲಿ ಅಡ್ವಾಣಿ ಅವರ ಕೊಡುಗೆ ಮರೆಯಲಾಗದ್ದು ಹಾಗೂ ಉತ್ತೇಜನಕಾರಿಯಾದದ್ದು. ಅಟಲ್ ಬಿಹಾರಿ ವಾಜಪೇಯಿ ಅವರ ಸರ್ಕಾರದಲ್ಲಿ ಅಡ್ವಾಣಿಯವರ ಜೊತೆಗಿನ ಕೆಲಸ ಮಾಡಿದ್ದೇನೆ. ದೇಶದ ಗೌರವಾನ್ವಿತ ಮುತ್ಸದ್ದಿಗಳಲ್ಲಿ ಅವರೂ ಒಬ್ಬರು.
ನಿತೀಶ್ ಕುಮಾರ್, ಮುಖ್ಯಮಂತ್ರಿ, ಬಿಹಾರ

ಉಪ ಪ್ರಧಾನಿ ಸೇರಿದಂತೆ ವಿವಿಧ ಸಾಂವಿಧಾನಿಕ ಹೊಣೆಗಾರಿಕೆ ನಿಭಾಯಿಸಿರುವ ಎಲ್.ಕೆ.ಅಡ್ವಾಣಿ ಅವರು ದೇಶದ ಭದ್ರತೆ, ಏಕತೆ, ಸೌಹಾರ್ದಕ್ಕೆ ಸಾಟಿಯಿಲ್ಲದ ಸೇವೆ ಸಲ್ಲಿಸಿದ್ದಾರೆ. ಈ ಪ್ರಶಸ್ತಿ ಅವರೊಬ್ಬರಿಗೆ ಅಲ್ಲ, ದೇಶದ ಕೋಟ್ಯಂತರ ಜನರಿಗೆ ಸಂದ ಗೌರವವಾಗಿದೆ.
ಅಮಿತ್ ಶಾ, ಕೇಂದ್ರ ಗೃಹ ಸಚಿವ

ಎಲ್.ಕೆ.ಅಡ್ವಾಣಿ ಅವರು 2002ರಲ್ಲಿ ಗುಜರಾತ್ ಮುಖ್ಯಮಂತ್ರಿಯಾಗಿ ಮೋದಿ ಅವರ ಕುರ್ಚಿಯನ್ನು ಉಳಿಸಿದ್ದರು. ಮೋದಿ ಒಬ್ಬ 'ಅತ್ಯುತ್ತಮ ಕಾರ್ಯಕ್ರಮ ಸಂಘಟಕ' ಎಂದು ಅವರು ಆಗ ಬಣ್ಣಿಸಿದ್ದರು.
ಜೈರಾಂ ರಮೇಶ್, ಕಾಂಗ್ರೆಸ್ ಮುಖಂಡ

ಹಲವು ವರ್ಷ ಕಾಲ, ಹಲವಾರು ರೀತಿಯಲ್ಲಿ ಅಡ್ವಾಣಿಯವರು ಭಾರತದ ವಿಕಸನಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಸರ್ಕಾರ ಮತ್ತು ಸಾರ್ವಜನಿಕ ಬದುಕಿನಲ್ಲಿನ ಅವರ ನಾಯಕತ್ವವು ಅನುಕರಣೀಯ.
ಎಸ್.ಜೈಶಂಕರ್, ವಿದೇಶಾಂಗ ವ್ಯವಹಾರಗಳ ಸಚಿವ

'ಕೇಂದ್ರದಲ್ಲಿ ತನ್ನ ಅವಧಿ ಅಂತ್ಯವಾಗುವ ಮೊದಲು ಬಿಜೆಪಿ ಈ ಪ್ರಶಸ್ತಿಗೆ ಅಡ್ವಾಣಿಯವರನ್ನು ಆಯ್ಕೆ ಮಾಡಿದೆ. ತನ್ನ ಮತಬ್ಯಾಂಕ್ ಛಿದ್ರಗೊಳ್ಳಬಾರದು ಎಂಬುದೇ ಇದರ ಹಿಂದಿನ ಉದ್ದೇಶ. ಇದನ್ನು ಅವರ ಮೇಲಿನ ಗೌರವದಿಂದ ನೀಡಿದ್ದಲ್ಲ. ಭಾರತರತ್ನ ಪ್ರಶಸ್ತಿಗೆ ತನ್ನದೇ ಗೌರವವಿದೆ. ಆದರೆ, ಅದನ್ನು ಪಕ್ಷದ ಮತಗಳನ್ನು ಭದ್ರಪಡಿಸಿಕೊಳ್ಳಲೆಂದೇ ಈಗ ನೀಡಲಾಗಿದೆ.'
ಅಖಿಲೇಶ್ ಯಾದವ್, ಸಮಾಜವಾದಿ ಪಕ್ಷದ ಮುಖ್ಯಸ್ಥ

ನನ್ನ ಚಿಂತನೆ, ಸಿದ್ಧಾಂತಗಳಿಗೂ ಸಂದ ಗೌರವ: ಅಡ್ವಾಣಿ ಹರ್ಷ

ಬಿಜೆಪಿ ಹಿರಿಯ ಧುರೀಣ ಮುರಳಿ ಮನೋಹರ ಜೋಶಿ ಅವರು ನವದೆಹಲಿಯಲ್ಲಿ ಎಲ್‌.ಕೆ.ಅಡ್ವಾಣಿ ಅವರನ್ನು ಶನಿವಾರ ಭೇಟಿಯಾಗಿ ಅಭಿನಂದಿಸಿದರು —ಪಿಟಿಐ ಚಿತ್ರ

ನವದೆಹಲಿ (ಪಿಟಿಐ): 'ಈ ಪ್ರಶಸ್ತಿ ವ್ಯಕ್ತಿಯಾಗಿ ನನಗಷ್ಟೇ ಅಲ್ಲ, ಬದುಕಿನುದ್ದಕ್ಕೂ ನಾನು ಪಾಲಿಸಿದ ಚಿಂತನೆ ಮತ್ತು ಸಿದ್ಧಾಂತಗಳಿಗೂ ಸಂದಿರುವ ಗೌರವವಾಗಿದೆ' ಎಂದು ಬಿಜೆಪಿ ಹಿರಿಯ ಧುರೀಣ ಲಾಲ್ ಕೃಷ್ಣ ಅಡ್ವಾಣಿ ಪ್ರತಿಕ್ರಿಯಿಸಿದ್ದಾರೆ.

'ಭಾರತರತ್ನ' ಪ್ರಶಸ್ತಿಯನ್ನು ನಾನು ನಮ್ರತೆ ಹಾಗೂ ತುಂಬು ಗೌರವದಿಂದಲೇ ಒಪ್ಪಿಕೊಳ್ಳುತ್ತಿದ್ದೇನೆ' ಎಂದೂ ಹೇಳಿದ್ದಾರೆ.

'ನನ್ನ ಬದುಕು ನನ್ನದಲ್ಲ; ಈ ಬದುಕು ಇರುವುದು ದೇಶಕ್ಕಾಗಿ' ಎಂಬ ಧ್ಯೇಯವೇ ನನಗೆ ಪ್ರೇರಕಶಕ್ತಿ ಆಗಿತ್ತು. ಪ್ರಶಸ್ತಿಯು ಸಂದಿರುವ ಈ ಹೊತ್ತಿನಲ್ಲಿ ನನ್ನ ಒಡನಾಡಿಯಾಗಿ ಕೆಲಸ ಮಾಡಿದ ಪಂಡಿತ್ ದೀನದಯಾಳ್ ಉಪಾಧ್ಯಾಯ ಮತ್ತು ಈ ಹಿಂದೆ ಇದೇ ಪ್ರಶಸ್ತಿ ಪುರಸ್ಕೃತರಾಗಿದ್ದ ವಾಜಪೇಯಿ ಅವರನ್ನು ಸ್ಮರಿಸುತ್ತೇನೆ' ಎಂದು ಹೇಳಿದ್ದಾರೆ.

'ಆರ್‌ಎಸ್‌ಎಸ್ ಸೇರ್ಪಡೆಯಾದ ದಿನದಿಂದಲೂ ನನಗೆ ಹೊರಿಸಿದ ಯಾವುದೇ ಜವಾಬ್ದಾರಿಯಲ್ಲೂ ಸ್ವಾರ್ಥರಹಿತ, ಬದ್ಧತೆಯ ಸೇವೆ ಸಲ್ಲಿಸುವುದೇ ಪ್ರಶಸ್ತಿ ಆಗಬೇಕು ಎಂದೇ ನಾನು ಬಯಸಿದ್ದೆ' ಎಂದು ಸ್ಮರಿಸಿದ್ದಾರೆ.

'ದೇಶದ ಅತ್ಯುನ್ನತ ಪ್ರಶಸ್ತಿಗೆ ಆಯ್ಕೆ ಮಾಡಿದ್ದಕ್ಕಾಗಿ ರಾಷ್ಟ್ರಪತಿ ದ್ರೌಪದಿ ಮುರ್ಮು ಮತ್ತು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ಸಾರ್ವಜನಿಕ ಜೀವನದಲ್ಲಿ ನನ್ನೊಂದಿಗೆ ಕೆಲಸ ಮಾಡಿದ ಬಿಜೆಪಿ, ಆರ್‌ಎಸ್‌ಎಸ್‌ನ ಅಪಾರ ಸಂಖ್ಯೆಯ ಕಾರ್ಯಕರ್ತರಿಗೂ ಕೃತಜ್ಞತೆ ಸಲ್ಲಿಸುತ್ತೇನೆ' ಎಂದು ಹೇಳಿದ್ದಾರೆ.

'ಕುಟುಂಬದ ಸದಸ್ಯರು, ಮುಖ್ಯವಾಗಿ ಪತ್ನಿ ಕಮಲಾ ನೀಡಿದ ಬೆಂಬಲವನ್ನೂ ಸ್ಮರಿಸುತ್ತೇನೆ. ಇವರು ನನ್ನ ಜೀವನದುದ್ದಕ್ಕೂ ಪ್ರೋತ್ಸಾಹದ ಶಕ್ತಿಯಾಗಿದ್ದರು' ಎಂದಿದ್ದಾರೆ. 'ಈ ಮಹೋನ್ನತ ದೇಶವು ಕೀರ್ತಿಯ ಅತ್ಯುನ್ನತ ಸ್ಥಾನವನ್ನು ತಲುಪಲಿ' ಎಂದು ಆಶಿಸಿದ್ದಾರೆ.

ಅಡ್ವಾಣಿ 'ಭಾರತರತ್ನ'

ಒಂದನೇ ಪುಟದಿಂದ

ಅಟಲ್ ಬಿಹಾರಿ ವಾಜಪೇಯಿ ಅವರನ್ನು 'ವಿಕಾಸ ಪುರುಷ'ನೆಂದೂ, ಅಡ್ವಾಣಿ ಅವರನ್ನು 'ಲೋಹಪುರುಷ'ನೆಂದೂ ಬಿಜೆಪಿ ಪಾಳಯದಲ್ಲಿ ಬಣ್ಣಿಸಲಾಗುತ್ತದೆ. ಲೋಕಸಭೆಯಲ್ಲಿ ಕೇವಲ ಇಬ್ಬರು ಸದಸ್ಯ ಬಲ ಹೊಂದಿದ್ದ ಬಿಜೆಪಿಯನ್ನು ಕೇಂದ್ರದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದ ಪಕ್ಷವನ್ನಾಗಿ ರೂಪಿಸಿದ ಶ್ರೇಯವೂ ಸಿಂಹಪಾಲು ಕಟ್ಟರ್ ಹಿಂದುವಾದಿ ನಾಯಕ ಅಡ್ವಾಣಿ ಅವರಿಗೆ ಸಲ್ಲಬೇಕು ಎಂದೇ ವ್ಯಾಖ್ಯಾನಿಸಲಾಗುತ್ತದೆ. ಕಮಲ ಪಾಳಯದಲ್ಲಿ ಪ್ರಧಾನಿ ಮೋದಿ 'ಕೇಂದ್ರಬಿಂದು'ವಾದ ಬಳಿಕ ಅಡ್ವಾಣಿ ಅವರು ಪಕ್ಷದ ಚಟುವಟಿಕೆಗಳಿಂದ ತೆರೆಮರೆಗೆ ಸರಿದಿದ್ದರು.

ಹಲವು ಅವಧಿಗಳಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿರುವ ಅಪಾರ ಅನುಭವ ಹೊಂದಿರುವ 96 ವರ್ಷಗಳ ಹಿರೀಕ ಅಡ್ವಾಣಿ. ಸುದೀರ್ಘ ರಾಜಕಾರಣದಲ್ಲಿದ್ದು ಪಕ್ಷ ಕಟ್ಟಿ ಬೆಳೆಸಿದ್ದರೂ ಅವರ ಪಾಲಿಗೆ ಪ್ರಧಾನಿ ಹುದ್ದೆ 'ಮಾಯಾಜಿಂಕೆ'ಯೇ ಆಗಿದ್ದು ಈಗ ಇತಿಹಾಸ.

ಅಡ್ವಾಣಿ ಅವರನ್ನು ಶ್ಲಾಘಿಸಿರುವ ಮೋದಿ, 'ತಳಮಟ್ಟದಿಂದ ದೇಶದ ಸೇವೆ ಆರಂಭಿಸಿದ ಅವರು, ಉಪ ಪ್ರಧಾನಿಯಾಗಿಯೂ ದುಡಿದಿದ್ದಾರೆ. ಜತೆಗೆ ಗೃಹ ಸಚಿವ, ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವರಾಗಿ ಅತ್ಯುನ್ನತ ಕೊಡುಗೆ ನೀಡಿದ್ದಾರೆ. ಸಂಸದೀಯ ಚರ್ಚೆಗಳಲ್ಲಿ ಅವರು ನೀಡುತ್ತಿದ್ದ ಅಭಿಪ್ರಾಯಗಳು ಯಾವಾಗಲೂ ದೂರದೃಷ್ಟಿತ್ವ ಹೊಂದಿರುತ್ತಿದ್ದವು' ಎಂದಿದ್ದಾರೆ.

'ಅಡ್ವಾಣಿ ಅವರ ಹಲವು ದಶಕಗಳ ಸಾರ್ವಜನಿಕ ಸೇವೆಯು ಪಾರದರ್ಶಕತೆ ಹಾಗೂ ಸಮಗ್ರತೆ ಕುರಿತ ಅವರಿಗಿದ್ದ ಬದ್ಧತೆಗೆ ಸಾಕ್ಷಿಯಾಗಿದೆ. ಅವರು ರಾಜಕೀಯ ನೈತಿಕತೆಗೆ ಅಪರೂಪದ ಮಾನದಂಡ ರೂಪಿಸಿಕೊಟ್ಟಿದ್ದಾರೆ' ಎಂದು ಮೋದಿ ಹೇಳಿದ್ದಾರೆ. ಅವರೊಂದಿಗೆ ಸಂವಹನ ನಡೆಸಲು ಹಾಗೂ ಅವರಿಂದ ಕಲಿಯಲು ಅವಕಾಶ ಸಿಕ್ಕಿರುವುದು ನನ್ನ ಪುಣ್ಯ ಎಂದು ಅವರು ಹೇಳಿಕೊಂಡಿದ್ದಾರೆ.

ಬಿಜೆಪಿಯಲ್ಲಿ ಅಡ್ವಾಣಿ ಹಾಗೂ ಮೋದಿ ಅವರು ಗುರು–ಶಿಷ್ಯ ಜೋಡಿಯಂತೆಯೇ ಪ್ರಖ್ಯಾತರಾಗಿದ್ದರು. 2014ರಲ್ಲಿ ಮೋದಿ ಅವರನ್ನು ಪ್ರಧಾನಿ ಅಭ್ಯರ್ಥಿಯನ್ನಾಗಿ ಘೋಷಿಸಿದ್ದಕ್ಕೆ ಅಡ್ವಾಣಿ ಸಿಡಿದೆದ್ದಿದ್ದರು. ಪ್ರಧಾನಿ ಹುದ್ದೆಗಾಗಿ ಜಂಗೀಕುಸ್ತಿ ನಡೆದಿತ್ತು. ಪಾಕಿಸ್ತಾನದ ಸಂಸ್ಥಾಪಕ ಮೊಹಮ್ಮದ್ ಅಲಿ ಜಿನ್ನಾ ಅವರನ್ನು ಜಾತ್ಯತೀತವಾದಿ ಎಂದು ಹೊಗಳುವ ಮೂಲಕ ಆರ್‌ಎಸ್‌ಎಸ್ ಹಾಗೂ ಪಕ್ಷದ ಕಟ್ಟರ್‌ವಾದಿಗಳ ಕೆಂಗಣ್ಣಿಗೆ ಗುರಿಯಾಗಿದ್ದರು. ಈ ಬೆಳವಣಿಗೆಗಳು ಅವರ ರಾಜಕೀಯ ಜೀವನದ ಇಳಿಹಾದಿಗೆ ಕಾರಣವಾಗಿದ್ದವು. ಇದೀಗ 'ಭಾರತರತ್ನ' ಘೋಷಿಸುವ ಮೂಲಕ ಮೋದಿ ಅವರು ಮತ್ತೊಂದು 'ಉದಾರವಾದಿ' ಹೆಜ್ಜೆ ಇಟ್ಟಿದ್ದಾರೆ.

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಲೋ.ಇ ವಿಭಾಗ, ಶಿವಮೊಗ್ಗ
ಟೆಂಡರ್ ಪ್ರಕಟಣೆ ಸಂಖ್ಯೆ ಕಾಪಾಅ/ಶಿವಿ/ಜೆಇ–2/ಐಎಫ್‌ಟಿ–26/23–24 ದಿ:03.02.2024
ಅಲ್ಪಾವಧಿ ಟೆಂಡರ್ ಪ್ರಕಟಣೆ
ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ಅರ್ಹ ನೋಂದಾಯಿತ 3ನೇ ದರ್ಜೆ ಮೇಲ್ಪಟ್ಟ ಗುತ್ತಿಗೆದಾರರಿಂದ ಇ–ಪ್ರಕ್ಯೂರಮೆಂಟ್ ಪೋರ್ಟಲ್ ಆವೃತ್ತಿ–2.0 kppp.karnataka.gov.in ಮೂಲಕ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ.
ಎಲ್ಲಾ ಗುತ್ತಿಗೆದಾರರಿಗೆ ಭಾಗವಹಿಸಬಹುದಾದ ಕಾಮಗಾರಿಗಳು 5054–04–337–0–01–154 ಜಿಲ್ಲಾ ಮುಖ್ಯ ರಸ್ತೆ ಸುಧಾರಣೆ: **1.** ಸಾಗರ ತಾಲ್ಲೂಕು 1 ಕಾಮಗಾರಿ 3054–04–337–1–10–200 ಜಿಲ್ಲಾ ಮುಖ್ಯ ರಸ್ತೆ ನಿರ್ವಹಣೆ **2.** ಸಾಗರ ತಾಲ್ಲೂಕು 2 ಕಾಮಗಾರಿ. ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಲು ಮತ್ತು ಸಲ್ಲಿಸಲು ದಿನಾಂಕ:03–02–2024 ರಿಂದ 12–02–2024. ಕಾಮಗಾರಿಗಳನ್ನು ಪೂರ್ಣಗೊಳಿಸಲು ಕಾಲಾವಧಿ (ಮಳೆಗಾಲ ಸೇರಿ) : 03 ತಿಂಗಳು. ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ 08182–274942) ಹಾಗೂ ಸಹಾಯಕ ದೂರವಾಣಿ ಸಂಖ್ಯೆ: 080–25501216/080–25501227 ರಿಂದ ಮಾಹಿತಿ ಪಡೆಯಬಹುದು.
ಸಹಿ/– ಕಾಇಂ, ಲೋಕೋಪಯೋಗಿ ಇಲಾಖೆ, ವಿಭಾಗ, ಶಿವಮೊಗ್ಗ
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/31/02/23–24/1189

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ
ಕೇಂದ್ರ ಕಛೇರಿ, ಯಾಂತ್ರಿಕ ಇಲಾಖೆ, ಕೆ.ಎಚ್.ರಸ್ತೆ, ಶಾಂತಿನಗರ, ಬೆಂಗಳೂರು – 560027
ದೂರವಾಣಿ ಸಂಖ್ಯೆ : 080–22537519
ಟೆಂಡರ್ ಸಂಖ್ಯೆ: BMTC/2023-24/SE0280 ದಿನಾಂಕ: 03.02.2024
ಟೆಂಡರ್ ಆಹ್ವಾನ ಸೂಚನಾ ಪತ್ರ (ಇ–ಪ್ರೊಕ್ಯೂರ್‌ಮೆಂಟ್ ವಿಧಾನದಲ್ಲಿ ಮಾತ್ರ)
(1) 10 ಸಂಖ್ಯೆಯ ಡಬಲ್ ಡೆಕ್ಕರ್ ಹವಾನಿಯಂತ್ರಿತ ಎಲೆಕ್ಟ್ರಿಕ್ ಬಸ್ಸುಗಳನ್ನು ನಗರ ಸಾರಿಗೆ ಮಾದರಿ ಬಸ್ಸುಗಳ ಖರೀದಿ, ಕಾರ್ಯಾಚರಣೆ ಹಾಗೂ ನಿರ್ವಹಣೆಯನ್ನು ಗ್ರಾಸ್ ಕಾಸ್ಟ್ ಕಾಂಟ್ರಾಕ್ಟ್ (ಜಿ.ಸಿ.ಸಿ) ಮಾದರಿಯಲ್ಲಿ ನಿರ್ವಹಿಸಲು ಸೇವಾದಾರರನ್ನು ಆಯ್ಕೆ ಮಾಡಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮೇಲ್ಕಂಡ ಟೆಂಡರ್‌ನ್ನು ಆಹ್ವಾನಿಸಲಾಗಿದೆ. **(2)** ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಬಿಡ್ ಸಲ್ಲಿಸಲು ಕೊನೆಯ ದಿನಾಂಕ: **04.03.2024 ಸಮಯ 17:30 ಗಂಟೆಯವರೆಗೆ.** ಮುಂದುವರೆದು, ಟೆಂಡರ್‌ನ ವೇಳಾಪಟ್ಟಿ, ಕಾರ್ಯವ್ಯಾಪ್ತಿ, ಹಾಗೂ ಇತರೆ ಷರತ್ತು ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆಗಳಿದ್ದಲ್ಲಿ, ಸೇರ್ಪಡೆ/ತಿದ್ದುಪಡಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಅಪ್ಲೋಡ್ ಮಾಡಲಾಗುವುದು/ಪ್ರಕಟಿಸಲಾಗುವುದು.
ಸೂಚನೆ: ಆಸಕ್ತಿಯುಳ್ಳ ಬಿಡ್ಡುದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಣಿಯಾಗಿರಬೇಕು. ಆಸಕ್ತಿಯುಳ್ಳ ಬಿಡ್ಡುದಾರರು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ವಿಳಾಸ https://kppp.karnataka.gov.in ಗೆ ಲಾಗ್ ಇನ್ ಮಾಡಿ ವಿವರಗಳನ್ನು ವೀಕ್ಷಿಸಬಹುದಾಗಿದೆ. ಹೆಚ್ಚಿನ ವಿವರಗಳಿಗಾಗಿ ಇ–ಮೇಲ್: eprocurementhelpdesk@gmail.com ಅಥವಾ ದೂರವಾಣಿ ಸಂಖ್ಯೆ: 080–46010000, 080–68948777ಕ್ಕೆ ಕರೆಮಾಡಬಹುದು. ಆಸಕ್ತಿಯುಳ್ಳ ಬಿಡ್ಡುದಾರರು ಬಿಡ್ ಸಲ್ಲಿಕೆಯ ತರಬೇತಿಯನ್ನು ಪಡೆಯಲು ಇ–ಪ್ರೊಕ್ಯೂರ್‌ಮೆಂಟ್ ಸೆಲ್‌ನ್ನು ಸಂಪರ್ಕಿಸಬಹುದಾಗಿದೆ. ಹೆಚ್ಚಿನ ಮಾಹಿತಿ ಅಗತ್ಯವಿದ್ದಲ್ಲಿ eprocurementhelpdesk@gmail.com ಗೆ ಮೇಲ್ ಮಾಡಿ ಪಡೆಯಬಹುದಾಗಿರುತ್ತದೆ.
ಸಹಿ/- ಮುಖ್ಯ ಯಾಂತ್ರಿಕ ಅಭಿಯಂತರರು (ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿ)

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಕಾನೀನಿನಿ., ಹೇಮಾವತಿ ಅಣೆಕಟ್ಟು ವಿಭಾಗ, ಗೊರೂರು, ಹಾಸನ ಜಿಲ್ಲೆ
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 03/2023–24, Date: 03.02.2024/CALL-2
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–3ರ ನಿಯಮದನ್ವಯ ಎಗ್ಸಿಕ್ಯುಟಿವ್ ಇಂಜಿನಿಯರ್ ರವರ ಕಚೇರಿ, ಕಾವೇರಿ ನೀರಾವರಿ ನಿಗಮ(ನಿ) ಹೇಮಾವತಿ ಅಣೆಕಟ್ಟು ವಿಭಾಗ, ಗೊರೂರು ರವರು ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ (ನಿ.) ಬೆಂಗಳೂರು ರವರ ಪರವಾಗಿ PWD Class-III and above of any State/Central Government/Public Sector organization ನಲ್ಲಿ ನೋಂದಾಯಿತರಾದ ಗುತ್ತಿಗೆದಾರರಿಂದ ದ್ವಿ ಲಕೋಟೆ ಪದ್ಧತಿಯಲ್ಲಿ ಒಂದು ಕಾಮಗಾರಿಗೆ ಟೆಂಡರ್ ಕರೆಯಲಾಗಿದೆ. ಟೆಂಡರ್ ಮೊತ್ತ ರೂ.63.00 ಲಕ್ಷ (GST ಒಳಗೊಂಡಂತೆ), EMD ಮತ್ತು ಟೆಂಡರ್ ಪ್ರೊಸೆಸ್ಸಿಂಗ್ ಫೀ ಕೆ.ಪಿ.ಪಿ.ಪೋರ್ಟಲ್ ನಿಯಮಾನುಸಾರ, ಟೆಂಡರ್ ಡಾಕ್ಯುಮೆಂಟ್‌ಗಳನ್ನು ವೆಬ್ ಸೈಟ್ https://kppp.karnataka.gov.in ಮೂಲಕ ದಿನಾಂಕ: 07.02.2024 ರಿಂದ 16.02.2024 ರ ವರೆಗೆ ಪಡೆಯಬಹುದು (Down load), ತಾಂತ್ರಿಕ ಬಿಡ್ ತೆರೆಯುವ ದಿನಾಂಕ 17.02.2024 ರ ಸಂಜೆ 5.00 ಗಂಟೆಯ ನಂತರ. ಮೇಲಿನ ವಿವರಗಳು ಭವಿಷ್ಯದಲ್ಲಿ ಸಂದರ್ಭೋಚಿತವಾಗಿ ಬದಲಾವಣೆಗೆ ಒಳಪಟ್ಟಿರುತ್ತದೆ. ಹೆಚ್ಚಿನ ವಿವರ ಹಾಗೂ ನಿಬಂಧನೆಗಳಿಗೆ https://kppp.karnataka.gov.in ಅಂತರ್ಜಾಲ ತಾಣದಲ್ಲಿ (ಇಲಾಖೆ) ಅಥವಾ ಹೇಮಾವತಿ ಅಣೆಕಟ್ಟು ವಿಭಾಗ, ಗೊರೂರು ಕಚೇರಿಯಲ್ಲಿ ಕೆಲಸದ ವೇಳೆಯಲ್ಲಿ (ರಜಾದಿನ ಹೊರತುಪಡಿಸಿ) ಪಡೆಯಬಹುದು.
ಸಹಿ/– ಕಾರ್ಯಪಾಲಕ ಇಂಜಿನಿಯರ್, ಹೇಮಾವತಿ ಅಣೆಕಟ್ಟು ವಿಭಾಗ, ಕಾನೀನಿನಿ, ಗೊರೂರು
ವಾಸಾಸಂಇ/ಹಿಸನಿ/ಹಾಸನ/724/ಕೆಎಸ್‌ಎಂಸಿಎ/725/2023–24

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ರೂಪರೇಖಾ ಮತ್ತು ತನಿಖಾ ವಿಭಾಗ, ಬನ್ನೂರು–571101.
ಪೊ: 08227–275653, ಫ್ಯಾಕ್ಸ್: 08227–275653
ಇ–ಮೇಲ್: eedidbannur@gmail.com
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 09/2023–24: ದಿ: 03.02.2024
(**Karnataka Public Procurement Portal** ಮೂಲಕ ಮಾತ್ರ) ನೊಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರುಗಳಿಂದ ಅಭಿವೃದ್ಧಿ ಕಾಮಗಾರಿಗೆ ಐಟಂವಾರು ಟೆಂಡರ್‌ಅನ್ನು ಈ ಕಛೇರಿಯ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ 09/2023–24, ದಿನಾಂಕ:03.02.2024 ರಲ್ಲಿ ಒಟ್ಟು 1 ಕಾಮಗಾರಿಗೆ ಕೆ.ಡಬ್ಲ್ಯೂ–4 ರನ್ವಯ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್ ಸಲ್ಲಿಸುವ ದಿನಾಂಕ ಮತ್ತು ತೆರೆಯುವ ದಿನಾಂಕ ಹಾಗೂ ಇತರೆ ವಿವರಗಳನ್ನು Karnataka Public Procurement Portal ನಲ್ಲಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ/– ಮಾಡಿರುವ ಕಛೇರಿಯಿಂದ ಪಡೆಯಬಹುದಾಗಿರುತ್ತದೆ.
DIPR/DDMYS/KSMCA/1006/2023-24 ಸಹಿ/– ಕಾರ್ಯಪಾಲಕ ಅಭಿಯಂತರರು

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಕೆಂಪೇಗೌಡ ಬಸ್ ನಿಲ್ದಾಣ ವಿಭಾಗ : ಬೆಂಗಳೂರು
ಸಂ/ಕರಾಸಾ/ವಿನಿ/ಕೆಂಬನಿ/ವಾ/1122/2023–24 ದಿನಾಂಕ:02.02.2024
–:ತಿದ್ದುಪಡಿ ಆದೇಶ:–
ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಕೆಂಪೇಗೌಡ ಬಸ್ ನಿಲ್ದಾಣ ವಿಭಾಗದ ವ್ಯಾಪ್ತಿಗೆ ಬರುವ ದೇವನಹಳ್ಳಿ ಟ್ರಂಪೆಟ್ ಬಸ್ ನಿಲ್ದಾಣದಲ್ಲಿ ಗುರುತಿಸಿರುವ ಸ್ಥಳದಲ್ಲಿ ಜಾಹೀರಾತು ಫಲಕಗಳನ್ನು ಪ್ರದರ್ಶಿಸುವ ಸಂಬಂಧ ಪರವಾನಗಿದಾರರನ್ನು ಆಯ್ಕೆ ಮಾಡಲು "ಹೇಗಿದೆಯೋ ಹಾಗೇ" ಎಂಬ ಷರತ್ತಿನೊಂದಿಗೆ ಇ–ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಪ್ರಕಟಣೆ ಸಂಖ್ಯೆ 938/2023–24 ದಿನಾಂಕ:18.12.2023 ರನ್ವಯ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಸದರಿ ಇ–ಟೆಂಡರ್ ಪ್ರಕ್ರಿಯೆಯನ್ನು (Tender Reference No KSRTC/2023-24/SEO581)ನ್ನು ಮುಂದೂಡಲಾಗಿದೆ. ಹೆಚ್ಚಿನ ಮಾಹಿತಿಗಾಗಿ / ವಿವರಗಳಿಗಾಗಿ https://kppp.karnataka.gov.in ನಿಂದ ಹಾಗೂ ನಿಗಮದ ವೆಬ್‌ಸೈಟ್ https://ksrtc.karntaka.gov.in ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ಕೆಂಪೇಗೌಡ ಬಸ್ ನಿಲ್ದಾಣ ವಿಭಾಗ, ಬೆಂಗಳೂರು 560009 ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ದೂರವಾಣಿ ಸಂಖ್ಯೆ 7760990557, 7760990554 ಮತ್ತು ಸಹಾಯವಾಣಿ ಸಂಖ್ಯೆ +91–08460100000/+91–8068948777.
ಸಹಿ/– ಹಿರಿಯ ವಿಭಾಗೀಯ ನಿಯಂತ್ರಣಾಧಿಕಾರಿ
ವಾಸಾಸಂಇ/ವಾಪ್ರ/ಜಿಎ/3405/2023–24

ದಾವಣಗೆರೆ ವಿಶ್ವವಿದ್ಯಾನಿಲಯ
ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ–577007.
ದೂರವಾಣಿ ಸಂಖ್ಯೆ: 08192–208029
ಸಂಖ್ಯೆ:ದಾವಿ:ಅಭಿ/283/2023–24/4217 ದಿನಾಂಕ: 31.01.2024
ಇ–ಟೆಂಡರ್ ಪ್ರಕಟಣೆ
2024–25ನೇ ಸಾಲಿಗೆ ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆಯಲ್ಲಿ ಗ್ರೂಪ್ "ಸಿ" &"ಡಿ" ಹಾಗೂ ಇತರೆ ಸಿಬ್ಬಂದಿಯ ಸೇವೆಯನ್ನು ಹೊರಸಂಪನ್ಮೂಲದ ಏಜೆನ್ಸಿಯ ಮುಖಾಂತರ ಪಡೆಯುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ (ಕೆ.ಟಿ.ಪಿ.ಪಿ) ಅಧಿನಿಯಮ 1999, ನಿಯಮಗಳು 2000ರ ಪ್ರಕಾರ ನುರಿತ ಹೊರಸಂಪನ್ಮೂಲದ ಏಜೆನ್ಸಿಯ ಮುಖಾಂತರ ಪಡೆಯಲು ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಆಹ್ವಾನಿಸಲಾಗಿದೆ.
(1) ಟೆಂಡರ್ ಸಂಖ್ಯೆ DU/2023-24/SE0004 (2) ಟೆಂಡರ್ ಪ್ರಕಟಣೆ ದಿನಾಂಕ 02–02–2024 (3) ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ 8,00,00,000/– (ರೂ.ಎಂಟು ಕೋಟಿ) (4) ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ 02–02–2024 (5) ಬಿಡ್ ಪೂರ್ವಭಾವಿ ಸಭೆ 13–02–2024 (6) ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ 19–02–2024 (7) ತಾಂತ್ರಿಕ ಬಿಡ್ ತೆರೆಯುವ ದಿನಾಂಕ 21–02–2024 (8) ಹಣಕಾಸಿನ ಬಿಡ್ ತೆರೆಯುವ ದಿನಾಂಕ 23–02–2024 (9) ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ 1.5% (12,00,000/–) ಟೆಂಡರ್‌ದಾರರು E-Portal ಮೂಲಕ ಟೆಂಡರ್ ಸಲ್ಲಿಸುವುದು. ಹೆಚ್ಚಿನ ಮಾಹಿತಿಯನ್ನು https://www.kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆದು ಪರಿಶೀಲಿಸುವುದು. ಹಾಗೂ ಮಾಹಿತಿಗಾಗಿ ಕುಲಸಚಿವರು, ಶಿವಗಂಗೋತ್ರಿ, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ. ದೂ.ಸಂ 08192–208029 ಇಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.
ವಾಸಾಇ/ದಾವಣಗೆರೆ/553/ಕೆಎಸ್‌ಎಂಸಿಎ/2023–24 ಸಹಿ/– ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.

ಕರ್ನಾಟಕ ಸರ್ಕಾರ
ಕರ್ನಾಟಕ ಅರಣ್ಯ ಇಲಾಖೆ
ಕಾರವಾರ ವಿಭಾಗ, ಕಾರವಾರ
ಕಾರವಾರ ವಿಭಾಗ, ಕಾರವಾರ ಇದರ ಹಟ್ಟಿಕೇರಿ ಡಿಪೋದಲ್ಲಿ ಮರದ ಇ–ಟೆಂಡರ್ ಹಾಗೂ ಹರಾಜಿನ ವಿವರವಾದ ಪ್ರಕಟಣೆ
ಸಂಖ್ಯೆ: ಎ6/ಡಿಪೋ/ಇ–ಹರಾಜು/ಮಾರ್ಚ್–2024/ಸಿಆರ್–01/2023–24 ದಿನಾಂಕ: 01.02.2024
ಸಾರ್ವಜನಿಕರ ಸಾಮಾನ್ಯ ಮಾಹಿತಿಗಾಗಿ ಈ ಮೂಲಕ ಪ್ರಕಟಪಡಿಸುವುದೇನೆಂದರೆ, ಕಾರವಾರ ವಿಭಾಗ, ಕಾರವಾರ ಇದರ ಹಟ್ಟಿಕೇರಿ ಸರ್ಕಾರಿ ಟಿಂಬರ್ ಡಿಪೋದಲ್ಲಿ ದಾಸ್ತಾನು ಮಾಡಿರುವ ಮತ್ತು ಲಾಟು ಮಾಡಿರುವ ಕೆಳಕಂಡ ನಮೂನೆಯ ಮತ್ತು ಪ್ರಮಾಣದ ಮರ ಮತ್ತು ಇತರೆ ಅರಣ್ಯ ಉತ್ಪನ್ನಗಳನ್ನು **ದಿನಾಂಕ 06–03–2024 ರಂದು (ಎಲ್ಲಾ ನಾಲ್ಕು ಸೆಷನ್‌ಗಳಿಗೆ) ಬೆಳಿಗ್ಗೆ 10.00** ಗಂಟೆಯಿಂದ ಪ್ರಾರಂಭವಾಗಿ ಎಲ್ಲಾ ಲಾಟುಗಳಿಗೆ ಬಿಡ್ಡಿಂಗ್ ಪೂರ್ಣವಾಗುವವರೆಗೆ ಒಂದು ಅಥವಾ ಹೆಚ್ಚಿನ ಸೆಷನ್‌ಗಳಲ್ಲಿ ಬಹಿರಂಗ ಇ–ಟೆಂಡರ್ ಹಾಗೂ ಹರಾಜಿನ ಮೂಲಕ ಮಾರಾಟ ಮಾಡಲಾಗುವುದು. ಉಪ ಅರಣ್ಯ ಸಂರಕ್ಷಣಾಧಿಕಾರಿ, ಕಾರವಾರ ವಿಭಾಗ, ಕಾರವಾರ ಇವರು ಮಾರಾಟ ನಡೆಸುವ ಅಧಿಕಾರಿಯಾಗಿರುವರು.
ಯಾವುದೇ ಸ್ಪಷ್ಟನೆಗಳಿಗಾಗಿ ನೀವು ಇವರನ್ನು ಸಂಪರ್ಕಿಸಬಹುದು:
ಸರ್ಕಾರಿ ಟಿಂಬರ್ ಡಿಪೋ, ಹಟ್ಟಿಕೇರಿ:
gtdhattikeri@gmail.com ದೂರವಾಣಿ: 08388–248796
ವಲಯ ಅರಣ್ಯಾಧಿಕಾರಿ, ಅಂಕೋಲ:
rangeforestankola@gmail.com ದೂರವಾಣಿ: 08388–230342
ಉಪ ಅರಣ್ಯ ಸಂರಕ್ಷಣಾಧಿಕಾರಿ, ಕಾರವಾರ ವಿಭಾಗ, ಕಾರವಾರ:
karwardcf@gmail.com ದೂರವಾಣಿ: 08382–226365.
ಸಹಿ/– (ರವಿಶಂಕರ್ ಸಿ. IFS) ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಕಾರವಾರ ವಿಭಾಗ, ಕಾರವಾರ
DIPR/KWR/KSMCA/621/23-24 Dt. 02.02.2024

ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ
ಸರ್ಕಾರಿ ಮಾದರಿ ಕೈಗಾರಿಕಾ ತರಬೇತಿ ಸಂಸ್ಥೆ
ಡೈರಿ ವೃತ್ತ ಹತ್ತಿರ, ಹೊಸೂರು ರಸ್ತೆ, ಬೆಂಗಳೂರು – 560029.
ಫೋನ್: 080–29913040 ಇ–ಮೇಲ್: kagiti_b29@yahoo.com
No: GMITI/IMC/CR-16/2023-2024 Date: 01-02-2024
ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)
ಸರ್ಕಾರಿ ಮಾದರಿ ಕೈಗಾರಿಕಾ ತರಬೇತಿ ಸಂಸ್ಥೆಗೆ ಈ ಕೆಳಕಂಡಂತೆ ಯಂತ್ರೋಪಕರಣ, ಸಣ್ಣ ಉಪಕರಣ ಗಣಕಯಂತ್ರಗಳು ಮತ್ತು ಉಪಕರಣಗಳನ್ನು ಖರೀದಿಸುವ ಸಂಬಂಧ ಅರ್ಹ ಟೆಂಡರ್‌ದಾರರಿಂದ ಎರಡು ಎಲೆಕ್ಟ್ರಾನಿಕ್ ಟೆಂಡರ್ ಡಾಕ್ಯೂಮೆಂಟ್ ವ್ಯವಸ್ಥೆಯಂತೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕತೆ ಕಾಯ್ದೆ 1999 ಅನ್ವಯ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ.

ಕ್ರ.ಸಂ.	ಟೆಂಡರ್ ಸಂಖ್ಯೆ ಮತ್ತು ಹೆಸರು
1	DET/2023-24/IND0011 - Computer & Computer peripherals
2	DET/2023-24/IND0012 - Machines for Mechanical Trades
3	DET/2023-24/IND0013 - Small Tools
4	DET/2023-24/IND0014 - Special Equipment's - Automobiles
5	DET/2023-24/IND0015 - Electrical & Electronics Equipment's

ಈ ದಾಖಲೆಯ ಮತ್ತು ಟೆಂಡರ್ ಪ್ರೊಸೆಸಿಂಗ್ ಫೀ ವಿವರಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸರ್ಕಾರಿ ವೆಬ್‌ಸೈಟ್: https://kppp.karnataka.gov.in ಮೂಲಕ ಮಾಹಿತಿ ಪಡೆಯಬಹುದು ಸಹಾಯಕ್ಕಾಗಿ ದೂರವಾಣಿ ಸಂಖ್ಯೆ: 080–25501216 / +91 9448754373 ಸಂಪರ್ಕಿಸಬಹುದು ಅಥವಾ ಈ ಕಛೇರಿಯನ್ನು ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.
ಸಹಿ/– ಟೆಂಡರ್ ಆಹ್ವಾನಿಸುವ ಪ್ರಾಧಿಕಾರ
ಪ್ರಾಚಾರ್ಯರು, ದರ್ಜೆ–1 / ಕಾರ್ಯದರ್ಶಿಗಳು, ಐಎಮ್‌ಸಿ, ಸರ್ಕಾರಿ ಮಾದರಿ ಕೈಗಾರಿಕಾ ತರಬೇತಿ ಸಂಸ್ಥೆ, ಬೆಂಗಳೂರು.
ವಾಸಾಸಂಇ/ವಾ.ಪ್ರ/3391/ಅಡ್ವರ್ಟೋ/2023–24

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಧಾರವಾಡ – 580001. ದೂರವಾಣಿ: 0836–244831
ಇ–ಮೇಲ್: eemidivdwd@yahoo.com / midn_dwd@rediffmail.com
ಸಂಖ್ಯೆ: 23/2023–24 ದಿನಾಂಕ: 20–01–2024
ಟೆಂಡರ್ ಪ್ರಕಟಣೆ
ಕರ್ನಾಟಕ ಲೋಕೋಪಯೋಗಿ ಹಾಗೂ ಜಲಸಂಪನ್ಮೂಲ ಇಲಾಖೆಗಳಲ್ಲಿ ನೋಂದಾಯಿಸಿ ನವೀಕರಿಸಿಕೊಂಡಿರುವ ಅರ್ಹ ಗುತ್ತಿಗೆದಾರರಿಂದ ಐಟಂ ದರದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ–2000 ಮತ್ತು ಇತ್ತೀಚಿನ ತಿದ್ದುಪಡಿಗಳಂತೆ ಈ ವಿಭಾಗ ಕಛೇರಿಯಡಿ ಬರುವ ಧಾರವಾಡ ಉಪ ವಿಭಾಗದ ಈ ಕೆಳಗಿನ ಕಾಮಗಾರಿಗಳನ್ನು ಕೆ.ಡಬ್ಲ್ಯೂ–2 (ಏಕ ಲಕೋಟೆ) ಪದ್ಧತಿಯಲ್ಲಿ "ಇ–ಪ್ರೊಕ್ಯೂರ್‌ಮೆಂಟ್" ಮುಖಾಂತರ ಟೆಂಡರ್ ಕರೆಯಲಾಗಿದೆ. **ಲೆಕ್ಕ ಶೀರ್ಷಿಕೆ: 2702 – ಕೆರೆಗಳ ನಿರ್ವಹಣೆ ಮತ್ತು ದುರಸ್ತಿ ಕಾಮಗಾರಿ (ಒಟ್ಟು 01 ಕಾಮಗಾರಿ);** ಟೆಂಡರ್‌ಗೆ ಇಡಲಾದ ಅಂದಾಜು ಮೊತ್ತ **ರೂ. 28.43 ಲಕ್ಷಗಳು** ಹಾಗೂ ಇ.ಎಂ.ಡಿ ಮೊತ್ತ **ರೂ. 50,000.00;** ಖಾಲಿ ಟೆಂಡರ್ ಫಾರಂಗಳನ್ನು ಇ–ಪ್ರೊಕ್ಯೂರ್‌ಮೆಂಟ್‌ನ ವೆಬ್‌ಸೈಟ್ ವಿಳಾಸ: https://kppp.karnataka.gov.in ನಲ್ಲಿ ದಿನಾಂಕ: **05–02–2024 ರ ನಂತರದಿಂದ** ಡೌನ್‌ಲೋಡ್ ಮಾಡಿಕೊಳ್ಳುವುದು. ಟೆಂಡರ್ ಕುರಿತಂತೆ ಅನುಮಾನಗಳಿದ್ದರೆ ಕಛೇರಿ ಅಥವಾ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಸಂಪರ್ಕಿಸಿ ಪರಿಹರಿಸಿಕೊಳ್ಳಬಹುದಾಗಿದೆ. ಟೆಂಡರ್‌ಗಳನ್ನು ದಿನಾಂಕ: **12–02–2024 ರಂದು 17.30 ಗಂಟೆಯವರೆಗೆ ಸ್ವೀಕರಿಸಲಾಗುವುದು.** ಕಾಮಗಾರಿಗಳ ಆರ್ಥಿಕ ಬಿಡ್‌ನ್ನು ದಿನಾಂಕ: **13–02–2024 ರಂದು ಸಂಜೆ 17.45 ಗಂಟೆಗೆ ತೆರೆಯಲಾಗುವುದು.**
ವಿ.ಸೂ: ಸದರಿ ಟೆಂಡರ್ ಪ್ರಕಟಣೆಗೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿ / ಸೇರ್ಪಡೆ, ದಿನಾಂಕಗಳ ಬದಲಾವಣೆ, ಇನ್ನಿತರೆ ಯಾವುದೇ, ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರವೇ ಪ್ರಕಟಿಸಲಾಗುವುದು.
ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಧಾರವಾಡ.
ವಾಸಾಸಂಇ/ಧಾರವಾಡ/751/ಅಡ್ವರ್ಟೋ/2023–24

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
NAAC Accredited with "A" Grade 2022
"UNIVERSITY WITH POTENTIAL FOR EXCELLENCE"
ಸಾಮಾನ್ಯ ಆಡಳಿತ ವಿಭಾಗ
G.A.D.
ದೂರವಾಣಿ ಸಂಖ್ಯೆ :0836-2215358 ಪಾವಟೆನಗರ, ಧಾರವಾಡ,
Website: www.kud.ac.in E-mail:kudgad@gmail.com gad@kud.ac.in
ಇ–ಟೆಂಡರ್ ಪ್ರಕಟಣೆ
2023–24ನೇ ಸಾಲಿಗೆ ಕರ್ನಾಟಕ ವಿಶ್ವವಿದ್ಯಾಲಯ, ಪಾವಟೆನಗರ, ಧಾರವಾಡ, ಘಟಕ ಮಹಾವಿದ್ಯಾಲಯಗಳು ಹಾಗೂ ಸ್ನಾತಕೋತ್ತರ ಕೇಂದ್ರಗಳಾದ ಕಾರವಾರ ಮತ್ತು ಗದಗ ಇಲ್ಲಿಗೆ ಭದ್ರತಾ ಸಿಬ್ಬಂದಿಯ ಸೇವೆಯನ್ನು ನುರಿತ ಏಜೆನ್ಸಿಯ ಮುಖಾಂತರ ಪಡೆಯುವ ಬಗ್ಗೆ ಇ–ಟೆಂಡರ್ ಪ್ರಕಟಣೆ.

1.	ಟೆಂಡರ್ ಸಂಖ್ಯೆ	ಕೆಯು/ಜಿಎಡಿ/2023–24/971, ದಿನಾಂಕ: 01.02.2024
2	ಟೆಂಡರ್ ಪ್ರಕಟಣೆ ದಿನಾಂಕ	02.02.2024
3	ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ (11 ತಿಂಗಳು)	ರೂ.3,15,18,744/–
4	ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ	ದಿನಾಂಕ: 02.02.2024 ರ ಮಧ್ಯಾಹ್ನ 15.00 ಗಂಟೆಗೆ
5	ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ	ದಿನಾಂಕ: 04.03.2024 ರ ಮಧ್ಯಾಹ್ನ 15.00 ಗಂಟೆಗೆ
6	ಬಿಡ್ ಪೂರ್ವಭಾವಿ ಸಭೆ	ದಿನಾಂಕ: 12.02.2024 ಮಧ್ಯಾಹ್ನ 12.30 ಗಂಟೆಗೆ ಸ್ಥಳ: ಸಿಂಡಿಕೇಟ್ ಸಭಾಭವನ
7	ತಾಂತ್ರಿಕ ಬಿಡ್ ತೆರೆಯುವ ವೇಳೆ ಮತ್ತು ದಿನಾಂಕ	ದಿನಾಂಕ:05.03.2024 ಮಧ್ಯಾಹ್ನ 15.05 ಗಂಟೆಗೆ
8	ಹಣಕಾಸಿನ ಬಿಡ್ ತೆರೆಯುವ ವೇಳೆ ಮತ್ತು ದಿನಾಂಕ	ತಾಂತ್ರಿಕ ಪರಿಶೀಲನೆ ನಂತರ ತೆರೆಯಲಾಗುವುದು. ದಿನಾಂಕ: 07.03.2024 ಮಧ್ಯಾಹ್ನ 15.00 ಗಂಟೆಗೆ
9	ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ	ರೂ.12,60,749/– (ಇ–ಪ್ರಕ್ಯೂರ್‌ಮೆಂಟ್ ಮೂಲಕ ಪಾವತಿಸುವುದು)
10	ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ	ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ, ಪಾವಟೆನಗರ ಧಾರವಾಡ– 580003. ದೂರವಣಿ ಸಂಖ್ಯೆ : 0836–2215358

ಸಹಿ/– ಕುಲಸಚಿವರು

ಮೈಸೂರು ಸಕ್ಕರೆ ಕಂಪನಿ ನಿಯಮಿತ, ಮಂಡ್ಯ.
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಸಕ್ಕರೆ ನಗರ, ಮಂಡ್ಯ 571 402.
GM/AM(C)/Sug/84/2023-24 Date: 01.02.2024
Telephone:08232-224036
ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ
ಮೈಸೂರು ಸಕ್ಕರೆ ಕಂಪನಿಯ ಉತ್ಪನ್ನವಾದ ಸಕ್ಕರೆ ಮಾರಾಟ ಮಾಡಲು ಅಲ್ಪಾವಧಿ ಇ–ಟೆಂಡರ್ ಪ್ರಕಟಣೆಯ ಮುಖಾಂತರ ಟೆಂಡರ್‌ನ್ನು ಆಹ್ವಾನಿಸಲಾಗಿದೆ.
ಕ್ರಮ ಸಂಖ್ಯೆ : 01. ಸಾಮಗ್ರಿ ವಿವರ : ಸಕ್ಕರೆ ಎಸ್–30 ಉತ್ಪಾದನೆ 2023–24 ನೇ ಸಾಲು. ಮಾರಾಟದ ಪ್ರಮಾಣ : 5670 ಕ್ವಿಂಟಾಲ್. ಇ.ಎಂ.ಡಿ ಹಣ (ಪ್ರತಿ ಕ್ವಿಂಟಾಲಿಗೆ) : ರೂ.100. ಟೆಂಡರ್ ಫೀ. : ಇ– ಪೋರ್ಟಲ್ ನಿಯಮಾವಳಿ.
ಸೂಚನೆ: ಬಿಡ್‌ದಾರರು ಮೈಸೂರು ಸಕ್ಕರೆ ಕಂಪನಿಯ, ಮಂಡ್ಯದ ಗೋದಾಮುಗಳಿಗೆ ಭೇಟಿ ನೀಡಿ, ಸಕ್ಕರೆ ಗುಣಮಟ್ಟವನ್ನು ಪರಿಶೀಲಿಸಿಕೊಂಡು ನಂತರ ದರವನ್ನು ನಮೂದಿಸುವುದು. ಇ– ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ನ್ನು **(https://Kppp.Karnataka.gov.in)** ತುಂಬುವುದು. ಇ–ಪೋರ್ಟಲ್ ಟೆಂಡರ್‌ನ್ನು ತುಂಬಲು ಪ್ರಾರಂಭದ. ದಿನಾಂಕ:**02.02.2024** ಮತ್ತು ಕೊನೆಯ ದಿನಾಂಕ:**12.02.2024 ರ 5.00 PM ಗಂಟೆ** ಆಗಿರುತ್ತದೆ. (1) ಆನ್‌ಲೈನ್‌ನಲ್ಲಿ ಬಿಡ್ ಮಾಡಲು ದಿನಾಂಕ:**13.02.2024** ಸಮಯ ಬೆಳಿಗ್ಗೆ **11:00 ರಿಂದ ಮಧ್ಯಾಹ್ನ 3.00 ಗಂಟೆಯವರೆಗೆ** ಮಾತ್ರ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ಮೊಬೈಲ್ ಸಂಖ್ಯೆ: **9844766773/7353328103.** ಟೆಂಡರ್‌ನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ವ್ಯವಸ್ಥಾಪಕ ನಿರ್ದೇಶಕರು ಹೊಂದಿರುತ್ತಾರೆ. ವ್ಯವಸ್ಥಾಪಕ ನಿರ್ದೇಶಕರ ತೀರ್ಮಾನವೇ ಅಂತಿಮವಾಗಿರುತ್ತದೆ.
ದಿನಾಂಕ:01.02.2024 ಸಹಿ/– ಪ್ರಧಾನ ವ್ಯವಸ್ಥಾಪಕರು
ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/503/2023–24

ಮುಂಬೈ ಧಾರಣೆ

ಶೇಂಗಾ

3-2-2024

ಜಾವಾ 70/80(ಹೊಸ)	11300-11400
ಜಾವಾ 80/90(ಹೊಸ)	10900-11000
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10400-10500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1530 (1530)
ಒಂದು ವಾರದ ಡೆಲಿವರಿ	1525 (1525)
ಸೋಯಾ ಕಚ್ಚಾ	835 (835)
ಪಾಮ್ ವಾರದ ಡೆಲಿವರಿ	840 (843)
ಸೂರ್ಯಕಾಂತಿ ಎಣ್ಣೆ ಕಚ್ಚಾ	845 (845)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹62,700 (62,600)
ಬೆಳ್ಳಿ ಕೆ.ಜಿ ₹70,950 (71,000)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹161.00
ಆರ್‌ಎಸ್‌ಎಸ್-5 ₹156.00
ಗುಡ್ ಲಾಟ್ (ಪ್ರತಿ ಕೆ.ಜಿಗೆ) ₹139.00

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹331-465
ದ್ವಿತಳಿ (ಬಿ.ವಿ) ₹301-548

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100ಕ್ಕೆ ₹570
12 ಕ್ಕೆ ₹75
ಮೈಸೂರು
100ಕ್ಕೆ ₹572

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ನೆನ್ನೆಯ ದರ)

ಶೇಂಗಾ (ರಿಫೈನ್ಡ್)	₹1520 (1520)
ಸೋಯಾ (ರಿಫೈನ್ಡ್)	₹875 (885)
ಸೂರ್ಯಕಾಂತಿ (ರಿಫೈನ್ಡ್)	₹905 (905)
ಪಾಮೋಲಿನ್	₹840 (845)

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಕೆ.ಆರ್. ಪೇಟೆ	₹8000-8000
ತಿಪಟೂರು	₹7000-8500
ತುಮಕೂರು	₹3800-4400
ತುರುವೇಕೆರೆ	₹8400-8400

ಮುದ್ರಮನೆ ಕಾಫಿ

(50 ಕೆಜಿಗೆ)

ಎಪಿ	₹14,500
ಎಸಿ	₹7,900
ಆರ್‌ಪಿ	₹12,900
ಆರ್‌ಸಿ	₹7500

ಆಕಸ್ಮಿಕ ಲಾಭ ತೆರಿಗೆ ಏರಿಕೆ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ದೇಶದಲ್ಲಿ ಉತ್ಪಾದನೆ ಆಗುವ ಕಚ್ಚಾ ತೈಲದ ಮೇಲಿನ ಆಕಸ್ಮಿಕ ಲಾಭ ತೆರಿಗೆಯನ್ನು ಪ್ರತಿ ಟನ್‌ಗೆ ₹1,700 ರಿಂದ ₹3,200ಕ್ಕೆ ಹೆಚ್ಚಿಸಿದೆ.

ವಿಶೇಷ ಹೆಚ್ಚುವರಿ ಅಬಕಾರಿ ಸುಂಕದ (ಎಸ್‌ಎಇಡಿ) ರೂಪದಲ್ಲಿ ಈ ತೆರಿಗೆ ವಿಧಿಸಲಾಗುತ್ತದೆ. ಶನಿವಾರದಿಂದಲೇ ಈ ಆದೇಶ ಜಾರಿಗೆ ಬಂದಿದೆ ಎಂದು ತಿಳಿಸಿದೆ.

ಆದರೆ ಡೀಸೆಲ್, ಪೆಟ್ರೋಲ್ ಮತ್ತು ವಿಮಾನ ಇಂಧನದ (ಎಟಿಎಫ್) ಮೇಲಿನ ತೆರಿಗೆಯಲ್ಲಿ ಏರಿಕೆ ಮಾಡದೆ ಯಥಾಸ್ಥಿತಿ ಕಾಯ್ದುಕೊಳ್ಳಲಾಗಿದೆ.

ವಿಶ್ವದ ಹಲವು ದೇಶಗಳಲ್ಲಿ ಇಂಧನ ಕಂಪನಿಗಳು ಗಳಿಸುವ ಹೆಚ್ಚಿನ ಆದಾಯದ ಮೇಲೆ ಆಕಸ್ಮಿಕ ಲಾಭ ತೆರಿಗೆ ವಿಧಿಸುವ ಪದ್ಧತಿ ಇದೆ. 2022ರ ಜುಲೈ 1ರಿಂದ ದೇಶದಲ್ಲಿಯೂ ಈ ತೆರಿಗೆ ಪದ್ಧತಿಯನ್ನು ಸರ್ಕಾರ ಜಾರಿಗೆ ತಂದಿದೆ.

ಪ್ರತಿ 15 ದಿನಕ್ಕೊಮ್ಮೆ ಸರಾಸರಿ ತೈಲ ಬೆಲೆಗಳ ಆಧಾರದ ಮೇಲೆ ಈ ತೆರಿಗೆ ದರವನ್ನು ಮರು ಪರಿಶೀಲಿಸಲಾಗುತ್ತದೆ.

ಕ್ರಿಸಿಲ್‌ನಿಂದ ಜಿಡಿಪಿ ಮುನ್ನೋಟ ವರದಿ ಪ್ರಕಟ: ಹಣದುಬ್ಬರ ಏರಿಕೆಗೆ ಕಳವಳ

ಶೇ 6.7 ಸರಾಸರಿ ಪ್ರಗತಿ ನಿರೀಕ್ಷೆ

ಕೋಲ್ಕತ್ತ (ಪಿಟಿಐ): 2024–25ರಿಂದ 2031–32ನೇ ಹಣಕಾಸು ವರ್ಷದ ಅವಧಿಯಲ್ಲಿ ಭಾರತದ ಜಿಡಿಪಿ ಬೆಳವಣಿಗೆ ದರವು ಸರಾಸರಿ ಶೇ 6.7ರಷ್ಟು ಇರಲಿದೆ ಎಂದು ಕ್ರೆಡಿಟ್ ರೇಟಿಂಗ್ ಸಂಸ್ಥೆ ಕ್ರಿಸಿಲ್ ಹೇಳಿದೆ.

ಕೋವಿಡ್ ಸಾಂಕ್ರಾಮಿಕಕ್ಕೂ ಮೊದಲು ದೇಶದ ಜಿಡಿಪಿ ಸರಾಸರಿ ಶೇ 6.6ರಷ್ಟಿತ್ತು. ಈ ಅವಧಿಯಲ್ಲಿ ಇದಕ್ಕಿಂತ ಸ್ವಲ್ಪ ಹೆಚ್ಚಳವಾಗಲಿದೆ ಎಂದು ಆರ್ಥಿಕ ಬೆಳವಣಿಗೆ ಕುರಿತ ತನ್ನ ಮುನ್ನೋಟದ ವರದಿಯಲ್ಲಿ ಹೇಳಿದೆ.

ಆರ್ಥಿಕ ಬೆಳವಣಿಗೆಯ ಹೆಚ್ಚಳಕ್ಕೆ ಸರ್ಕಾರದ ಹೂಡಿಕೆಯ ಕಾರ್ಯತಂತ್ರ ನೀತಿಯೇ ಕಾರಣ. ಖಾಸಗಿ ಕಂಪನಿಗಳು ಹೂಡಿಕೆಗೆ ಹಿಂದಡಿ ಇಡುತ್ತಿರುವ ಬೆನ್ನಲ್ಲೇ ಸರ್ಕಾರದ ಬಂಡವಾಳ ವೆಚ್ಚವು ಗಮನಾರ್ಹವಾಗಿ ಹೆಚ್ಚಳ ಆಗುತ್ತಿದೆ. ಬಡ್ಡಿರಹಿತ ಸಾಲದ ಪ್ರಮಾಣವನ್ನು ಹೆಚ್ಚಿಸುವ ಮೂಲಕ ಹೂಡಿಕೆಗೆ ರಾಜ್ಯಗಳಿಗೂ ಉತ್ತೇಜನ ನೀಡುತ್ತಿದೆ ಎಂದು ವಿವರಿಸಿದೆ.

ಮುಖ್ಯಾಂಶಗಳು

- ಫೆಡರಲ್ ರಿಸರ್ವ್ ಬಡ್ಡಿದರ ಮುಂದೂಡುವ ಸಾಧ್ಯತೆ
- ಕೇಂದ್ರ ಸರ್ಕಾರದ ಬಂಡವಾಳ ವೆಚ್ಚ ಹೆಚ್ಚಳ
- ಮಧ್ಯಪ್ರಾಚ್ಯ ಬಿಕ್ಕಟ್ಟಿನಿಂದ ಸರಕು ಸಾಗಣೆ ವೆಚ್ಚ ಹೆಚ್ಚಳ ನಿರೀಕ್ಷೆ

2023–24ನೇ ಹಣಕಾಸು ವರ್ಷದಲ್ಲಿ ಜಿಡಿಪಿ ಬೆಳವಣಿಗೆ ಶೇ 7.3ರಷ್ಟು ಪ್ರಗತಿ ಕಾಣಲಿದೆ. ಆದರೆ, 2024–25ನೇ ಹಣಕಾಸು ವರ್ಷದಲ್ಲಿ ಶೇ 6.4ರಷ್ಟಕ್ಕೆ ತಗ್ಗಲಿದೆ ಎಂದು ಅಂದಾಜಿಸಿದೆ.

ಮಧ್ಯಪ್ರಾಚ್ಯ ಬಿಕ್ಕಟ್ಟಿನಿಂದಾಗಿ ಇಂಧನ ಮತ್ತು ಸರಕು ಸಾಗಣೆ ವೆಚ್ಚವು ನಿರೀಕ್ಷೆಗೂ ಮೀರಿ ದುಬಾರಿಯಾಗಲಿದೆ. ಇದು ಆರ್ಥಿಕತೆ ಬೆಳವಣಿಗೆಯ ಇಳಿಕೆಗೆ ಕಾರಣವಾಗಲಿದೆ ಎಂದು ಹೇಳಿದೆ.

ಹಣದುಬ್ಬರ ಏರಿಕೆ: ತರಕಾರಿಗಳು ಮತ್ತು ಆಹಾರ ಪದಾರ್ಥಗಳ ಬೆಲೆ ಏರಿಕೆಯಿಂದಾಗಿ 2023ರ ಡಿಸೆಂಬರ್‌ನಲ್ಲಿ ಹಣದುಬ್ಬರವು ಶೇ 5.7ರಷ್ಟು ಏರಿಕೆಯಾಗಿದೆ. ಈ ನಡುವೆಯೇ ಶೇ 4ರಲ್ಲಿ ಹಣದುಬ್ಬರದ ಪ್ರಮಾಣವನ್ನು ಕಾಯ್ದುಕೊಳ್ಳಲು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಕಸರತ್ತು ನಡೆಸಿದೆ ಎಂದು ಹೇಳಿದೆ.

ಇಂಧನ ಬೆಲೆ ಗಣನೀಯವಾಗಿ ಕಡಿಮೆಯಾಗುತ್ತಿರುವುದು ಹಣದುಬ್ಬರ ಇಳಿಕೆಯಾಗುವ ಆಶಾಭಾವ ಮೂಡಿಸಿದೆ. ಆದರೆ, ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧಾರಿತ ಹಣದುಬ್ಬರದಲ್ಲಿ ಆಹಾರ ಪದಾರ್ಥಗಳ ಪಾಲು ದೊಡ್ಡದಿದೆ. ಇವುಗಳ ನಿರಂತರ ಬೆಲೆ ಏರಿಕೆಯು ಆಹಾರೇತರ ಪದಾರ್ಥಗಳ ಧಾರಣೆ ಹೆಚ್ಚಳಕ್ಕೆ ಕಾರಣವಾಗುವ ಅಪಾಯವಿದೆ ಎಂದು ಕಳವಳ ವ್ಯಕ್ತಪಡಿಸಿದೆ.

ಅಮೆರಿಕದ ಕೇಂದ್ರೀಯ ಬ್ಯಾಂಕ್ ಆದ ಫೆಡರಲ್ ರಿಸರ್ವ್ ಈ ವರ್ಷದಲ್ಲಿ ಬಡ್ಡಿದರ ಕಡಿಮೆ ಮಾಡಬಹುದೆಂಬ ನಿರೀಕ್ಷೆ ಇದೆ. ಆದರೆ, ಹೊಸ ಉದ್ಯೋಗಾವಕಾಶಗಳ ದತ್ತಾಂಶ ಮತ್ತು ಏರುಗತಿಯಲ್ಲಿರುವ ಹಣದುಬ್ಬರವನ್ನು ಅವಲೋಕಿಸಿದರೆ ನಿಗದಿತ ಅವಧಿಯಲ್ಲಿ ಬಡ್ಡಿದರ ಕಡಿತಗೊಳಿಸುವ ಅನುಮಾನವಿದೆ. ಮುಂದೂಡುವ ಸಾಧ್ಯತೆ ಇದೆ ಎಂದು ಹೇಳಿದೆ.

ಹಣಕಾಸು ಸಚಿವಾಲಯದ ಅಂದಾಜು



ಎಸ್‌ಬಿಐ ಲಾಭ ಶೇ 35ರಷ್ಟು ಇಳಿಕೆ

ನವದೆಹಲಿ (ಪಿಟಿಐ): ದೇಶದ ಸರ್ಕಾರಿ ಸ್ವಾಮ್ಯದ ಅತಿದೊಡ್ಡ ಬ್ಯಾಂಕ್ ಆಗಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾವು, 2023–24ನೇ ಹಣಕಾಸು ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ₹9,164 ಕೋಟಿ ನಿವ್ವಳ ಲಾಭ ಗಳಿಸಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹14,205 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಲಾಭದಲ್ಲಿ ಶೇ 35ರಷ್ಟು ಇಳಿಕೆಯಾಗಿದೆ ಎಂದು ಷೇರುಪೇಟೆಗೆ ಬ್ಯಾಂಕ್ ಶನಿವಾರ ತಿಳಿಸಿದೆ.

ಮೂರನೇ ತ್ರೈಮಾಸಿಕದಲ್ಲಿ ಬ್ಯಾಂಕ್‌ನ ಒಟ್ಟು ವರಮಾನವು ₹1,18,193 ಕೋಟಿಗೆ ಏರಿಕೆಯಾಗಿದೆ. ಹಿಂದಿನ ಹಣಕಾಸು ವರ್ಷದ ಮೂರನೇ ತ್ರೈಮಾಸಿಕದಲ್ಲಿ ₹98,084 ಕೋಟಿ ಗಳಿಸಿತ್ತು.

ಬ್ಯಾಂಕ್‌ನ ಬಡ್ಡಿ ವರಮಾನ ₹1,06,734 ಕೋಟಿಗೆ ಏರಿಕೆ ಆಗಿದೆ.

ವಸೂಲಾಗದ ಸಾಲದ ಸರಾಸರಿ ಪ್ರಮಾಣವು (ಎನ್‌ಪಿಎ) ಶೇ 3.14ರಿಂದ ಶೇ 2.42ಕ್ಕೆ ಕುಗ್ಗಿದೆ. ನಿವ್ವಳ ಎನ್‌ಪಿಎ ಶೇ 0.77ರಿಂದ ಶೇ 0.64ಕ್ಕೆ ಇಳಿಕೆಯಾಗಿದೆ ಎಂದು ಬ್ಯಾಂಕ್ ತಿಳಿಸಿದೆ.

ಈ ತ್ರೈಮಾಸಿಕದಲ್ಲಿ ಎಸ್‌ಬಿಐ ಪೆನ್ಷನ್ ಫಂಡ್ ಪ್ರೈವೆಟ್ ಲಿಮಿಟೆಡ್‌ನಲ್ಲಿ (ಎಸ್‌ಬಿಐಸಿಪಿಎಸ್) ಶೇ 20ರಷ್ಟು ಷೇರುಗಳನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಇದಕ್ಕಾಗಿ ಒಟ್ಟು ₹229.52 ಕೋಟಿ ವಿನಿಯೋಗಿಸಲಾಗಿದೆ. ಈ ಮೊದಲು ಬ್ಯಾಂಕ್ ಶೇ 60ರಷ್ಟು ಷೇರುಗಳ ಮೇಲೆ ಒಡೆತನ ಹೊಂದಿತ್ತು. ಈಗ ಅದರ ಪ್ರಮಾಣ ಶೇ 80ಕ್ಕೆ ಏರಿಕೆಯಾಗಿದೆ.

‘2002ರಿಂದಲೂ ಸಿಬ್ಬಂದಿಗೆ ಪಿಂಚಣಿ ನೀಡಿಕೆಯಲ್ಲಿ ಕೆಲವು ವ್ಯತ್ಯಾಸಗಳಿದ್ದವು. ಹಾಗಾಗಿ, ಸಿಬ್ಬಂದಿಯ ವೇತನ ಮತ್ತು ಪಿಂಚಣಿ ಬಾಕಿ ಪಾವತಿಗೆ ₹7,100 ಕೋಟಿ ವ್ಯಯಿಸಲಾಗಿದೆ. ಇದರಲ್ಲಿ ಪಿಂಚಣಿ ವ್ಯತ್ಯಾಸ ಸರಿಪಡಿಸಲು ₹5,400 ಕೋಟಿ ಹಂಚಿಕೆಯಾಗಿದೆ. ಹಾಗಾಗಿ, ತ್ರೈಮಾಸಿಕ ಲಾಭದಲ್ಲಿ ಇಳಿಕೆಯಾಗಿದೆ’ ಎಂದು ಎಸ್‌ಬಿಐ ಅಧ್ಯಕ್ಷ ದಿನೇಶ್ ಕುಮಾರ್ ಖಾರಾ ಹೇಳಿದ್ದಾರೆ.

ರಿಲಯನ್ಸ್ ಪವರ್‌ಗೆ ₹1,136 ಕೋಟಿ ನಷ್ಟ

ನವದೆಹಲಿ (ಪಿಟಿಐ): 2023–24ನೇ ಹಣಕಾಸು ವರ್ಷದ ಮೂರನೇ ತ್ರೈಮಾಸಿಕದಲ್ಲಿ ರಿಲಯನ್ಸ್ ಪವರ್ ಕಂಪನಿಗೆ ₹1,136.57 ಕೋಟಿ ನಿವ್ವಳ ನಷ್ಟವಾಗಿದೆ.

ನಿರ್ವಹಣಾ ವೆಚ್ಚದ ಹೆಚ್ಚಳವೇ ಈ ನಷ್ಟಕ್ಕೆ ಕಾರಣವಾಗಿದೆ ಎಂದು ಕಂಪನಿಯು ಷೇರುಪೇಟೆಗೆ ತಿಳಿಸಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿಯೂ ಕಂಪನಿಗೆ ₹291.54 ಕೋಟಿ ನಿವ್ವಳ ನಷ್ಟವಾಗಿತ್ತು.

ಆದರೆ, ಕಂಪನಿಯ ವರಮಾನದಲ್ಲಿ ಏರಿಕೆಯಾಗಿದೆ. ಹಿಂದಿನ ಹಣಕಾಸು ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ₹1,936.29 ಕೋಟಿ ಲಾಭ ಗಳಿಸಿತ್ತು. ಈ ಬಾರಿ ₹2,001.54 ಕೋಟಿಗೆ ಏರಿಕೆ ಆಗಿದೆ. ನಿರ್ವಹಣಾ ವೆಚ್ಚವು ₹2,126.33 ಕೋಟಿಯಿಂದ ₹3,179.08 ಕೋಟಿಗೆ ಹೆಚ್ಚಳವಾಗಿದೆ ಎಂದು ಕಂಪನಿಯು ವಿವರಿಸಿದೆ.

₹18 ಸಾವಿರ ಕೋಟಿ ಮೊತ್ತದ ‘ಐಟಿಸಿ’ ವಂಚನೆ ಪತ್ತೆ

ನವದೆಹಲಿ (ಪಿಟಿಐ): 2023–24ನೇ ಹಣಕಾಸು ವರ್ಷದ ಏಪ್ರಿಲ್‌ನಿಂದ ಡಿಸೆಂಬರ್‌ವರೆಗೆ ನಕಲಿ ಇನ್‌ವಾಯ್ಸ್ ಸೃಷ್ಟಿಸಿ ₹18 ಸಾವಿರ ಕೋಟಿ ಮೊತ್ತದ ಜಿಎಸ್‌ಟಿ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ (ಐಟಿಸಿ) ವಂಚಿಸಿದ್ದ 98 ಮಂದಿಯನ್ನು ಬಂಧಿಸಲಾಗಿದೆ ಎಂದು ಹಣಕಾಸು ಸಚಿವಾಲಯವು ಶನಿವಾರ ತಿಳಿಸಿದೆ.

ಈ ಆರೋಪಿಗಳು ನಕಲಿ ಬಿಲ್ ತೋರಿಸಿ ಐಟಿಸಿ ಸೌಲಭ್ಯ ಪಡೆದುಕೊಳ್ಳುತ್ತಿದ್ದರು. ದೇಶದ ವಿವಿಧೆಡೆ ಈ ವಂಚಕರ ಜಾಲ ಸಕ್ರಿಯವಾಗಿತ್ತು. ಜಿಎಸ್‌ಟಿ ಗುಪ್ತಚರ ಮಹಾನಿರ್ದೇಶನಾಲಯದ (ಡಿಜಿಜಿಐ) ಅಧಿಕಾರಿಗಳು ಸತತವಾಗಿ ಕಾರ್ಯಾಚರಣೆ ನಡೆಸಿ ಈ ಜಾಲವನ್ನು ಭೇದಿಸಿದ್ದಾರೆ ಎಂದು ತಿಳಿಸಿದೆ.

2023ರ ಡಿಸೆಂಬರ್‌ವರೆಗೆ ಒಟ್ಟು 1,700 ನಕಲಿ ಐಟಿಸಿ ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ. ಆಧುನಿಕ ತಂತ್ರಜ್ಞಾನದ ನೆರವಿನಿಂದ ಈ ತೆರಿಗೆ ವಂಚಕರ ಜಾಲವನ್ನು ಬಯಲಿಗೆಳೆಯಲಾಗಿದೆ ಎಂದು ತಿಳಿಸಿದೆ.

ಒಣ ಮೆಣಸಿನಕಾಯಿ ಮೇಳ ₹72 ಲಕ್ಷ ವಹಿವಾಟು

ಹುಬ್ಬಳ್ಳಿ: ನಗರದಲ್ಲಿ ಆರಂಭವಾಗಿರುವ ಒಣಮೆಣಸಿನಕಾಯಿ ಮೇಳದ ಎರಡನೇ ದಿನವಾದ ಶನಿವಾರ ₹72 ಲಕ್ಷ ಮೌಲ್ಯದ ಒಟ್ಟು 160 ಕ್ವಿಂಟಲ್ ಮೆಣಸಿನಕಾಯಿ ಮಾರಾಟವಾಗಿದೆ.

ಧಾರವಾಡ ಜಿಲ್ಲೆಯಲ್ಲದೇ ಗದಗ, ಬಳ್ಳಾರಿ, ವಿಜಯಪುರ, ಬಾಗಲಕೋಟೆ ಭಾಗದ ರೈತರು ವ್ಯಾಪಾರ ನಡೆಸಿದರು. ಧಾರವಾಡ ಜಿಲ್ಲೆ ಸೇರಿ ಹಾವೇರಿ, ಉತ್ತರ ಕನ್ನಡ ಜಿಲ್ಲೆಯ ಗ್ರಾಹಕರು ಖರೀದಿಸಿದರು. ‘ಈ ವರ್ಷ ಉತ್ತಮ ವಹಿವಾಟು ನಡೆದಿದೆ. ಬ್ಯಾಡಗಿ ಮೆಣಸಿನ ಕಾಯಿಗೆ ಬೇಡಿಕೆ ಹೆಚ್ಚಿದೆ. ಕೆ.ಜಿಗೆ ₹300 ರಿಂದ ₹700ರವರೆಗೆ ಮಾರಾಟ ಆಗುತ್ತಿದೆ. ಕಳೆದ ವರ್ಷದ ಮೇಳದಲ್ಲಿ ₹1.10 ಕೋಟಿ ವಹಿವಾಟು ಆಗಿತ್ತು. ಈ ವರ್ಷ ದಾಖಲೆಯ ವ್ಯವಹಾರ ನಡೆಯುವ ಸಾಧ್ಯತೆ ಇದೆ’ ಎಂದು ಕರ್ನಾಟಕ ಸಾಂಬಾರು ಪದಾರ್ಥಗಳ ಅಭಿವೃದ್ಧಿ ಮಂಡಳಿ ವ್ಯವಸ್ಥಾಪಕ ಸಿದ್ದರಾಮಯ್ಯ ಬರಗಿಮಠ ತಿಳಿಸಿದರು.

ಕರ್ನಾಟಕ ಸಂಬಾರು ಪದಾರ್ಥಗಳ ಅಭಿವೃದ್ಧಿ ಮಂಡಳಿ, ವಾಣಿಜ್ಯೋದ್ಯಮ ಸಂಸ್ಥೆ, ತೋಟಗಾರಿಕೆ ಇಲಾಖೆ, ಹುಬ್ಬಳ್ಳಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಸಂಶಿಯ ಅಮರಶಿವ ರೈತ ಉತ್ಪಾದಕ ಸಂಸ್ಥೆಯ ಸಹಯೋಗದ ಈ ಮೇಳ ಭಾನುವಾರ ಮುಕ್ತಾಯವಾಗಲಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

ಎಂ.ಜಿ.ರಸ್ತೆ, ಗರುಡಾ ಮಾಲ್ ಹಾಗೂ ಮಾಗರ್ತ ರಸ್ತೆಗೆ ಹತ್ತಿರ ಇರುವ ಕಾರ್ ಡ್ರೈವರ್ ಬೇಕಾಗಿದ್ದಾರೆ. ಕರೆ ಮಾಡಿ +91 9380572593

General

ಬೆಂಗಳೂರಿನ ದೇವಸ್ಥಾನದಲ್ಲಿ ಕೆಲಸ ಮಾಡಲು ವೇದ ಮಂತ್ರಗಳನ್ನು ಅರಿತಿರುವ ಬ್ರಾಹ್ಮಣ ಸಹಾಯಕ ಅರ್ಚಕರು ಬೇಕಾಗಿದ್ದಾರೆ. ಸಂಪರ್ಕಿಸಿ : 7019132200, 080-25300714

ಕೃಷಿ ಕೆಲಸ ಮಾಡಲು ಕಾರ್ಮಿಕರು ಬೇಕಾಗಿದ್ದಾರೆ. ಸ್ಥಳ: ಮುಳಬಾಗಲು, ವಸತಿ ಸೌಕರ್ಯ ನೀಡಲಾಗುವುದು. ದಂಪತಿಗಳಿಗೆ ಅವಕಾಶ, 14ಸಾವಿರ . 9916011953.

Situation Required

ಕನ್ನಡ ಟೆಲಿಕಾಲರ್ ಗಳು ಬೇಕಾಗಿದ್ದಾರೆ. (ಹೊಸಬರು/ ಅನುಭವಿಗಳು) ಸ್ಥಳ : ಮೈಸೂರು, ಬಿಜಾಪುರ, ಬೆಂಗಳೂರು, ಬಾಗಲಕೋಟೆ ಮತ್ತು ಗದಗ ವೇತನ (ಮಾಸಿಕ ರೂ. 15000/-), ಕೆಲಸದ ಸಮಯ: ಮಧ್ಯಾಹ್ನ 2:00 ರಿಂದ ರಾತ್ರಿ 8:30ರ ವರೆಗೆ, ಆಸಕ್ತರು 7669250202ಗೆ ಮಿಸ್ಡ್ ಕಾಲ್ ನೀಡಿರಿ

Wanted

ಜೋಳದ ರೊಟ್ಟಿ ಕಾರ್ಖಾನೆಯಲ್ಲಿ ರೊಟ್ಟಿ ಮಾಡಲು ಕೆಲಸಕ್ಕೆ ಬೇಕಾಗಿದ್ದಾರೆ. ಮಲ್ಲೇಶ್ವರಂ ಬೆಂಗಳೂರು ಮೊ. ಸಂ. 9019626612

ರೆಂಟಲ್ ಪ್ರಾಪರ್ಟೀಸ್

Accommodation Available

General

ಲೇಯರ್ ಕೋಳಿ ಫಾರಂ (ಮೊಟ್ಟೆ ಫಾರಂ) ಬಾಡಿಗೆಗೆ ದೊರೆಯುತ್ತದೆ ಸಾಮರ್ಥ್ಯ 21,000/ ಚನ್ನಪಟ್ಟಣ ಸಂಪರ್ಕಿಸಿ: 9448978383

ರಿಯಲ್ ಎಸ್ಟೇಟ್ ಸೆಲ್ಲಿಂಗ್

Commercial Building

Mysore

COMMERCIAL PROPERTY FOR SALE @ HUNSUR ROAD, BELVADI, MYSORE 570018. 6 STOREY BUILDING P.RENT 2LACS, E.RENT 2.80 LACS FIXED 10% ANNUAL INCREMENT ONLY INVESTORS / BUYERS. Call: 99456 96324 / 76760 54842

Sites

Koppal

ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲ್ಲೂಕು, ಹನುಮಸಾಗರ ಪಟ್ಟಣದಲ್ಲಿ, ರಾಜ್ಯ ಹೆದ್ದಾರಿ 59 ಕುಷ್ಟಗಿ ಮುಖ್ಯರಸ್ತೆಗೆ ಹೊಂದಿಕೊಂಡಿರುವ 6 ಸೈಟ್ ಗಳು ಮಾರಾಟಕ್ಕಿವೆ. (ಒಟ್ಟು 8400 ಚದುರ.ಅಡಿ) ಮಾಹಿತಿಗಾಗಿ ಸಂಪರ್ಕಿಸಿ: 9901594833, 8431173450.

House

Tumkur

NEWLY BUILT House for Sale in Tumkur City 1.1Cr, Slightly Negotiable : 9480887390

ರಿಯಲ್ ಎಸ್ಟೇಟ್ ಬೈಯಿಂಗ್

Commercial Land

General

4000SQ BDA site Kempegowda layout 60ft road east facing. CALL: 9606791121/9901966240

ವ್ಯಾಪಾರ

Business to Business

Business

ಟ್ರೇಡಿಂಗ್ ಎಕ್ಸ್‌ಪರ್ಟ್ ಹೆಚ್ಚು ಹಣ ಗಳಿಸಲು ಸ್ಮಾರ್ಟ್ ಮಾರ್ಗ ಷೇರು ಮಾರುಕಟ್ಟೆಯಲ್ಲಿ ಬಂಡವಾಳ ಹೂಡಿಕೆ ಪ್ರತಿದಿನ 3ರಿಂದ4ಗಂಟೆ ಕೆಲಸ ಮಾಡಿ ಮತ್ತು 3,000 ದಿಂದ 4000 ಸಂಪಾದಿಸಿ.ಕರೆ ಮಾಡಿ ಅಥವಾ ವಾಟ್ಸಪ್ :8088661489 / 9900928560

ವೈವಾಹಿಕ

Grooms Wanted

Kannada

ಲಿಂಗಾಯತ ಕುಟುಂಬವು 1996 ರಲ್ಲಿ ಜನಿಸಿದ 5'6 ನಿವಾಸಿ ಕುಟುಂಬಕ್ಕೆ ಸೂಕ್ತವಾದ ಹೊಂದಾಣಿಕೆಯನ್ನು ಹುಡುಕುತ್ತಿದೆ 08069072058

ಪ್ರವಾಸ

Travel

★ಶ್ರೇಯಸ್ ಟೂರ್ಸ್★ 02.03.2024,12.04.2024 10ದಿನಗಳು ಅಖಂಡನೇಪಾಳ ರಾಷ್ಟ್ರ ಪ್ರವಾಸ (ಮುಕ್ತಿನಾಥ) 13.03.2024,13.04.2024 6ದಿನಗಳು ಭೂತಾನ್ ರಾಷ್ಟ್ರದ ತಿಂಪೂ,ಪಾರೋ,ಪುನಕಾ ಪೂಚಲಿಂಗ್.20.03.2024 12/20ದಿನಗಳು ಈಶಾನ್ಯ ಭಾರತದ (ಸೆವೆನ್‌ಸಿಸ್ಟರ್ಸ್) ಅಸ್ಸಾಂ.ಅರುಣಾಚಲ. ಮೇಘಾಲಯ.ಮಣಿಪುರ.ತ್ರಿಪುರ. ಮಿಝೋರಾಂ,ನಾಗಲ್ಯಾಂಡ್. 9743351212, 9206979202, 8792319181, 6366322639

10 ದಿನಗಳ ಕಾಂಬೋಡಿಯಾ ಮತ್ತು ವಿಯಟ್ನಾಂ, 7/11 ದಿನಗಳ ಸಿಂಗಪುರ ಮತ್ತು ಮಲೇಷ್ಯಾ ಥೈಲ್ಯಾಂಡ್, 18 ದಿನಗಳ ಯುಕೆ ಮತ್ತು ಯುರೋಪ್, 5 ದಿನಗಳ ಬಾಕು, 6 ದಿನಗಳ ಬಾಲಿ, 10 ದಿನಗಳ ಗುಜರಾತ್ 9 ದಿನಗಳ ಭೂತಾನ್. ಭಟ್ ಟ್ರಾವೆಲ್ಸ್ 9844166555 ,9844037295

ಸಾರ್ವಜನಿಕ ಪ್ರಕಟಣೆ

IN THE HIGH COURT OF JUDICATURE AT MADRAS INTELLECTUAL PROPERTY DIVISION ORIGINAL COMMERCIAL JURISDICTION
(T) OP (TM) 384/2023
TTK Prestige Private Ltd., ...Petitioner
Versus
Bharath R and Anr. ...Respondents
To
R1- Bharath R.
5/1, M.M Lane, Ganigarpreet,
Nagarathpet Cross,
Banglore-560002
Please take notice that the above Petition is filed for cancellation/rectification of the Trademark bearing Registration No. 3772097 dated 07.03.2018 in Class 11 from The Register of Trademarks which is listed for the hearing on 21.02.2024 at 10.30 A.M. If you fail to appear on the said date in person or through pleader the above matter will be heard and decided exparte against you.
Inttl Advocate
Counsel for Petitioner
Express Trade Tower1st Floor, Tower 1, B-36, Sector–132 Noida Expressway, Noida 201303
National Capital Region of Delhi. INDIA

The Karnataka State Agarbathi Manufacturers Co-operative Society Ltd.,
18/3, 1st Main Road (Near Mission Road), Sampangiramanagar, Bengaluru - 560 027.
Phone No: 22221468/41622723
e-mail: ksamcs@gmail.com
ಕರ್ನಾಟಕ ರಾಜ್ಯ ಅಗರಬತ್ತಿ ತಯಾರಕರ ಸಹಕಾರ ಸಂಘ ನಿ., ಬೆಂಗಳೂರು–560027 ಇದರ ಸದಸ್ಯರಾದ ತಮಗೆ ಈ ಮೂಲಕ ತಿಳಿಸುವುದೇನೆಂದರೆ, ಸಂಘದ ಮುಂದಿನ ಐದು ವರ್ಷಗಳ (2024–28) ಅವಧಿಯ ಆಡಳಿತ ಮಂಡಳಿಯ 15 ಸ್ಥಾನಗಳ ನಿರ್ದೇಶಕರ ಆಯ್ಕೆಯಾಗಿ ಚುನಾವಣೆಯನ್ನು ದಿನಾಂಕ: 18.02.2024ನೇ ಭಾನುವಾರ ಬೆಳಿಗ್ಗೆ 9.00ರಿಂದ ಸಂಜೆ 4.00 ಗಂಟೆಯ ವರೆಗೆ ಸಂಘದ ಕಚೇರಿಯ ಆವರಣದಲ್ಲಿ ಏರ್ಪಡಿಸಲಾಗಿದೆ. ಚುನಾವಣೆ ವೇಳಾಪಟ್ಟಿಯನ್ನು ಎಲ್ಲಾ ಸದಸ್ಯರಿಗೂ ಅಂಚೆ ಮೂಲಕ ರವಾನಿಸಲಾಗಿದೆ. ಮಾನ್ಯ ಸದಸ್ಯರು ಆಡಳಿತ ಮಂಡಳಿಯ ಚುನಾವಣೆಯಲ್ಲಿ ಭಾಗವಹಿಸಬೇಕಾಗಿ ಕೋರಿದೆ. ಚುನಾವಣೆ ದಿನಾಂಕ: 18.02.2024ನೇ ಭಾನುವಾರ, ಸಮಯ ಬೆಳಿಗ್ಗೆ 9:00 ರಿಂದ ಸಂಜೆ 4:00 ಗಂಟೆಯವರೆಗೆ. ಸ್ಥಳ: ಕರ್ನಾಟಕ ರಾಜ್ಯ ಅಗರಬತ್ತಿ ತಯಾರಕರ ಸಹಕಾರ ಸಂಘ ನಿ., ನಂ. 18/3, 1ನೇ ಮುಖ್ಯರಸ್ತೆ, ಸಂಪಂಗಿರಾಮನಗರ, ಬೆಂಗಳೂರು–560027
ಸಹಿ/– ಟಿ.ಜಿ. ಡೇವಿಡ್, ಕಾರ್ಯದರ್ಶಿ
ಕರ್ನಾಟಕ ರಾಜ್ಯ ಅಗರಬತ್ತಿ ತಯಾರಕರ ಸಹಕಾರ ಸಂಘ ನಿ., ಬೆಂಗಳೂರು–560027
ಬೆಂಗಳೂರು ದಿ: 02–02–2024

IN THE HIGH COURT OF JUDICATURE AT MADRAS INTELLECTUAL PROPERTY DIVISION ORIGINAL COMMERCIAL JURISDICTION
(T) OP (TM) 294/2023
TTK Prestige Private Ltd., ...Petitioner
Versus
Bharath R and Anr. ...Respondents
To
R1- Bharath R.
5/1, M.M Lane, Ganigarpreet,
Nagarathpet Cross,
Banglore-560002
Please take notice that the above Petition is filed for cancellation/rectification of the Trademark bearing Registration No. 3772098 dated 07.03.2018 in Class 21 from The Register of Trademarks which is listed for the hearing on 21.02.2024 at 10.30 A.M. If you fail to appear on the said date in person or through pleader the above matter will be heard and decided exparte against you.
Inttl Advocate
Counsel for Petitioner
Express Trade Tower1st Floor, Tower 1, B-36, Sector–132 Noida Expressway, Noida 201303
National Capital Region of Delhi. INDIA

PUBLIC NOTICE
To Place your Classified Ads Contact
9731810277

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳಿಗೆ ಸೂಕ್ತ ವೇದಿಕೆ!
ಇಂದೇ ನಿಮ್ಮ ಜಾಹೀರಾತು ಬುಕ್ ಮಾಡಿರಿ.
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9901641752
+91 9845114560 | +91 9900428036
+91 9731810277 | 080- 45557163/164

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಅಮೆರಿಕ ವೈಮಾನಿಕ ದಾಳಿ: 40 ಸಾವು

ವಾಷಿಂಗ್ಟನ್/ಬಾಗ್ದಾದ್ (ಪಿಟಿಐ/ ರಾಯಿಟರ್ಸ್): ಇರಾನ್ ರೆವಲ್ಯೂಷನರಿ ಗಾರ್ಡ್ಸ್ (ಐಆರ್‌ಜಿಸಿ) ಮತ್ತು ಅದರ ಜತೆಗೆ ಸಂಪರ್ಕ ಹೊಂದಿರುವ ಸಶಸ್ತ್ರ ಗುಂಪುಗಳನ್ನು ಗುರಿಯಾಗಿಸಿಕೊಂಡು ಅಮೆರಿಕ ಸೇನೆಯು ಶುಕ್ರವಾರ ರಾತ್ರಿ ಇರಾಕ್ ಮತ್ತು ಸಿರಿಯಾದಲ್ಲಿ ಸುಮಾರು 85 ಕಡೆ ವೈಮಾನಿಕ ದಾಳಿ ನಡೆಸಿದೆ.

ಈ ದಾಳಿಯಿಂದ ಸಿರಿಯಾದಲ್ಲಿ 24 ಮತ್ತು ಇರಾಕ್‌ನಲ್ಲಿ 16 ಮಂದಿ ಸೇರಿ 40 ಜನರು ಸತ್ತಿದ್ದಾರೆ. ಮೃತಪಟ್ಟವರಲ್ಲಿ ನಾಗರಿಕರೂ ಇದ್ದಾರೆ. ಹಲವು ಮಂದಿ ಗಾಯಗೊಂಡಿದ್ದಾರೆ ಎಂದು ಸಿರಿಯಾದಲ್ಲಿ ಯುದ್ಧ ವರದಿ ಮಾಡುವ ಮಾನವ ಹಕ್ಕುಗಳ ಸಂಘಟನೆಯ ನಿರ್ದೇಶಕ ರಾಮಿ ಅಬ್ದುಲ್‌ರೆಹಮಾನ್ ಹೇಳಿದ್ದಾರೆ.

ಕಳೆದ ಭಾನುವಾರ ಜೋರ್ಡಾನ್‌ನಲ್ಲಿ ಅಮೆರಿಕದ ಸೇನಾನೆಲೆ ಮೇಲೆ ಇರಾನ್ ಬೆಂಬಲಿತ ಬಂಡುಕೋರರು ಡ್ರೋನ್ ದಾಳಿ ನಡೆಸಿ, ಮೂವರು ಸೈನಿಕರನ್ನು ಕೊಂದಿದ್ದಕ್ಕೆ ಪ್ರತೀಕಾರವಾಗಿ ಅಮೆರಿಕ ಈ ದಾಳಿ ನಡೆಸಿದೆ. ಮುಂದಿನ ದಿನಗಳಲ್ಲಿ ಸೇನಾ ಕಾರ್ಯಾಚರಣೆಯನ್ನು ಮತ್ತಷ್ಟು ಹೆಚ್ಚಿಸುವ ಸುಳಿವನ್ನೂ ನೀಡಿದೆ.

ಹಲವು ಯುದ್ಧ ವಿಮಾನಗಳನ್ನು ಈ ಕಾರ್ಯಾಚರಣೆಗಳಲ್ಲಿ ಬಳಸಲಾಗಿದ್ದು, 85ಕ್ಕೂ ಹೆಚ್ಚು ಗುರಿಗಳನ್ನು ಧ್ವಂಸಗೊಳಿಸಲಾಯಿತು. ಧ್ವಂಸಗೊಂಡ ಗುರಿಗಳಲ್ಲಿ ಐಆರ್‌ಜಿಸಿಯ ಕಮಾಂಡ್, ನಿಯಂತ್ರಣ ಕೇಂದ್ರಗಳು, ಗುಪ್ತಚರ ಕೇಂದ್ರಗಳು, ರಾಕೆಟ್‌ಗಳು ಮತ್ತು ಕ್ಷಿಪಣಿಗಳು, ಡ್ರೋನ್‌ಗಳ ಸಂಗ್ರಹ, ಸಶಸ್ತ್ರ ಗುಂಪುಗಳಿಗೆ ಪೂರೈಕೆಯಾಗುತ್ತಿದ್ದ ಸರಕು ಮತ್ತು ಯುದ್ಧಸಾಮಗ್ರಿ ಸೌಲಭ್ಯಗಳು ಸೇರಿವೆ ಎಂದು ಅಮೆರಿಕ ಸೇನೆ ಹೇಳಿದೆ.

ಇರಾನ್ ಬೆಂಬಲಿತ ಬಂಡುಕೋರರ ಮೇಲೆ ಪ್ರತೀಕಾರದ ದಾಳಿ ನಡೆಯಲಿದೆ ಎಂದು ಅಮೆರಿಕದ ಅಧ್ಯಕ್ಷ ಜೋ ಬೈಡನ್ ಮತ್ತು ಇತರ ಉನ್ನತ ನಾಯಕರು ಎಚ್ಚರಿಕೆ ನೀಡುತ್ತಾ ಬಂದಿದ್ದರು.

‘ನನ್ನ ನಿರ್ದೇಶನದ ಮೇರೆಗೆ ಅಮೆರಿಕ ಸೇನಾ ಪಡೆಗಳು, ಇರಾಕ್ ಮತ್ತು ಸಿರಿಯಾದಲ್ಲಿ ಐಆರ್‌ಜಿಸಿ ಮತ್ತು ಅದರ ಬೆಂಬಲಿತ ಗುಂಪುಗಳು ಬಳಸುತ್ತಿದ್ದ ಮೂಲ ಸೌಕರ್ಯಗಳನ್ನು ಗುರಿಯಾಗಿಸಿ ದಾಳಿ ನಡೆಸಿವೆ. ನಮ್ಮ ಪ್ರತಿಕ್ರಿಯೆ ಶುರುವಾಗಿದೆ’ ಎಂದು ಬೈಡನ್ ಹೇಳಿದ್ದಾರೆ.

ಇರಾಕ್ ಕಳವಳ: (ಬಾಗ್ದಾದ್ ವರದಿ): ಅಮೆರಿಕದ ದಾಳಿಯನ್ನು ಖಂಡಿಸಿರುವ ಇರಾಕ್, ಈ ಪ್ರದೇಶದ ಭದ್ರತೆಯು ಪ್ರಪಾತದ ಅಂಚಿನಲ್ಲಿದೆ ಎಂದು ಕಳವಳ ವ್ಯಕ್ತಪಡಿಸಿದೆ. ‘ಈ ದಾಳಿಗೆ ಅಮೆರಿಕದ ಜತೆಗೆ ಇರಾಕ್ ಸರ್ಕಾರದ ಪೂರ್ವಯೋಜಿತ ಸಹಕಾರವಿತ್ತು’ ಎನ್ನುವುದನ್ನು ಅಲ್ಲಗಳೆದಿರುವ ಇರಾಕ್ ಸರ್ಕಾರದ ವಕ್ತಾರ ಬಸ್ಸೆಮ್ ಅಲ್-ಅವಾದಿ, ಇದೊಂದು ಸುಳ್ಳು ಆರೋಪ ಎಂದಿದ್ದಾರೆ.

ದಾಳಿಗೆ ಇರಾನ್ ಖಂಡನೆ

ಟೆಹರಾನ್ (ಎಎಫ್‌ಪಿ): ಇರಾಕ್ ಮತ್ತು ಸಿರಿಯಾದ ಮೇಲೆ ಅಮೆರಿಕ ನಡೆಸಿದ ವೈಮಾನಿಕ ದಾಳಿಯನ್ನು ಇರಾನ್ ಶನಿವಾರ ಖಂಡಿಸಿದ್ದು, ಇದು ಪರಮ ವೈರಿಯ ‘ಕಾರ್ಯತಂತ್ರದಲ್ಲಿ ಆಗಿರುವ ಪ್ರಮಾದ’ ಎಂದು ಹೇಳಿದೆ.

‘ಸಿರಿಯಾ ಮತ್ತು ಇರಾಕ್ ಮೇಲಿನ ದಾಳಿಯು ದುಡುಕಿನ ಕ್ರಮವಾಗಿದೆ. ಇದು ಈ ಪ್ರದೇಶದಲ್ಲಿ ಉದ್ವಿಗ್ನತೆಯನ್ನು ತೀವ್ರಗೊಳಿಸುತ್ತದೆಯೇ ಹೊರತು, ಬೇರೆ ಯಾವುದೇ ಫಲಿತಾಂಶ ನೀಡುವುದಿಲ್ಲ’ ಎಂದು ಇರಾನ್ ವಿದೇಶಾಂಗ ಸಚಿವಾಲಯದ ವಕ್ತಾರ ನಾಸರ್ ಕನಾನಿ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಉಕ್ರೇನ್‌ನಿಂದ 9 ಡ್ರೋನ್ ಧ್ವಂಸ

ಕೀವ್ (ಉಕ್ರೇನ್) (ಎಎಫ್‌ಪಿ): ದಕ್ಷಿಣ ಮತ್ತು ಮಧ್ಯ ಉಕ್ರೇನ್ ಪ್ರದೇಶದಲ್ಲಿ ರಷ್ಯಾದ ಒಂಬತ್ತು ಡ್ರೋನ್‌ಗಳನ್ನು ಹೊಡೆದುರುಳಿಸಿರುವುದಾಗಿ ಉಕ್ರೇನ್‌ನ ವಾಯುಪಡೆ ಶನಿವಾರ ತಿಳಿಸಿದೆ.

ಡಿನಿಪ್ರೊ, ಒಡೆಸಾ, ಮೈಕೊಲೈವ್ ನಗರಗಳ ಪವರ್ ಗ್ರಿಡ್‌ಗಳನ್ನು ಗುರಿಯಾಗಿಸಿ ರಷ್ಯಾ ಪಡೆಗಳು ಡ್ರೋನ್ ದಾಳಿ ನಡೆಸಿವೆ ಎಂದು ಹೇಳಿದೆ.

ಇರಾನ್ ನಿರ್ಮಿತ ಶಾಹಿದ್ ಡ್ರೋನ್‌ಗಳನ್ನು ಬಳಸಿ ರಷ್ಯಾ ದಾಳಿ ನಡೆಸಿದ್ದು, ದಾಳಿಯ ಬಳಿಕ ವಿದ್ಯುತ್ ಸಂಪರ್ಕ ಸ್ಥಗಿತಗೊಂಡ ಪರಿಣಾಮವಾಗಿ 15 ಸಾವಿರ ಮಂದಿ ಸಂಕಷ್ಟ ಅನುಭವಿಸಿದರು ಎಂದಿದೆ.



ಸೇನಾ ತಾಲೀಮು ನಾಗ್ಪುರದಲ್ಲಿ ಶನಿವಾರ ನಡೆದ ಸೇನಾ ದಿನಾಚರಣೆಯಲ್ಲಿ ಸೈನಿಕರೊಬ್ಬರು ‘ಶೌರ್ಯ ಸಂಧ್ಯಾ’ ಪ್ರದರ್ಶನ ನೀಡಿದರು –ಪಿಟಿಐ ಚಿತ್ರ

ಇಸ್ಲಾಂ ನಿಯಮಗಳಿಗೆ ವಿರುದ್ಧವಾಗಿ ಮದುವೆಯಾದ ಪ್ರಕರಣ

ಇಮ್ರಾನ್ ದಂಪತಿಗೆ 7 ವರ್ಷ ಜೈಲು

ಇಸ್ಲಾಮಾಬಾದ್ (ಪಿಟಿಐ): ಇಸ್ಲಾಂನ ನಿಯಮಗಳಿಗೆ ವಿರುದ್ಧವಾಗಿ ಮದುವೆಯಾದ ಪ್ರಕರಣದಲ್ಲಿ ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಮತ್ತು ಅವರ ಪತ್ನಿ ಬುಶ್ರಾ ಬೀಬಿ ಅವರಿಗೆ ಪಾಕಿಸ್ತಾನದ ನ್ಯಾಯಾಲಯ ತಲಾ ಏಳು ವರ್ಷ ಜೈಲು ಶಿಕ್ಷೆ ವಿಧಿಸಿ ಶನಿವಾರ ತೀರ್ಪು ಪ್ರಕಟಿಸಿದೆ.

ಇಸ್ಲಾಂನಲ್ಲಿರುವ ನಿಯಮದ ಪ್ರಕಾರ, ಎರಡು ಮದುವೆಗಳ ನಡುವಿನ ಕಡ್ಡಾಯ ಸಮಯ ಪಾಲನೆಯನ್ನು (ಇದ್ದತ್ ಅವಧಿ) ಬುಶ್ರಾ ಉಲ್ಲಂಘಿಸಿದ್ದಾರೆ ಎಂದು ಆರೋಪಿಸಿ ಅವರ ಮೊದಲ ಪತಿ ಖಾವರ್ ಮನೇಕಾ ಪ್ರಕರಣ ದಾಖಲಿಸಿದ್ದರು. ಮದುವೆಗೂ ಮುನ್ನವೇ ಇಮ್ರಾನ್ ಜತೆ ಬುಶ್ರಾ ಅಕ್ರಮ ಸಂಬಂಧ ಹೊಂದಿದ್ದರು ಎಂದೂ ಆರೋಪಿಸಿದ್ದರು.

ಪತ್ನಿ ಬುಶ್ರಾ ಬೀಬಿ ಅವರೊಂದಿಗೆ ಇಮ್ರಾನ್ ಖಾನ್ –ಎಎಫ್‌ಪಿ ಚಿತ್ರ

‘ರಾವಲ್ಪಿಂಡಿಯ ಅಡಿಯಾಲಾ ಜೈಲಿನಲ್ಲಿ ಶುಕ್ರವಾರ 14 ಗಂಟೆ ಕಾಲ ಪ್ರಕರಣದ ವಿಚಾರಣೆ ನಡೆದಿತ್ತು. ಒಂದು ದಿನದ ನಂತರ ಹಿರಿಯ ಸಿವಿಲ್ ನ್ಯಾಯಾಧೀಶರಾದ ಖುದ್ರತ್‌ಉಲ್ಲಾ ತೀರ್ಪನ್ನು ಪ್ರಕಟಿಸಿದ್ದು, ದಂಪತಿಗೆ ತಲಾ 5 ಲಕ್ಷ ಪಾಕಿಸ್ತಾನಿ ರೂಪಾಯಿ ದಂಡವನ್ನೂ ವಿಧಿಸಿದ್ದಾರೆ’ ಎಂದು ‘ಜಿಯೋ ನ್ಯೂಸ್’ ವರದಿ ಮಾಡಿದೆ.

ತೀರ್ಪು ಪ್ರಕಟಿಸುವ ವೇಳೆ ಇಮ್ರಾನ್ ಹಾಗೂ ಅವರ ಪತ್ನಿ ಬುಶ್ರಾ ನ್ಯಾಯಾಲಯದಲ್ಲಿ ಹಾಜರಿದ್ದರು.

ತೆಹ್ರೀಕ್ ಇ ಇನ್ಸಾಫ್ (ಪಿಟಿಐ) ಪಕ್ಷದ ಸ್ಥಾಪಕರಾದ 71 ವರ್ಷದ ಇಮ್ರಾನ್, 2022ರಿಂದ ಈಚೆಗೆ ಶಿಕ್ಷೆಗೆ ಒಳಗಾಗುತ್ತಿರುವ ನಾಲ್ಕನೇ ಪ್ರಕರಣ ಇದಾಗಿದೆ.

ತೋಷಖಾನಾ ಪ್ರಕರಣದಲ್ಲಿ ಇಮ್ರಾನ್ ದಂಪತಿಗೆ ಬುಧವಾರ 14 ವರ್ಷ ಜೈಲು ಶಿಕ್ಷೆ ವಿಧಿಸಲಾಗಿತ್ತು. ಒಂದು ವಾರದ ಮುಂಚೆ ಇಮ್ರಾನ್ ಅವರು ಅಧಿಕೃತ ರಹಸ್ಯ ಕಾಯ್ದೆ ಉಲ್ಲಂಘನೆ ಪ್ರಕರಣದಲ್ಲಿ 10 ವರ್ಷ ಜೈಲು ಶಿಕ್ಷೆಗೆ ಗುರಿಯಾಗಿದ್ದರು.

ಪಾಕಿಸ್ತಾನದಲ್ಲಿ ‘ಇದ್ದತ್’ ಕುರಿತು ವಿಚಾರಣೆಗೆ ಒಳಗಾದ ಮೊದಲ ಪ್ರಕರಣ ಇದಾಗಿದೆ ಎಂದು ಇಮ್ರಾನ್ ಖಾನ್ ಹೇಳಿದ್ದಾಗಿ ಡಾನ್.ಕಾಮ್ ವರದಿ ಮಾಡಿದೆ.

ಪಾಕಿಸ್ತಾನದಲ್ಲಿ ಫೆಬ್ರುವರಿ 8ರಂದು ಸಾರ್ವತ್ರಿಕ ಚುನಾವಣೆ ನಡೆಯಲಿದ್ದು, ಇಮ್ರಾನ್ ಅವರಿಗೆ ಸ್ಪರ್ಧಿಸಲು ಚುನಾವಣಾ ಆಯೋಗ ಅವಕಾಶ ನೀಡಿಲ್ಲ.

ಎಎಪಿಯ 7 ಶಾಸಕರಿಗೆ ತಲಾ ₹25 ಕೋಟಿ ನೀಡಿ ಖರೀದಿಸಲು ಬಿಜೆಪಿ ಯತ್ನ –ಆರೋಪ

ಕೇಜ್ರಿವಾಲ್‌ಗೆ ಪೊಲೀಸರ ನೋಟಿಸ್

ನವದೆಹಲಿ (ಪಿಟಿಐ): ಎಎಪಿ ಶಾಸಕರ ಖರೀದಿಗೆ ಬಿಜೆಪಿ ಯತ್ನಿಸುತ್ತಿರುವ ಆರೋಪ ಪ್ರಕರಣದ ತನಿಖೆಗೆ ಸಹಕರಿಸಲು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್‌ಗೆ ಅಪರಾಧ ವಿಭಾಗದ ಪೊಲೀಸರು ಶನಿವಾರ ನೋಟಿಸ್ ನೀಡಿದ್ದಾರೆ.

ಮುಖ್ಯಮಂತ್ರಿ ನಿವಾಸದಲ್ಲಿ ಐದು ತಾಸುಗಳ ನಾಟಕೀಯ ಪ್ರಸಂಗದ ನಂತರ ಅಂತಿಮವಾಗಿ ಪೊಲೀಸರು ನೋಟಿಸ್ ನೀಡಿದ್ದು, ಮೂರು ದಿನಗಳಲ್ಲಿ ಉತ್ತರ ನೀಡುವಂತೆ ಕೋರಿದ್ದಾರೆ.

ದೆಹಲಿ ಪೊಲೀಸ್ ಅಧಿಕಾರಿಗಳ ತಂಡವು ಶುಕ್ರವಾರ ಕೇಜ್ರಿವಾಲ್ ಅವರ ನಿವಾಸಕ್ಕೆ ನೋಟಿಸ್ ನೀಡಲು ಹೋಗಿತ್ತು. ಆದರೆ, ಸಿ.ಎಂ ನಿವಾಸದಲ್ಲಿದ್ದ ಸಿಬ್ಬಂದಿ ನೋಟಿಸ್ ಸ್ವೀಕರಿಸಲು ನಿರಾಕರಿಸಿದ್ದರು. ಪುನಃ ಶನಿವಾರ ಸಿ.ಎಂ ನಿವಾಸಕ್ಕೆ ಬಂದ ಪೊಲೀಸರು, ನಿವಾಸದಲ್ಲಿದ್ದ ಅಧಿಕಾರಿಗಳಿಗೆ ನೋಟಿಸ್ ಹಸ್ತಾಂತರಿಸಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಅರವಿಂದ ಕೇಜ್ರಿವಾಲ್

‘ನಾವು ಕೇಜ್ರಿವಾಲ್‌ಗೆ ನೋಟಿಸ್ ನೀಡಿದ್ದೇವೆ. ಅವರು 3 ದಿನಗಳಲ್ಲಿ ಲಿಖಿತ ರೂಪದಲ್ಲಿ ಉತ್ತರಿಸಬಹುದು’ ಎಂದು ದೆಹಲಿ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಬಿಜೆಪಿಯು ಸಂಪರ್ಕಿಸಿದೆ ಎನ್ನಲಾದ ಎಎಪಿಯ ಶಾಸಕರ ಹೆಸರನ್ನು ಬಹಿರಂಗಪಡಿಸುವಂತೆ ಅಪರಾಧ ವಿಭಾಗದ ಪೊಲೀಸರು ಕೇಜ್ರಿವಾಲ್ ಅವರನ್ನು ಕೇಳಿದರು.

ಎಎಪಿಯ ಏಳು ಶಾಸಕರನ್ನು ತಲಾ ₹25 ಕೋಟಿ ನೀಡಿ ಖರೀದಿಸಿ ಸರ್ಕಾರ ಅಸ್ಥಿರಗೊಳಿಸಲು ಬಿಜೆಪಿ ಯತ್ನಿಸುತ್ತಿದೆ ಎಂದು ಅರವಿಂದ ಕೇಜ್ರಿವಾಲ್ ಕಳೆದ ವಾರ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದರು.

ದೆಹಲಿ ಸಚಿವೆ ಆತಿಶಿ ಪತ್ರಿಕಾಗೋಷ್ಠಿ ನಡೆಸಿ, ‘ದೆಹಲಿಯಲ್ಲಿ ಬಿಜೆಪಿ ಆಪರೇಷನ್ ಕಮಲ 2.0 ಆರಂಭಿಸಿದೆ. ಕಳೆದ ವರ್ಷ ಕೂಡ ಇಂಥದ್ದೇ ಪ್ರಯತ್ನ ಮಾಡಿ, ವಿಫಲರಾಗಿತ್ತು’ ಎಂದು ಆರೋಪಿಸಿದ್ದರು.

ಇದರ ಬೆನ್ನಲ್ಲೇ ಬಿಜೆಪಿಯ ದೆಹಲಿ ಘಟಕದ ಮುಖ್ಯಸ್ಥ ವೀರೇಂದ್ರ ಸಚ್‌ದೇವ ನೇತೃತ್ವದ ನಿಯೋಗವು ಜನವರಿ 30ರಂದು ದೆಹಲಿ ಪೊಲೀಸ್ ಕಮಿಷನರ್ ಸಂಜಯ್ ಅರೋರಾ ಅವರನ್ನು ಭೇಟಿ ಮಾಡಿ, ಈ ಆರೋಪದ ಬಗ್ಗೆ ಪ್ರಕರಣ ದಾಖಲಿಸಿ ತನಿಖೆ ನಡೆಸುವಂತೆ ಕೋರಿತ್ತು.

ಐದು ತಾಸಿನ ‘ಪ್ರಹಸನ’:

ಇದಕ್ಕೂ ಮೊದಲು, ಸಿವಿಲ್ ಲೈನ್ಸ್‌ನಲ್ಲಿರುವ ಕೇಜ್ರಿವಾಲ್ ಅವರ ನಿವಾಸದಲ್ಲಿ ನಾಟಕೀಯ ಪ್ರಸಂಗ ನಡೆಯಿತು. ಸಹಾಯಕ ಪೊಲೀಸ್ ಆಯುಕ್ತರ (ಎಸಿಪಿ) ಮಟ್ಟದ ಅಧಿಕಾರಿ ನೇತೃತ್ವದ ಪೊಲೀಸರ ತಂಡವು, ಕೇಜ್ರಿವಾಲ್ ಅವರ ಹೆಸರಿನಲ್ಲಿರುವ ನೋಟಿಸ್ ಅನ್ನು ಖುದ್ದು ಕೇಜ್ರಿವಾಲ್ ಅವರಿಗೆ ಮಾತ್ರ ನೀಡುವುದಾಗಿ ಪಟ್ಟುಹಿಡಿಯಿತು. ಆದರೆ, ಇದಕ್ಕೆ ಒಪ್ಪದ ಸಿ.ಎಂ ನಿವಾಸದ ಅಧಿಕಾರಿಗಳು, ಅವರ ಪರವಾಗಿ ನೋಟಿಸ್ ಪಡೆದು, ಸ್ವೀಕೃತಿ ನೀಡಲು ಸಿದ್ಧವೆಂದರು. ಈ ನಾಟಕೀಯ ಜಟಾಪಟಿ ಐದು ತಾಸು ನಡೆಯಿತು.

ಕೋರ್ಟ್‌ಗೆ ಇ.ಡಿ ಮೊರೆ

ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿ ವಿಚಾರಣೆಗೆ ಹಾಜರಾಗುವಂತೆ ಐದು ಬಾರಿ ನೋಟಿಸ್ ನೀಡಿದರೂ ಗೈರಾದ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ವಿರುದ್ಧ ಜಾರಿ ನಿರ್ದೇಶನಾಲಯವು ಶನಿವಾರ ಇಲ್ಲಿನ ರೌಸ್ ಅವೆನ್ಯೂ ನ್ಯಾಯಾಲಯದಲ್ಲಿ ದೂರು ದಾಖಲಿಸಿದೆ.

ಹೆಚ್ಚುವರಿ ಮುಖ್ಯ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ದಿವ್ಯಾ ಮಲ್ಹೋತ್ರಾ ಅವರ ಮುಂದೆ ದೂರು ಸಲ್ಲಿಸಲಾಗಿದೆ. ಈ ಅರ್ಜಿಯ ಹೆಚ್ಚಿನ ವಿಚಾರಣೆಯನ್ನು ನ್ಯಾಯಾಧೀಶರು ಇದೇ ತಿಂಗಳ 7ಕ್ಕೆ (ಬುಧವಾರ) ನಿಗದಿಪಡಿಸಿದ್ದಾರೆ.

ಬಾಲ್ಯವಿವಾಹ ನಿಷೇಧಕ್ಕೆ ಶಿಫಾರಸು

ಯುಸಿಸಿ: ವಿಧಾನಸಭೆಯಲ್ಲಿ ಶೀಘ್ರ ಮಂಡನೆ ಸಾಧ್ಯತೆ

ಡೆಹ್ರಾಡೂನ್ (ಪಿಟಿಐ): ಬಾಲ್ಯವಿವಾಹ ಮತ್ತು ಬಹುಪತ್ನಿತ್ವವನ್ನು ಸಂಪೂರ್ಣವಾಗಿ ನಿಷೇಧಿಸುವುದು ಸೇರಿದಂತೆ ಇನ್ನಿತರ ಮಹತ್ವದ ಶಿಫಾರಸುಗಳನ್ನು ಉತ್ತರಾಖಂಡ ಸರ್ಕಾರಕ್ಕೆ ಶುಕ್ರವಾರ ಸಲ್ಲಿಸಲಾದ ಏಕರೂಪ ನಾಗರಿಕ ಸಂಹಿತೆಯ (ಯುಸಿಸಿ) ಕರಡು ಪ್ರತಿ ಒಳಗೊಂಡಿದೆ ಎಂದು ಮೂಲಗಳು ತಿಳಿಸಿವೆ.

ರಾಜ್ಯದಲ್ಲಿ ಏಕರೂಪ ನಾಗರಿಕ ಸಂಹಿತೆ ಜಾರಿಗೊಳಿಸಲು ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ, ನ್ಯಾ. ರಂಜನಾ ಪ್ರಕಾಶ್ ದೇಸಾಯಿ ಅವರ ನೇತೃತ್ವದಲ್ಲಿ ಐವರು ಸದಸ್ಯರ ಸಮಿತಿ ರಚಿಸಿದ್ದು, ಅದರ ವರದಿಯನ್ನು ಶುಕ್ರವಾರವಷ್ಟೇ ಸರ್ಕಾರಕ್ಕೆ ಸಲ್ಲಿಸಿತ್ತು.

ಮದುವೆಗಳ ನೋಂದಣಿ ಕಡ್ಡಾಯ, ಪಿತ್ರಾರ್ಜಿತ ಆಸ್ತಿಯಲ್ಲಿ ಗಂಡು ಮತ್ತು ಹೆಣ್ಣುಮಕ್ಕಳಿಗೆ ಸಮಾನ ಅವಕಾಶ, ಹೆಣ್ಣುಮಕ್ಕಳು ಮದುವೆಗೂ ಮುನ್ನ ಪದವಿ ಪೂರ್ಣಗೊಳಿಸುವಂತಾಗಲು ವಿವಾಹದ ವಯಸ್ಸಿನ ಮಿತಿಯನ್ನು ಹೆಚ್ಚಿಸಲು ಸಮಿತಿ ಶಿಫಾರಸು ಮಾಡಿದೆ. ಮದುವೆ ನೋಂದಣಿ ಮಾಡದ ದಂಪತಿಯು ಸರ್ಕಾರದ ಯಾವುದೇ ಸವಲತ್ತುಗಳನ್ನು ಪಡೆಯಲು ಸಾಧ್ಯವಾಗದು. ಅಲ್ಲದೆ, ಗ್ರಾಮೀಣ ಪ್ರದೇಶಗಳಲ್ಲೂ ಮದುವೆ ನೋಂದಣಿಗೆ ವ್ಯವಸ್ಥೆ ಕಲ್ಪಿಸಲಾಗುವುದು ಎಂದು ಮೂಲಗಳು ತಿಳಿಸಿವೆ.

ಈ ಕಾನೂನು ಜಾರಿಯಾದರೆ, ದೇಶಕ್ಕೆ ಸ್ವಾತಂತ್ರ್ಯ ಲಭಿಸಿದ ಬಳಿಕ ಈ ಕಾನೂನು ಅಳವಡಿಸಿಕೊಂಡ ಮೊದಲ ರಾಜ್ಯ ಉತ್ತರಾಖಂಡ ಆಗಲಿದೆ. ಗೋವಾದಲ್ಲಿ ಪೋರ್ಚುಗೀಸರ ಆಡಳಿತಾವಧಿಯಿಂದಲೂ ಈ ಕಾನೂನು ಜಾರಿಯಲ್ಲಿದೆ.

ನ್ಯಾಯಾಲಯಗಳ ಮೂಲಕ ಪತಿ, ಪತ್ನಿ ವಿಚ್ಛೇದನ ಪಡೆಯಬಹುದು. ಅದಕ್ಕೆ 6 ತಿಂಗಳು ಕಾಲಾವಕಾಶ ಇರಲಿದೆ. ಈ ವೇಳೆ ದಂಪತಿ ಮಧ್ಯೆ ಜಗಳ ಮುಂದುವರಿದರೆ, ಅವರ ಮಕ್ಕಳ ಜವಾಬ್ದಾರಿಯನ್ನು ಅಜ್ಜಿ, ತಾತನಿಗೆ ನೀಡಲಾಗುವುದು. ಅನಾಥ ಮಕ್ಕಳನ್ನು ದತ್ತು ಪಡೆಯುವ ಪ್ರಕ್ರಿಯೆಯನ್ನು ಸರಳೀಕರಣಗೊಳಿಸಲಾಗಿದೆ ಎನ್ನಲಾಗಿದೆ.

ಮುಸ್ಲಿಂ ಮಹಿಳೆ ಸೇರಿದಂತೆ ಪ್ರತಿಯೊಬ್ಬರಿಗೂ ಮಕ್ಕಳನ್ನು ದತ್ತು ಪಡೆಯುವ ಹಕ್ಕು ಇರಬೇಕು ಎಂದು ಶಿಫಾರಸು ಮಾಡಲಾಗಿದ್ದು, ಮಕ್ಕಳ ದತ್ತು ಪ್ರಕ್ರಿಯೆಯನ್ನು ಸರಳೀಕರಣಗೊಳಿಸಲಾಗಿದೆ ಎಂದು ಮೂಲಗಳು ತಿಳಿಸಿವೆ. ಆದಾಗ್ಯೂ, ಈ ಕರಡನ್ನು ವಿಧಾನಸಭೆಯಲ್ಲಿ ಮಂಡನೆಯಾಗುವವರೆಗೆ ಅದರಲ್ಲಿರುವ ಅಂಶಗಳನ್ನು ಬಹಿರಂಗಪಡಿಸುವುದಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೋಟಾದ ವಸತಿನಿಲಯಕ್ಕೆ ಬೀಗ

ಕೋಟಾ(ರಾಜಸ್ಥಾನ): ನೀಟ್‌ಗೆ ತಯಾರಿ ನಡೆಸುತ್ತಿದ್ದ ವಿದ್ಯಾರ್ಥಿಯೊಬ್ಬರು ಇಲ್ಲಿನ ವಸತಿನಿಲಯದಲ್ಲಿ ಆತ್ಮಹತ್ಯೆ ಮಾಡಿಕೊಂಡಿರುವ ಪ್ರಕರಣಕ್ಕೆ ಸಂಬಂಧಿಸಿ, ಸೀಲಿಂಗ್ ಫ್ಯಾನ್‌ಗೆ ಸ್ಪ್ರಿಂಗ್ ಸಾಧನ (ಆತ್ಮಹತ್ಯೆ ತಡೆ ಸಾಧನ) ಅಳವಡಿಸದಿರುವ ಕಾರಣಕ್ಕೆ ಅಧಿಕಾರಿಗಳು ವಸತಿನಿಲಯಕ್ಕೆ ಬೀಗ ಹಾಕಿದ್ದಾರೆ.

ಕೋಟಾದ ರಾಜೀವ್ ಗಾಂಧಿ ನಗರದ ‘ಕಾಂಚನ್ ರೆಸಿಡೆನ್ಸಿ’ ವಿದ್ಯಾರ್ಥಿ ನಿಲಯದಲ್ಲಿ ಉತ್ತರಪ್ರದೇಶದ ಮೊರಾದಾಬಾದ್‌ನ 19 ವರ್ಷದ ವಿದ್ಯಾರ್ಥಿ, ಜ.23ರಂದು ಫ್ಯಾನ್‌ಗೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದರು.

ವಿದ್ಯಾರ್ಥಿಗಳ ಸುರಕ್ಷತೆಗಾಗಿ ನೀಡಿರುವ ಮಾರ್ಗದರ್ಶನಗಳನ್ನು ಉಲ್ಲಂಘಿಸಿರುವ ಕಾರಣಕ್ಕೆ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಕೋಟಾ ಜಿಲ್ಲಾಧಿಕಾರಿ ತಿಳಿಸಿದರು.

‘ಕೋರ್ಟ್ ಮೊರೆ: ನಿಯಮ ಬೇಕು’

ನವದೆಹಲಿ (ಪಿಟಿಐ): ಜಾರ್ಖಂಡ್ ಮಾಜಿ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರನ್ನು ಜಾರಿ ನಿರ್ದೇಶನಾಲಯವು ಬಂಧಿಸಿರುವುದನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ನಡೆಸಬೇಕಿತ್ತು ಎಂದು ಹೇಳಿದ ಹಿರಿಯ ವಕೀಲ ಕಪಿಲ್ ಸಿಬಲ್, ‘ಜನರು ಸುಪ್ರೀಂ ಕೋರ್ಟ್ ಮೊರೆಹೋಗಬೇಕಿರುವುದು ಯಾವಾಗ ಎಂಬ ಬಗ್ಗೆ ನಿಯಮವನ್ನು ರೂಪಿಸಬೇಕು’ ಎಂದು ಆಗ್ರಹಿಸಿದರು.

ಬಿಜೆಪಿಯನ್ನು ವಿರೋಧಿಸುವ ಪಕ್ಷಗಳ ಯಾರೂ ಮುಖ್ಯಮಂತ್ರಿ ಸ್ಥಾನದಲ್ಲಿ ಮುಂದುವರಿಯುವುದನ್ನು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಬಯಸುತ್ತಿಲ್ಲ. ಕೇಂದ್ರಕ್ಕೆ ‘ಡಬಲ್ ಎಂಜಿನ್’ ಸರ್ಕಾರ ಮಾತ್ರವೇ ಬೇಕಾಗಿದೆ. ಹೀಗಾಗಿ ಸೊರೇನ್ ಅವರನ್ನು ಗುರಿಯಾಗಿಸಿಕೊಳ್ಳಲಾಗಿದೆ ಎಂದು ಸಿಬಲ್ ಆರೋಪಿಸಿದರು.

ತಮ್ಮನ್ನು ಬಂಧಿಸಿದ ಇ.ಡಿ. ಕ್ರಮ ಪ್ರಶ್ನಿಸಿ ಸೊರೇನ್ ಅವರು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಆದರೆ ಬಂಧನದ ವಿಚಾರವಾಗಿ ಮಧ್ಯಪ್ರವೇಶಿಸಲು ನಿರಾಕರಿಸಿದ ಸುಪ್ರೀಂ ಕೋರ್ಟ್, ಹೈಕೋರ್ಟ್ ಮೊರೆಹೋಗುವಂತೆ ಶುಕ್ರವಾರ ಸೂಚಿಸಿತ್ತು. ಸೊರೇನ್ ಸಲ್ಲಿಸಿದ್ದ ಅರ್ಜಿಯು ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ, ಎಂ.ಎಂ. ಸುಂದರೇಶ್, ಬೇಲಾ ಎಂ. ತ್ರಿವೇದಿ ಅವರು ಇದ್ದ ಪೀಠದ ಎದುರು ವಿಚಾರಣೆಗೆ ಬಂದಿತ್ತು. ವಕೀಲರಾದ ಸಿಬಲ್ ಮತ್ತು ಅಭಿಷೇಕ್ ಸಿಂಘ್ವಿ ಅವರು ಸೊರೇನ್ ಪರವಾಗಿ ಹಾಜರಾಗಿದ್ದರು.

‘ನಾವು ಯಾವ ಪ್ರಕರಣಗಳಲ್ಲಿ ಇಲ್ಲಿಗೆ (ಸುಪ್ರೀಂ ಕೋರ್ಟ್‌ಗೆ) ಬರಬೇಕು, ಯಾವ ಪ್ರಕರಣದಲ್ಲಿ ಬರಬಾರದು ಎಂಬುದನ್ನು ಕೋರ್ಟ್ ನಮಗೆ ಹೇಳಬೇಕು. ನಮ್ಮ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಿಚಾರಣೆಗೆ ತೆಗೆದುಕೊಳ್ಳುತ್ತದೆಯೇ ಇಲ್ಲವೇ ಎಂಬುದು ನಮಗೆ ಗೊತ್ತಿಲ್ಲ; ಆದರೆ ನಮಗೆ ಇತಿಹಾಸ ಗೊತ್ತಿದೆ’ ಎಂದು ಸಿಬಲ್ ಅವರು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಪಂಜಾಬ್ ರಾಜ್ಯಪಾಲ ರಾಜೀನಾಮೆ

ಚಂಡೀಗಢ (ಪಿಟಿಐ): ಪಂಜಾಬ್ ರಾಜ್ಯಪಾಲ ಹಾಗೂ ಚಂಡೀಗಢ ಆಡಳಿತಾಧಿಕಾರಿ ಬನ್ವಾರಿಲಾಲ್ ಪುರೋಹಿತ್ ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಶನಿವಾರ ರಾಜೀನಾಮೆ ಸಲ್ಲಿಸಿದ್ದಾರೆ.

‘ವೈಯಕ್ತಿಕ ಕಾರಣಗಳಿಂದ ಹಾಗೂ ಇತರ ಕೆಲವು ಬದ್ಧತೆಗಳಿಂದಾಗಿ ರಾಜ್ಯಪಾಲ ಮತ್ತು ಆಡಳಿತಾಧಿಕಾರಿ ಹುದ್ದೆಗೆ ರಾಜೀನಾಮೆ ಸಲ್ಲಿಸುತ್ತಿದ್ದೇನೆ’ ಎಂದು ಅವರು ರಾಜೀನಾಮೆ ಪತ್ರದಲ್ಲಿ ತಿಳಿಸಿರುವುದಾಗಿ ಮೂಲಗಳು ಹೇಳಿವೆ.

ಪುರೋಹಿತ್ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಶುಕ್ರವಾರ ದೆಹಲಿಯಲ್ಲಿ ಭೇಟಿಯಾಗಿದ್ದರು.

‘ಬಿಜೆಪಿಗೆ ‘ಇಂಡಿಯಾ’ ಜವಾಬು’

ಪಾಕೂರ್/ಗೊಡ್ಡಾ (ಜಾರ್ಖಂಡ್) (ಪಿಟಿಐ): ಜನರು ಚುನಾಯಿಸಿದ ಸರ್ಕಾರವನ್ನು ಅಸ್ಥಿರಗೊಳಿಸಲು ಬಿಜೆಪಿ ಯತ್ನಿಸಿತು. ಆದರೆ ‘ಇಂಡಿಯಾ’ ಒಕ್ಕೂಟವು ಅದರ ಪಿತೂರಿಯ ವಿರುದ್ಧ ನಿಂತು, ಆ ಪಕ್ಷಕ್ಕೆ ಬಹುಮತ ದೊರೆಯದಂತೆ ನೋಡಿಕೊಂಡಿತು ಎಂದು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಹೇಳಿದರು.

ಶನಿವಾರ ಅವರು ‘ಭಾರತ್ ಜೋಡೊ ನ್ಯಾಯ ಯಾತ್ರೆ’ಯಲ್ಲಿ ಭಾಗವಹಿಸಿ ಮಾತನಾಡಿದರು. ಮುಖ್ಯಮಂತ್ರಿಯಾಗಿ ಶುಕ್ರವಾರವಷ್ಟೆ ಪ್ರಮಾಣ ವಚನ ಸ್ವೀಕರಿಸಿದ ಚಂಪೈ ಸೊರೇನ್ ಅವರೂ ಯಾತ್ರೆಯಲ್ಲಿ ಪಾಲ್ಗೊಂಡು, ರಾಹುಲ್ ಗಾಂಧಿ ಅವರನ್ನು ಸ್ವಾಗತಿಸಿದರು.

‘ಬಿಜೆಪಿ ಬಳಿ ಹಣಬಲ ಹಾಗೂ ತನಿಖಾ ಸಂಸ್ಥೆಗಳು ಇವೆ. ಅದರಿಂದ ನಾನಗಾಗಲೀ, ಕಾಂಗ್ರೆಸ್‌ಗಾಗಲೀ ಭಯವಿಲ್ಲ. ಆಡಳಿತ ಪಕ್ಷದ ವಿಭಜಿಸುವ ಸಿದ್ಧಾಂತದ ವಿರುದ್ಧ ಹೋರಾಡುತ್ತೇವೆ’ ಎಂದರು.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಜಾರ್ಖಂಡ್‌ನ ದಿಯೋಗಢದ ಬಾಬಾ ಬೈದ್ಯನಾಥ ಧಾಮ ದೇವಾಲದಲ್ಲಿ ಪ್ರಾರ್ಥನೆ ಸಲ್ಲಿಸಿದರು –ಪಿಟಿಐ ಚಿತ್ರ

ಪಾಕೂರ್‌ನಿಂದ ದೇವಗಢದ ಬಾಬಾ ವೈದ್ಯನಾಥ ಧಾಮಕ್ಕೆ ಭೇಟಿ ನೀಡಿ ರಾಹುಲ್ ಪೂಜೆ, ಪ್ರಾರ್ಥನೆ ಸಲ್ಲಿಸಿದರು.

ಕಣ್ಗಾವಲಿನಲ್ಲಿ ಶಾಸಕರು

ಹೈದರಾಬಾದ್ (ಪಿಟಿಐ): ಎಐಸಿಸಿ ಕಾರ್ಯದರ್ಶಿ ಹಾಗೂ ತೆಲಂಗಾಣದ ಕಾಂಗ್ರೆಸ್ ಉಸ್ತುವಾರಿ ದೀಪ ದಾಸ್ ಮುನ್ಶಿ ಅವರ ಕಣ್ಗಾವಲಿನಲ್ಲಿ ಜಾರ್ಖಂಡ್‌ನ ಜೆಎಂಎಂ ನೇತೃತ್ವದ ಸರ್ಕಾರದ 40 ಶಾಸಕರನ್ನು ಶಾಮಿರ್‌ಪೇಟೆಯ ‘ಲಿಯೋನಿಯಾ ಹಾಲಿಸ್ಟಿಕ್ ಡೆಸ್ಟಿನೇಷನ್’ನಲ್ಲಿ ಇರಿಸಲಾಗಿದೆ. ಒಬ್ಬೊಬ್ಬರಿಗೂ ಪ್ರತ್ಯೇಕ ಊಟದ ವ್ಯವಸ್ಥೆ, ಕೋಣೆಗಳ ಎದುರು ಒಬ್ಬೊಬ್ಬ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.

ಬಿಹಾರ: ಸಚಿವರಿಗೆ ಖಾತೆ ಹಂಚಿಕೆ

ಪಟ್ನಾ (ಪಿಟಿಐ): ಬಿಹಾರದ ಎನ್‌ಡಿಎ ಮೈತ್ರಿಕೂಟದ ನೂತನ ಸರ್ಕಾರದ ಸಚಿವರಿಗೆ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಶನಿವಾರ ಖಾತೆಗಳನ್ನು ಹಂಚಿದ್ದಾರೆ. ಪ್ರಮುಖ ಗೃಹಖಾತೆಯನ್ನು ತಮ್ಮ ಬಳಿಯೇ ಉಳಿಸಿಕೊಂಡಿರುವ ನಿತೀಶ್ ಅವರು, ಹಣಕಾಸು ಮತ್ತು ಆರೋಗ್ಯ ಖಾತೆಯನ್ನು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರೂ ಆದ ಉಪ ಮುಖ್ಯಮಂತ್ರಿ ಸಮ್ರಾಟ್ ಚೌಧರಿ ಅವರಿಗೆ ಹಂಚಿದ್ದಾರೆ.

ಅದರ ಜತೆಗೆ ವಾಣಿಜ್ಯ ತೆರಿಗೆ, ನಗರಾಭಿವೃದ್ಧಿ ಮತ್ತು ವಸತಿ, ಪಂಚಾಯತ್ ರಾಜ್, ಕ್ರೀಡೆ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಹಾಗೂ ಕಾನೂನು ಖಾತೆಗಳನ್ನು ಕೂಡ ಚೌಧರಿ ಅವರಿಗೆ ನೀಡಲಾಗಿದೆ.

ಮತ್ತೊಬ್ಬ ಉಪ ಮುಖ್ಯಮಂತ್ರಿ ವಿಜಯತ್ ಕುಮಾರ್ ಸಿನ್ಹಾ ಅವರಿಗೆ ಕೃಷಿ, ರಸ್ತೆ ನಿರ್ಮಾಣ, ಕಂದಾಯ, ಭೂಸುಧಾರಣೆ, ಗಣಿ ಮತ್ತು ಭೂ ವಿಜ್ಞಾನ, ಸಕ್ಕರೆ, ಕಾರ್ಮಿಕ, ಕಲೆ ಮತ್ತು ಸಂಸ್ಕೃತಿ, ಯುವ ಸಬಲೀಕರಣ, ಸಣ್ಣ ನೀರಾವರಿ ಖಾತೆಗಳನ್ನು ಹಂಚಲಾಗಿದೆ.

‘ನರೇಗಾ ಕಾರ್ಮಿಕರಿಗೆ ರಾಜ್ಯ ಸರ್ಕಾರದಿಂದಲೇ ಕೂಲಿ’

ಕೋಲ್ಕತ್ತ (ಪಿಟಿಐ): ರಾಜ್ಯದ, ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯ (ನರೇಗಾ) 21 ಲಕ್ಷ ಕಾರ್ಮಿಕರ ಬ್ಯಾಂಕ್ ಖಾತೆಗಳಿಗೆ ಫೆಬ್ರುವರಿ 21ರ ಒಳಗೆ ವೇತನ ವರ್ಗಾವಣೆ ಮಾಡಲಾಗುವುದು ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಶನಿವಾರ ಹೇಳಿದ್ದಾರೆ.

ಮಮತಾ

ನರೇಗಾ, ಪ್ರಧಾನ ಮಂತ್ರಿ ಆವಾಸ್ ಯೋಜನೆಯಂಥ ಕಲ್ಯಾಣ ಯೋಜನೆಗಳ ಬಾಕಿ ಹಣ ಬಿಡುಗಡೆ ಮಾಡುವಂತೆ ಕೇಂದ್ರ ಸರ್ಕಾರವನ್ನು ಆಗ್ರಹಿಸಿ ಟಿಎಂಸಿ ನಾಯಕರು ಕೋಲ್ಕತ್ತದ ಮೈದಾನ ಪ್ರದೇಶದಲ್ಲಿಯ ಅಂಬೇಡ್ಕರ್ ಪ್ರತಿಮೆ ಎದುರು ಧರಣಿ ನಡೆಸುತ್ತಿದ್ದಾರೆ. ಭಾನುವಾರ ಈ ಧರಣಿ ಅಂತ್ಯವಾಗಲಿದೆ. ಅಷ್ಟರೊಳಗೆ ಮಮತಾ ಈ ಘೋಷಣೆ ಮಾಡಿದ್ದಾರೆ.

ಆವಾಸ್ ಯೋಜನೆ ಕುರಿತೂ ಶೀಘ್ರದಲ್ಲೇ ರಾಜ್ಯ ಸರ್ಕಾರದ ನಿರ್ಧಾರ ಪ್ರಕಟಿಸಲಾಗುವುದು ಎಂದು ಅವರು ಹೇಳಿದ್ದಾರೆ.

‘ಕಳೆದ 3 ವರ್ಷಗಳಿಂದ, ನರೇಗಾ ಅಡಿ ಕೂಲಿ ಕೆಲಸ ಮಾಡುತ್ತಿರುವ 21 ಲಕ್ಷ ಕಾರ್ಮಿಕರಿಗೆ ಕೇಂದ್ರ ಸರ್ಕಾರ ಕೂಲಿ ಹಣ ನೀಡಿಲ್ಲ. ಅವರ ಬ್ಯಾಂಕ್ ಖಾತೆಗಳಿಗೆ ರಾಜ್ಯ ಸರ್ಕಾರವೇ ಹಣ ವರ್ಗಾಯಿಸಲಿದೆ. ನಾವು ಬಿಜೆಪಿ ಎದುರು ಭಿಕ್ಷೆ ಬೇಡಬೇಕಾಗಿಲ್ಲ’ ಎಂದು ಮಮತಾ ಹೇಳಿದರು.

‘ಪಶ್ಚಿಮ ಬಂಗಾಳವನ್ನು ಉಪವಾಸಗೆಡವಿ ಸಾಯಿಸಬಹುದು ಎಂದು ಕೇಂದ್ರ ಅಂದಾಜಿಸಿದೆ. ಆದರೆ, ಅದಕ್ಕೆ ನಾವು ಅವಕಾಶ ನೀಡುವುದಿಲ್ಲ. ನನ್ನಲ್ಲಿ ಭರವಸೆ ಇಡಿ. ಹಂತಹಂತವಾಗಿ ಕೂಲಿ ಹಣವನ್ನು ನೀಡುತ್ತೇವೆ’ ಎಂದು ಕಾರ್ಮಿಕರಿಗೆ ಭರವಸೆ ನೀಡಿದರು.

ಪೌರತ್ವ (ತಿದ್ದುಪಡಿ) ಕಾಯ್ದೆ (ಸಿಎಎ) ಮತ್ತು ರಾಷ್ಟ್ರೀಯ ಪೌರತ್ವ ನೋಂದಣಿ (ಎನ್‌ಆರ್‌ಸಿ) ರಾಜ್ಯದಲ್ಲಿ ಜಾರಿಯಾಗಲು ಅವಕಾಶ ನೀಡುವುದಿಲ್ಲ ಎಂದು ಅವರು ಪುನರುಚ್ಚರಿಸಿದರು.

32 ಸ್ಥಳಗಳಲ್ಲಿ ಸಿಬಿಐ ದಾಳಿ

ನವದೆಹಲಿ (ಪಿಟಿಐ): ಕೇಂದ್ರ ಸಶಸ್ತ್ರ ಪೊಲೀಸ್ ಪಡೆ ನೇಮಕಾತಿಯಲ್ಲಿ ನಕಲಿ ದಾಖಲೆಗಳನ್ನು ನೀಡಿ ವಂಚಿಸಿರುವ ಪ್ರಕರಣಕ್ಕೆ ಸಂಬಂಧಿಸಿ ಕೋಲ್ಕತ್ತದ 8 ಸ್ಥಳಗಳಲ್ಲಿ ಮತ್ತು ಪಶ್ಚಿಮ ಬಂಗಾಳ ಉತ್ತರ ಪರ್ಗಾನ ಜಿಲ್ಲೆಯ 24 ಸ್ಥಳಗಳಲ್ಲಿ ಸಿಬಿಐ ದಾಳಿ ಮಾಡಿ ಪರಿಶೀಲನೆ ನಡೆಸಿದೆ.

ನಕಲಿ ನಿವಾಸ ಪ್ರಮಾಣಪತ್ರಗಳನ್ನು ನೀಡಿ ಗಡಿ ಪ್ರದೇಶದ ನಿವಾಸಿಗಳಿಗಿರುವ ವಿನಾಯಿತಿಯನ್ನು ಪಡೆದು ಕೆಲವರು ಭದ್ರತಾ ಪಡೆ ಮತ್ತು ಸಿಎಪಿಎಫ್‌ಗೆ ನೇಮಕಗೊಂಡಿದ್ದಾರೆ ಎಂದು ಆರೋಪಿಸಿ ದೂರು ದಾಖಲಾಗಿತ್ತು. ಪ್ರಕರಣ ಸಂಬಂಧ ಕಲ್ಕತ್ತಾ ಹೈಕೋರ್ಟ್ ನಿರ್ದೇಶನದ ಅನ್ವಯ ಸಿಬಿಐ ಕಳೆದ ವರ್ಷ ಆಗಸ್ಟ್‌ನಲ್ಲಿ ತನಿಖೆ ಆರಂಭಿಸಿತ್ತು.

‘ನಕಲಿ ಪ್ರಮಾಣಪತ್ರಗಳನ್ನು ಮಾಡಿ ಕೊಡುತ್ತಿದ್ದ ಆರೋಪಿಗಳ ವಾಸಸ್ಥಳದ ಸುತ್ತಮುತ್ತ ಶನಿವಾರ ಪರಿಶೀಲನೆ ನಡೆಸಲಾಗಿದೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೆಲ ಪಾಕಿಸ್ತಾನಿ ಪ್ರಜೆಗಳು ಕೂಡ ಇದರ ಲಾಭ ಪಡೆದುಕೊಂಡಿದ್ದಾರೆ ಎಂದು ಎಫ್‌ಐಆರ್‌ನಲ್ಲಿ ಆರೋಪಿಸಲಾಗಿತ್ತು.

‘ಸಶಸ್ತ್ರ ಪಡೆಗಳ ನೇಮಕಾತಿಯಲ್ಲಿ ಯಾವುದೇ ಅಕ್ರಮ ನಡೆದಿರುವುದು ಪತ್ತೆಯಾಗಿಲ್ಲ, ಆದರೆ ಕೇಂದ್ರ ಅರೆ ಸೇನಾಪಡೆಗಳ ನೇಮಕಾತಿಯಲ್ಲಿ ಅಕ್ರಮ ನಡೆದಿರುವ ಬಗ್ಗೆ 4 ನಿದರ್ಶನಗಳು ಕಂಡುಬಂದಿರುವುದು ಸಿಬಿಐನ ಪ್ರಾಥಮಿಕ ತನಿಖೆಯಲ್ಲಿ ಪತ್ತೆಯಾಗಿದೆ’ ಎಂದು ನ್ಯಾಯಾಧೀಶ ಜಯ್ ಸೇನಾಗುಪ್ತ ಅವರು ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಅತ್ಯಾಚಾರ: ಎಸ್‌ಪಿ ಮುಖಂಡನ ಬಂಧನ

ಪ್ರತಾಪಗಢ (ಉತ್ತರಪ್ರದೇಶ) (ಪಿಟಿಐ): ಮಹಿಳೆಯೊಬ್ಬರ ಮೇಲೆ ಅತ್ಯಾಚಾರ ಎಸಗಿದ್ದೇ ಅಲ್ಲದೆ ಗರ್ಭಪಾತ ಮಾಡಿಸಿದ್ದಾರೆ ಎಂಬ ಆರೋಪದ ಸಂಬಂಧ ಸ್ಥಳೀಯ ಸಮಾಜವಾದಿ ಪಕ್ಷದ ಮುಖಂಡರೊಬ್ಬರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಇದೇ ಪ್ರಕರಣದಲ್ಲಿ ಆರೋಪಿಯಾಗಿರುವ ಪಕ್ಷದ ಮುಖಂಡನ ಪತ್ನಿ ತಲೆ ಮರೆಸಿಕೊಂಡಿದ್ದಾರೆ ಎಂದು ಪ್ರತಾಪಗಢದ ಪಟ್ಟಿ ಪೊಲೀಸ್ ಠಾಣೆಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಕೇಂದ್ರದ ವಿರುದ್ಧ ಫೆ.8ಕ್ಕೆ ಪ್ರತಿಭಟನೆ: ಡಿಎಂಕೆ

ಚೆನ್ನೈ (ಪಿಟಿಐ): ‘2024–25ರ ಮಧ್ಯಂತರ ಬಜೆಟ್‌ನಲ್ಲಿ ತಮಿಳುನಾಡಿಗೆ ಅಗತ್ಯ ಅನುದಾನ ಹಂಚಿಕೆ ಮಾಡದ ಕೇಂದ್ರ ಸರ್ಕಾರದ ವಿರುದ್ಧ ಫೆಬ್ರುವರಿ 8ರಂದು ಸಂಸತ್ತಿನ ಆವರಣದಲ್ಲಿರುವ ಗಾಂಧಿ ಪ್ರತಿಮೆ ಎದುರು ಪ್ರತಿಭಟನೆ ನಡೆಸಲಾಗುವುದು’ ಎಂದು ತಮಿಳುನಾಡಿನ ಆಡಳಿತಾರೂಢ ಡಿಎಂಕೆ ಶನಿವಾರ ತಿಳಿಸಿದೆ.

ರಾಜ್ಯದಲ್ಲಿ ಇತ್ತೀಚೆಗೆ ಸಂಭವಿಸಿದ ಪ್ರವಾಹ, ಚಂಡಮಾರುತದಿಂದ ಆಗಿರುವ ಹಾನಿಯ ಪರಿಸ್ಥಿತಿಯನ್ನು ನಿಭಾಯಿಸಲು ರಾಜ್ಯಕ್ಕೆ ಅಗತ್ಯವಿರುವಷ್ಟು ಅನುದಾನ ನೀಡದೆ ತಾರತಮ್ಯ ಧೋರಣೆ ಅನುಸರಿಸುತ್ತಿರುವ ಕೇಂದ್ರದ ಧೋರಣೆ ಖಂಡನೀಯ. ಫೆ.8ರಂದು ರಾಷ್ಟ್ರ ರಾಜಧಾನಿಯಲ್ಲಿ ಹಮ್ಮಿಕೊಳ್ಳಲಾಗುವ ಪ್ರತಿಭಟನೆಯಲ್ಲಿ ಪಾಲ್ಗೊಳ್ಳುವಂತೆ ಕಾಂಗ್ರೆಸ್ ಸೇರಿದಂತೆ ಮೈತ್ರಿ ಪಕ್ಷಗಳಿಗೆ ಕೋರಲಾಗುವುದು ಎಂದು ಡಿಎಂಕೆ ಪಕ್ಷದ ಸಂಸದೀಯ ನಾಯಕ ಟಿ.ಆರ್. ಬಾಲು ತಿಳಿಸಿದರು.

‘2023ರ ಡಿಸೆಂಬರ್‌ನಲ್ಲಿ ಸಂಭವಿಸಿದ ಚಂಡಮಾರುತ, ಭಾರಿ ಪ್ರಮಾಣದ ಮಳೆ ಮತ್ತು ಪ್ರವಾಹಗಳಿಂದ ಆದ ಹಾನಿ ಸರಿಪಡಿಸಲು ₹37,000 ಕೋಟಿ ನೆರವು ಕೇಳಲಾಗಿತ್ತು. ಆದರೆ, ಅದರ ಬಗ್ಗೆ ಘೋಷಣೆ ಇಲ್ಲ. ಅಲ್ಲದೆ, ಮದುರೈನಲ್ಲಿ ಏಮ್ಸ್ ಸ್ಥಾಪನೆ ಸೇರಿದಂತೆ ರಾಜ್ಯದ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಹಣಕಾಸು ಹಂಚಿಕೆ ಮಾಡುವ ಬಗ್ಗೆ ಯಾವುದೇ ಘೋಷಣೆಗಳಿಲ್ಲ’ ಎಂದು ಅವರು ಆರೋಪಿಸಿದರು.

ಸೇನೆಗೆ ‘ಐಎನ್‌ಎಸ್ ಸಂಧಾಯಕ್’ ನಿಯೋಜನೆ

ವಿಶಾಖಪಟ್ಟಣ (ಪಿಟಿಐ): ದೇಶದ ಅತಿ ದೊಡ್ಡ ಸಮೀಕ್ಷಾ ನೌಕೆ ‘ಐಎನ್‌ಎಸ್ ಸಂಧಾಯಕ್’ನ್ನು ಶನಿವಾರ ವಿಶಾಖಪಟ್ಟಣದ ನೌಕಾನೆಲೆಯಲ್ಲಿ ಕರ್ತವ್ಯಕ್ಕೆ ನಿಯೋಜಿಸಲಾಯಿತು.

ಈ ವೇಳೆ ಉಪಸ್ಥಿತರಿದ್ದ ರಕ್ಷಣಾ ಸಚಿವ ರಾಜನಾಥ್ ಸಿಂಗ್, ‘ನಿಯೋಜನೆಗೊಂಡಿರುವ ನೌಕೆಯು ಸಾಗರದಲ್ಲಿನ ಮಾಹಿತಿಯನ್ನು ನೀಡುವುದರ ಜೊತೆಗೆ ಭಾರತ ಮಾತ್ರವಲ್ಲದೇ ಮಿತ್ರರಾಷ್ಟ್ರಗಳ ರಕ್ಷಣೆಯಲ್ಲಿಯೂ ಪ್ರಮುಖ ಪಾತ್ರ ವಹಿಸಲಿದೆ. ಕಡಲ್ಗಳ್ಳತನ ಮತ್ತು ಅಕ್ರಮ ಚಟುವಟಿಕೆಗಳನ್ನು ನಾವು ಎಂದಿಗೂ ಸಹಿಸುವುದಿಲ್ಲ’ ಎಂದು ಎಚ್ಚರಿಕೆ ನೀಡಿದ್ದಾರೆ.

ಬಂದರು, ಹಾರ್ಬರ್, ಸಮುದ್ರ ಮಾರ್ಗ, ಕರಾವಳಿ ಪ್ರದೇಶ ಮತ್ತು ಆಳಸಮುದ್ರವನ್ನು ಸಮೀಕ್ಷೆ ಮಾಡುವ ಮೂಲಕ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳುವುದು ‘ಐಎನ್‌ಎಸ್ ಸಂಧಾಯಕ್’ನ ಪ್ರಮುಖ ಕಾರ್ಯವಾಗಿದೆ. ಭಾರತ ನೌಕಾಪಡೆಯ ಯುದ್ಧನೌಕೆ ವಿನ್ಯಾಸ ಘಟಕವು ವಿನ್ಯಾಸಗೊಳಿಸಿರುವ ‘ಐಎನ್‌ಎಸ್ ಸಂಧಾಯಕ್’ ನೌಕೆಯನ್ನು ಕೋಲ್ಕತ್ತದ ಗಾರ್ಡನ್ ರೀಚ್ ಶಿಪ್ ಬಿಲ್ಡರ್ಸ್ ಆ್ಯಂಡ್ ಎಂಜಿನಿಯರ್ಸ್ ಸಂಸ್ಥೆ ನಿರ್ಮಾಣ ಮಾಡಿದೆ. ಸುಧಾರಿತ ಸಲಕರಣೆಗಳನ್ನು ‘ಸಂಧಾಯಕ್’ ಹೊಂದಿದೆ. ಈ ನೌಕೆಯಲ್ಲಿನ ಸಲಕರಣೆಗಳಲ್ಲಿ ಶೇ 80ರಷ್ಟು ಸ್ವದೇಶದಲ್ಲಿ ನಿರ್ಮಿತವಾಗಿವೆ.

65,000 ನಕಲಿ ರೋಗಪತ್ತೆ ಪರೀಕ್ಷೆ: ಎಸಿಬಿ

ನವದೆಹಲಿ (ಪಿಟಿಐ): ಪ್ರಯೋಗಾಲಯಗಳ ಮೂಲಕ ಮೊಹಲ್ಲಾ ಕ್ಲಿನಿಕ್‌ಗಳಲ್ಲಿ 65 ಸಾವಿರ ನಕಲಿ ರೋಗಪತ್ತೆ ಪರೀಕ್ಷೆಗಳನ್ನು ನಡೆಸಲಾಗಿದೆ ಎಂದು ದೆಹಲಿಯ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ನಡೆಸಿದ ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ಎರಡು ಪ್ರಯೋಗಾಲಯಗಳಲ್ಲಿ, 2023ರ ಫೆಬ್ರುವರಿಯಿಂದ ಡಿಸೆಂಬರ್‌ವರೆಗಿನ ಅವಧಿಯಲ್ಲಿ ಸುಮಾರು 22 ಲಕ್ಷ ರೋಗಪತ್ತೆ ಪರೀಕ್ಷೆಗಳು ನಡೆದಿವೆ. ಅವುಗಳಲ್ಲಿ 65 ಸಾವಿರ ಪರೀಕ್ಷೆಗಳು ನಕಲಿ ಎಂದು ತಿಳಿದುಬಂದಿದೆ. ಅಸ್ತಿತ್ವದಲ್ಲೇ ಇಲ್ಲದ ವ್ಯಕ್ತಿಗಳ ಹೆಸರಿನಲ್ಲಿ ಪರೀಕ್ಷೆಗಳನ್ನು ನಡೆಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರೋಗಪತ್ತೆ ಪರೀಕ್ಷೆಗಾಗಿ ಈ ಪ್ರಯೋಗಾಲಯಗಳಿಗೆ ದೆಹಲಿ ಸರ್ಕಾರವು ₹ 4.63 ಕೋಟಿ ನೀಡಿದೆ.

ಹಿಮಾಚಲ ಪ್ರದೇಶ: ಅಗ್ನಿ ದುರಂತ– ಐದು ಸಾವು

ಶಿಮ್ಲಾ, (ಪಿಟಿಐ): ಹಿಮಾಚಲ ಪ್ರದೇಶದ ಸೋಲನ್ ನಗರದ ಬಳಿಯ ಕೈಗಾರಿಕಾ ಪ್ರದೇಶದಲ್ಲಿ ಸುಗಂಧದ್ರವ್ಯ ತಯಾರಿಕಾ ಘಟಕವೊಂದರಲ್ಲಿ ಶುಕ್ರವಾರ ಭಾರಿ ಅಗ್ನಿ ಅವಘಡ ಸಂಭವಿಸಿದೆ. ದುರಂತದಲ್ಲಿ ಮೃತಪಟ್ಟವರ ಸಂಖ್ಯೆಯು ಶನಿವಾರ 5ಕ್ಕೆ ಏರಿಕೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.

ಎನ್.ಆರ್. ಅರೋಮಾಸ್ ಸಂಸ್ಥೆಯ ತಯಾರಿಕಾ ಘಟಕದಲ್ಲಿ ನಡೆದ ಅವಘಡದಲ್ಲಿ 31 ಜನರು ಗಾಯಗೊಂಡಿದ್ದು, ಕಾಣೆಯಾಗಿರುವ ಒಂಬತ್ತು ಜನರಿಗಾಗಿ ಶೋಧ ನಡೆಸಲಾಗುತ್ತಿದೆ ಎಂದು ಸೋಲನ್‌ನ ಉಪ ಆಯುಕ್ತರು ಹೇಳಿದರು.

ಬದುಕಿದ್ದೇನೆ: ಪೂನಂ ಸ್ಪಷ್ಟನೆ

ಮುಂಬೈ (ಪಿಟಿಐ): ‘ನಾನು ಜೀವಂತವಾಗಿದ್ದೇನೆ. ಗರ್ಭಕಂಠದ ಕ್ಯಾನ್ಸರ್‌ಗೆ ಬಲಿಯಾಗಿಲ್ಲ’ ಎಂದು ರೂಪದರ್ಶಿ ಪೂನಂ ಪಾಂಡೆ ಅವರು ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್ ಮಾಡಿರುವ ವಿಡಿಯೊದಲ್ಲಿ ಶನಿವಾರ ಸ್ಪಷ್ಟನೆ ನೀಡಿದ್ದಾರೆ.

ಪೂನಂ ಪಾಂಡೆ

32 ವರ್ಷದ ಪೂನಂ ಅವರು ಕ್ಯಾನ್ಸರ್‌ನಿಂದ ಮೃತಪಟ್ಟಿದ್ದಾರೆ ಎಂಬ ಸುದ್ದಿ ಶುಕ್ರವಾರ ಹರಿದಾಡಿತ್ತು.

‘ನಾನು ನಿಮ್ಮೊಂದಿಗೆ ಮಹತ್ವದ ವಿಚಾರವೊಂದನ್ನು ಹಂಚಿಕೊಳ್ಳಲು ಬಯಸುತ್ತೇನೆ. ಗರ್ಭಕಂಠದ ಕ್ಯಾನ್ಸರ್ ನನ್ನನ್ನು ಬಲಿ ಪಡೆದಿಲ್ಲ. ಆದರೆ ಅರಿವಿನ ಕೊರತೆಯಿಂದಾಗಿ ಸಾವಿರಾರು ಮಹಿಳೆಯರು ಈ ರೋಗದಿಂದ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಇದನ್ನು ಹೇಗೆ ಎದುರಿಸುವುದು ಮತ್ತು ಇದರ ವಿನಾಶಕಾರಿ ಪರಿಣಾಮವನ್ನು ಹೇಗೆ ತಗ್ಗಿಸುವುದು ಎಂಬುದರ ಬಗ್ಗೆ ಒಟ್ಟಾಗಿ ಚರ್ಚಿಸೋಣ’ ಎಂದು ಪೂನಂ ವಿಡಿಯೊದಲ್ಲಿ ಹೇಳಿದ್ದಾರೆ. ಸುಳ್ಳು ಸುದ್ದಿ ಹಬ್ಬಿಸಿರುವುದಕ್ಕೆ ಕ್ಷಮೆ ಯಾಚಿಸಿರುವ ಅವರು, ಗರ್ಭಕಂಠದ ಕ್ಯಾನ್ಸರ್ ಬಗ್ಗೆ ಅರಿವು ಮೂಡಿಸುವ ಉದ್ದೇಶದಿಂದ ಹೀಗೆ ಮಾಡಿರುವುದಾಗಿ ಹೇಳಿದ್ದಾರೆ.

9ರಿಂದ 14 ವರ್ಷದೊಳಗಿನ ಹೆಣ್ಣು ಮಕ್ಕಳಿಗೆ ಗರ್ಭಕಂಠ ಕ್ಯಾನ್ಸರ್ ತಡೆ ಲಸಿಕೆ ನೀಡಲು ಸರ್ಕಾರ ಚಿಂತನೆ ನಡೆಸಿದೆ ಎಂದು ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಶುಕ್ರವಾರ ಹೇಳಿದ್ದರು.

ಕನ್ನಡದ ಲೇಖಕ ಶಾಂತ ನಾಯಕ್ ಪ್ರಶ್ನೆ

ಸಂಸ್ಕೃತಿ ಉಳಿವಿನ ಸಂಕಷ್ಟ

• ರಾಜಲಕ್ಷ್ಮಿ ಕೋಡಿಬೆಟ್ಟು

ಜೈಪುರ: ಭಾರತೀಯ ಸಂಸ್ಕೃತಿಗೆ ಸಂಬಂಧಿಸಿದ ಯಾವುದೇ ವಿಷಯವನ್ನು ಹೇಳುವಾಗ ಬಂಜಾರ ಮಹಿಳೆಯರ ಕಲಾತ್ಮಕ ದಿರಿಸುಗಳನ್ನು ಉಲ್ಲೇಖಿಸಲಾಗುತ್ತದೆ. ಆದರೆ ಬಂಜಾರ ಸಮುದಾಯವು ಎದುರಿಸುತ್ತಿರುವ ಸಮಸ್ಯೆಗಳನ್ನು ಬಗೆಹರಿಸಲು ಯಾವುದೇ ಉತ್ಸಾಹ ಇರುವುದಿಲ್ಲ. ನಮ್ಮ ಸಮುದಾಯದ ಕಲೆ ಬೇಕು, ಜನರು ಬೇಡ ಎನ್ನುವುದು ಎಷ್ಟು ಸರಿ ಎಂದು ಕನ್ನಡದ ಲೇಖಕ, ಬಂಜಾರ ಭಾಷಾ ಸಂಶೋಧಕ ಶಾಂತ ನಾಯಕ್ ಪ್ರಶ್ನಿಸಿದರು.

‘ಜೈಪುರ ಲಿಟರೇಚರ್ ಫೆಸ್ಟಿವಲ್’ನಲ್ಲಿ ಶನಿವಾರ, ‘ಆದಿವಾಣಿ’ ಎಂಬ ಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಬಂಜಾರ ಸಮುದಾಯದ ಜನರು ದೇಶದಾದ್ಯಂತ ವಾಸಿಸುತ್ತಿದ್ದರೂ, ಅವರ ಏಳಿಗೆಗಾಗಿ ಪ್ರಯತ್ನಗಳಾಗಿಲ್ಲ. ಜಗತ್ತಿನಾದ್ಯಂತ ಪ್ರವಾಸ ಮಾಡುತ್ತಿದ್ದ ಈ ಸಮುದಾಯದವರು, ಇಂದೂ ಅರೆ ಅಲೆಮಾರಿಗಳಾಗಿದ್ದಾರೆ. ತಂತ್ರಜ್ಞಾನವು ಬಂದಮೇಲೆ ನಮ್ಮ ಸಂಸ್ಕೃತಿಯನ್ನು ಉಳಿಸಿಕೊಳ್ಳುವುದು ಕಷ್ಟವಾಗಿದೆ. ಬಂಜಾರ ದಿರಿಸುಗಳನ್ನು ಹೊಲಿಯುವುದು ದುಬಾರಿ ಕೆಲಸವಾಗಿದೆ. ಅದಕ್ಕೆ ಬೇಕಾದ ಕನ್ನಡಿಗಳು, ಇಪ್ಪತ್ತು ಪೈಸೆ ನಾಣ್ಯಗಳು ಈಗ ಲಭ್ಯವಾಗುತ್ತಿಲ್ಲ’ ಎಂದರು.

ಜೈಪುರ ಲಿಟರೇಚರ್ ಫೆಸ್ಟಿವೆಲ್‌ನಲ್ಲಿ ಶನಿವಾರ ‘ಆದಿವಾಣಿ’ ಗೋಷ್ಠಿಯಲ್ಲಿ ಬಂಜಾರ ಭಾಷಾ ಸಂಶೋಧಕ, ಕನ್ನಡ ಲೇಖಕ ಶಾಂತ ನಾಯಕ್ ಮಾತನಾಡಿದರು. ಲೇಖಕರಾದ ಬದ್ರಿ ನಾರಾಯಣ್ ಮತ್ತು ವಸಮಲ್ಲಿ ಕೆ. ಉಪಸ್ಥಿತರಿದ್ದರು.

ಟೋಡಾ ಸಮುದಾಯದ ಲೇಖಕಿ ವಸಮಲ್ಲಿ ಕೆ. ಮಾತನಾಡಿ, ‘ಎಮ್ಮೆಗಳನ್ನುಸಾಕುವ ಟೋಡಾ ಸಮುದಾಯದ ಜನರು ಪೂರ್ವದಲ್ಲಿಯೇ ಚಂದ್ರನ ಮೇಲೆ ಮನೆ ಮಾಡುವ ಕನಸು ಕಂಡಿದ್ದರು. ಈ ಸಮುದಾಯಕ್ಕೆ ಬೆಟ್ಟವೇ ದೇವರು. ಈಗ ತಂತ್ರಜ್ಞಾನದ ಅಬ್ಬರದಲ್ಲಿ, ನಾನು, ಮಾತೃಭಾಷೆಯನ್ನು ಪ್ರೀತಿಸಿ. ಅದೇ ಭಾಷೆಯಲ್ಲಿ ಮಾತನಾಡಿ ಮಕ್ಕಳೇ... ಎಂದಷ್ಟೇ ಹೇಳಬಲ್ಲೆ’ ಎನ್ನುತ್ತಾ ತಮ್ಮ ಭಾಷೆಯ ಹಾಡು ಮತ್ತು ಕಥೆಗಳನ್ನು ಹೇಳಿದರು. ಭೋಜ್‌ಪುರಿ ಲೇಖಕ ಬದ್ರಿನಾರಾಯಣ ಕೂಡ ತಮ್ಮ ಸಮುದಾಯದ ಕಥೆಗಳನ್ನು ಹೇಳಿಕೊಂಡರು.

ಮಾತೃಭಾಷೆಯಲ್ಲೇ ಮಹತ್ವದ ಕೃತಿಸೃಷ್ಟಿ

ಜಗತ್ತಿನ ಮಹತ್ವದ ಸಾಹಿತ್ಯ ಕೃತಿಗಳೆಲ್ಲವೂ ಮಾತೃಭಾಷೆಯಲ್ಲಿಯೇ ಸೃಷ್ಟಿಯಾಗಿವೆ. ಕಾಲ್ಪನಿಕತೆಯು ಬರಹ ರೂಪವನ್ನು ಪಡೆದುಕೊಳ್ಳುವ ಪ್ರಕ್ರಿಯೆಯಲ್ಲಿಯೇ ಹೊಸದೇನೋ ಸೃಷ್ಟಿಯಾಗುತ್ತದೆ. ಕಥೆ ಹೇಳುವ ಪ್ರಕ್ರಿಯೆಯಲ್ಲಿ ಈ ಹೊಸತನ ಬಹಳ ಮುಖ್ಯ ಹಾಗೂ ಮಾತೃಭಾಷೆಯಲ್ಲಿ ಬರೆದಾಗ ಮಾತ್ರ ಇದು ಸಾಧ್ಯವಾಗುತ್ತದೆ ಎಂದು ಕನ್ನಡದ ಲೇಖಕ ವಿವೇಕ ಶಾನಭಾಗ ಹೇಳಿದರು.

'ಸಕೀನಾಳ ಮುತ್ತು' ಕಾದಂಬರಿಯ ಇಂಗ್ಲಿಷ್ ಅನುವಾದದ ಪುಟ್ಟ ಭಾಗವನ್ನು ಓದಿದ ಅವರು, ‘ಕಳೆದ 30 ವರ್ಷಗಳಲ್ಲಿ ಜಾಗತೀಕರಣದ ಪ್ರಭಾವವನ್ನು ಗಮನಿಸುವಾಗ ಕಥೆ ಹೇಳುವ ಪ್ರಕ್ರಿಯೆ ತುಂಬ ಮುಖ್ಯ ಎಂದು ನನಗೆ ಅನಿಸುತ್ತದೆ. ಏನೂ ಅರ್ಥವಾಗದೇ ಇದ್ದರೂ ಅರ್ಥವಾದಂತೆ ನಟಿಸುವ ಸಂದರ್ಭದಲ್ಲಿ ಕಥೆ ಹೇಳಲೇಬೇಕಾಗಿದೆ. ಎಷ್ಟೋ ಮಂದಿ ಯುವಬರಹಗಾರರು ತಾವು ಬರೆದುದು ನಿಜ ಕಥೆ ಎಂದು ಸಮರ್ಥಿಸಿಕೊಳ್ಳುತ್ತಾರೆ. ಈ ನಿಜದ ಬೆನ್ನು ಹತ್ತುವುದನ್ನು ಬಿಟ್ಟು, ಜೀವನಾನುಭವದ ತೀವ್ರತೆಯು ಸೃಜನಶೀಲವಾಗಿ ಅರಳುವ ಬಗೆಯನ್ನು ಕಂಡುಕೊಳ್ಳಬೇಕು’ ಎಂದರು.

ಸಿಎಎ ಅನುಷ್ಠಾನ ಶೀಘ್ರ: ಠಾಕೂರ್

ಕೋಲ್ಕತ್ತ (ಪಿಟಿಐ): ಪೌರತ್ವ (ತಿದ್ದುಪಡಿ) ಕಾಯ್ದೆಯನ್ನು (ಸಿಎಎ) ‘ಶೀಘ್ರದಲ್ಲಿಯೇ’ ಅನುಷ್ಠಾನಕ್ಕೆ ತರಲಾಗುತ್ತದೆ ಎಂದು ಕೇಂದ್ರ ಸಚಿವ ಶಂತನು ಠಾಕೂರ್ ಹೇಳಿದ್ದಾರೆ. ಈ ಕಾಯ್ದೆಯನ್ನು ವಿರೋಧಿಸುತ್ತಿರುವವರು ರಾಜಕೀಯ ಕಾರಣಗಳಿಗಾಗಿ ಹಾಗೆ ಮಾಡುತ್ತಿದ್ದಾರೆ ಎಂದು ಹೇಳಿದ್ದಾರೆ.

ಕಾಯ್ದೆಯನ್ನು ದೇಶದಾದ್ಯಂತ ‘ಒಂದು ವಾರದಲ್ಲಿ’ ಜಾರಿಗೆ ತರಲಾಗುತ್ತದೆ ಎಂದು ಠಾಕೂರ್ ಅವರು ಕಳೆದ ವಾರ ಹೇಳಿದ್ದರು. ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ಬಿಜೆಪಿಯು ಚುನಾವಣೆ ಹತ್ತಿರವಾಗಿರುವ ಅವಕಾಶವನ್ನು ಬಳಸಿಕೊಂಡು ಕಾಯ್ದೆಯ ವಿಚಾರವನ್ನು ಪ್ರಸ್ತಾಪಿಸಿದೆ ಎಂದು ಇದಕ್ಕೆ ಪ್ರತಿಕ್ರಿಯಿಸಿದ್ದರು. ಅಲ್ಲದೆ, ‘ನಾನು ಬದುಕಿರುವವರೆಗೆ ರಾಜ್ಯದಲ್ಲಿ ಈ ಕಾಯ್ದೆಯ ಜಾರಿಗೆ ಅವಕಾಶ ಕೊಡುವುದಿಲ್ಲ’ ಎಂದು ಕೂಡ ಮಮತಾ ಹೇಳಿದ್ದರು.

ಇಲ್ಲಿ ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಠಾಕೂರ್, ‘ಈ ಕಾಯ್ದೆಯು ದೇಶದ ಬೇಡಿಕೆ. ಕಾಯ್ದೆಯ ಅನುಷ್ಠಾನದ ವಿಚಾರದಲ್ಲಿ ಯಾವುದೇ ವಿರೋಧವೂ ಕೇಂದ್ರಕ್ಕೆ ಮಹತ್ವದ್ದಲ್ಲ’ ಎಂದರು. ‘ಇದು ನಾವು ನೀಡಿರುವ ಭರವಸೆ. ನಾವು ಮಾತು ತಪ್ಪುವುದಿಲ್ಲ’ ಎಂದು ಸ್ಪಷ್ಟಪಡಿಸಿದರು.

ಸಂಸತ್ತಿನ ಉಭಯ ಸದನಗಳು ಪೌರತ್ವ ತಿದ್ದುಪಡಿ ಮಸೂದೆಗೆ ಅಂಗೀಕಾರ ನೀಡಿವೆ. ಇದು ಜನರ ಇಚ್ಛೆಯನ್ನು ಪ್ರತಿಬಿಂಬಿಸುತ್ತದೆ ಎಂದು ಹೇಳಿದರು.

ಕರ್ನಾಟಕ ಸರ್ಕಾರ

ಮಕ್ಕಳ ರಕ್ಷಣಾ ನಿರ್ದೇಶನಾಲಯ ಬೆಂಗಳೂರು

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಯವರ ಕಾರ್ಯಾಲಯ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ

ಶಾಂತಿನಿಲಯ, ಕಾನ್ವೆಂಟ್ ಜಂಕ್ಷನ್ ಮಡಿಕೇರಿ, ಕೊಡಗು ಜಿಲ್ಲೆ–571201,

email: dcpokodagu@gmail.com ದೂರವಾಣಿ: 08272–228800

ಪೋಷಕರ ಪತ್ತೆಗಾಗಿ ಪತ್ರಿಕಾ ಪ್ರಕಟಣೆ

ಮಡಿಕೇರಿಯ ಸರ್ಕಾರಿ ಬಾಲಮಂದಿರಗಳಲ್ಲಿ ಹಾಗೂ ಸರ್ಕಾರೇತರ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಪೋಷಣೆ ಹಾಗೂ ರಕ್ಷಣೆ ಪಡೆಯುತ್ತಿರುವ ಮಕ್ಕಳ ಪೋಷಕರು ಹಾಗೂ ಸಂಬಂಧಿಕರು ಇದುವರೆಗೂ ಸಂಸ್ಥೆಗಳಿಗೆ ಬೇಟಿ ನೀಡಿರುವುದಿಲ್ಲ. ಈ ಮಕ್ಕಳ ಪೋಷಕರು ಅಥವಾ ಸಂಬಂಧಿಕರು ಯಾರಾದರೂ ಇದ್ದಲ್ಲಿ ಕೂಡಲೇ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಕಛೇರಿ, ಶಾಂತಿನಿಲಯ ಕಾನ್ವೆಂಟ್ ಜಂಕ್ಷನ್, ಮಡಿಕೇರಿ ಹಾಗೂ ದೂರವಾಣಿ: 08272–228800, ಯನ್ನು ಸಂಪರ್ಕಿಸಲು ತಿಳಿಯಪಡಿಸಲಾಗಿದೆ. ಮಗುವಿನ ಪೋಷಕರು ಯಾರೂ ಬಾರದಿದ್ದಲ್ಲಿ ಈ ಮಗುವನ್ನು ಕಾನೂನು ಪ್ರಕಾರ ದತ್ತು ನೀಡಲು ಕ್ರಮಕೈಗೊಳ್ಳಲಾಗುವುದು.

ಕು॥ ಭೂಮಿಕ ಜೆ.ಸಿ. ವಯಸ್ಸು ಸಂಸ್ಥೆಗೆ ಬಂದಾಗ: 07 ವರ್ಷ 8 ತಿಂಗಳು, ಪ್ರಸ್ತುತ ವಯಸ್ಸು: 12 ವರ್ಷ 10 ತಿಂಗಳು, ತಂದೆಯ ಹೆಸರು ರಾಜು, ತಾಯಿಯ ಹೆಸರು: ಸುನೀತ, ದಿನಾಂಕ 01–09–2015ರಂದು ಕೊಡಗು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಮುಖಾಂತರ ಮಡಿಕೇರಿಯ ಸರ್ಕಾರಿ ಬಾಲಕಿಯರ ಬಾಲಮಂದಿರಕ್ಕೆ ದಾಖಲಾಗಿರುತ್ತಾಳೆ ಮಾತನಾಡುವ ಭಾಷೆ: ಕನ್ನಡ, ಈ ಹಿಂದೆ ವಾಸವಿದ್ದ ವಿಳಾಸ: C/o ಕೋಳುಮಾಡನ ಸೂರಿ, ಅರವತ್ತೋಕ್ಲು ಗ್ರಾಮ ಮಡಿಕೇರಿ ತಾಲ್ಲೂಕು. ಪ್ರಸ್ತುತ 12 ವರ್ಷದ ದುಂಡಗಿನ ಮುಖ, ಕಪ್ಪು ಮೈ ಬಣ್ಣದ ಹೆಣ್ಣು ಮಗುವಾಗಿರುತ್ತದೆ.

ಕು॥ ಸಿಂಚನ, ವಯಸ್ಸು ಸಂಸ್ಥೆಗೆ ಬಂದಾಗ: 10ವರ್ಷ ಪ್ರಸ್ತುತ ವಯಸ್ಸು: 17 ವರ್ಷ 06 ತಿಂಗಳು. ತಂದೆಯ ಹೆಸರು ಮನು. ತಾಯಿಯ ಹೆಸರು: ದಿ॥ ಸುಮ ದಿನಾಂಕ 03–09–2015ರಂದು ಕೊಡಗು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಮುಖಾಂತರ ಮಡಿಕೇರಿಯ ಸರ್ಕಾರಿ ಬಾಲಕಿಯರ ಬಾಲಮಂದಿರಕ್ಕೆ ದಾಖಲಾಗಿರುತ್ತಾಳೆ. ಮಾತನಾಡುವ ಭಾಷೆ: ಕನ್ನಡ ಈ ಹಿಂದೆ ವಾಸವಿದ್ದ ವಿಳಾಸ: ಕೆ.ಈ.ಬಿ ಹತ್ತಿರ, ಕುಶಾಲನಗರ ಪ್ರಸ್ತುತ 17ವರ್ಷದ ಕೋಲು ಮುಖ, ಗೋಧಿ ಮೈ ಬಣ್ಣದ ಹೆಣ್ಣು ಮಗುವಾಗಿರುತ್ತದೆ.

ಕು॥ ಸಂತೋಷ್, ವಯಸ್ಸು ಸಂಸ್ಥೆಗೆ ಬಂದಾಗ: 03 ವರ್ಷ ಪ್ರಸ್ತುತ ವಯಸ್ಸು: 12 ವರ್ಷ, ತಂದೆಯ ಹೆಸರು ಮನು. ತಾಯಿಯ ಹೆಸರು: ದಿ॥ ಸುಮ ದಿನಾಂಕ 03–09–2015ರಂದು ಕೊಡಗು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಮುಖಾಂತರ ಮಡಿಕೇರಿಯ ಸರ್ಕಾರಿ ಬಾಲಕರ ಬಾಲಮಂದಿರಕ್ಕೆ ದಾಖಲಾಗಿರುತ್ತಾನೆ. ಮಾತನಾಡುವ ಭಾಷೆ: ಕನ್ನಡ ಈ ಹಿಂದೆ ವಾಸವಿದ್ದ ವಿಳಾಸ: ಕೆ.ಈ.ಬಿ ಹತ್ತಿರ, ಕುಶಾಲನಗರ ಪ್ರಸ್ತುತ 12ವರ್ಷದ ದುಂಡು ಮುಖ ಎಣ್ಣೆಗಪ್ಪು ಬಣ್ಣದ ಗಂಡು ಮಗುವಾಗಿರುತ್ತದೆ.

ಕು॥ ರೀನಾ ಪಿ.ಬಿ., ವಯಸ್ಸು ಸಂಸ್ಥೆಗೆ ಬಂದಾಗ: 10 ವರ್ಷ ಪ್ರಸ್ತುತ ವಯಸ್ಸು: 12 ವರ್ಷ 08 ತಿಂಗಳು. ತಂದೆಯ ಹೆಸರು ಬೆಳ್ಳಿ, ತಾಯಿಯ ಹೆಸರು: ಗುಲಾಬಿ ದಿನಾಂಕ: 07–07–2021 ರಂದು ಕೊಡಗು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಮುಖಾಂತರ ಮಡಿಕೇರಿಯ ಸರ್ಕಾರಿ ಬಾಲಕಿಯರ ಬಾಲಮಂದಿರಕ್ಕೆ ದಾಖಲಾಗಿರುತ್ತಾಳೆ. ಮಾತನಾಡುವ ಭಾಷೆ: ಕನ್ನಡ ಮತ್ತು ಯರವ ಭಾಷೆ ಈ ಹಿಂದೆ ವಾಸವಿದ್ದ ವಿಳಾಸ: C/o ಸಿ.ಡಿ.ಸೋಮಯ್ಯ, ಬಲ್ಯಮಂಡೂರು ಗ್ರಾಮ ಮತ್ತು ಅಂಚೆ, ಶ್ರೀಮಂಗಲ ಪೊನ್ನಂಪೇಟೆ ತಾಲ್ಲೂಕು. ಕೊಡಗು ಜಿಲ್ಲೆ. ಪ್ರಸ್ತುತ 12ವರ್ಷದ ದುಂಡಗಿನ ಮುಖ, ಕಪ್ಪು ಮೈ ಬಣ್ಣದ ಹೆಣ್ಣು ಮಗುವಾಗಿರುತ್ತದೆ.

ಕು॥ ರೀಟಾ ಪಿ.ಬಿ., ವಯಸ್ಸು ಸಂಸ್ಥೆಗೆ ಬಂದಾಗ: 12 ವರ್ಷ 3 ತಿಂಗಳು, ಪ್ರಸ್ತುತ ವಯಸ್ಸು: 14 ವರ್ಷ 09 ತಿಂಗಳು. ತಂದೆಯ ಹೆಸರು ದಿ॥ ಬೆಳ್ಳಿ ತಾಯಿಯ ಹೆಸರು: ದಿ॥ ಗುಲಾಬಿ. ದಿನಾಂಕ :07–07–2021 ರಂದು ಕೊಡಗು, ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಮುಖಾಂತರ ಮಡಿಕೇರಿಯ ಸರ್ಕಾರಿ ಬಾಲಕಿಯರ ಬಾಲಮಂದಿರಕ್ಕೆ ದಾಖಲಾಗಿರುತ್ತಾಳೆ. ಮಾತನಾಡುವ ಭಾಷೆ: ಕನ್ನಡ ಮತ್ತು ಯರವ ಭಾಷೆ. ಈ ಹಿಂದೆ ವಾಸವಿದ್ದ ವಿಳಾಸ: C/o ಸಿ.ಡಿ.ಸೋಮಯ್ಯ, ಬಲ್ಯಮಂಡೂರು ಗ್ರಾಮ ಮತ್ತು ಅಂಚೆ, ಶ್ರೀಮಂಗಲ ಪೊನ್ನಂಪೇಟೆ ತಾಲ್ಲೂಕು. ಕೊಡಗು ಜಿಲ್ಲೆ. ಪ್ರಸ್ತುತ 14ವರ್ಷದ ದುಂಡಗಿನ ಮುಖ, ಕಪ್ಪು ಮೈ ಬಣ್ಣದ ಹೆಣ್ಣು ಮಗುವಾಗಿರುತ್ತದೆ

ಸಹಿ/– ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮಡಿಕೇರಿ, ಕೊಡಗು ಜಿಲ್ಲೆ.

ಪ್ರಜಾವಾಣಿ
ಭಾನುವಾರದ ಪುರವಣಿ
ಭಾನುವಾರ, 4 ಫೆಬ್ರುವರಿ 2024

ಬೇಸಿಗೆಯಲ್ಲಿ ನೀರು ಹರಿಯದ ಮೋಹಾಂಡ್ ನದಿಯ ಸೆರಗಿನಲ್ಲಿ ನಡೆಯುತ್ತಿರುವ ಹೆದ್ದಾರಿ ಕಾಮಗಾರಿ

ಸವಾಲು ಎಸೆಯುವ ಗಡಾಯಿಕಲ್ಲು 13

ಅಭಿವೃದ್ಧಿ ಹೆದ್ದಾರಿಯಲ್ಲೊಂದು ಹಸಿರು ಹಾದಿ

ಮೋಹಾಂಡ್ ನದಿಯಲ್ಲಿ ಮೇಲ್ಸೇತುವೆ ಕಾಮಗಾರಿ

ದೆಹಲಿ– ಡೆಹ್ರಾಡೂನ್ ಎಕಾನಾಮಿಕ್ ಕಾರಿಡಾರ್

6 ಪಥಗಳು **₹11,910** ಕೋಟಿ ವೆಚ್ಚ **213** ಕಿ.ಮೀ ಉದ್ದ (ಹಳೇ ಹೆದ್ದಾರಿ 235 ಕಿ.ಮೀ)

2 ಗಂಟೆ **30** ನಿಮಿಷ, ತಲುಪಲು ಬೇಕಾಗುವ ಸಮಯ (ಈಗ 6 ಗಂಟೆ ಬೇಕಾಗುತ್ತದೆ)

ಎಸ್. ರವಿಪ್ರಕಾಶ್

‘ಹಿಮಾಲಯದ ಪರ್ವತಗಳಲ್ಲಿರುವ ಹಳ್ಳಿಗರ ಜೀವನದಲ್ಲಿ ಈಗ ಯಾವುದೇ ಸ್ವಾರಸ್ಯ ಉಳಿದಿಲ್ಲ. ಅವಘಡಗಳು ಕಟ್ಟಿಟ್ಟ ಬುತ್ತಿ. ಯಾವಾಗ ಪರ್ವತದ ಭಾಗ ಕುಸಿಯುತ್ತದೆಯೋ, ಹಳ್ಳಿಗಳು ಮಾಯ ಆಗುತ್ತವೆಯೋ ಎಂಬ ಭಯವಿದೆ. ಉದ್ಯೋಗಕ್ಕಾಗಿ ಬಯಲಿಗೇ ಬರಬೇಕು’-ಇದು ಉತ್ತರಾಖಂಡದ ಯುವ ಸಮೂಹದ ಮನದಾಳದ ಮಾತು.

ಪರ್ವತ ಪ್ರದೇಶಗಳಲ್ಲಿ ಬದುಕು ಕಟ್ಟಿಕೊಳ್ಳುವುದು ಇಂದಿನ ದಿನಗಳಲ್ಲಿ ಕಷ್ಟವೇ. ಇಲ್ಲಿನ ಹಳ್ಳಿಗಳಲ್ಲಿ ಮೊಬೈಲ್ ಸಂಪರ್ಕ ಇದೆ. ರಸ್ತೆ ಇದೆ. ಸಿಸಿಟಿವಿ ಕ್ಯಾಮೆರಾ ನಿಗಾ ಸೇರಿ ಇತರ ಸೌಲಭ್ಯಗಳೂ ಇವೆ. ಆದರೆ, ಉದ್ಯೋಗ ಇಲ್ಲ. ಕಲಿತ ವಿದ್ಯೆಗೆ ತಕ್ಕ ಉದ್ಯೋಗಕ್ಕೆ ಮಹಾನಗರಗಳಿಗೇ ಹೋಗಬೇಕು ಎಂಬುದು ಇಲ್ಲಿನ ಯುವ ಜನಾಂಗದ ಮನಸ್ಸಿನಲ್ಲಿ ಅಚ್ಚೊತ್ತಿದೆ.

ಡೆಹ್ರಾಡೂನ್, ದೆಹಲಿ, ಮುಂಬೈ, ಬೆಂಗಳೂರು– ಹೀಗೆ ಹಲವು ನಗರಗಳಿಗೆ ಈ ಯುವ ಸಮೂಹ ಗುಳೆ ಹೋಗುತ್ತಿದೆ. ಪರ್ವತಗಳ ಮಧ್ಯೆ ಇರುವ ಹಳ್ಳಿಗಳಲ್ಲಿ ಈಗೇನಿದ್ದರೂ ವೃದ್ಧರು, ಮಹಿಳೆಯರು ಮತ್ತು ಕಡಿಮೆ ಕಲಿತವರು ಉಳಿದಿದ್ದಾರೆ. ಕುರಿ ಪಾಲನೆ, ಅಲ್ಪ ಪ್ರಮಾಣದ ಕೃಷಿ ಕಾರ್ಯಗಳಲ್ಲಿ ತೊಡಗಿದ್ದಾರೆ. ಕಲಿತವರು ದೊಡ್ಡ ನಗರಗಳಲ್ಲಿ ಒಳ್ಳೆಯ ಕೆಲಸಗಳನ್ನು ಹಿಡಿದಿದ್ದಾರೆ.

> ದೆಹಲಿ–ಡೆಹ್ರಾಡೂನ್ ಎಕಾನಾಮಿಕ್ ಕಾರಿಡಾರ್ ಉತ್ತರಾಖಂಡ ರಾಜ್ಯದ ಆರ್ಥಿಕ ಸ್ಥಿತಿಗತಿಯನ್ನು ಸುಧಾರಿಸಬಲ್ಲದು ಎಂಬ ವಿಶ್ವಾಸ ಸರ್ಕಾರ ಮತ್ತು ಜನರದು. ಆದರೆ, ಈ ಕಾರಿಡಾರ್‌ನಿಂದ ಪರಿಸರ ಹಾನಿ ಆಗುತ್ತಿಲ್ಲವೆ? ಇಲ್ಲಿನ ವನ್ಯಜೀವಿಗಳು, ಜೀವಿ ವೈವಿಧ್ಯಗಳಿಗೆ ಕುತ್ತು ಬರುವುದಿಲ್ಲವೇ ಎಂಬ ಪ್ರಶ್ನೆಯೂ ಸಹಜ.

ಹಳ್ಳಿಗಳಿಂದ ವಲಸೆ ತಪ್ಪಿಸಿ, ಅಲ್ಲಲ್ಲೇ ಉದ್ಯೋಗ ಸೃಷ್ಟಿಸಬೇಕು, ಜನರು ಅಲ್ಲೇ ಬದುಕು ಕಟ್ಟಿಕೊಳ್ಳುವಂತಾಗಬೇಕು ಎಂಬುದು ಆಳುವವರ ಛಲ. ಅದಕ್ಕಾಗಿ ದೊಡ್ಡದೊಂದು ಹೆದ್ದಾರಿ ನಿರ್ಮಿಸುತ್ತಿದೆ ಕೇಂದ್ರ ಸರ್ಕಾರ. ಇದರಿಂದ ತಣ್ಣಗೆ ಮಲಗಿದ್ದ ಹಳ್ಳಿಗಳಲ್ಲಿ ಈಗ ಸಂಚಲನ ಉಂಟಾಗಿದೆ. ಈ ಸಂಚಲನಕ್ಕೆ ಚಾರ್‌ಧಾಮ್ ಕಾರಿಡಾರ್, ದೆಹಲಿ–ಡೆಹ್ರಾಡೂನ್ ಎಕಾನಾಮಿಕ್ ಕಾರಿಡಾರ್‌ಗಳೇ ಕಾರಣ. ಇವು ತಮ್ಮ ಬದುಕಿನಲ್ಲಿ ಬದಲಾವಣೆ ತರಬಲ್ಲವು ಎಂಬುದು ಇಲ್ಲಿನ ಜನರ ನಿರೀಕ್ಷೆ.

ದೆಹಲಿ–ಡೆಹ್ರಾಡೂನ್ ಎಕಾನಾಮಿಕ್ ಕಾರಿಡಾರ್ ಈ ಪುಟ್ಟ ರಾಜ್ಯದ ಆರ್ಥಿಕ ಸ್ಥಿತಿಗತಿಯನ್ನು ಸುಧಾರಿಸಬಲ್ಲದು ಎಂಬ ವಿಶ್ವಾಸ ಸರ್ಕಾರ ಮತ್ತು ಅಲ್ಲಿನ ಜನರದು. ಆದರೆ, ಈ ಕಾರಿಡಾರ್‌ನಿಂದ ಪರಿಸರಕ್ಕೆ ಹಾನಿ ಆಗುತ್ತಿಲ್ಲವೆ? ಇಲ್ಲಿನ ವನ್ಯಜೀವಿಗಳು, ಜೀವಿ ವೈವಿಧ್ಯಗಳಿಗೆ ಕುತ್ತು ಬರುವುದಿಲ್ಲವೇ ಎಂಬ ಪ್ರಶ್ನೆಯೂ ಸಹಜ. ಇದಕ್ಕಾಗಿ ನ್ಯಾಯಾಲಯದ ಮೆಟ್ಟಿಲು ಹತ್ತಿ ಹೋರಾಟಗಳೂ ನಡೆದಿವೆ. ಈ ಎಲ್ಲ ‘ಅಡ್ಡಿ’ಗಳೂ ನಿವಾರಣೆ ಆಗಿದ್ದು, ಹೆದ್ದಾರಿ ನಿರ್ಮಾಣ ಕಾರ್ಯ ಈಗ ಅಂತಿಮ ಹಂತಕ್ಕೆ ಬಂದಿದೆ.

ಉತ್ತರಾಖಂಡ ರಾಜ್ಯಕ್ಕೆ ಪ್ರವಾಸಿಗರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಇನ್ನಿಲ್ಲದಂತೆ ಹೆಚ್ಚಾಗಿದೆ. ಅದರಲ್ಲೂ ವಿಶೇಷವಾಗಿ, ಚಾರ್‌ಧಾಮ್‌ಗೆ ಹೋಗುವ ಪ್ರವಾಸಿಗರ ಸಂಖ್ಯೆ ಹಲವು ಪಟ್ಟು ಹೆಚ್ಚಾಗಿದೆ. ಈ ರಾಜ್ಯಕ್ಕೆ ಪ್ರಮುಖ ಆದಾಯದ ಮೂಲ ಪ್ರವಾಸೋದ್ಯಮ. ಪ್ರತಿ ವರ್ಷ ಸುಮಾರು 5 ಕೋಟಿಗೂ ಹೆಚ್ಚು ಪ್ರವಾಸಿಗರು ಈ ರಾಜ್ಯಕ್ಕೆ ಬರುತ್ತಾರೆ. ಅವರಲ್ಲಿ 3.8 ಕೋಟಿಗೂ ಹೆಚ್ಚು ಜನ ತೀರ್ಥಯಾತ್ರೆಗೆ ಬರುತ್ತಾರೆ. ‘ಈ ಕಾರಿಡಾರ್ ನಿರ್ಮಾಣದಿಂದ ಪ್ರವಾಸೋದ್ಯಮ ಮಾತ್ರವಲ್ಲದೇ, ಇತರ ಆರ್ಥಿಕ ಬೆಳವಣಿಗೆಗಳಿಗೂ ಇಂಬು ಸಿಗಲಿದೆ’ ಎನ್ನುತ್ತಾರೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಯೋಜನಾ ಕಾರ್ಯನಿರ್ವಾಹಕ ಎಂಜಿನಿಯರ್ ರೋಹಿತ್ ಪನ್ವಾರ್.

ದೆಹಲಿಯ ಅಕ್ಷರಧಾಮ ದೇವಸ್ಥಾನದ ಆವರಣದಿಂದ ಆರಂಭಗೊಂಡು ಉತ್ತರಾಖಂಡದ ಡೆಹ್ರಾಡೂನ್‌ಗೆ ತಲುಪುವ ಈ ಹೆದ್ದಾರಿಯ ವಿಶೇಷತೆಗಳಲ್ಲಿ ಮುಖ್ಯವಾದದ್ದು, ‘ಹಸಿರು ಕಾರಿಡಾರ್’ (ಗ್ರೀನ್ ಕಾರಿಡಾರ್). ಇದು ಏಷ್ಯಾದ ಅತಿ ಉದ್ದದ ‘ವನ್ಯಜೀವಿ ಕಾರಿಡಾರ್’ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಸುಮಾರು 20 ಕಿಲೊಮೀಟರ್ ಉದ್ದದ (ಗಣೇಶ್‌ಪುರ್– ಡೆಹ್ರಾಡೂನ್) ವನ್ಯಜೀವಿ ಕಾರಿಡಾರ್ ಈಗ ಎಲ್ಲರ ಗಮನ ಸೆಳೆದಿದೆ. ಇಲ್ಲಿ ಹೆದ್ದಾರಿಯು ಮೇಲ್ಸೇತುವೆ ಮತ್ತು ಸುರಂಗಗಳ ಮೂಲಕ ಹಾದು ಹೋಗುತ್ತದೆ. ಮತ್ತೂ ವಿಶೇಷವೆಂದರೆ ಈ ಇಡೀ ಕಾರಿಡಾರ್ ‘ಮೊಹಾಂಡ್’ ನದಿಯ ಪಕ್ಕದಲ್ಲೇ ನಿರ್ಮಾಣ ಆಗಿದೆ. ಮಳೆಗಾಲದಲ್ಲಿ ಮೂರು ತಿಂಗಳು ಮಾತ್ರ ಭೋರ್ಗರೆದು ಹರಿಯುವ ಮೊಹಾಂಡ್, ಬಳಿಕ ಬಹುತೇಕ ಬರಿದಾಗಿರುತ್ತದೆ.

ಕೇಂದ್ರ ಸರ್ಕಾರದ ಪ್ರೆಸ್ ಇನ್ಫರ್ಮೇಷನ್ ಬ್ಯೂರೊ (ಪಿಐಬಿ) ಕಾರಿಡಾರ್ ಪ್ರಗತಿಯನ್ನು ತೋರಿಸಲು ಕರೆದುಕೊಂಡು ಅಲ್ಲಿಗೆ ಹೋದಾಗ ಮೂಳೆ ಕೊರೆಯುವಷ್ಟು ಚಳಿ. ನಮ್ಮ ವಾಹನ ಡೆಹ್ರಾಡೂನ್‌ನಿಂದ ಉತ್ತರ ಪ್ರದೇಶದ ಸಹರನ್‌ಪುರದತ್ತ ಸಾಗಿತ್ತು. ಹೆದ್ದಾರಿಯ ಇಕ್ಕೆಲೆಗಳಲ್ಲೂ ಎಲ್ಲೆಂದರಲ್ಲಿ ಮಂಗಗಳ ಹಿಂಡು. ಚಳಿಯಿಂದ ಮುದುಡಿ ಕುಳಿತಿದ್ದ ಅವು ಹೆದ್ದಾರಿಯಲ್ಲಿ ಸಾಗುವ ವಾಹನಗಳನ್ನು ನಿರ್ಲಿಪ್ತ ಭಾವದಿಂದ ನೋಡುತ್ತಿದ್ದವು. ಶಿವಾಲಿಕ್ ಮತ್ತು ರಾಜಾಜೀ ರಾಷ್ಟ್ರೀಯ ಉದ್ಯಾನದಲ್ಲಿ(ನ್ಯಾಷನಲ್ ಪಾರ್ಕ್) ಎತ್ತರಕ್ಕೆ ಬೆಳೆದು ನಿಂತ ಸಾಲ್ ಮರಗಳ ಕಾಡುಗಳು ಮತ್ತು ಹುಲಿ ಸಂರಕ್ಷಿತ ಅರಣ್ಯದ ಮಧ್ಯೆಯೇ ಹೆದ್ದಾರಿ ಹಾದು ಹೋಗುತ್ತದೆ. ಸಹರನ್‌ಪುರ ಜಿಲ್ಲೆಯ ಗಣೇಶ್‌ಪುರದಿಂದಲೇ ವನ್ಯಜೀವಿ ಕಾರಿಡಾರ್ ಆರಂಭವಾಗುತ್ತದೆ. ಸುಮಾರು 20 ಕಿಲೊಮೀಟರ್ ವ್ಯಾಪ್ತಿಯಲ್ಲಿ ದಟ್ಟಕಾಡು ಮತ್ತು ವನ್ಯಜೀವಿಗಳ ಸಾಂದ್ರತೆಯೂ ಅತಿ ಹೆಚ್ಚು. ಇದರಲ್ಲಿ ಒಟ್ಟು 12 ಕಿಲೊಮೀಟರ್ ‘ವನ್ಯಜೀವಿ ಕಾರಿಡಾರ್’ ಇದೆ. ಈ ಕಾರಿಡಾರ್ 16 ಕಿಲೊಮೀಟರ್ ಉತ್ತರ ಪ್ರದೇಶದ ವ್ಯಾಪ್ತಿಯಲ್ಲಿದ್ದರೆ, 4 ಕಿಲೊಮೀಟರ್ ಉತ್ತರಾಖಂಡ ವ್ಯಾಪ್ತಿಯಲ್ಲಿದೆ. ಕಾಡಿನ ಮಧ್ಯೆ ಫ್ಲೈಓವರ್ ಸಾಗುತ್ತದೆ. ಕೆಳಗಡೆ ಪ್ರಾಣಿಗಳ ಓಡಾಟಕ್ಕೆ ಆರು ಅಂಡರ್‌ಪಾಸ್‌ಗಳು, ಆನೆಗಳ ಓಡಾಟಕ್ಕೆ 200 ಮೀಟರ್‌ಗಳ ವಿಸ್ತೀರ್ಣದ ಎರಡು ಅಂಡರ್‌ಪಾಸ್‌ಗಳು, ನದಿಗೆ ಮೂರು ದೊಡ್ಡ ಸೇತುವೆಗಳು, 13 ಚಿಕ್ಕ ಸೇತುವೆಗಳು ಹಾಗೂ 340 ಮೀಟರ್ ಉದ್ದದ ಸುರಂಗವೂ ಇದೆ.

ದೆಹಲಿ– ಡೆಹ್ರಾಡೂನ್ ಈಗಿನ ಹೆದ್ದಾರಿ

ಪರಿಸರ ಮತ್ತು ವನ್ಯಜೀವಿಗಳಿಗೆ ‘ಹೆಚ್ಚು’ ಹಾನಿ ಮಾಡದ ಆರು ಲೇನ್‌ಗಳ ಹೆದ್ದಾರಿ ಇದಾಗಿದ್ದು, ನದಿಯ ಪಕ್ಕದಲ್ಲೇ ಹಾದು ಹೋಗುವುದು ವಿಶೇಷ. ಮೇಲ್ಸೇತುವೆ ಕೆಳಗೆ ಮಾನವ ಹಸ್ತಕ್ಷೇಪ ಇಲ್ಲದೇ ವನ್ಯಜೀವಿಗಳು ಆರಾಮವಾಗಿ ಓಡಾಡಿಕೊಂಡಿರಬಹುದು ಎನ್ನುವುದು ಅಧಿಕಾರಿಗಳ ವಿವರಣೆ.

11ನೇ ಪುಟಕ್ಕೆ...


ಶಿವಾಲಿಕ್ ಮತ್ತು ರಾಜಾಜೀ ರಾಷ್ಟ್ರೀಯ ಉದ್ಯಾನಗಳ ಮಧ್ಯೆ ಹಾದು ಹೋದ ಹೆದ್ದಾರಿಯ ನೋಟ

ಆರ್ಕ್ಟಿಕ್‌ನ ಹಿಮಾದ್ರಿಯಲ್ಲಿ ಕನ್ನಡಿಗನ ಪ್ರಯೋಗ

ಗುರು ಪಿ.ಎಸ್.

ಆರ್ಕ್ಟಿಕ್. ಹಿಮವನ್ನೇ ಹೊದ್ದಿರುವ, ಅಕ್ಟೋಬರ್‌ನಿಂದ ಫೆಬ್ರುವರಿಯವರೆಗೆ ಸೂರ್ಯನ ರಶ್ಮಿಗಳನ್ನೇ ಕಾಣದ ಪ್ರದೇಶ. ನೈಸರ್ಗಿಕವಾಗಿ ಮತ್ತು ಮಾನವ ತಪ್ಪಿನಿಂದ ಸಂಭವಿಸುವ ಯಾವುದೇ ಅವಘಡಗಳ ಪರಿಣಾಮ ಆರ್ಕ್ಟಿಕ್‌ನಲ್ಲಿ ಕಾಣಿಸುತ್ತದೆ. ಹಾಗೆಯೇ, ಇಲ್ಲಿನ ಯಾವುದೇ ವ್ಯತ್ಯಾಸಗಳ ಪರಿಣಾಮ ಪ್ರಪಂಚದ ಮೇಲಾಗುತ್ತದೆ. ಆದ್ದರಿಂದಲೇ ಇಲ್ಲಿ ಸಂಶೋಧನೆ ಕೈಗೊಳ್ಳುವುದು ಎಲ್ಲ ಪ್ರಮುಖ ದೇಶಗಳ ಆದ್ಯತೆ ಮತ್ತು ಹೆಮ್ಮೆ. ಆರ್ಕ್ಟಿಕ್‌ಗೆ ಬೇಸಿಗೆಯಲ್ಲಿ ಹೋಗುವುದೇ ಸವಾಲಾಗಿರುವಾಗ ಚಳಿಗಾಲದಲ್ಲಿ ಸಂಶೋಧನಾ ಯಾತ್ರೆ ಕೈಗೊಂಡವರು ಬೆಂಗಳೂರಿನ ರಾಮನ್ ಸಂಶೋಧನಾ ಸಂಸ್ಥೆಯ ವಿಜ್ಞಾನಿ, ಕನ್ನಡಿಗ ಬಿ.ಎಸ್. ಗಿರೀಶ್.

‘ನಾವು ಆರ್ಕ್ಟಿಕ್‌ಗೆ ಹೋಗಿದ್ದ ವೇಳೆ ಕಡು ಚಳಿ. ಡಿಸೆಂಬರ್ 21ರಿಂದ ಜನವರಿ 15ರ ವರೆಗೆ ಅಲ್ಲಿದ್ದೆವು. ಆರ್ಕ್ಟಿಕ್‌ನಲ್ಲಿ ಸಾಮಾನ್ಯವಾಗಿ ಅಕ್ಟೋಬರ್ 28ರ ವೇಳೆಗೆ ಸೂರ್ಯಾಸ್ತವಾದರೆ, ಸೂರ್ಯನ ಬೆಳಕು ಮತ್ತೆ ಕಾಣೋದು ಫೆ.16ರ ವೇಳೆಗೆ. ಅಂದರೆ, ಸುಮಾರು ನಾಲ್ಕು ತಿಂಗಳು ಆರ್ಕ್ಟಿಕ್‌ನಲ್ಲಿ ಸಂಪೂರ್ಣ ಕತ್ತಲು ಆವರಿಸಿರುತ್ತದೆ. ನಾವು ನಾರ್ವೆಯ ಆರ್ಕ್ಟಿಕ್ ಪ್ರದೇಶದಲ್ಲಿ ಕಾಲಿಟ್ಟ ಸಂದರ್ಭದಲ್ಲಿ ಹುಣ್ಣಿಮೆ ಸಮೀಪದಲ್ಲಿದ್ದುದರಿಂದ ಸ್ವಲ್ಪ ಬೆಳಕೂ ಇತ್ತು. ಆ ಬೆಳಕಿನಲ್ಲಿಯೇ ಸಾಗಿದಾಗ ನಮಗೆ ಸುತ್ತಮುತ್ತ ಬೆಟ್ಟ ಗುಡ್ಡ, ಸಮುದ್ರ ಕಾಣಿಸಿತು. ಹುಣ್ಣಿಮೆಯ ನಂತರ, ದಿನದ 24 ತಾಸುಗಳೂ ಕತ್ತಲೆಯಲ್ಲೇ ಕಳೆಯಬೇಕಿತ್ತು’ ಎಂದು ಅನುಭವ ಹಂಚಿಕೊಂಡರು ಗಿರೀಶ್.

ಭಾರತ ಇದೇ ಮೊದಲ ಬಾರಿಗೆ ಚಳಿಗಾಲದಲ್ಲಿ ಆರ್ಕ್ಟಿಕ್‌ಗೆ ಸಂಶೋಧನಾ ಯಾತ್ರೆಗೆ ತಂಡವೊಂದನ್ನು ಕಳಿಸಿತ್ತು. ಆ ತಂಡದ ನಾಯಕತ್ವ ವಹಿಸಿದ್ದವರು ಗಿರೀಶ್.

‘ಆರ್ಕ್ಟಿಕ್‌ನಲ್ಲಿ ಭಾರತದ ಕಾಯಂ ಸ್ಟೇಷನ್ ‘ಹಿಮಾದ್ರಿ’. ನಾರ್ವೆಯ ನ್ಯೂಅಲ್ಸನ್‌ನಲ್ಲಿದೆ. ಏಕಕಾಲಕ್ಕೆ ಕೇವಲ ಎಂಟು ಜನ ಉಳಿದುಕೊಳ್ಳಬಹುದಾದಷ್ಟಿರುವ ಜಾಗ ಅದು. ಅದರೊಳಗೇ ಪ್ರಯೋಗಾಲಯ ಇದೆ. ವಿಶ್ರಾಂತಿ ಕೊಠಡಿಯೂ ಇದೆ. ದಿನದ 24 ತಾಸು ಬಿಸಿನೀರಿನ ವ್ಯವಸ್ಥೆ ಇರುತ್ತದೆ. ಊಟ–ತಿಂಡಿಗಾಗಿ ಸ್ವಲ್ಪ ದೂರದಲ್ಲಿರುವ ‘ಸರ್ವೀಸ್ ಬಿಲ್ಡಿಂಗ್’ಗೆ ಹೋಗಬೇಕಾಗುತ್ತದೆ. ಅಲ್ಲಿಗೆ ಮೊಬೈಲ್ ಫೋನ್ ಅಥವಾ ಲ್ಯಾಪ್‌ಟಾಪ್ ತೆಗೆದುಕೊಂಡು ಬರಬೇಡಿ ಎಂದು ಅಲ್ಲಿನವರು ಮನವಿ ಮಾಡುತ್ತಾರೆ. ಕಾರಣ, ಬೇರೆ ದೇಶಗಳಿಂದಲೂ ಬಂದವರೊಂದಿಗೆ ಮಾತನಾಡಲಿ, ಸಂವಹನ ನಡೆಸಲಿ ಎಂಬ ಕಾರಣಕ್ಕೆ ಹೀಗೆ ಮಾಡುತ್ತಾರೆ’ ಎಂದು ಅವರು ಮಾತು ಮುಂದುವರಿಸಿದರು.

2008ರ ಜುಲೈ 1ರಂದು ಈ ‘ಹಿಮಾದ್ರಿ’ಯನ್ನು ಸ್ಥಾಪಿಸಲಾಗಿತ್ತು. ಅಂತರರಾಷ್ಟ್ರೀಯ ಆರ್ಕ್ಟಿಕ್ ಸಂಶೋಧನಾ ನೆಲೆ ನಾರ್ವೆಯ ಸ್ವಾಲ್‌ಬಾರ್ಡ್‌ನಲ್ಲಿ ಇದೆ.

12ನೇ ಪುಟಕ್ಕೆ...

‘ಆರ್ಕ್ಟಿಕ್’ನಲ್ಲಿರುವ ಭಾರತದ ವರ್ಕ್‌ಸ್ಟೇಷನ್ ‘ಹಿಮಾದ್ರಿ’.
ಚಿತ್ರ ಕೃಪೆ: ಎನ್‌ಸಿಪಿಒಆರ್

ಎಲ್ಲರಿಗೂ ಇದೆ ಅವಕಾಶ

ಗಿರೀಶ್ ಅವರು ಓದಿದ್ದು, ಬೆಳೆದಿದ್ದು ಬೆಂಗಳೂರಿನಲ್ಲಿಯೇ. ಸರಸ್‌ನ ಪ್ರೊ.ಸೌರಭ್ ಸಿಂಗ್ ಅವರ ನೇತೃತ್ವದಲ್ಲಿ ಗಿರೀಶ್ ಈ ಸಂಶೋಧನೆ ಮಾಡುತ್ತಿದ್ದಾರೆ. ತಮ್ಮಂತೆಯೇ ಕನ್ನಡದ ಯುವ ಪ್ರತಿಭಾವಂತರು ಇಂತಹ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು ಎಂದು ಹಂಬಲಿಸುವ ಅವರು, ‘ರಾಷ್ಟ್ರೀಯ ಧ್ರುವ ಮತ್ತು ಸಾಗರ ಸಂಶೋಧನಾ ಕೇಂದ್ರ’ಕ್ಕೆ(ಎನ್‌ಸಿಪಿಒಆರ್) ಯುವಕರು ಪ್ರಸ್ತಾವ ಕಳುಹಿಸುವಂತೆ ಸಲಹೆ ನೀಡುತ್ತಾರೆ.

ಸೆಪ್ಟೆಂಬರ್‌ನಲ್ಲಿ ಎನ್‌ಸಿಪಿಒಆರ್ ಪ್ರಸ್ತಾವಗಳನ್ನು ಆಹ್ವಾನಿಸುತ್ತದೆ. ಈ ಪ್ರಸ್ತಾವಗಳಲ್ಲಿ ಕೆಲವನ್ನು ಆಯ್ದುಕೊಳ್ಳಲಾಗುತ್ತದೆ. ಆಯ್ಕೆಗೆ ಒಳಪಟ್ಟವರು, ಯಾವ ಪ್ರಯೋಗ ಮಾಡುತ್ತಾರೆ, ಏಕೆ ಆ ಪ್ರಯೋಗ ಮಾಡುತ್ತಿದ್ದಾರೆ ? ಅದರ ಮಹತ್ವ ಏನು ಎಂದು ಸಮರ್ಪಕವಾಗಿ ವಿವರಿಸಿದರೆ ಅಂಥವರನ್ನು ಅಂತಿಮ ಹಂತಕ್ಕೆ ಮಾಡಲಾಗುತ್ತದೆ. ಯಾರೇ ಆಗಲಿ, ಉತ್ತಮ ಪ್ರಸ್ತಾವ (ಪ್ರಪೋಸಲ್) ಇದ್ದರೆ ಅವರು ಎನ್‌ಸಿಪಿಒಆರ್ ಸಂಪರ್ಕಿಸಬಹುದು ಎಂದು ಗಿರೀಶ್ ಸಲಹೆ ನೀಡುತ್ತಾರೆ.

ಬದುಕಿನಲ್ಲಿ ದುರಂತ ಸಂಭವಿಸಿದರೆ ಅಲ್ಲಿಗೇ ಜೀವನ ಮುಗಿದು ಹೋಯಿತು ಎನ್ನುವವರೇ ಹೆಚ್ಚು. ಆದರೆ, ಡಾ.ಪ್ರೇಮಾ ಧನರಾಜ್ ಅವರು ಅಗ್ನಿ ಅವಘಡದಲ್ಲಿ ಶೇ 50 ರಷ್ಟು ಸುಟ್ಟಗಾಯಗಳಾದರೂ ಛಲ ಬಿಡದೆ ಬದುಕಿ, ಸಾಧಿಸಿ ತೋರಿಸಿದ್ದಾರೆ. ಇವರ ಸಾಹಸಗಾಥೆ ಇಲ್ಲಿದೆ.

ಪ್ರೇಮಾ ಬದುಕು ಬದಲಿಸಿದ ದುರಂತ!

ಚೇತನ ಜೆ.ಕೆ.

ಅದು ತಮಿಳುನಾಡಿನ ವೆಲ್ಲೂರಿನಲ್ಲಿರುವ ಸಿಎಂಸಿ ಆಸ್ಪತ್ರೆ. ಅದರ ವಾರ್ಡ್‌ವೊಂದರಲ್ಲಿ ಸುಟ್ಟಗಾಯಗಳಿಗೆ ಚಿಕಿತ್ಸೆ ಪಡೆಯುತ್ತಿರುವ ಪುಟ್ಟ ಮಗಳು ಸಾವು–ಬದುಕಿನ ನಡುವೆ ಹೋರಾಟ ನಡೆಸುತ್ತಿದ್ದಾಳೆ. ಇತ್ತ ಮೂಲೆಯಲ್ಲಿ ಕುಳಿತ ತಾಯಿ ‘ಮಗಳಿಗೆ ಮರುಜೀವ ಸಿಕ್ಕರೆ, ಅವಳನ್ನು ಇದೇ ಆಸ್ಪತ್ರೆಯಲ್ಲಿ ವೈದ್ಯೆಯನ್ನಾಗಿಸುತ್ತೇನೆ, ಸುಟ್ಟಗಾಯಗಳ ಚಿಕಿತ್ಸಕಿಯಾಗಿ ಮಾಡುತ್ತೇನೆ’ ಎಂದು ಮನಸ್ಸಿನಲ್ಲೇ ಗಟ್ಟಿ ಸಂಕಲ್ಪ ಮಾಡುತ್ತಾರೆ. ಆನಂತರ ನಡೆದಿದ್ದು ತಾಯಿ, ಮಗಳ ಹೋರಾಟಗಾಥೆಯೂ ಹೌದು, ಯಶೋಗಾಥೆಯೂ ಕೂಡ.

ಸುಮಾರು ಎಂಟು ವರ್ಷ ಚಿಕಿತ್ಸೆ ಪಡೆದ ಆ ಬಾಲಕಿ, ಬಳಿಕ ಅದೇ ಆಸ್ಪತ್ರೆಯಲ್ಲಿ ವೈದ್ಯೆ ಆಗಿ 30 ವರ್ಷ ಸೇವೆ ಸಲ್ಲಿಸುತ್ತಾರೆ. ಅಲ್ಲದೇ, ಸುಟ್ಟಗಾಯಗಳ ಚಿಕಿತ್ಸಾ ವಿಭಾಗದ ಮುಖ್ಯಸ್ಥೆಯೂ ಆಗುತ್ತಾರೆ.

ವೈದ್ಯಕೀಯ ಕ್ಷೇತ್ರದಲ್ಲಿನ ಸೇವೆಗಾಗಿ 2024ನೇ ಸಾಲಿನ ‘ಪದ್ಮಶ್ರೀ’ ಪ್ರಶಸ್ತಿಗೆ ಭಾಜನರಾದ ಬೆಂಗಳೂರಿನ ವೈದ್ಯೆ ಪ್ರೇಮಾ ಧನರಾಜ್ ಅವರ ಬದುಕಿನ ಕಥೆ ಇದು. 2002ರಲ್ಲಿ ‘ಅಗ್ನಿ ರಕ್ಷಾ’ ಎಂಬ ಸ್ವಯಂ ಸೇವಾ ಸಂಸ್ಥೆ ಸ್ಥಾಪಿಸಿದ ಅವರು, ಸುಟ್ಟಗಾಯದ 25 ಸಾವಿರಕ್ಕೂ ಹೆಚ್ಚು ರೋಗಿಗಳಿಗೆ ಉಚಿತವಾಗಿ ಚಿಕಿತ್ಸೆ ನೀಡಿದ್ದಾರೆ. ಅವರಲ್ಲಿ ಅನೇಕರಿಗೆ ಪುನರ್ವಸತಿಯನ್ನೂ ಕಲ್ಪಿಸಿದ್ದಾರೆ.

ವೆಲ್ಲೂರಿನ ಆಸ್ಪತ್ರೆಯಿಂದ ನಿವೃತ್ತಿಯಾದ ಬಳಿಕ, ಬೆಂಗಳೂರಿಗೆ ಮರಳಿ, ಇಲ್ಲಿಯೇ ತಮ್ಮ ಸೇವೆ ಮುಂದುವರಿಸಿದ್ದಾರೆ ಅವರು.

ದುರಂತ ಕೊಟ್ಟ ತಿರುವು

ಗಾಯಕಿಯಾಗುವ ಕನಸು ಕಂಡಿದ್ದ ಪ್ರೇಮಾ ಅವರು ಎಂಟನೇ ವಯಸ್ಸಿನಲ್ಲೇ ಭಾರೀ ದುರಂತಕ್ಕೆ ಒಳಗಾಗುತ್ತಾರೆ. ಮನೆಯಲ್ಲಿ ಯಾರೂ ಇಲ್ಲದ ವೇಳೆ ಸೀಮೆಎಣ್ಣೆ ಸ್ಟೌನಲ್ಲಿ ಕಾಫಿ ಮಾಡುವಾಗ ಅವಘಡ ಸಂಭವಿಸುತ್ತದೆ. ಸ್ಟೌ ಉರಿಯುತ್ತಿರುವಾಗಲೇ ಅವರು ಅದಕ್ಕೆ ಸೀಮೆಎಣ್ಣೆ ಹಾಕುತ್ತಾರೆ. ಸ್ಟೌ ಸ್ಫೋಟಗೊಳ್ಳುತ್ತದೆ. ಅವರ ದೇಹ ಶೇಕಡ 50 ರಷ್ಟು ಸುಟ್ಟುಹೋಗುತ್ತದೆ.

ಸುಟ್ಟಗಾಯಗಳಿಗೆ ಸರಿಯಾದ ಚಿಕಿತ್ಸೆ ಇಲ್ಲದ ಸಮಯ ಅದು. ಬೆಂಗಳೂರಿನ ಆಸ್ಪತ್ರೆಯೊಂದರಲ್ಲಿ ಅವರು ಒಂದು ತಿಂಗಳು ಚಿಕಿತ್ಸೆ ಪಡೆಯುತ್ತಾರೆ. ಆದರೆ ಪರಿಸ್ಥಿತಿ ಬಿಗಡಾಯಿಸುತ್ತದೆ. ಅವರ ತುಟಿ ಎದೆಗೆ ಅಂಟ ಕತ್ತು ಕೂಡಾ ಬಾಗುತ್ತದೆ. ಮಗಳನ್ನು ವೆಲ್ಲೂರಿನ ಸಿಎಂಸಿ ಆಸ್ಪತ್ರೆಗೆ ಕರೆದೊಯ್ಯಲು ಪೋಷಕರು ನಿರ್ಧರಿಸುತ್ತಾರೆ. ಅಲ್ಲಿ ಹಲವು ತಿಂಗಳು ಚಿಕಿತ್ಸೆ ಪಡೆದ ಬಳಿಕ ಪ್ರೇಮಾ ಅವರ ಆರೋಗ್ಯ ಸುಧಾರಿಸುತ್ತದೆ. ಬಳಿಕ ಸುಮಾರು ಎಂಟು ವರ್ಷ ಅವರಿಗೆ ಅದೇ ಆಸ್ಪತ್ರೆಯಲ್ಲಿ ಚಿಕಿತ್ಸೆ ಮುಂದುವರೆಯುತ್ತದೆ. ಪ್ರೇಮಾ ಅವರು ಒಟ್ಟು 28 ಶಸ್ತ್ರಚಿಕಿತ್ಸೆಗಳಿಗೆ ಒಳಗಾಗುತ್ತಾರೆ!

‘ಸುಟ್ಟಗಾಯದ ಸಂತ್ರಸ್ತರಿಗೆ ಪ್ರಪಂಚ ಅಸಹನೀಯ ಎನ್ನುವುದು ಚಿಕ್ಕ ವಯಸ್ಸಿನಲ್ಲೇ ನನ್ನ ಅನುಭವಕ್ಕೆ ಬಂತು. ಸರೀಕರ ಅಪಹಾಸ್ಯ, ಸಾರ್ವಜನಿಕ ಸ್ಥಳಗಳಲ್ಲಿ ಎವೆಯಿಕ್ಕದೇ ನೋಡುವ ಕಣ್ಣುಗಳು, ದೂರ ಸರಿದು ನಿಲ್ಲುವ ಸಹಪಾಠಿಗಳು–ಇವೇ ನನ್ನ ಬಾಲ್ಯವಾಗಿತ್ತು’ ಎಂದು ಡಾ.ಪ್ರೇಮಾ ನೆನಪಿಸಿಕೊಳ್ಳುತ್ತಾರೆ.

ತಾಯಿಯೇ ಶಕ್ತಿ

ತಮ್ಮ ಬದುಕಿನಲ್ಲಿ ತಾಯಿಯ ಪಾತ್ರ ತುಂಬಾ ದೊಡ್ಡದು ಎನ್ನುತ್ತಾರೆ ಅವರು. ಹೊರಗಿನ ಪ್ರಪಂಚವನ್ನು ಎದುರಿಸುವ ಧೈರ್ಯವಿಲ್ಲದೆ ಇನ್ನು ಮುಂದೆ ಶಾಲೆಗೆ ಹೋಗುವುದಿಲ್ಲ ಎಂದು ಹಟಹಿಡಿದು ಕುಳಿತಿದ್ದ ಮಗಳನ್ನು ‘ನಿನ್ನಿಂದ ಮಹತ್ತರ ಸಾಧನೆ ಆಗುವುದಿದೆ. ಅದಕ್ಕಾಗಿ ಈ ಅವಘಡಕ್ಕೆ ದೇವರು ನಿನ್ನನ್ನು ಆರಿಸಿದ್ದಾನೆ. ನೀನಿರುವಂತೆ ನಿನ್ನನ್ನು ಒಪ್ಪಿಕೊಂಡು ಸಾಧನೆಯ ಕಡೆ ಗಮನಹರಿಸು’ ಎಂದು ಹುರಿದುಂಬಿಸಿದ್ದು ಗಟ್ಟಿಗಿತ್ತಿ ತಾಯಿ.

ಚಿಕಿತ್ಸೆಗಾಗಿ ಆಗಾಗ ವೆಲ್ಲೂರಿಗೆ ಹೋಗಬೇಕಾದ್ದರಿಂದ ಪ್ರೇಮಾ ಅವರಿಗೆ ಶಾಲೆಗೆ ಹೋಗಲಾಗಲಿಲ್ಲ. ಅದಕ್ಕಾಗಿ ನೇರವಾಗಿ 10ನೇ ತರಗತಿ ಪರೀಕ್ಷೆ ತೆಗೆದುಕೊಳ್ಳುತ್ತಾರೆ. ಪಿಯುಸಿಗೆ ಬಿಎಂಎಸ್ ಕಾಲೇಜಿಗೆ ಸೇರುತ್ತಾರೆ. ಅವರಿಗೆ ಯಾವುದೋ ಚರ್ಮರೋಗವಿದೆ ಎಂದು ಅನುಮಾನಿಸುವ ಸಹಪಾಠಿಗಳು ಅವರಿಂದ ದೂರ ಕುಳಿತುಕೊಳ್ಳುತ್ತಾರೆ. ಗುರಿಯತ್ತ ಗಮನ ನೆಟ್ಟಾಗ ಈ ಅವಮಾನಗಳಿಗೆ ಅಂಜಬೇಕೇ? ಎಂದು ತಮ್ಮನ್ನು ತಾವೇ ಪ್ರಶ್ನಿಸಿಕೊಳ್ಳುತ್ತಾರೆ. ಅಲ್ಲಿಂದ ಆಚೆಗೆ ಅವರು ಎಂದೂ ತಮಗಾದ ಸ್ಥಿತಿ ಬಗ್ಗೆ ನೋಯಿವುದಿಲ್ಲ, ಬೇಯುವುದಿಲ್ಲ, ಬೇಸರಿಸುವುದೂ ಇಲ್ಲ.

ಡಾ.ಪ್ರೇಮಾ ಧನರಾಜ್

ಬಿಎಸ್‌ಸಿಯಲ್ಲಿ ವಿಶ್ವವಿದ್ಯಾಯಲಕ್ಕೇ ಮೊದಲಿಗರಾದ ಪ್ರೇಮಾ ಅವರಿಗೆ ಹುಬ್ಬಳ್ಳಿಯಲ್ಲಿ ಎಂಬಿಬಿಎಸ್‌ಗೆ ಪ್ರವೇಶಾತಿಯೂ ದೊರೆಯುತ್ತದೆ. ಬಳಿಕ ಚಿಕಿತ್ಸೆ ಪಡೆದ ವೆಲ್ಲೂರು ಕಾಲೇಜಿನಲ್ಲೇ ಎಂಎಸ್ (ಜನರಲ್ ಸರ್ಜರಿ) ವ್ಯಾಸಂಗ ಮಾಡುತ್ತಾರೆ. ನಂತರ ಲುಧಿಯಾನದಲ್ಲಿ ಪ್ಲಾಸ್ಟಿಕ್ ಸರ್ಜರಿಯಲ್ಲಿ ಪದವಿ ಪೂರೈಸುತ್ತಾರೆ. ಈಗಲೂ ಪ್ರೇಮಾ ಅವರು ದೇಶದ ಅತ್ಯಂತ ಜನಪ್ರಿಯ ಪ್ಲಾಸ್ಟಿಕ್ ಸರ್ಜನ್‌ಗಳಲ್ಲಿ ಒಬ್ಬರು. ದೇಶದ ಪ್ಲಾಸ್ಟಿಕ್ ಸರ್ಜರಿ, ಕಾಸ್ಮೆಟಾಲಜಿ ಕ್ಷೇತ್ರಕ್ಕೆ ಅವರು ನೀಡಿರುವ ಕೊಡುಗೆ ಅನನ್ಯ.

ಅಮೆರಿಕ ಮತ್ತಿತರ ದೇಶಗಳಿಗೆ ತೆರಳಿ ಪ್ಲಾಸ್ಟಿಕ್ ಸರ್ಜರಿ, ಕಾಸ್ಮೆಟಾಲಜಿ ಕುರಿತು ಹಲವು ಪದವಿ ಪಡೆದಿದ್ದಾರೆ. ವಿದೇಶಗಳಲ್ಲಿ ಕಲಿತ ವಿದ್ಯೆಯನ್ನು ದೇಶದ ಪ್ಲಾಸ್ಟಿಕ್ ಸರ್ಜರಿ ಕ್ಷೇತ್ರದ ಬೆಳವಣಿಗೆಗೆ ವಿನಿಯೋಗಿಸಿದ್ದಾರೆ. ವಿವಿಧ ವೈದ್ಯಕೀಯ ಜರ್ನಲ್‌ಗಳಲ್ಲಿ 130 ಪ್ರಕಟಣೆಗಳು, 5 ಪುಸ್ತಕಗಳನ್ನು ಅವರು ಬರೆದಿದ್ದಾರೆ. 60 ಸಂಶೋಧನೆಗಳನ್ನು ಮಾಡಿದ್ದಾರೆ. ವೈದ್ಯಕೀಯ ಕ್ಷೇತ್ರದಲ್ಲಿ ದೇಶ ವಿದೇಶಗಳ 10 ಪದವಿಗಳನ್ನು ಅವರು ಗಳಿಸಿದ್ದಾರೆ.

ಇಷ್ಟೆಲ್ಲಾ ಸಾಧನೆ ಮಾಡಿರುವ ಅವರನ್ನು ಅರಸಿಬಂದ ಅವಕಾಶಗಳೇನೂ ಕಡಿಮೆಯಿಲ್ಲ. ಆದರೆ ತಾಯಿಯ ಆಸೆಯಂತೆ ಅವರು ವೆಲ್ಲೂರಿನ ಸಿಎಂಸಿ ಆಸ್ಪತ್ರೆಯಲ್ಲೇ ಉಳಿಯುತ್ತಾರೆ. ಬಡಜನರ ಸೇವೆ ಮಾಡುತ್ತಾರೆ.

‘ವೃತ್ತಿ ಆರಂಭಿಸಿದಾಗ ₹300 ಸಂಬಳ ಪಡೆಯುತ್ತಿದ್ದೆ. ನಿವೃತ್ತಳಾಗುವಾಗ ₹60,000 ಸಂಬಳ ಪಡೆಯುತ್ತಿದ್ದೆ. ಎಂದಿಗೂ ಅದ್ದೂರಿಯಾಗಿ ಬದುಕಬೇಕು ಎಂದಾಗಲೀ, ಇನ್ನೂ ಹೆಚ್ಚು ಹಣ ಗಳಿಸಬೇಕು ಎಂದನಿಸಲೇ ಇಲ್ಲ. ಈಗಲೂ ನನಗೆ ಅಗತ್ಯಕ್ಕಿಂತ ಹೆಚ್ಚು ಖರ್ಚು ಮಾಡಲು ಬರುವುದಿಲ್ಲ’ ಎನ್ನುತ್ತಾರೆ ಪ್ರೇಮಾ.

ಸ್ವತಃ ಸುಟ್ಟುಗಾಯದ ಚಿಕಿತ್ಸೆಗೆ ಒಳಗಾದ ಅವರು, ತಾವು ಉತ್ತಮ ವೈದ್ಯೆಯಾಗಲು ಅನುಭವಗಳೇ ಕಾರಣ ಎನ್ನುತ್ತಾರೆ. ಸುಟ್ಟುಕೊಂಡವರಿಗೆ ನಾಜೂಕಾಗಿ ಶುಶ್ರೂಷೆ ಮಾಡಬೇಕಾಗುತ್ತದೆ. ಡ್ರೆಸ್ಸಿಂಗ್ ಮಾಡುವಾಗ ಜೋರಾಗಿ ಎಳೆಯುವುದು, ಕೀಳುವುದು ಮಾಡಬಾರದು. ಚಿಕಿತ್ಸೆ ಪಡೆಯುವಾಗ ತಾವು ಅನುಭವಿಸಿದ ನೋವನ್ನು ತನ್ನ ರೋಗಿಗಳು ಅನುಭವಿಸಬಾರದು ಎಂಬ ಕಾಳಜಿಯಿಂದ ಅವರು ಚಿಕಿತ್ಸೆ ನೀಡುತ್ತಾರೆ. ಬೆಂಕಿ ಅನಾಹುತಕ್ಕೀಡಾದ ಹಲವಾರು ಮಕ್ಕಳಿಗೆ ಪ್ರೇಮಾ ಅವರೇ ಸ್ಫೂರ್ತಿ.

ಅಗ್ನಿ ರಕ್ಷಾ

ಬಡವರೇ ಹೆಚ್ಚಾಗಿ ಅಗ್ನಿ ಅವಘಡಗಳಿಗೆ ಒಳಗಾಗುತ್ತಾರೆ ಎಂಬುದು ತಮ್ಮ ವೃತ್ತಿಜೀವನದಲ್ಲಿ ಪ್ರೇಮಾ ಕಂಡುಕೊಂಡ ಸತ್ಯ. ಬಡವರು ಉತ್ತಮ ಚಿಕಿತ್ಸೆ ಪಡೆದುಕೊಳ್ಳುವುದು ದುಸ್ತರವೇ. ಅಂಥವರಿಗೆ ಉಚಿತವಾಗಿ ಚಿಕಿತ್ಸೆ ನೀಡಬೇಕು ಎಂದು ಅವರು ‘ಅಗ್ನಿ ರಕ್ಷಾ’ ಸಂಸ್ಥೆ ಆರಂಭಿಸಿದ್ದಾರೆ. ಸುಟ್ಟಗಾಯಗಳಿಗೆ ಚಿಕಿತ್ಸೆ ನೀಡಿ, ಆಪ್ತಸಮಾಲೋಚನೆ ನೀಡುವುದಲ್ಲದೇ, ಸಂತ್ರಸ್ತರು ಸ್ವಾವಲಂಬಿಯಾಗಿ ಬದುಕುವಂತೆ ಮಾಡಲು ಹಲವಾರು ರೀತಿಯ ವೃತ್ತಿಪರ ತರಬೇತಿಗಳನ್ನು ನೀಡುತ್ತಾರೆ. ಸಂತ್ರಸ್ತರಲ್ಲಿ ಮದ್ಯವ್ಯಸನಿಗಳಿದ್ದರೆ ಅಥವಾ ಸಂತ್ರಸ್ತೆ ಗಂಡ ಮದ್ಯವ್ಯಸನಿ ಆಗಿದ್ದರೆ ಅವರನ್ನು ವ್ಯಸನಮುಕ್ತರನ್ನಾಗಿ ಮಾಡುವ ಕೆಲಸವನ್ನೂ ಈ ಸಂಸ್ಥೆ ಮಾಡುತ್ತಿದೆ. ಸಂಸ್ಥೆಯ ಉದ್ಯೋಗಿಗಳಲ್ಲಿ ಶೇಕಡ 90 ಮಂದಿ ಸುಟ್ಟುಗಾಯದ ಸಂತ್ರಸ್ತರೇ. ಅವಘಡಕ್ಕೆ ಒಳಗಾದವರ ದೈಹಿಕ, ಮಾನಸಿಕ ವೇದನೆ ಏನೆಂಬುದು ಅರಿತು ಅವರು ಸೇವೆ ಒದಗಿಸುತ್ತಿದ್ದಾರೆ. ಸಂತ್ರಸ್ತರಿಗೆ ಅಗತ್ಯವಿರುವ ಕಾನೂನಾತ್ಮಕ ನೆರವನ್ನೂ ಸಂಸ್ಥೆ ಒದಗಿಸುತ್ತಿದೆ.

‘ದುರಂತವೊಂದನ್ನು ನಾನು ಎದುರಾಗದಿದ್ದರೆ ಕೇವಲ ಸುಂದರ ಮಹಿಳೆಯಾಗಷ್ಟೇ ಇರುತ್ತಿದ್ದೇನೇ ಹೊರತು, ಇಷ್ಟೆಲ್ಲ ಸಾಧನೆ ನನ್ನಿಂದ ಆಗುತ್ತಿರಲಿಲ್ಲ. ನಾವು ನಮ್ಮ ಗುರಿಯತ್ತ ಸಾಗುತ್ತಿದ್ದಾಗ ಬಾಹ್ಯ ಸೌಂದರ್ಯ ಮುಖ್ಯವಾಗುವುದಿಲ್ಲ. ನಾನು ಜೀವನವನ್ನು ತುಂಬಾ ಪ್ರೀತಿಸುತ್ತೇನೆ’ ಎಂದು ಅದಮ್ಯ ಉತ್ಸಾಹದಿಂದ ಹೇಳುತ್ತಾರೆ ಎಪ್ಪತ್ತೆರಡು ವರ್ಷದ ಪ್ರೇಮಾ.

ಮಾಯಾವಿ ತೇಜಸ್ವಿ ಲೋಕದಲ್ಲಿ ಸುತ್ತಾಟ...

ಎಚ್.ಎಸ್.ನವೀನ ಕುಮಾರ್ ಹೊಸದುರ್ಗ

ಚಾರ್ಮಾಡಿ ಘಾಟಿಯ ಮೂಲಕ ಕರಾವಳಿಯತ್ತ ಕುಟುಂಬ ಸಮೇತ ಹೊರಟಿದ್ದ ನಾನು, ಮೂಡಿಗೆರೆ ಪ್ರವೇಶಿಸುತ್ತಿದ್ದ ಹಾಗೆ ಎಂದಿನಂತೆ ತೇಜಸ್ವಿಯವರ ನೆನಪು ಮಾಡಿಕೊಳ್ಳಲು ಶುರು ಮಾಡಿದೆ. ಮೂಡಿಗೆರೆ ದಾಟಿ ಕೊಟ್ಟಿಗೆಹಾರಕ್ಕೆ ಬರುತ್ತಿದ್ದಂತೆ ರಸ್ತೆಯ ಪಕ್ಕದಲ್ಲೇ 'ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಪ್ರತಿಷ್ಠಾನ' ಎಂಬ ಫಲಕ ಹೊತ್ತ ಮಲೆನಾಡ ಚೌಕಿಮನೆ ಕಟ್ಟಡ ನಮ್ಮನ್ನು ಸೆಳೆಯಿತು. ಆಗ ತೇಜಸ್ವಿ ಗುಂಗಿನಲ್ಲೇ ಇದ್ದ ನನಗೆ ಆದ ಆನಂದ ಅಷ್ಟಿಷ್ಟಲ್ಲ. ತಕ್ಷಣ ನಮ್ಮ ಕಾರು, ತೆರೆದಿದ್ದ ಗೇಟಿನ ಒಳಹೊಕ್ಕಿತು. ಆಗ ನಮ್ಮನ್ನು ಸ್ವಾಗತಿಸಿದ್ದು ಹೋಳಾದ ಕಾಫಿ ಬೀಜದ ಕಲಾಕೃತಿಯ ಹಿಂದಿದ್ದ 'ತೇಜಸ್ವಿ ಲೋಕ' ಎಂಬ ಬೋರ್ಡ್.

> ಕೊಟ್ಟಿಗೆಹಾರದಲ್ಲಿರುವ 'ತೇಜಸ್ವಿ ಲೋಕ' ಹೆಸರಾಂತ ಸಾಹಿತಿ ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಅವರ ಬಹುಮುಖ ಪ್ರತಿಭೆ, ವ್ಯಕ್ತಿತ್ವವನ್ನು ಸೊಗಸಾಗಿ ಅನಾವರಣಗೊಳಿಸಿದೆ. ಇದು ಯುವಜನಾಂಗ, ವಿದ್ಯಾರ್ಥಿಗಳು ಮತ್ತು ಸಾಹಿತ್ಯ ಪ್ರಿಯರನ್ನು ತನ್ನತ್ತ ಸೆಳೆಯುತ್ತಿದೆ.

ಕುತೂಹಲದಿಂದ ಕಟ್ಟಡದ ಒಳಹೊಕ್ಕಾಗ ಅಲ್ಲಿದ್ದ 'ಆಧುನಿಕ ಕನ್ನಡದ ಮಾಯಾವಿ' ಎಂಬ ಪೋಸ್ಟರ್‌ನಲ್ಲಿ ತೇಜಸ್ವಿಯವರ ಚಿತ್ರದ ಜೊತೆಗೆ ಕಂಪ್ಯೂಟರ್ ಹಾಗೂ ಪುಸ್ತಕಗಳೆರಡೂ ಕಣ್ಣಿಗೆ ಬಿದ್ದವು. ಪ್ರತಿಷ್ಠಾನದ ಸಂಯೋಜಕ ನಂದೀಶ್ ಬಂಕೇನಹಳ್ಳಿ ಅವರು ಅಪರೂಪದ 'ತೇಜಸ್ವಿ ಓದಿನ ಮನೆ'ಗೆ ಕರೆದೊಯ್ದರು. ಹೊರಗೆ ಸುತ್ತುವರಿದ ಹಸಿರು ಗಿರಿಶೃಂಗಗಳು ಗಾಜಿನ ಗೋಡೆಗಳಿಂದ ಕಾಣಿಸುತ್ತಿದ್ದವು. ಒಳಗಿರುವ ಕಪಾಟಿನಲ್ಲಿ ಈ ಗಿರಿಶೃಂಗದ ತುಂಬೆಲ್ಲಾ ಓಡಾಡಿ ಅದರ ವಿಶಿಷ್ಟ ಅನುಭವ ಕಥಾನಕಗಳನ್ನು ತನ್ನದೇ ವಿಶಿಷ್ಟ ಶೈಲಿಯಿಂದ ತೇಜಸ್ವಿಯವರು ದಾಖಲಿಸಿರುವ ಎಲ್ಲಾ ಪುಸ್ತಕಗಳು ತುಂಬಿಕೊಂಡಿದ್ದವು. ಅದರಲ್ಲಿ 'ಅಲೆಮಾರಿ ಅಂಡಮಾನ್ ಮತ್ತು ಮಹಾನದಿ ನೈಲ್' ಪುಸ್ತಕಗಳನ್ನು ಕೈಗೆತ್ತಿಕೊಂಡು, ಅದರ ಒಂದುಪುಟವನ್ನು ಮಡದಿ, ಮಕ್ಕಳಿಗೆ ಓದಿ ಹೇಳಿದಾಗ ಏನೋ ಆನಂದ!

ಚಾರ್ಮಾಡಿ ಘಾಟಿಯ ಸಹ್ಯಾದ್ರಿಕಾಡಿನ ಅಗಮ್ಯತೆಯ ಒಳಗೆ ಪ್ರವೇಶಿಸುವಾಗ ಈ ಹಸಿರು ಸಿರಿಗೆ ಹೊಸ್ತಿಲಿನಂತಿರುವ ಕೊಟ್ಟಿಗೆಹಾರದ 2 ಎಕರೆ 20 ಗುಂಟೆ ಜಾಗದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಡಿಯಲ್ಲಿ ರೂಪುಗೊಂಡಿರುವ ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಪ್ರತಿಷ್ಠಾನದ 'ತೇಜಸ್ವಿ ಲೋಕ' ಪೂಚಂತೇಯವರ ಬಹುಮುಖಿ ವ್ಯಕ್ತಿತ್ವವನ್ನು ವಿಶಿಷ್ಟವಾಗಿ ಅನಾವರಣಗೊಳಿಸುತ್ತದೆ.

'ಓದಿನ ಕೊಠಡಿ'ಯಲ್ಲಿ ಕುಳಿತು ತೇಜಸ್ವಿಯವರ ಕರ್ವಾಲೋ, ಚಿದಂಬರ ರಹಸ್ಯ, ಪರಿಸರದ ಕಥೆಗಳು, ಅಲೆಮಾರಿ ಅಂಡಮಾನ್ ಮತ್ತು ಮಹಾನದಿ ನೈಲ್, ಕಿರಗೂರಿನ ಗಯ್ಯಾಳಿಗಳು, ಜುಗಾರಿ ಕ್ರಾಸ್, ಮಾಯಾಲೋಕ ಮುಂತಾದ ಅದ್ಭುತ ಪುಸ್ತಕಗಳ ಪುಟಗಳನ್ನು ತಿರುವಿ ಹಾಕುತ್ತಿದ್ದರೆ, ತೇಜಸ್ವಿ ಲೋಕದಲ್ಲಿ ಸಣ್ಣ ಸುತ್ತನ್ನು ಹಾಕಿಬಂದ ಅನುಭವವಾಗುತ್ತದೆ. ಪ್ರತಿಷ್ಠಾನದ ಚೌಕಿಮನೆಯಲ್ಲಿ ಅಡ್ಡಾಡುತ್ತಾ, ಅಲ್ಲಿ ತೇಜಸ್ವಿಯವರು ತೆಗೆದ ಮ್ಯಾಗ್ ಪೈ ರಾಬಿನ್, ಗ್ರೀನ್ ಬಾರ್ಬೆಟ್ ಮುಂತಾದ ಹಕ್ಕಿಗಳ ಅದ್ಭುತ ಛಾಯಾಚಿತ್ರಗಳನ್ನು ವೀಕ್ಷಿಸಿದರೆ, ಅವರ ವ್ಯಕ್ತಿತ್ವದ ಅಗಾಧತೆಯ ಕಿರುಪರಿಚಯ ಖಂಡಿತ ಆಗುತ್ತದೆ. ಜೊತೆಗೆ ಇಲ್ಲಿನ ಗೋಡೆಗಳಲ್ಲಿ ಹಚ್ಚಲಾಗಿರುವ ಅವರ ಪುಸ್ತಕಗಳ ಚಿತ್ರಗಳು, ಅವರ 'ಹಕ್ಕಿಪುಕ್ಕ' ಪುಸ್ತಕದಲ್ಲಿನ ನಮ್ಮ ನಾಡಿನ ಖಗಲೋಕದ ಪರಿಚಯಾತ್ಮಕ ಪುಟಗಳು ನಮ್ಮನ್ನು ಮತ್ತೆ ಮತ್ತೆ ತೇಜಸ್ವಿ ಪ್ರಪಂಚಕ್ಕೆ ಕರೆದೊಯ್ಯುತ್ತವೆ. ಓದಿನ ಕೊಠಡಿಯ ಗೋಡೆಗಳಲ್ಲಿ ತೂಗು ಹಾಕಿರುವ ಅವರ ಚಿಂತನೆಯ ಫಲಕಗಳಲ್ಲಿ 'ಇಷ್ಟೆಲ್ಲಾ ಸಂಪರ್ಕ ಸಾಧನಗಳಲ್ಲಿ ಕ್ರಾಂತಿಯಾಗಿದ್ದರೂ ಅನುಭವ, ಆಲೋಚನೆ, ವಿಚಾರ ವಿಷಯಗಳ ಸಂವಹನ ಮತ್ತು ಹಸ್ತಾಂತರಕ್ಕೆ ಅತ್ಯಂತ ಅಗ್ಗದ ಮತ್ತು ಕ್ಷಿಪ್ರ ವಾಹಕಗಳೆಂದರೆ ಇಂದಿಗೂ ಪುಸ್ತಕಗಳೇ' ಎಂಬುದು ಗಮನ ಸೆಳೆಯಿತು. ಇದು ನಮ್ಮ ಬದುಕಲ್ಲಿ ಪುಸ್ತಕಗಳ ಹಾಗೂ ಇಂದು ನಮ್ಮಿಂದ ದೂರಾಗುತ್ತಿರುವ ಓದಿನ ಸಂಸ್ಕೃತಿಯ ಮಹತ್ವವನ್ನು ಸಾರಿ ಹೇಳುತ್ತದೆ. ಇಂದಿನ ಪೀಳಿಗೆಗೆ ಪುಸ್ತಕ ಸಂಸ್ಕೃತಿಯ ಪರಿಚಯ ಮಾಡಿಕೊಡಲು ಇಂತಹ ಕಡೆಗೆ ಖಂಡಿತಾ ಕರೆದೊಯ್ಯಬೇಕು.

ಇಲ್ಲಿ ಮಾರಾಟಕ್ಕಿರುವ ತೇಜಸ್ವಿ, ಕುವೆಂಪುರವರ ಕೆಲ ಪುಸ್ತಕಗಳನ್ನು ಖರೀದಿಸಿ, ಆಧುನಿಕ ಮಾಯಾವಿಯ ಇನ್ನಷ್ಟು ಸವಿನೆನಪುಗಳ ಮೂಟೆ ಹೊತ್ತು 'ತೇಜಸ್ವಿ ಲೋಕ'ದಿಂದ ಹೊರಟೆವು.

ತೇಜಸ್ವಿ ಲೋಕದ ಒಳನೋಟ...

'ಓದಿನ ಕೊಠಡಿ'ಯಲ್ಲಿ ಕುಳಿತರೆ ತೆರೆದುಕೊಳ್ಳುವ ತೇಜಸ್ವಿಯವರ ಪುಸ್ತಕಲೋಕ

ಗೊಲ್ಲರಹಟ್ಟಿಯ ವಿಶಿಷ್ಟ ಕಾಳುಹಬ್ಬ

ಜಿ.ವಿ ಆನಂದಮೂರ್ತಿ

ಹಿರಿಯೂರು ತಾಲ್ಲೂಕಿನ ಕಾಡುಗೊಲ್ಲರ ಕಟ್ಟೆಮನೆ ಯಾನೆ ಯರಬಳ್ಳಿ ದೊಡ್ಡಗೊಲ್ಲರಹಟ್ಟಿಯಲ್ಲಿ ಆಚರಿಸುವ 'ಕಾಳುಹಬ್ಬ' ಅಥವಾ 'ಗುಗ್ರಿಹಬ್ಬ' ಕಾಡುಗೊಲ್ಲರಿಗೆ ಸಂಬಂಧಿಸಿದ ವಿಶಿಷ್ಟ ಸಂಪ್ರದಾಯಗಳನ್ನು ಒಳಗೊಂಡಿರುವ ಹಬ್ಬ. ತಮ್ಮ ಹೊಲಗಳಲ್ಲಿ ಬೆಳೆದ ಅವರೆಕಾಳು, ಹೆಸರುಕಾಳು, ಅಲಸಂದೆ ಮತ್ತು ಕಡಲೆಕಾಳುಗಳನ್ನು ಪೂಜಿಸುವುದೇ ಈ 'ಕಾಳುಹಬ್ಬ'. ಕಾಡುಗೊಲ್ಲರಹಟ್ಟಿಯವರಲ್ಲದೆ ಇತರ ಹಳ್ಳಿಯವರೂ ತಾವು ಬೆಳೆದ ಕಾಳುಗಳನ್ನು ಈ ಹಬ್ಬಕ್ಕೆ ತಂದುಕೊಡುವ ಸಂಪ್ರದಾಯವಿದೆ.

ಮೂಲತಃ ಇದು ಕೃಷಿಗೆ ಸಂಬಂಧಿಸಿದ ಆಚರಣೆ. ಕಾಡುಗೊಲ್ಲರ ಧಾರ್ಮಿಕ ಆಚರಣೆಗಳನ್ನು ಸಂಪ್ರದಾಯ ಬದ್ಧವಾಗಿ ನಡೆಸುವ ಕರ್ನಾಟಕದ ಕೆಲವೇ ಗೊಲ್ಲರಹಟ್ಟಿಗಳಲ್ಲಿ ಯರಬಳ್ಳಿ ದೊಡ್ಡಗೊಲ್ಲರಹಟ್ಟಿಯೂ ಒಂದು.

'ಕಾಳುಹಬ್ಬ'ವನ್ನು ಆಚರಿಸುವವರು ವಿಶೇಷವಾಗಿ ಕಾಡುಗೊಲ್ಲರ 'ಚಂದಮುತ್ತಿ' ಕುಲದವರು. ಕಟ್ಟುಜಿನಿಗೆ, ಕಂಬಳಿ ಉಡುಗೆ, ಬಾಯಿಬತಉಳ್ಳಂಥ ಹಾಲುಗುಡದಪ್ಪನಿಗೆ ಇಡೀ ಗೊಲ್ಲಾಳಿಕೆಯಲ್ಲಿ ಬಿದಿರಿನ ಬಂಕು ಕಟ್ಟಿಮುತ್ತುಗದೆಲೆಯ ಸರುವುನಿಂದ ನಿರ್ಮಿಸಿರುವ ಏಕೈಕ ದೈವದ ಗುಬ್ಬಿಯರಬಳ್ಳಿಯಲ್ಲಿದೆ.

ಸಾಮಾನ್ಯವಾಗಿ 'ಕಾಳುಹಬ್ಬ' ಫೆಬ್ರುವರಿ ತಿಂಗಳಿನಲ್ಲಿ ಅಮಾವಾಸ್ಯೆ ನಂತರದಲ್ಲಿ ಬರುವ ಸೋಮವಾರ ನಿಗದಿಯಾದರೆ, ಅಂದೇ ಜಾಂಡೇವುಮರ (ಧ್ವಜದಕಂಬ) ಏರಿಸಿ ಎಲ್ಲರೂ ಕಂಕಣ ಕಟ್ಟಿಕೊಂಡು ಗುಗ್ರಿಹಬ್ಬಕ್ಕೆ ಚಾಲನೆ ಕೊಡುತ್ತಾರೆ. ಸಾವಿರ ಒಕ್ಕಲು ವಾರದಲ್ಲಿ (ಶನಿವಾರ ಮತ್ತು ಭಾನುವಾರ) ಮೀಸಲು ಹಾಲು ಅಳೆದು ತುಪ್ಪ ಮಾಡಿಕೊಳುವುದು ಈ ಹಬ್ಬದ ಮುಖ್ಯವಾದ ವಿಧಿಗಳಲ್ಲೊಂದು.

ಯರಬಳ್ಳಿ ಗೊಲ್ಲರಹಟ್ಟಿಯ ಹಾಲುಗುಡದಪ್ಪ, ಕಾಟುಂದೇವರು, ಗಾದ್ರಿ ದೇವರು, ಸಿಂಪಣ್ಣ, ವೀರನಾಗಣ್ಣ ಮತ್ತು ಜುಂಜಪ್ಪ ದೇವರುಗಳು ಮತ್ತು ಮದ್ದನಕುಂಟೆಯ ರ‍್ರಣ್ಣ ದೇವರುಗಳು ಯರಬಳ್ಳಿಗೊಲ್ಲರಹಟ್ಟಿಯ ಪಡುವಲು ದಿಕ್ಕಿಗಿರುವ ಸುಣ್ಣದಗುಡಿಹಳ್ಳಕ್ಕೆ ಹೊಳೆಪೂಜೆಗೆ ಹೊರಡುತ್ತವೆ. ಈ ದೇವರುಗಳಲ್ಲಿ ಮದ್ದನಕುಂಟೆಯಿಂದ ಕಾಳುಹಬ್ಬಕ್ಕಾಗಿ ಬರುವ ರ‍್ರಣ್ಣನನ್ನು ಹೊರತುಪಡಿಸಿದರೆ, ಉಳಿದೆಲ್ಲವೂ ಯರಬಳ್ಳಿದೊಡ್ಡಗೊಲ್ಲರಹಟ್ಟಿಯಲ್ಲಿರುವ ದೇವರುಗಳೆ. ಪೂಜಾರಿ, ಗಣೆ ಪೂಜಾರಿ, ದಳವಾಯಿಗಳು ಮದ್ದನಕುಂಟೆಗೆ ಹೋಗಿ ರ‍್ರಣ್ಣ ದೇವರನ್ನು ದೊಡ್ಡಗೊಲ್ಲರಹಟ್ಟಿಗೆ ಕರೆತಂದು ಉರುಮೆ ವಾದ್ಯದೊಂದಿಗೆ ಪೂಜೆಗೆ ಹೊರಡುತ್ತಾರೆ. ಹೊಳೆಪೂಜೆಗೆ ಹೊರಡುವ ಮೊದಲು, ಯರಬಳ್ಳಿಯ ಮಣೆಗಾರರು ಒಂದೇ ದನದ ಚರ್ಮದಲ್ಲಿ ಮಾಡಿದ ಪಾದರಕ್ಷೆಗಳನ್ನು ತಂದು ದೊಡ್ಡ ಪೂಜಾರಪ್ಪನಿಗೆ ತೊಡಿಸುತ್ತಾರೆ. ಅಂದು ಮಾತ್ರ ಪೂಜಾರಪ್ಪ ಪಾದರಕ್ಷೆ ಮೆಟ್ಟಿಕೊಂಡು ಹೊಳೆಪೂಜೆಗೆ ಹೊರಡುತ್ತಾನೆ. ಇನ್ನುಳಿದಂತೆ ಆತ ಎಂದೂ ಪಾದರಕ್ಷೆ ಧರಿಸುವುದಿಲ್ಲ! ವಿಶೇಷವೆಂದರೆ ಈ ದೇವರುಗಳು ವಿದ್ಯುತ್ ತಂತಿಗಳ ಕೆಳಗೆ ಹೋಗುವುದಿಲ್ಲ!

ಹೊಳೆಪೂಜೆಗೆ ಬಂದ ದೇವರುಗಳನ್ನು ಕೂರಿಸಿ ಸುತ್ತಲೂ ತಂಗಟೆಸೊಪ್ಪಿನಿಂದ ಬೆರೆಗು ಕಟ್ಟುತ್ತಾರೆ. ದೇವರಪೂಜೆಗೆ ಬೇಕಾದ ತಂಬಿಟ್ಟನ್ನುಅಲ್ಲಿಯೇ ಕಟ್ಟುತ್ತಾರೆ. ತಂಬಿಟ್ಟಿಗಾಗಿಯೇ ಬೆಳೆಯುವ ಕೆಂಬತ್ತಿ ಭತ್ತವನ್ನು ತಿಪಟೂರಿಗೆ ಸಮೀಪದ ಒಂದು ಹಳ್ಳಿಗೆ ಕಾಲ್ನಡಿಗೆಯಲ್ಲಿಯೇ ಹೋಗಿ 70 ಸೇರು ಕೆಂಬತ್ತಿ ಭತ್ತವನ್ನು ಹೊತ್ತು ತಂದಿರುತ್ತಾರೆ. ಕೆಂಬತ್ತಿ ಭತ್ತವನ್ನು ಹಸನು ಮಾಡಿ, ಸಗಣಿಯಲ್ಲಿ ಸಾರಿಸಿದ ಮಣ್ಣಿನ ಒರಳೆಯಲ್ಲಿಯೇ ಕುಟ್ಟಿ ಅಕ್ಕಿ ಮಾಡಿಕೊಳ್ಳುತ್ತಾರೆ. ವಿಶೇಷವಾಗಿ ದೇವರಿಗಾಗಿಯೇ ಬೆಳೆದ ಬಾಳೆಹಣ್ಣನ್ನು ಮಾತ್ರ ಪೂಜೆಗೆ ಬಳಸುವುದು ಇವರ ಸಂಪ್ರದಾಯ.

ಸುಣ್ಣದಗುಡಿಹಳ್ಳಕ್ಕೆ ಬಂದ ದೇವರುಗಳನ್ನು ತಂಗಟೆಸೊಪ್ಪಿನ ಮೇಲೆಕೂಡಿಸುತ್ತಾರೆ.ಸುಣ್ಣದಗುಡಿಹಳ್ಳದಲ್ಲಿಮೂರುಚಿಲುಮೆಗಳನ್ನು ತೆಗೆದಿರುತ್ತಾರೆ. ಇವುಗಳಲ್ಲಿ ಕಾಟುಂದೇವರು ಮತ್ತು ಗಾದ್ರಿ ದೇವರುಗಳನ್ನು ಒಂದು ಚಿಲುಮೆ ನೀರಿನಲ್ಲಿ ತೊಳೆದು ಇನ್ನೊಂದು ಚಿಲುಮೆ ನೀರಿನಲ್ಲಿ ಹಾಲುಗುಡದಪ್ಪನನ್ನು ಶುದ್ಧಿ ಮಾಡುತ್ತಾರೆ. ಇನ್ನೊಂದು ಚಿಲುಮೆ ನೀರನ್ನು ಇತರ ಬಳಕೆಗೆ ಉಪಯೋಗಿಸುತ್ತಾರೆ.

ಚಿಲುಮೆಯ ಸುತ್ತಲೂ ಕರಿಕಂಬಳಿಯ ತೆರೆಕಟ್ಟಿ, ದೊಡ್ಡ ಪೂಜಾರಪ್ಪ ಬಾಯಿಗೆ ಬತಕಟ್ಟಿಕೊಂಡು ಪೆಟ್ಟಿಗೆ ದೇವರನ್ನು ಶುದ್ಧಿ ಮಾಡುತ್ತಾನೆ. ಮೊದಲು ನಾಗಪ್ಪನಿಗೆ ಪೂಜೆ ಸಲ್ಲಿಸಿದ ನಂತರ ದೀಪ ಧೂಪಾರತಿಗಳನ್ನು ಮಾಡಿ, ಎತ್ತಪ್ಪನಗುಡ್ಡಕ್ಕೆ ಪಂಜಿನ ಸೇವೆ ಸಲ್ಲಿಸುತ್ತಾರೆ. ನಂತರ ಬಾಯಿಬತ, ಬಿಳಿನಿಲುವಂಗಿ ತೊಟ್ಟ ಪೂಜಾರಪ್ಪಗಳು ಪಟ್ಟದ ಛತ್ರಿ, ಹಾಲುಗುಡದಪ್ಪನ ಕುದುರೆ, ಕಾಟುಂದೇವರ ಪಟ್ಟದ ಛತ್ರಿಯೊಂದಿಗೆ 14 ಜನರಿಗೆ ವೀಳ್ಯೇವು ಎತ್ತುತ್ತಾರೆ. ಇದನ್ನು 'ಕೈವಾಡ' ಎಂದು ಕರೆಯುತ್ತಾರೆ. ಹಟ್ಟಿಯ ಪ್ರವೇಶಕ್ಕೆ ಮುನ್ನ ಗದ್ದುಗೆ ಮಾಡಿ ದೇವರುಗಳನ್ನು ಬಯಲು ಕಾಯುವುದಕ್ಕೆ ಬಿಡುತ್ತಾರೆ. ದೇವರು ಹಟ್ಟಿಯೊಳಕ್ಕೆ ಹೋದ ಮೇಲೆ ವಾರದ ದೀಪ ಏರಿದ ಮೇಲೆ ತಳುಕಿನಗುಡ್ಡಕ್ಕೆ ಪಂಜಿನ ಸೇವೆ ಸಲ್ಲಿಸಿ ಕೈವಾಡ ಎತ್ತುತ್ತಾರೆ. ಹೀಗೆ ಕಾಡುಗೊಲ್ಲರು ತಮ್ಮ ಎಲ್ಲ ಧಾರ್ಮಿಕ ಆಚರಣೆಗಳನ್ನು 'ಹೊಳೆಪೂಜೆ'ಯಿಂದಲೇ ಆರಂಭಿಸುತ್ತಾರೆ.

ಹೊಳೆಪೂಜೆಯ ರಾತ್ರಿ ಮದ್ದನಕುಂಟೆಗೆ ನಡೆದುಹೋಗಿ ಕಾಳುಗಳನ್ನು ಕರಿಕಂಬಳಿಯಲ್ಲಿ ಮಾರನೋರುಹೊತ್ತು ತರುತ್ತಾರೆ. ಇದಕ್ಕೆ 'ಮೀಸಲು ಕಾಳು' ಎಂದು ಕರೆಯುತ್ತಾರೆ. ಮೀಸಲು ಕಾಳನ್ನು ಚಿಲುಮೆ ನೀರು ಹಾಕಿದ ಮೂರು ಸ್ವಾರೆಗೆ (ದೊಡ್ಡ ಬಾನಿ) ಹಾಕುತ್ತಾರೆ. ಈ ಸ್ವಾರೆಗಳನ್ನು ಹಾಲುಗುಡದಪ್ಪನ ಗುಬ್ಬದ ಮುಂದೆ, ಹಸಿಜಾಲಿಮರದ ತುಂಡುಗಳನ್ನೇ ಒಲೆಯನ್ನಾಗಿ ಮಾಡಿ ಅದರ ಮೇಲೆ ಸ್ವಾರೆಗಳನ್ನು ಇಟ್ಟು ಅದನ್ನು ಹಸಿ ತಂಗಟೆ ಕಟ್ಟಿಗೆಯಲ್ಲಿ ಇಡೀ ರಾತ್ರಿ ಬೇಯಿಸುತ್ತಾರೆ. ಮಂಗಳವಾರ ಬೆಳಗಿನ ಜಾವದ ಹೊತ್ತಿಗೆ ಹಸಿ ಜಾಲಮರದ ಕೊರಡುಗಳು ಉರಿದು ಬೂದಿಯಾಗುತ್ತಿದ್ದಂತೆ ಸ್ವಾರೆಯಲ್ಲಿ ಕಾಳುಗಳು ಬೆಂದಿರುತ್ತವೆ. ಮದ್ದನಕುಂಟೆ ಜಂಗ್ಲಿಗೌಡರು ಮತ್ತು ದಳವಾಯಿಗಳು ಬೇಯಿಸಿದ ಕಾಳುಗಳನ್ನು ದೇವರ ಮುಂದೆ ರಾಶಿ ಹೊಯ್ದು ಅನಂತರ ಕಾಳಿನರಾಶಿ ಪೂಜೆ ಮಾಡಿ ಹಟ್ಟಿಯವರಿಗೆ ಹಂಚುತ್ತಾರೆ.

ಇದು ಸಂಪೂರ್ಣವಾಗಿ ಕಾಡುಗೊಲ್ಲರಿಗೇ ಮೀಸಲಾದ ಕೃಷಿಗೆ ಸಂಬಂಧಿಸಿದ ಆಚರಣೆ. ಕಾಡುಗೊಲ್ಲರ ಧಾರ್ಮಿಕ ಆಚರಣೆಯಲ್ಲಿ ಮೇಲು ಸಂಸ್ಕೃತಿಯ ಯಾವುದನ್ನೂ ಸ್ವೀಕರಿಸದ ಮನೋಭಾವವು ಅವರ ಸಾಂಸ್ಕೃತಿಕ ಸಮಗ್ರತೆಯಲ್ಲಿ ವ್ಯಕ್ತವಾಗುತ್ತದೆ. ಮೇಲು ಸಮುದಾಯಗಳ ಅನುಕರಣೆ ತೀವ್ರವಾಗುತ್ತಿರುವ ಈ ಹೊತ್ತಿನ ಸಾಂಸ್ಕೃತಿಕ ವಿಪ್ಲವದ ನಡುವೆಯೂ ಕಾಡುಗೊಲ್ಲರು ತಮ್ಮ ಸಮುದಾಯದ ಸಾಂಸ್ಕೃತಿಕ ನಿಧಿಯನ್ನು ಆಚರಣೆಗಳ ಮೂಲಕ ಹಾಗೆಯೇ ಉಳಿಸಿಕೊಂಡಿರುವುದು ಕುತೂಹಲಕಾರಿಯಾಗಿದೆ.

ಚಿತ್ರ: ನಿಸರ್ಗ ಗೋವಿಂದರಾಜು ಚಳ್ಳಕೆರೆ

ಅಭಿವೃದ್ಧಿ ಹೆದ್ದಾರಿಯಲ್ಲೊಂದು...

10ನೇ ಪುಟದಿಂದ...

ಈಗಿನ ದ್ವಿಪಥ ಹೆದ್ದಾರಿಯನ್ನು ಮುಂದೆ ಅರಣ್ಯ ಇಲಾಖೆಯು ಗಸ್ತು ಉದ್ದೇಶಕ್ಕೆ ಬಳಸಿಕೊಳ್ಳಲು ನಿರ್ಧರಿಸಿದೆ. ದೆಹಲಿ ಮತ್ತು ಡೆಹ್ರಾಡೂನ್ ಮಧ್ಯೆ ವಾಹನಗಳ ಸಂಚಾರದ ದಟ್ಟಣೆ ಅಗಾಧ ಪ್ರಮಾಣದಲ್ಲಿ ಹೆಚ್ಚಿದ್ದರಿಂದ ಇಲ್ಲಿ ಹೆದ್ದಾರಿ ವಿಸ್ತರಣೆ ಮಾಡುವುದು ಅನಿವಾರ್ಯ. ಆರ್ಥಿಕ ಬೆಳವಣಿಗೆಗೆ ಇದು ಸಹಾಯಕಾರಿ. ಆದರೆ, ಇಲ್ಲಿ ಜೀವ ವೈವಿಧ್ಯ, ವನ್ಯಜೀವಿ ಪ್ರಬೇಧ ವೈವಿಧ್ಯ, ಪರಿಸರ ಸೂಕ್ಷ್ಮವಾಗಿರುವ ಕಾರಣ, ಪರಿಸರಕ್ಕೆ ಯೋಜನೆಯಿಂದ ಆಗುವ ಅಪಾರ ಪ್ರಮಾಣದ ಹಾನಿ ತಪ್ಪಿಸಲು ಅಧ್ಯಯನ ನಡೆಸಿ ವರದಿ ನೀಡುವಂತೆ ಭಾರತೀಯ ವನ್ಯಜೀವಿ ಸಂಸ್ಥೆಗೆ (ವೈಲ್ಡ್ ಲೈಫ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ) ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಕೋರಿಕೆ ಸಲ್ಲಿಸಿತು.

ಆದರೆ, ಅದೇ ವೇಳೆಗೆ ಸರಿಯಾಗಿ ದೇಶದಲ್ಲಿ ಕೋವಿಡ್ ಲಾಕ್‌ಡೌನ್ ಹೇರಿಕೆಯಾಯಿತು. ಭಾರತೀಯ ವನ್ಯಜೀವಿ ಸಂಸ್ಥೆಯು ಈ ಅವಧಿಯನ್ನು ಸಂಪೂರ್ಣ ವನ್ಯಜೀವಿ ಅಧ್ಯಯನಕ್ಕಾಗಿ ಬಳಸಿಕೊಂಡಿತು. ಹೆದ್ದಾರಿಯಲ್ಲಿ ವಾಹನಗಳ ಓಡಾಟವೂ ಸಂಪೂರ್ಣ ನಿಂತು ಹೋಗಿದ್ದು ಅಧ್ಯಯನಕ್ಕೆ ವರದಾನವಾಯಿತು. 'ವನ್ಯಜೀವಿಗಳ ಸಂಚಾರ ಪಥ, ವಿಶೇಷವಾಗಿ ಆನೆ, ಹುಲಿ, ಚಿರತೆ, ಜಿಂಕೆ ಮೊದಲಾದವುಗಳು ಯಾವ ಪ್ರದೇಶದಲ್ಲಿ ಹೆಚ್ಚಾಗಿ ಸಂಚರಿಸುತ್ತವೆ. ಅವುಗಳ ಸಹಜ ಮಾರ್ಗ ಯಾವುವು ಎಂಬುದನ್ನು ಕೂಲಂಕಷವಾಗಿ ಅಧ್ಯಯನ ನಡೆಸಲಾಯಿತು' ಎನ್ನುತ್ತಾರೆ ರೋಹಿತ್

> **ಉತ್ತರಾಖಂಡ ಪ್ರವಾಸಿ ತಾಣಗಳಿರುವ ರಾಜ್ಯ ಎಂಬ ದೃಷ್ಟಿಯಲ್ಲಿ ನೋಡಬೇಡಿ. ಇಲ್ಲಿನ ಪರ್ವತಗಳ ಕಣಕಣದಲ್ಲೂ ಅಧ್ಯಾತ್ಮ ತುಂಬಿದೆ. ಶಿವನ ಸಾನಿಧ್ಯವಿದೆ. ಈ ರಾಜ್ಯವು ಎಲ್ಲ ರೀತಿಯಿಂದಲೂ ಅಭಿವೃದ್ಧಿ ಹೊಂದಬೇಕಾಗಿದೆ. ಜನರ ಜೀವನವೂ ಸುಧಾರಣೆ ಆಗಬೇಕಾಗಿದೆ. ಯಾತ್ರಿಗಳಿಗೆ ಅನುಕೂಲ ಮಾಡಿಕೊಡಬೇಕು. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಕೇಂದ್ರ ಸರ್ಕಾರ ಹಲವು ಮೂಲಸೌಕರ್ಯಗಳನ್ನು ಕೈಗೊಳ್ಳುತ್ತಿದೆ. ಜನ ಜೀವನ ಉತ್ತಮಗೊಳ್ಳುವುದು ನಿಶ್ಚಿತ**
>
> **-ಲೆಫ್ಟಿನೆಂಟ್ ಜನರಲ್ (ನಿವೃತ್ತ) ಗುರ್ಮಿತ್ ಸಿಂಗ್,** ರಾಜ್ಯಪಾಲ, ಉತ್ತರಾಖಂಡ

ಈ ಅಧ್ಯಯನಕ್ಕಾಗಿ ಕ್ಯಾಮೆರಾ ಟ್ರ್ಯಾಪ್ ವಿಧಾನ ಅನುಸರಿಸಲಾಯಿತು. ಭೌಗೋಳಿಕ ಮತ್ತು ಆಯಾ ಪರಿಸರಕ್ಕೆ ಅನುಗುಣವಾಗಿ ಮೂರು ವಲಯಗಳಲ್ಲಿ 81 ಕ್ಯಾಮೆರಾಗಳನ್ನು ಬಳಸಿಕೊಳ್ಳಲಾಗಿತ್ತು. ಹೆದ್ದಾರಿಯಲ್ಲಿ ಯಾವ ಭಾಗದಲ್ಲಿ ಯಾವ, ಯಾವ ಪ್ರಾಣಿಗಳು ಹೆಚ್ಚಾಗಿ ಓಡಾಡುತ್ತವೆ? ಅದರ ಪ್ರಮಾಣವೇನು ಎಂಬುದನ್ನು ಕ್ಯಾಮೆರಾ ಟ್ರ್ಯಾಪ್ ಅಲ್ಲದೇ, 'ಕೆರ್ನೆಲ್ ಡೆನ್ಸಿಟಿ ಟೂಲ್' ವಿಧಾನದ ಮೂಲಕವೂ ಅಂದಾಜು ಮಾಡಲಾಯಿತು.

ಈಗಿರುವ ಹೆದ್ದಾರಿಯಲ್ಲಿ ಸಾಕಷ್ಟು ಪ್ರಾಣಿಗಳು ರಾತ್ರಿ ವೇಳೆ ರಸ್ತೆ ದಾಟುತ್ತಿದ್ದ ಕಾರಣ, ವಾಹನಗಳು ಅಪ್ಪಳಿಸಿ ಅವುಗಳ ಜೀವ ಹಾನಿ ಆಗುತ್ತಿತ್ತು. ಅಲ್ಲದೇ, ರಸ್ತೆಗೆ ಬಂದು ನಿಲ್ಲುವ ಪ್ರಾಣಿಗಳಿಂದಾಗಿ ವಾಹನಗಳಲ್ಲಿ ಸಾಗುವ ವ್ಯಕ್ತಿಗಳ ಜೀವಕ್ಕೂ ಅಪಾಯವಿತ್ತು. ಅಸರೋಡಿ ಮತ್ತು ಡೆಹ್ರಾಡೂನ್ ಮಧ್ಯೆ ಈ ಪ್ರಮಾಣ ಹೆಚ್ಚಾಗಿತ್ತು. ನೇಪಾಳದ ಅರಣ್ಯಗಳಿಂದ, ಜಿಮ್ ಕಾರ್ಬೆಟ್‌ನಿಂದ, ಹರಿದ್ವಾರದ ಭಾಗದ ಅರಣ್ಯಗಳಿಂದಲೂ ವನ್ಯಜೀವಿಗಳು ಈ ಪ್ರದೇಶಕ್ಕೆ ಬಂದು ಹೋಗುತ್ತವೆ. ಹೊಸ ಹೆದ್ದಾರಿ ಮಾಡಿದಾಗ ಅಂತಹ ದುರಂತಗಳನ್ನು ತಪ್ಪಿಸಬೇಕಿತ್ತು. ಅಲ್ಲದೇ ಸಾಲ್ ಮರಗಳನ್ನು ಮತ್ತೆ ಬೆಳೆಸುವುದಕ್ಕಾಗಿ ಅಧ್ಯಯನ ನಡೆಸಿ ವರದಿ ನೀಡುವಂತೆ ಅರಣ್ಯ ಸಂಶೋಧನಾ ಸಂಸ್ಥೆಯನ್ನು ಕೋರಲಾಯಿತು.

'ಇವೆಲ್ಲದರ ಪರಿಣಾಮ ಕಾಡಿನ ಮಧ್ಯೆ ಎತ್ತರದಲ್ಲಿ ಹಾದು ಹೋಗುವ ಫ್ಲೈಓವರ್ ನಿರ್ಮಿಸುವ ಮತ್ತು ಮೊಹಾಂಡ್ ನದಿ ಪಕ್ಕದಲ್ಲೇ ಹೆದ್ದಾರಿ ಮಾರ್ಗ ನಿರ್ಮಾಣಕ್ಕೆ ಭಾರತೀಯ ವನ್ಯಜೀವಿ ಸಂಸ್ಥೆ ತನ್ನ ವರದಿಯಲ್ಲಿ ಸಲಹೆ ನೀಡಿತು. ಅಲ್ಲದೇ ಉದ್ದಕ್ಕೂ ಎಲ್ಲೆಲ್ಲಿ ಅರಣ್ಯ ಪ್ರಮಾಣ ಕಡಿಮೆ ಇದೆಯೋ ಅಲ್ಲಿ ಅರಣ್ಯೀಕರಣಕ್ಕಾಗಿ ಅರಣ್ಯ ಇಲಾಖೆಯಲ್ಲಿ ₹40.28 ಕೋಟಿ ಠೇವಣಿಯನ್ನೂ ಇಡಬೇಕು ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಸೂಚಿಸಿತ್ತು. ಆ ಪ್ರಕಾರ ಠೇವಣಿ ಇಡಲಾಗಿದೆ' ಎಂದು ರೋಹಿತ್ ಪನ್ವಾರ್ ವಿವರಿಸಿದರು.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ 2024ರ ಮಾರ್ಚ್ ಒಳಗೆ ಕಾಮಗಾರಿ ಪೂರ್ಣಗೊಳಿಸಲು ಗಡುವು ನೀಡಲಾಗಿದೆ. ಲೋಕಸಭೆ ಚುನಾವಣೆಗೂ ಮುನ್ನಾ ಇದು ಲೋಕಾರ್ಪಣೆಗೊಳ್ಳಲಿದೆ. ಈ ಹೆದ್ದಾರಿ ಫಡ್‌ವಾಲಾಗಳ ಭಾಗ್ಯದ ಬಾಗಿಲು ತೆರೆಯಲಿದೆಯೇ ಅಥವಾ ಪರಿಸರಕ್ಕೆ ಹೊರೆಯಾಗುವ ಮತ್ತು ಮಾರಕವಾಗುವ ಯೋಜನೆ ಆಗಲಿದೆಯೇ ಎಂಬುದನ್ನು ಕಾದು ನೋಡಬೇಕು.

ನಿರ್ಮಾಣ ಹಂತದಲ್ಲಿನ ದೆಹಲಿ– ಡೆಹ್ರಾಡೂನ್ ಹೆದ್ದಾರಿ

ಮುನ್ನೋಟ 04-02-2024 ರಿಂದ 10-02-2024

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಎಲ್ಲರೊಂದಿಗೆ ಹೊಂದಿಕೊಳ್ಳಲು ಪ್ರಯತ್ನ ಪಡುವಿರಿ. ಧನ ಆದಾಯವು ಮಧ್ಯಮ ಗತಿಯಲ್ಲಿರುತ್ತದೆ. ದೇಹದ ಆರೋಗ್ಯವನ್ನು ಕಾಪಾಡಿಕೊಳ್ಳಲು ವ್ಯಾಯಾಮದ ಮೊರೆ ಹೋಗುವಿರಿ. ಸಂಸಾರದಲ್ಲಿ ಸಂತೋಷವಿದ್ದರೂ ಒಮ್ಮೊಮ್ಮೆ ಭುಗಿಲೇಳುವ ಕೋಪವಿರುತ್ತದೆ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಹೆಚ್ಚಿನ ಯಶಸ್ಸು ಇರುತ್ತದೆ. ಪಿತ್ರಾರ್ಜಿತ ಆಸ್ತಿ ಒದಗುವ ಸಾಧ್ಯತೆ ಇದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಸಂಗೀತಗಾರರಿಗೆ ಹೆಚ್ಚಿನ ಪ್ರಾಶಸ್ತ್ಯ ದೊರೆಯುತ್ತದೆ. ಮನೆಪಾಠ ಮಾಡುವವರಿಗೆ ಹೆಚ್ಚು ಪ್ರಾಮುಖ್ಯತೆ ಬಂದು ಹೆಚ್ಚು ಸಂಪಾದನೆ ಇರಲಿದೆ. ನಿಮ್ಮ ನಡವಳಿಕೆಗಳಲ್ಲಿ ನಿಧಾನಗತಿ ಇರುತ್ತದೆ. ಕುಟುಂಬದಲ್ಲಿ ಸಂತೋಷವಿರುತ್ತದೆ. ತಂದೆಯಿಂದ ಸಾಕಷ್ಟು ಸಹಾಯ ದೊರೆಯುವ ಸಂದರ್ಭವಿದೆ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಸಾಮಾನ್ಯ ಯಶಸ್ಸು ದೊರೆಯುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ನಿಮ್ಮ ನಿರ್ಧಾರಗಳಲ್ಲಿ ವ್ಯತ್ಯಾಸವಿದ್ದು ಕೆಲಸ ಕಾರ್ಯಗಳನ್ನು ಆಯೋಜನೆ ಮಾಡುವಾಗ ಗಡಿಬಿಡಿಯಾಗಬಹುದು. ಹಣದ ಗಳಿಕೆ ಇದ್ದರೂ ಖರ್ಚು ಅಷ್ಟೇ ಇರುತ್ತದೆ. ಕೆಲವೊಂದು ಮಾತುಕತೆಗಳಲ್ಲಿ ಹಿರಿಯರ ವಿರೋಧವನ್ನು ಕಟ್ಟಿಕೊಳ್ಳಬೇಕಾಗಬಹುದು. ಸಾಂಪ್ರದಾಯಿಕ ಕೃಷಿ ಮಾಡುವವರಿಗೆ ಹೆಚ್ಚು ಆದ್ಯತೆ ದೊರೆತು ಬೇಕಾದ ಸೌಲಭ್ಯಗಳು ಈಗ ದೊರೆಯುತ್ತವೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಆತ್ಮಗೌರವ ಜಾಸ್ತಿ ಇರುತ್ತದೆ. ಧನ ಆದಾಯವು ನಿಮ್ಮ ಅಗತ್ಯವನ್ನು ಪೂರೈಸುವಷ್ಟಿರುತ್ತದೆ. ಚುರುಕಾಗಿ ಕೆಲಸ ಮಾಡಲು ನಿಮ್ಮ ಆಲಸೀತನ ಅಡ್ಡಿಬರಬಹುದು. ಸಂಸಾರದಲ್ಲಿ ಸಂಗಾತಿಯಿಂದ ಸ್ವಲ್ಪ ಕಿರಿಕಿರಿಗಳಾಗಬಹುದು. ಆಸ್ತಿ ವಿಚಾರದಲ್ಲಿ ಹಣ ಹೊಂದಿಕೆಯಾದರೂ ದಾಖಲೆಗಳು ವ್ಯತ್ಯಾಸವಾಗಬಹುದು. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಫಲವಿರುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ನಿಮ್ಮಲ್ಲೇ ಕೆಲವು ದ್ವಂದ್ವ ನಿರ್ಧಾರಗಳಿಂದ ಕೆಲಸಗಳನ್ನು ಆರಂಭಿಸಲು ಹಿಂದೇಟು ಹಾಕುವಿರಿ. ಧನ ಆದಾಯವು ಕಡಿಮೆಯಾಗಿರುತ್ತದೆ. ಧರ್ಮ ಸಂಬಂಧಿತ ಕೆಲಸಗಳನ್ನು ಮಾಡುವವರಿಗೆ ಆದಾಯ ಹೆಚ್ಚುವ ಸಾಧ್ಯತೆ ಇದೆ. ಬಂಧುಗಳ ನಡುವೆ ಉತ್ತಮ ಹೆಸರನ್ನು ಗಳಿಸಿಕೊಳ್ಳಲು ಶ್ರಮಪಡುವಿರಿ. ನಿಮಗೆ ಬರಬೇಕಾಗಿದ್ದ ಧನ ಮೂಲದ ಬಗ್ಗೆ ಬಂಧುಗಳು ತಕರಾರು ತೆಗೆಯಬಹುದು.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ದೇವರಲ್ಲಿ ವಿಶೇಷ ನಂಬಿಕೆ ಬರುತ್ತದೆ ಹಾಗೂ ದೈವಾರಾಧನೆ ಬಗ್ಗೆ ಹೆಚ್ಚು ಗಮನಹರಿಸುವಿರಿ. ಧನ ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಮಹಿಳೆಯರಿಂದ ನಿಮಗೆ ಸಹಕಾರ ಈಗ ದೊರೆಯುತ್ತದೆ. ಕುಟುಂಬದಲ್ಲಿ ಸಂತೋಷವಿದ್ದರೂ ಕಸಿವಿಸಿಗಳು ಇದ್ದೇ ಇರುತ್ತವೆ. ಆಸ್ತಿ ಕೊಳ್ಳಲು ಕೂಡಿಟ್ಟ ಹಣವನ್ನು ಅದಕ್ಕಾಗಿ ಬಳಸಿರಿ. ವಿದ್ಯಾರ್ಥಿಗಳಿಗೆ ಹೆಚ್ಚಿನ ಅಭಿವೃದ್ಧಿ ಇರುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ಎಲ್ಲರೂ ನಿಮ್ಮನ್ನ ಗೌರವಿಸಿ ನಿಮ್ಮ ಬಳಿಗೆ ಬರಬೇಕೆಂದು ಹಂಬಲಿಸುವಿರಿ. ಧನ ಆದಾಯವು ಈಗ ಮಧ್ಯಮ ಗತಿಯಲ್ಲಿರುತ್ತದೆ. ಚುರುಕಾಗಿ ಕೆಲಸ ಮಾಡಿದಂತೆ ತೋರ್ಪಡಿಸಿಕೊಳ್ಳಲು ಪ್ರಯತ್ನ ಪಡುವಿರಿ. ಸಂಸಾರದಲ್ಲಿ ನಿಮ್ಮ ಮಾತಿಗೆ ಅಷ್ಟು ಬೆಲೆ ಬರುವುದಿಲ್ಲ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಯಶಸ್ಸು ಬಹಳ ಕಡಿಮೆ ಇರುತ್ತದೆ. ಮಕ್ಕಳು ನಿಮ್ಮ ಮಾತನ್ನು ಕೇಳದಿರಬಹುದು.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ಬಂಧು ವರ್ಗದವರಿಂದ ಗೌರವ ಸಿಗುವ ಸಾಧ್ಯತೆ ಇದೆ. ಧನ ಆದಾಯವು ನಿಮ್ಮ ಅಪೇಕ್ಷೆಯನ್ನು ಪೂರೈಸುವಷ್ಟು ಇರುತ್ತದೆ. ಆತುರಾತುರವಾಗಿ ಕೆಲಸ ಮಾಡಲು ಹೋಗಿ ಕೆಲಸ ನಿಧಾನವಾಗುವ ಸಾಧ್ಯತೆ ಇದೆ. ಸಂಸಾರದಲ್ಲಿ ಹಿರಿಯರ ಮಾತಿಗೆ ಹೆಚ್ಚು ಬೆಲೆ ಬರುತ್ತದೆ. ಹಾಡುಗಾರರಿಗೆ ಹೆಚ್ಚು ಆದಾಯ ಬರುವ ಸಾಧ್ಯತೆ ಇದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಶಿಸ್ತುಬದ್ಧ ಜೀವನವನ್ನು ನಡೆಸಲು ತಯಾರಿ ಮಾಡುವಿರಿ. ಎಲ್ಲರ ಬಳಿ ಚೆನ್ನಾಗಿ ಮಾತನಾಡಿ ಜನಸಂಪರ್ಕ ಹೆಚ್ಚು ಮಾಡಿಕೊಳ್ಳುವಿರಿ. ನಿಮ್ಮ ಬಗ್ಗೆ ಇಲ್ಲ ಸಲ್ಲದ ಮಾತನಾಡುತ್ತಿದ್ದವರು ಈಗ ನಿಮ್ಮ ಸಹಾಯವನ್ನು ಕೇಳಿಕೊಂಡು ಬರುವರು. ನಿಮ್ಮ ಶತ್ರುಗಳು ನಿಮ್ಮ ತಂಟೆಗೆ ಬರದೆ ದೂರ ಉಳಿಯುವರು. ವಿದೇಶದಲ್ಲಿರುವವರು ಸ್ವದೇಶದಲ್ಲಿ ಆಸ್ತಿ ಮಾಡುವ ಸಾಧ್ಯತೆಗಳಿವೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಎಲ್ಲರಿಗೂ ಸಹಾಯ ಮಾಡುವ ನಿಮ್ಮ ಗುಣವನ್ನು ಕೆಲವರು ದುರುಪಯೋಗ ಮಾಡಿಕೊಳ್ಳಬಹುದು. ನಿಮಗೆ ಬರುವ ಹಣಕ್ಕೆ ಕೆಲವರು ಅಡ್ಡಿ ಮಾಡಬಹುದು. ಆದರೂ ಶ್ರಮಪಟ್ಟು ಹಣ ಪಡೆಯುವಿರಿ. ವಿದೇಶದಲ್ಲಿ ವ್ಯಾಪಾರವನ್ನು ಆರಂಭಿಸಬೇಕೆನ್ನುವವರಿಗೆ ಈಗ ಅವಕಾಶಗಳು ದೊರೆಯುತ್ತವೆ. ಗುರು ಹಿರಿಯರ ಬಳಿ ಉತ್ತಮ ಗೌರವ ಸಂಪಾದನೆ ಮಾಡುವಿರಿ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಆದಾಯದ ಮೂಲಗಳು ಕಡಿಮೆಯಾದರೂ ಹಣ ನಿರ್ವಹಣೆಯನ್ನು ಸರಿಯಾಗಿ ಮಾಡುವಿರಿ. ಯುವಕರು ಆಡುವ ಹಮ್ಮಿನ ಮಾತುಗಳು ಅವರಿಗೆ ವಾಪಸ್ಸು ಬರುವ ಸಾಧ್ಯತೆ ಇದೆ. ವಿದೇಶಿ ವ್ಯವಹಾರಗಳನ್ನು ಮಾಡುವವರಿಗೆ ಅಭಿವೃದ್ಧಿ ಇರುತ್ತದೆ. ಕೆಲವು ಹಿರಿಯರಿಗೆ ಸಮಾಜದಿಂದ ಗೌರವ ಸಿಗುವ ಸಾಧ್ಯತೆ ಇದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ನಿಮ್ಮ ನಿರ್ಧಾರಗಳು ದೃಢವಾಗಿರಲಿ ಹಾಗೂ ನಿಮ್ಮ ಮನಸ್ಸಿನ ಹತೋಟಿ ನಿಮ್ಮ ಕೈಯಲ್ಲಿರಲಿ. ಹಣದ ಒಳಹರಿವು ನಿಮ್ಮ ಅಪೇಕ್ಷೆಯಂತೆ ಇರುತ್ತದೆ. ನಿಮ್ಮ ಕೆಲಸ ಕಾರ್ಯಗಳಿಗೆ ನಿಮ್ಮ ಸ್ವಂತದವರಿಂದ ಅಡ್ಡಿ ಬರುವ ಸಾಧ್ಯತೆ ಇದೆ. ಭೂಮಿಯ ಪರಿವರ್ತನೆಯನ್ನು ಮಾಡುವವರಿಗೆ ಹೆಚ್ಚು ಆದಾಯವಿರುತ್ತದೆ. ಸರ್ಕಾರಿ ಸಂಸ್ಥೆಗಳಿಗೆ ಭೂಮಿಯನ್ನು ಒದಗಿಸುವ ಕಾಯಕದಲ್ಲಿರುವವರಿಗೆ ಹೆಚ್ಚು ಲಾಭವಿರುತ್ತದೆ.

ಪದಬಂಧ 2827



ಮೇಲಿನಿಂದ ಕೆಳಕ್ಕೆ
1. ಚುನಾವಣೆ ಸಮಯದಲ್ಲಿ ಅಪ್ಪಟ ಸುಳ್ಳು ಸುದ್ದಿ ಹಬ್ಬಿಸುವ ಚಾರ 5
2. ಆಂಧ್ರ ತೆಲಂಗಾಣದ ತಿಳಿಯಾದ ಭಾಷೆ 3
3. ಸರದಂತೆ ಪೋಣಿಸಿದ ಮಣಿಗಳಂತೆ ಒಂದಾದ ಮೇಲೊಂದು 3
4. ಮುಂದೇನಾಗಬಹುದೆಂಬ ನಿತ್ಯ ಪಲುಕು 5
6. ರಾಜ ರಾಜಕಾರಣಿಗಳ ಕಿವಿಗೆ ಹಿತವೆನಿಸುವ ಮುಖಸ್ತುತಿ 3
8. ನಮ್ಮ ರಾಷ್ಟ್ರಕವಿಗೆ ದೊರೆತ ದಶರಥಾತ್ಮಜನ ದಿವ್ಯ ನೋಟ ಶೂನ್ಯದಲ್ಲಿ ಕೊನೆಯಾಗಿದೆ 7
9. ಬೆಲೆ ತುಂಬಿದ ಗೌರವ 3
12. ಮೂರನೆ ಅವರ್ಗೀಯ ವ್ಯಂಜನದ ಉಚ್ಚಾರಣೆಗೆ ಅಲ್ಪಕಾರ ಸೇರಿದೆ 3
13. ವರ್ತನೆ ಕೊಡುವ ವ್ಯಾಪಾರಿ 3
15. ಮತ, ಕುಲ, ಪಂಗಡಗಳಿಗೆ ಸೇರಿದ ಮಂದಿಯ ಎಣಿಕೆ ಪ್ರಕ್ರಿಯೆ 5
16. ಮಡಚಿದ ಬಟ್ಟೆಗೆ ಇಸ್ತ್ರಿ ಹಾಕುವಾಗ ಮೂಡಿದ ಗೆರೆ 3
18. ವಾಸಕ್ಕೊಂದು ಮನೆ 3
19. ಬೆಳ್ಳಿಯ ಮಣೆ ಉಡುಪಿಯಲ್ಲಿ ಸಿಗಬಹುದು 5
21. ಸ್ವರಗಳಲ್ಲಿ ಎರಡನೆಯದು, ಸ್ವರೂಪ ಕೆಟ್ಟರೆ ವಿಕಾರ 3
22. ಕವಿಯ ಜೊತೆ ಬರುವ ಜ್ಞಾನಿ ತಲೆಕೆಳಗು 3

ಎಡದಿಂದ ಬಲಕ್ಕೆ
1. ಆಹಾರ ಸೇವನೆಯಲ್ಲಿ ಪೋಷಕಾಂಶಗಳ ಕೊರತೆ 5
3. ರಾಮಾಯಣಕ್ಕೆ ಸಾಕ್ಷಿಯಾಗಿರುವ ಅಯೋಧ್ಯೆಯ ಹೊಳೆ 5
5. ಕೊಚ್ಚಿಕೊಳ್ಳುವ ಶೌರ್ಯ ಸಾಧನೆ 3
7. ಕತ್ತಿವರಸೆಯಲ್ಲಿ ತಡೆಯೊಡ್ಡುವ ಹರಿಗೆ 3
9. ಶುರುವಾಗುವ ಕೃಷಿ 3
11. ರಾಮನ ಶ್ರೇಷ್ಠ ವಂಶ 4
13. ಗುರು ಹೇಳಿದಂತೆ ಕೇಳುವ ವಿದ್ಯಾರ್ಥಿ ವಧುವಿನ ಕೈಹಿಡಿದ 4
14. ನಡೆದುದೆಲ್ಲದಕ್ಕೂ ನೆಪವಾಗುವವ 5
15. ನೆರಳು ನೀಡದ ಮುಳ್ಳು ಮೈಯ ವೃಕ್ಷ ಖುಷಿ ಕೊಡುತ್ತದೆಯೆ? 4
17. ಕರುಣೆಯಿಂದ ಕೂಡಿದ ಕವರ್ಗದ ಕೈ 4
20. ಗರಿ ಬಿಚ್ಚಿಕೊಳ್ಳುವ ಹುಲ್ಲು 3
21. ನಂದದ ಸಂತೋಷ 3
23. ಜೊತೆಯಾಗುವ ಹಿತ 3
24. ಕತ್ತಲು ಕಳೆಯುವ ಶಿವರೂಪಿ ಸೂರ್ಯ 5
25. ಮಾಮರದಲ್ಲಿ ಹಾಡುವ ಹಕ್ಕಿಯ ಕೊರಳದನಿ 5

ಪದಬಂಧ ಉತ್ತರ -2826

ಮೇಲಿಂದ ಕೆಳಕ್ಕೆ

1.ಬಾಡಿಗೆದಾರ 2.ಮರುಗ 3.ಗಮನ 4.ವಕ್ರಗತಿ 5.ಜಟಕ 6.ನಿರುತ್ತೇಜನ 7.ಕಣಿ 10.ಚತುರಾನನ 13.ರದನ 14.ಜನಕಪುರಿ 15.ಇತಿಹಾಸ 16.ಹಾಸು 19.ಯಜನ 20.ದಾಯಾದಿ

ಎಡದಿಂದ ಬಲಕ್ಕೆ

1.ಬಾಲರಾಮ 3.ಗಣರಾಜ್ಯೋತ್ಸವ 5.ಜಗಜ್ಜನನಿ 7.ಕರಗ 8.ರುದ್ರಾಣಿ 9.ರಕ್ಷಾಕವಚ 11.ತುಳಜ 12.ನಮ್ಮೂರರಾಜ 16.ಹಾಸನ 17.ತಿನಿಸು 18.ನಯನದಾನ 21.ಸಹಜಜೀವನ 22.ದಿನಚರಿ

ಡಾ.ಸಿ.ಎನ್. ಮಂಜುನಾಥ್

‘ರಾಜಕೀಯ ಪ್ರವೇಶ; ಇನ್ನೂ ಗೊಂದಲದಲ್ಲಿರುವೆ’

ಮನದ ಮಾತು

ಸರ್ಕಾರಿ ಆಸ್ಪತ್ರೆಗಳೆಂದರೆ ಮೂಗು ಮುರಿಯುವವರೆ ಅಧಿಕ. ಇದಕ್ಕೆ ಕಾರಣ ಅಲ್ಲಿನ ವ್ಯವಸ್ಥೆ ಹಾಗೂ ವೈದ್ಯಕೀಯ ಸೌಲಭ್ಯಗಳ ಕೊರತೆ. ಆದರೆ, ಇದಕ್ಕೆ ಅಪವಾದ ಎನ್ನುವಂತೆ ಬೆಂಗಳೂರಿನ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ಜಾಗತಿಕ ಮಟ್ಟದಲ್ಲಿ ಹೆಸರಾಗಿದೆ. ಸಂಸ್ಥೆಯ ಬೆಳವಣಿಗೆಗೆ ಕಾರಣರಾದವರು ನಿರ್ದೇಶಕರಾಗಿದ್ದ ಡಾ.ಸಿ.ಎನ್. ಮಂಜುನಾಥ್. ಅವರ ಸರ್ಕಾರಿ ಸೇವಾ ಅವಧಿ ಜ.31ರಂದು ಮುಕ್ತಾಯಗೊಂಡಿದೆ.
ಈ ಸಂದರ್ಭದಲ್ಲಿ ‘ಭಾನುವಾರದ ಪುರವಣಿ’ಯೊಂದಿಗೆ ಮುಕ್ತವಾಗಿ ಮಾತನಾಡಿದ್ದಾರೆ.

ಸಂದರ್ಶನ: ವರುಣ ಹೆಗಡೆ

- **ಜಯದೇವ ಹೃದ್ರೋಗ ಸಂಸ್ಥೆ ಈಗ ಜಾಗತಿಕ ಮಟ್ಟದಲ್ಲಿ ಹೆಸರು ಪಡೆದಿದೆ. ಸರ್ಕಾರಿ ಸಂಸ್ಥೆಯೊಂದರ ಈ ಬೆಳವಣಿಗೆಯನ್ನು ಹೇಗೆ ವಿಶ್ಲೇಷಿಸುವಿರಿ?**

ನಾನು ವೈದ್ಯಕೀಯ ಕ್ಷೇತ್ರ ಪ್ರವೇಶಿಸುವ ವೇಳೆ ಜಯದೇವ ಆಸ್ಪತ್ರೆ ಮತ್ತು ಹೃದ್ರೋಗ ಚಿಕಿತ್ಸೆ ಎರಡೂ ಪ್ರಾರಂಭಿಕ ಹಂತದಲ್ಲಿದ್ದವು. 1988ರಲ್ಲಿ ಜಯದೇವ ಸಂಸ್ಥೆಗೆ ಉಪನ್ಯಾಸಕನಾಗಿ ಸೇರಿದೆ. ಈ ಸಂಸ್ಥೆಯ ಜವಾಬ್ದಾರಿ ಸಿಕ್ಕರೆ ಪಂಚತಾರಾ ಖಾಸಗಿ ಆಸ್ಪತ್ರೆಯ ಮಟ್ಟಕ್ಕೆ ಕೊಂಡೊಯ್ಯಬೇಕೆಂಬ ಕನಸನ್ನು ಆ ವೇಳೆಗೇ ಹೊಂದಿದ್ದೆ. 2006-07ರಲ್ಲಿ ಸಂಸ್ಥೆಯ ನಿರ್ದೇಶಕನಾಗಿ ಅಧಿಕಾರ ವಹಿಸಿಕೊಂಡೆ. 17 ವರ್ಷಗಳಲ್ಲಿ ಸಂಸ್ಥೆ ಶೇ 500ರಷ್ಟು ಪ್ರಗತಿ ಹೊಂದಿದೆ. ನಾನು ನಿರ್ದೇಶಕನಾಗಿ ಅಧಿಕಾರ ವಹಿಸಿಕೊಂಡಾಗ ಸಂಸ್ಥೆ 300 ಹಾಸಿಗೆಗಳನ್ನು ಒಳಗೊಂಡಿತ್ತು. ಈಗ ಆ ಸಂಖ್ಯೆ ಎರಡು ಸಾವಿರಕ್ಕೆ ಏರಿಕೆಯಾಗಿದೆ. ಇಡೀ ದಕ್ಷಿಣ ಏಷ್ಯಾದಲ್ಲಿ ಅತೀ ದೊಡ್ಡ ಹೃದ್ರೋಗ ಸಂಸ್ಥೆಯಾಗಿ ಹೊರಹೊಮ್ಮಿದೆ.

- **ಸಂಸ್ಥೆಯ ನಿರ್ದೇಶಕರಾದಾಗ ತಮ್ಮ ಮುಂದೆ ಏನೆಲ್ಲ ಸವಾಲುಗಳಿದ್ದವು? ಅದನ್ನು ಹೇಗೆ ನಿಭಾಯಿಸಿ ಯಶಸ್ಸು ಸಾಧಿಸಿದಿರಿ?**

ನಿರ್ದೇಶಕನಾಗಿ ಅಧಿಕಾರ ವಹಿಸಿಕೊಂಡಾಗ ಬ್ಯಾಂಕಿನಲ್ಲಿ ಸಂಸ್ಥೆಯ ಹೆಸರಿನಲ್ಲಿ ₹ 5 ಕೋಟಿ ನಿಧಿ ಇದ್ದರೆ, ₹ 6 ಕೋಟಿ ಸಾಲವಿತ್ತು. ಆ ವೇಳೆ ಸಂಸ್ಥೆಯು ಆರ್ಥಿಕ ಮುಗ್ಗಟ್ಟು ಎದುರಿಸುತ್ತಿತ್ತು. ಇದರಿಂದಾಗಿ ಒಂದು ದಿನದ ವೇತನವನ್ನು ಬಿಟ್ಟುಕೊಡುವಂತೆ ಸಿಬ್ಬಂದಿಯ ಮನವೊಲಿಸಿದೆ. ನಂತರದಲ್ಲಿ ತಾನಾಗಿಯೇ ಸಂಘ–ಸಂಸ್ಥೆಗಳಿಂದ ದೇಣಿಗೆ ಹರಿದು ಬರಲಾರಂಭಿಸಿತು. ಈಗ ದಾನಿಗಳು ನೀಡಿದ ನಿಧಿ ₹ 50 ಕೋಟಿ ಇದ್ದರೆ, ಬಡ ರೋಗಿಗಳ ಆರೋಗ್ಯ ನಿಧಿ ₹ 150 ಕೋಟಿಗೆ ಏರಿಕೆಯಾಗಿದೆ. ಈ ನಿಧಿಯಿಂದ ಬರುವ ಬಡ್ಡಿ ಹಣದಲ್ಲಿ ಬಡರೋಗಿಗಳಿಗೆ ಉಚಿತವಾಗಿ ಚಿಕಿತ್ಸೆ ನೀಡಲಾಗುತ್ತಿದೆ. ‘ಚಿಕಿತ್ಸೆ ಮೊದಲು ಹಣ ಪಾವತಿ ನಂತರ’, ‘ಮಾನವೀಯತೆಗೆ ಮೊದಲ ಆದ್ಯತೆ’ ಎಂಬ ಪರಿಕಲ್ಪನೆಯನ್ನು ಹೊಂದಲಾಗಿದೆ.

- **ನಿಮ್ಮ ಯೋಜನೆಗಳು ಹಾಗೂ ರೋಗಿಗಳ ಪರವಾದ ಕಾರ್ಯಕ್ರಮಗಳಿಗೆ ಸರ್ಕಾರ ಹಾಗೂ ಸಂಸ್ಥೆಯ ಸಿಬ್ಬಂದಿಯಿಂದ ಯಾವ ರೀತಿ ಬೆಂಬಲ ಸಿಕ್ಕಿತು?**

ಎಲ್ಲ ಮುಖ್ಯಮಂತ್ರಿಗಳು ಅಗತ್ಯ ಸಹಕಾರ ಹಾಗೂ ಪ್ರೋತ್ಸಾಹ ನೀಡಿದ್ದಾರೆ. ಸಂಸ್ಥೆಯಲ್ಲಿನ ಗುಣಮಟ್ಟದ ಚಿಕಿತ್ಸೆ ಹಾಗೂ ಬೆಳವಣಿಗೆಯಿಂದ ದಾನಿಗಳೂ ಮುಂದೆ ಬಂದು ನೆರವು ನೀಡಿದ್ದಾರೆ. ಇನ್ಫೊಸಿಸ್ ಪ್ರತಿಷ್ಠಾನದ ನೆರವಿನಿಂದ 350 ಹಾಸಿಗೆಗಳ ಆಸ್ಪತ್ರೆ ನಿರ್ಮಾಣವೂ ಸಾಧ್ಯವಾಗಿದೆ. ಸಂಸ್ಥೆಯ ಸಿಬ್ಬಂದಿಗೂ ಮೊದಲು ಗುತ್ತಿಗೆ ಆಧಾರದಲ್ಲಿ ಕಡಿಮೆ ವೇತನ ಸಿಗುತ್ತಿತ್ತು. ನಾನು ನಿರ್ದೇಶಕನಾದ ಬಳಿಕ ವೇತನ ಪರಿಷ್ಕರಣೆ, ಪ್ರೋತ್ಸಾಹಧನ ನೀಡುವಿಕೆಯಂತಹ ಕ್ರಮಗಳನ್ನು ಕೈಗೊಂಡೆ. ಇದರಿಂದ ವೈದ್ಯರು ಹಾಗೂ ಸಿಬ್ಬಂದಿ ರೋಗಿಗಳನ್ನು ಕಾಳಜಿಯಿಂದ ಕಂಡು, ಆರೈಕೆ ಮಾಡಿದರು.

- **ಸಂಸ್ಥೆಯನ್ನು ಕಾರ್ಪೊರೇಟ್ ಆಸ್ಪತ್ರೆಯ ಮಾದರಿಯಲ್ಲಿ ಬೆಳೆಸಲು ಹಾಗೂ ಎಲ್ಲರಿಗೂ ಗುಣಮಟ್ಟದ ವೈದ್ಯಕೀಯ ಚಿಕಿತ್ಸೆ ಒದಗಿಸಲು ಸಾಧ್ಯವಾದದ್ದು ಹೇಗೆ?**

ಸಂಸ್ಥೆಯ ನಿರ್ದೇಶಕನಾದ ಬಳಿಕ ಪ್ರತಿ ದಿನ ಹೊಸತನ್ನು ಮಾಡಲು ಪ್ರಯತ್ನಿಸಿದ್ದೆ. ಸರ್ಕಾರಿ ಆಸ್ಪತ್ರೆಯೆಂದರೆ ಕೇವಲ ಬಡವರಿಗೆ ಎಂಬ ಮನೋಭಾವವಿದೆ. ನಾನು ಇದನ್ನು ಬದಲಾಯಿಸಿ, ಬಡವರಿಗೂ ಶ್ರೀಮಂತರಿಗೆ ಸಿಗುವ ಸೌಲಭ್ಯವನ್ನು ಕೈಗೆಟಕುವ ದರದಲ್ಲಿ ಒದಗಿಸಿದೆ. ಇದರಿಂದಾಗಿ ಶ್ರೀಮಂತರೂ ಬರುತ್ತಿದ್ದಾರೆ. ಖಾಸಗಿ ತಾರಾ ಆಸ್ಪತ್ರೆಗಳಲ್ಲಿರುವ ಎಲ್ಲ ಸೌಲಭ್ಯವನ್ನು ಪ್ರಾರಂಭಿಸಿದೆ. ಸಂಸ್ಥೆಗೆ ಈಗ ವಿಶ್ವಮಾನ್ಯತೆ ಕೂಡ ಸಿಕ್ಕಿದ್ದು, ಅಮೆರಿಕದ ಅಂದಿನ ಅಧ್ಯಕ್ಷ ಬರಾಕ್ ಒಬಾಮಾ ಮೆಚ್ಚುಗೆ ವ್ಯಕ್ತಪಡಿಸಿದ್ದರು.

- **ಸರ್ಕಾರಿ ವ್ಯವಸ್ಥೆಯಡಿ ವೈದ್ಯಕೀಯ ಸಂಸ್ಥೆಯೊಂದರ ಆಮೂಲಾಗ್ರ ಬದಲಾವಣೆ ಮಾಡಲು ತಮಗೆ ಪ್ರೇರಣೆ ಯಾರು?**

ಬಡರೋಗಿಗಳೇ ಪ್ರೇರಣೆ. ರೋಗಿಗಳ ನೋವು, ಅಸಹಾಯಕತೆಯನ್ನು ಹತ್ತಿರದಿಂದ ಕಂಡಾಗ ಅದನ್ನು ಹೋಗಲಾಡಿಸಬೇಕು ಅಂದುಕೊಂಡೆ. ಅದೇ ರೀತಿ, ಕಾರ್ಯಪ್ರವೃತ್ತನಾಗಿ ಶ್ರಮಿಸಿದೆ.

- **ನಿಮಗೆ ಯಾವಾಗಲಾದರೂ ವೈದ್ಯಕೀಯ ವೃತ್ತಿ ಬೇಸರ ತರಿಸಿತ್ತೆ?**

ಸುಳ್ಳು ಆರೋಪ, ಅನಾಮಧೇಯ ಪತ್ರಗಳು ಬಂದಾಗ ವೈದ್ಯಕೀಯ ವೃತ್ತಿ ಬಗ್ಗೆ ಬೇಸರವಾಗಿತ್ತು. ಸಾಧನೆ ಹೆಚ್ಚಾದರೂ ಭಾರವಾಗುತ್ತದೆ. ಈ ವೃತ್ತಿಯಲ್ಲಿ ಇರುವವರನ್ನು ಜನರು ಗೌರವಿಸುತ್ತಾರೆ. ರೋಗಿಗಳು ಪೂಜಿಸುತ್ತಾರೆ. ಇದನ್ನು ನೋಡಿದಾಗ ಸಾರ್ಥಕ ಭಾವ ಮೂಡುತ್ತದೆ.

- **ರಾಜಕೀಯ ಕುಟುಂಬದ ಜತೆಗೆ ನಂಟು ಹೊಂದಿದ್ದೀರಿ. ಇದು ನಿಮ್ಮ ವೃತ್ತಿ ಮೇಲೆ ಎಂದಾದರೂ ಪರಿಣಾಮ ಬೀರಿತ್ತೇ?**

ರಾಜಕೀಯ ಕುಟುಂಬದ ಜತೆಗಿನ ನಂಟಿನಿಂದಾಗಿ ಪ್ರಾರಂಭದಲ್ಲಿ ನನ್ನ ಸಾಧನೆಗೆ ಮಾನ್ಯತೆ ನೀಡಲು ಕೆಲವರು ಹಿಂದು ಮುಂದು ನೋಡುತ್ತಿದ್ದರು. ಆ ನೆರಳಿನಿಂದ ಹೊರಬರಲು ಬಹಳ ಕಾಲ ಹಿಡಿಯಿತು. ಆ ಮೇಲೆ ನನ್ನದೇ ‘ಐಡೆಂಟಿಟಿ’ ಸಿಕ್ಕಿತು. ನನ್ನ ರಾಜಕೀಯ ನಂಟನ್ನು ವೃತ್ತಿಗೆ ಎಂದೂ ಬಳಸಿಕೊಂಡಿಲ್ಲ. ಪ್ರತಿಯೊಬ್ಬರನ್ನು ಸಮಾನವಾಗಿ ನೋಡಿದ್ದೇನೆ. ತಾಳ್ಮೆ, ಸಹನೆ ಮತ್ತು ಮಾನವೀಯತೆಯೇ ನನ್ನ ಶಕ್ತಿ.

ವೈದ್ಯಕೀಯ ವೃತ್ತಿ ಜೀವನದಲ್ಲಿ ಮರೆಯಲಾಗದಂತಹ ಘಟನೆ...

ಬೆಂಗಳೂರಿನ ಕಡಲೆಕಾಯಿ ವ್ಯಾಪಾರಿಯೊಬ್ಬರಿಗೆ ಹೃದಯದ ಕವಾಟ ಚಿಕ್ಕದಾಗಿ, ಸಂಕೀರ್ಣ ಸಮಸ್ಯೆಗೆ ಒಳಗಾಗಿದ್ದರು. ಸಂಸ್ಥೆಗೆ ಬಂದಾಗ ಅವರಿಗೆ ಸರಿಯಾಗಿ ಪ್ರಜ್ಞೆಯೂ ಇರಲಿಲ್ಲ. ಬದುಕುಳಿಯುವ ಸಾಧ್ಯತೆ ಕಡಿಮೆ ಇತ್ತು. ಅವರಿಗೆ ಬಲೂನ್ ವಾಲ್ವುಲೋಪ್ಲಾಸ್ಟಿ ಮಾಡಿದೆವು. ಇದರಿಂದ ಅವರು ಚೇತರಿಸಿಕೊಂಡರು. ಅವರ ಬಳಿ ಹಣ ಇರಲಿಲ್ಲ. ನಂತರ ಅವರು 25 ವರ್ಷ ಬದುಕುಳಿದಿದ್ದರು. ಅವರು ಪ್ರತಿ ವರ್ಷ ಶಸ್ತ್ರಚಿಕಿತ್ಸೆ ಮಾಡಿದ ದಿನದಂದು ಸಂಸ್ಥೆಗೆ ಬಂದು, ಕಡಲೆಕಾಯಿ ಕೊಡುತ್ತಿದ್ದರು. ಅವರ ಪ್ರೀತಿ ವಿಶ್ವಾಸ ಮರೆಯಲು ಸಾಧ್ಯವಿಲ್ಲ.

- **ರಾಜ್ಯದಲ್ಲಿ ಹಲವು ಸರ್ಕಾರಿ ಸ್ವಾಯತ್ತ ಸಂಸ್ಥೆಗಳಿವೆ. ಆದರೆ, ಅವುಗಳು ಜಯದೇವ ರೀತಿ ಬೆಳೆದಿಲ್ಲ. ಇದಕ್ಕೆ ಏನು ಕಾರಣ?**

ಕಟ್ಟಡ, ಉಪಕರಣಗಳಿಂದ ಮಾತ್ರ ಗುಣಮಟ್ಟದ ಚಿಕಿತ್ಸೆ ಸಾಧ್ಯವಿಲ್ಲ. ವೈದ್ಯರು ಹಾಗೂ ಸಿಬ್ಬಂದಿಗೆ ಸೇವಾ ಮನೋಭಾವ ಮತ್ತು ಬದ್ಧತೆ ಇರಬೇಕು. ವೈದ್ಯರ ನೇಮಕ ಮಾಡುವಾಗ ಪ್ರತಿಭೆ, ಸಾಧನೆ ಹಾಗೂ ನಾಯಕತ್ವದ ಗುಣಗಳಿಗೆ ಮಾನ್ಯತೆ ನೀಡಬೇಕು. ನಾಯಕತ್ವ ಗುಣ ಎಲ್ಲರಿಗೂ ಇರುವುದಿಲ್ಲ. ಸಂಸ್ಥೆಯಲ್ಲಿ ರಾಜಕೀಯ ಪ್ರಭಾವ ಇರಬಾರದು. ಅಧಿಕಾರ ವಿಕೇಂದ್ರೀಕರಣವೂ ಆಗಬೇಕು. ಎಲ್ಲದಕ್ಕೂ ಇಲಾಖೆಗಳ ಅನುಮತಿ ಪಡೆಯಬೇಕೆಂದರೆ ಸಂಸ್ಥೆ ಮುನ್ನಡೆಸುವುದು ಕಷ್ಟಸಾಧ್ಯ.

- **ಸರ್ಕಾರಿ ಸೇವಾ ಅವಧಿ ಮುಕ್ತಾಯವಾಗಿದೆ. ಮುಂದಿನ ದಿನಗಳಲ್ಲಿ ರಾಜ್ಯದ ಜನರಿಗೆ ನಿಮ್ಮ ವೈದ್ಯಕೀಯ ಸೇವೆ ಸಿಗುತ್ತದೆಯೇ?**

ವೈದ್ಯರಿಗೆ ನಿವೃತ್ತಿ ಎನ್ನುವುದಿಲ್ಲ. ಎರಡು ವಾರದಲ್ಲಿ ವೈದ್ಯಕೀಯ ಸೇವೆ ಪ್ರಾರಂಭಿಸುತ್ತೇನೆ. ಅಲ್ಲಿಯೂ ಮಧ್ಯಮ ವರ್ಗದ ರೋಗಿಗಳ ಜತೆಗೆ ಸಂಪರ್ಕದಲ್ಲಿ ಇರುತ್ತೇನೆ. ಅಲ್ಲಿ ಕೂಡ ಚಿಕಿತ್ಸೆಗಳಿಗೆ ರಿಯಾಯಿತಿ ನೀಡುವ ವ್ಯವಸ್ಥೆ ಮಾಡುತ್ತೇನೆ.

- **ರಾಜಕೀಯಕ್ಕೆ ಬರುತ್ತೀರಿ ಎಂಬ ವದಂತಿ ಇದೆ. ಇದು ಎಷ್ಟು ಸತ್ಯ?**

ಸದ್ಯ ರಾಜಕೀಯಕ್ಕೆ ಬರುವ ಆಲೋಚನೆ ಇಲ್ಲ. ರಾಜಕೀಯ ಪ್ರವೇಶದ ಬಗ್ಗೆ ಕೆಲ ಹಿತೈಷಿಗಳು ವಿವಿಧ ರೀತಿಯ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ನಿಮ್ಮ ಸೇವೆ ರಾಷ್ಟ್ರಕ್ಕೆ ಬೇಕು, ಹೀಗಾಗಿ ರಾಜಕೀಯಕ್ಕೆ ಬನ್ನಿ ಎಂದು ಹೇಳುತ್ತಿದ್ದಾರೆ. ನಾನು ಈ ಬಗ್ಗೆ ಗೊಂದಲದಲ್ಲಿ ಇದ್ದೇನೆ.

ಮಾತಿನ ಮಹಲಿನಲ್ಲಿ ಕಲಾತ್ಮಕತೆಯ ಮಂದಹಾಸ

ಜೈಪುರದಲ್ಲಿ ನಡೆಯುತ್ತಿರುವ ಸಾಹಿತ್ಯ ಉತ್ಸವಕ್ಕೆ ಹತ್ತು ಹಲವು ಬಣ್ಣ. ಸಾಹಿತ್ಯ ಸುಗ್ಗಿಯ ಜೊತೆಗೆ ಕಲಾತ್ಮಕ ಅಭಿವ್ಯಕ್ತಿಗೂ ವೇದಿಕೆಯಾಗುತ್ತದೆ. ಸಾಹಿತ್ಯ ಗೋಷ್ಠಿಗಳಂತೆಯೇ ಕಲಾ ಪ್ರಿಯರನ್ನು ಆಕರ್ಷಿಸುತ್ತದೆ.

ರಾಜಲಕ್ಷ್ಮಿ ಕೋಡಿಬೆಟ್ಟು

ಜೈಪುರ ಸಾಹಿತ್ಯ ಉತ್ಸವದಲ್ಲಿ ಮಾತಿನ ಅರಮನೆಯದ್ದೇ ಕಾರುಬಾರು ಬಹುಪಾಲು. ಆದರೆ ಲೇಖಕರ, ಗಣ್ಯರ ಮಾತುಗಳು, ಪುಸ್ತಕ ಪರಿಚಯ, ಹೊರಹೊಮ್ಮುವ ಕಥೆಗಳನ್ನು ನಿರಂತರವಾಗಿ ಆಲಿಸುವುದಕ್ಕೆ ಅಮ್ಮನಂತೆ ಅಕ್ಕರೆಯಿಂದ ಸಹಾಯ ಮಾಡುವುದು ಇಲ್ಲಿ ಅರಳಿನಿಂತ ಈ ಕಲಾಜಗತ್ತು. ಸಾಹಿತ್ಯೋತ್ಸವದ ಆವರಣದಲ್ಲಿ ಕೆಂಪು ಗುಲಾಬಿ ರಂಗು ಹೊದ್ದ ಕಾಗದದ ಹೂವಿನ ಅಲಂಕಾರವನ್ನು ದಾಟುತ್ತಿದ್ದಂತೆಯೇ ಗುಲಾಬಿ ಡಿಜಿಟಲ್ ಕಲಾಕೃತಿಗಳು ಜೈಪುರದ ಸಾಂಸ್ಕೃತಿಕ ಲೋಕಕ್ಕೆ ಕನ್ನಡಿ ಹಿಡಿದು ನಿಂತಿವೆ. ಓದು, ಹಾಡು, ವಾದ್ಯ, ನೃತ್ಯವನ್ನು ಆಪ್ತವಾಗಿ ಬಿಂಬಿಸುವ ಚಿಕಣಿ ಕೃತಿಗಳು ಎಲ್ಲ ಫ್ಲೆಕ್ಸ್‌ನಲ್ಲಿ, ವೇದಿಕೆಯಲ್ಲಿ. ಈ ಬಣ್ಣಗಳು ನೋಡುಗರ ಮನಸ್ಸಿಗೂ ಕೊಂಚ ರಂಗು ತುಂಬುತ್ತಿವೆ.

ಬಲಬದಿಯ ಗೋಸಂಪಿಗೆ ಮರಗಳ ಪುಟಾಣಿ ವನದಲ್ಲಿ ಟೊಂಗೆಗಳ ತುಂಬಾ ಬಣ್ಣದ ಚೀಟಿಗಳು. ಒಂದೊಂದು ಚೀಟಿಯಲ್ಲಿ ಪುಟ್ಟ ಕವಿತೆ, ಆಶಯ, ಕನಸುಗಳನ್ನು ಹೊತ್ತ ನೂರಾರು ಬರಹಗಳು. ‘ಈ ಗೌಜು, ನನ್ನ ಮನದ ಕೊಳದಲ್ಲಿ ಒಂದಿಷ್ಟು ಶಾಂತಿಯನ್ನು ತಂದಿದೆ’ ಎಂಬ ಸಂದೇಶ ಬದುಕಿನ ಜಂಜಡದಿಂದ ದೂರವಾಗಿ ಸಾಹಿತ್ಯಲೋಕದಲ್ಲಿ ವಿಹರಿಸಿದ ಹುಡುಗಿಯೊಬ್ಬಳದು. ‘ನನ್ನ ಮಿದುಳಿನಲ್ಲೊಂದು ಅಂತ್ಯಕ್ರಿಯೆ ನಡೆದಿದೆ..ಈಗೊಂದು ಹೊಸದಾರಿ ತೆರೆದುಕೊಳ್ಳುವುದೇ...’ ಎಂಬ ಪ್ರಶ್ನೆ ಹೊತ್ತ ಚೀಟಿ ಮತ್ತೊಂದು ಟೊಂಗೆಯಲ್ಲಿ. ಬರೆದವರ ಮನದಲ್ಲಿ ಉತ್ಸವದ ಬಗ್ಗೆ ಎಷ್ಟೊಂದು ನಿರೀಕ್ಷೆಯಿರಬಹುದು!

ನ್ಯೂಜಿಲೆಂಡ್‌ನಿಂದ ಬಂದಿರುವ ಪುಸ್ತಕ ಪ್ರಿಯೆ ಜೆಲ್, ಬೆಂಗಳೂರಿನ ಸೊಸೆ. ಇಲ್ಲಿನ ವಾತಾವರಣವನ್ನು ವಿವರಿಸುತ್ತ, ‘ನಿಜವಾಗಿಯೂ ವೇದಿಕೆಯಲ್ಲಿ ನಾವು ಕೇಳುವ ಭಾಷಣಗಳು ಮತ್ತು ಮಾತಿನ ಜಟಾಪಟಿಗಳು ಒರಟಾಗದಂತೆ ಕಲಾ ಜಗತ್ತು ಸಹಾಯ ಮಾಡುತ್ತದೆ. ನಮ್ಮ ಮನಸ್ಸು ದಣಿಯದಂತೆ ನೋಡಿಕೊಳ್ಳುವ ಈ ಹಿನ್ನೆಲೆಯ ರಂಗು, ಜನಜಂಗುಳಿಯ ನಡುವೆ ಯಾರೋ ಕಲಾವಿದ ತನ್ನ ಪಾಡಿಗೆ ನುಡಿಸುತ್ತಿರುವ ಕೊಳಲಿನ ಧ್ವನಿಗೆ ವಿಶೇಷ ಧನ್ಯವಾದ ಯಾರು ಹೇಳುತ್ತಾರೆ?’ ಎಂದು ಕೇಳಿದರು.

ನಂದಗಡ ಬಾಗಾನ್ ಎಂಬ ಚಂದದವನದಲ್ಲಿ ಬಣ್ಣದ ಕಲಾಕೃತಿಗಳು ಜಮಾಯಿಸಿ ಕರೆಯುತ್ತಿವೆ. ಹಳದಿ, ನೀಲಿ ರಂಗಿನ ವೇದಿಕೆಯೊಂದು ನೆಪಕ್ಕಷ್ಟೆ. ಪೇಂಟಿಂಗ್, ಟ್ಯಾಟೂ, ಖುಷಿಯ ಚಟುವಟಿಕೆಗಳನ್ನು ನಡೆಸುವುದು ಅನಿಲ್ ಅಗರ್‌ವಾಲ್ ಫೌಂಡೇಶನ್‌ನ ತಂಡದವರು. ಈ ಖುಷಿಗೆ ಸಂಗೀತ ತುಂಬುವುದು ರಾಜಸ್ಥಾನದ ಜನಪದ ವಾದ್ಯ ಮಶ್ಕೀ, ಶಹನಾಯಿ ಮತ್ತು ಪಂಜಾಬಿ ಡೋಲಕ್‌ನ ಧ್ವನಿ. ‘ಮಶ್ಕೀ ಎಂಬುದು ಜೈಪುರದಲ್ಲಿ ಎಲ್ಲ ಶುಭ ಸಮಾರಂಭಕ್ಕೂ ಸಾಕ್ಷಿಯಾಗಬೇಕು. ಮತ್ತೆ ಇಲ್ಲಿ ನಾನು ಅದನ್ನು ನುಡಿಸದೇ ಇದ್ದರೆ ಹೇಗೆ ಹೇಳಿ’ ಎಂದು ಕೇಳುತ್ತಾರೆ ಪರ್ಕಾಶ್ ಕಂಡರಾ. ರೊಘುವೀರ್ ಅವರು ತಂದಿರುವ ಬೊಂಬೆಯಾಟದ ರಾಣಿಬೊಂಬೆಗಳೋ, ಜೈಪುರದ ಮಹಲಿನಿಂದ ಆಗಷ್ಟೇ ಹೊರಟು ಬಂದಂತಿವೆ. ಕಲಾವಿದ ಅಭಿಷೇಕ್ ಸಿಂಘ್ ಅವರ ಲೈವ್ ಇನ್‌ಸ್ಟಾಲೇಷನ್, ಓಜಸ್ ಆರ್ಟ್‌ನ ಕಲಾವಿದರು ನಿರ್ಮಿಸಿದ ಇನ್‌ಸ್ಟಾಲೇಷನ್‌ಗಳು ಒಬ್ಬೊಬ್ಬರಿಗೂ ಪ್ರತ್ಯೇಕ ಕಥೆಯನ್ನು ಹೇಳುವಂತೆ ನಿಂತಿವೆ.

ವೇದಿಕೆಗಳಲ್ಲಿ ಶಾಸ್ತ್ರೀಯ, ಪಾಶ್ಚಾತ್ಯ ಸಂಗೀತ ಎಲ್ಲರನ್ನೂ ಕೈ ಬೀಸಿ ಕರೆಯುವುದು ಇದ್ದೇ ಇದೆ. ಹೀಗೆಲ್ಲಾ ಸಂಭ್ರಮ ಪಡುವ ಮನುಷ್ಯರನ್ನು ನೋಡಲೆಂಬಂತೆ ಈಜುಕೊಳದ ಬಳಿಗೆ ಸಂಜೆ ಸಾವಿರಾರು ಹಕ್ಕಿಗಳು ಬಂದು ತಮ್ಮ ಹಾಡನ್ನೂ ಸೇರಿಸುತ್ತವೆ. ಭೋಜ್‌ಪುರಿ ಲೇಖಕ ಬದರಿ ನಾರಾಯಣ್ ಹೇಳುವಂತೆ, ‘ಈ ಜಗತ್ತಿನ ಆದಿಕವಿಗಳೆಂದರೆ ಈ ಹಕ್ಕಿಗಳು. ಅವು ಹಾಡಿದ ಹಾಡುಗಳೇ ಪುರಾತನ ಕಾವ್ಯ. ಅವುಗಳಿಗೆ ಕಿವಿಯಾಗುವುದು ಎಲ್ಲಿಯವರೆಗೆ ಸಾಧ್ಯವೋ ಅಲ್ಲಿಯವರೆಗೆ ನಮ್ಮೊಳಗೆ ಸಹೃದಯತೆ ಉಳಿದಿರುತ್ತದೆ.’ ಅಷ್ಟರಲ್ಲಿ ಜೈಪುರದ ಕೋಮಲ್,‘ಚಹಾ ಕುಡೀರಲ್ಲಾ..’ ಎನ್ನುತ್ತಾ ಸಂತೋಷದ ನಗು ಹರಡಿದಳು. ಬನಾರಸಿ ಸೀರೆಯುಟ್ಟು ರಾಜಸ್ಥಾನಿ ಟರ್ಬನ್ ಧರಿಸಿದ ಆಕೆ ಚೆಲ್ಲಿದ ನಗುವಿನ ಬಣ್ಣ ಸುತ್ತಲೂ ಹೊಳೆಯಲಾರಂಭಿಸಿತು.

ಕನಸಿನ ಮರ

ಕಥೆ

ಎಂ.ವಿ. ಶಶಿಭೂಷಣ ರಾಜು ಅವರ **ಅಭಿವ್ಯಕ್ತಿ**

ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/short-story

ಕವನ

ನಂದಿನಿ ಹೆದ್ದುರ್ಗ ಅವರ **ವೈರುಧ್ಯ**

ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/poetry

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ದೇವವಟ್ಟೆ

ದೇವವಟ್ಟೆ (ನಾ). ದೇವಲೋಕದ ಹಾದಿ

ದಶರಥನು ಗುರುಗಳಾದ ವಾಮದೇವ, ವಸಿಷ್ಠ ಹಾಗೂ ಸಚಿವರನ್ನು ಕರೆಸಿ, ತನ್ನ ಬಾಳ ಬಯಕೆಯನ್ನು ಹೀಗೆ ತಿಳಿಸುವನು: ‘ಓ ವಂದ್ಯರಿರ, ಬಾಳಿಗೆ ಕಣ್ಣಿನಂತಿರುವ ಕಂದರನ್ನು ಪಡೆಯುವ ದೇವಮಾರ್ಗವನ್ನು ನನಗೆ ತಿಳಿಸಿ. ನನ್ನ ಎದೆಯ ಬೆಂಕಿಯನ್ನು ಆರಿಸಿ ಸುಗ್ಗಿಯನ್ನು ತನ್ನಿ.’

ಆ ಸಂದರ್ಭದಲ್ಲಿ ಕುವೆಂಪು ಅವರು ‘ದೇವಮಾರ್ಗ’ವನ್ನು ‘ದೇವವಟ್ಟೆ’ ಪದದಿಂದ ಅಭಿವ್ಯಕ್ತಿಸಿದ್ದಾರೆ.

‘ದೇವವಟ್ಟೆಯನುಸಿರಿಮೆನಗೆ, ಓ ವಂದ್ಯರಿರ;
ತವಿಸಿಮೆನ್ನೆದೆಯಗ್ಗಿಯಂ, ಬರಿಸಿ ಸುಗ್ಗಿಯಂ.’

ಮೊದಲ ಓದು

ರಾಮರಾಜ್ಯ ಕುರಿತು ಹೊಸ ಹೊಳಹು

ದೇಶವೆಲ್ಲ ಬಾಲರಾಮನ ದೇಗುಲದ ಕಡೆ ದೃಷ್ಟಿ ನೆಟ್ಟಿರುವಾಗ ‘ಭರತಕಲ್ಪ’ದ ಓದು ರಾಮರಾಜ್ಯ ಕುರಿತು ಹೊಸ ಹೊಳಹು ನೀಡುತ್ತದೆ. ರಾಮರಾಜ್ಯವೆಂದರೆ ಸ್ತ್ರೀಯರನ್ನು ಗೌರವಿಸುವುದು, ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯುವುದು, ಕಂದಾಯ ಸಂಗ್ರಹ, ದ್ರವ್ಯ ವಿಲೇವಾರಿಯಲ್ಲಿ ಅರಮನೆಯ ಸದಸ್ಯರ ಖರ್ಚು ಗೌಣವಾಗಿರುವುದು, ರಾಜ್ಯದ ಸುರಕ್ಷೆಯೊಂದಿಗೆ ಕಟ್ಟುವಿಕೆಯಲ್ಲಿ ಹೆಚ್ಚು ನಂಬಿಕೆ ಇಡುವುದು, ಬಹುತ್ವವನ್ನು ಕಾಪಾಡುತ್ತಲೇ ಏಕಸಂವಿಧಾನ ಸೂತ್ರದಡಿ ತರುವುದು–ಹೀಗೆ ಭರತ ರಾಮನ ರಾಜ್ಯವನ್ನು ರಾಮರಾಜ್ಯವಾಗಿಸಿದ ಕತೆ ಇದು. ಹೆಣ್ಣುಮಕ್ಕಳಿಗೆ ಸಮಾನ ಹಕ್ಕುಗಳನ್ನು ನೀಡುವ ಭರತ ಮಾಂಡವಿ (ಭರತನ ಹೆಂಡತಿ), ಶ್ರುತಕೀರ್ತಿ (ಶತೃಘ್ನನ ಹೆಂಡತಿ) ಹಾಗೂ ಊರ್ಮಿಳೆ (ಲಕ್ಷ್ಮಣನ ಹೆಂಡತಿ) ಮೂವರ ಕೌಶಲಗಳೂ ಪ್ರಕಾಶಿಸುವಂತೆ ಪ್ರೇರಣೆ ನೀಡುತ್ತಾನೆ. ಕೃಷಿ ಮಹಿಳೆಯಾಗಿ ದುಡಿಯುವ ಊರ್ಮಿಳೆ ಗಟ್ಟಿ ಉದಾಹರಣೆ, ಕೌಶಲವಿರುವ ಮಹಿಳೆಯಾಗಿ ಶ್ರುತಕೀರ್ತಿಯನ್ನು ಬೆಳೆಸುತ್ತಲೇ ಆದರ್ಶ ಸಮಾಜದ ನಿರ್ಮಾಣದ ಹಂತಗಳನ್ನು ವಿವರಿಸುತ್ತಾನೆ. ರಾಮರಾಜ್ಯದ ಕಲ್ಪನೆ ರಾಮನಿಂದಲ್ಲ, ಭರತನಿಂದ ಆದ ಕತೆಯನ್ನು ಈ ಕಾದಂಬರಿ ಪ್ರಸ್ತುತಪಡಿಸುತ್ತದೆ. ರಾಮನಿಲ್ಲದ ಅಯೋಧ್ಯೆಯಲ್ಲಿ ಭರತನ ತಳಮಳ, ಅವಮಾನ, ಕೈಕೇಯಿ ಅನುಭವಿಸಬೇಕಾದ ಅವಮಾನ, ಇವನ್ನು ನಿರೂಪಿಸಿದ ಶೈಲಿ ಸರಳವಾಗಿದೆ. ರಾಮ–ಲಕ್ಷ್ಮಣರು ಬಿಲ್ವಿದ್ಯೆ ಪ್ರವೀಣರಾದರೆ, ಭರತ ಆಡಳಿತ ಹಾಗೂ ನಗರ ನಿರ್ಮಾಣ ವಿದ್ಯೆಯಲ್ಲಿ ಹೆಚ್ಚು ಪಾರಂಗತನಾಗಿರುತ್ತಾನೆ. ರಾಮನಿಗಿಂತಲೂ ಹೆಚ್ಚು ಮರ್ಯಾದಾ ಪುರುಷೋತ್ತಮನಾಗಿ ಭರತ ಕಾಣಿಸುವ ಈ ಕಾದಂಬರಿ ರಾಮರಾಜ್ಯದ ಪರಿಕಲ್ಪನೆಯ ಚೌಕಟ್ಟನ್ನು ಮನೋಜ್ಞವಾಗಿ ಕಟ್ಟಿಕೊಡುತ್ತದೆ.



ಪು: 464
₹365

ಭರತಕಲ್ಪ (ಕಾದಂಬರಿ)
ಲೇ: ಆರ್. ಸುನಂದಮ್ಮ
ಪ್ರ: ಸಪ್ನಾ ಬುಕ್ ಹೌಸ್
ಸಂ: 080-40114455

ಹಲವು ಕಥೆಗಳ ಅನಾವರಣ



ಪು: 383
₹395

ಕೊನೆಯ ಬಿಳಿ ಬೇಟೆಗಾರ
ಇಂಗ್ಲಿಷ್ ನಿರೂಪಣೆ: ಜೋಷುವಾ ಮ್ಯಾಥ್ಯೂ
ಕನ್ನಡಕ್ಕೆ: ಎಲ್.ಜಿ. ಮೀರಾ
ಪ್ರ: ಆಕೃತಿ ಪುಸ್ತಕ
ಸಂ: 080-23409479

ಡೊನಾಲ್ಡ್ ಆಂಡರ್ಸನ್, ನರಭಕ್ಷಕ ಹುಲಿಗಳ ಬೇಟೆಗಾರ ಕೆನೆತ್ ಆಂಡರ್ಸನ್ ಅವರ ಮಗ. ತಮ್ಮನ್ನು ಕೊನೆಯ ಬಿಳಿಬೇಟೆಗಾರ ಎಂದು ಬಣ್ಣಿಸಿಕೊಳ್ಳುತ್ತ, ಸ್ವಾತಂತ್ರ್ಯ ಪೂರ್ವ ಮತ್ತು ನಂತರದ ಬೇಟೆ ದಿನಗಳನ್ನು ಇಲ್ಲಿ ವಿವರಿಸುತ್ತ ಹೋಗಿದ್ದಾರೆ. ಸ್ವಾತಂತ್ರ್ಯಪೂರ್ವದಲ್ಲಿ ಆಂಗ್ಲೊ ಇಂಡಿಯನ್ನರು ಇಲ್ಲಿ ನೆಲೆ ಊರಿದ್ದು, ನಂತರ ಬ್ರಿಟನ್‌ಗೆ ಹೋಗಬೇಕೆ ಎಂಬ ಗೊಂದಲದಲ್ಲಿದ್ದವರು, ಬಹುತೇಕರಿಗೆ ಬೆಂಗಳೂರು ಹಿಡಿದಿಟ್ಟಿದ್ದು ಹೇಗೆ? ಐಶಾರಾಮಿ ಜೀವನ, ಬೇಟೆ, ಕೂಟಗಳು ಆಹ್ಲಾದಕಾರಿ ಎನಿಸುತ್ತವೆ. ಬ್ರಿಟಿಷರ ಆಳ್ವಿಕೆ, ತಮಿಳರು, ಭಾರತೀಯರನ್ನು ಆಳಾಗಿಸಿದ್ದು, ಅದು ಸಹಜವೆನಿಸುತ್ತಿದ್ದುದನ್ನು ನೆನಪಿಸಿಕೊಳ್ಳುತ್ತಲೇ ಬಂಡವಾಳಶಾಹಿಗಳಿಂದ ಬೆಂಗಳೂರಿನ ಸುತ್ತಲಿನ ಕಾಡು ಮರೆಯಾದ ಬಗೆಯನ್ನೂ ವಿವರಿಸುತ್ತಾರೆ.

ಡೊನಾಲ್ಡ್ ಮಾತಾಡದೇ ಇದ್ದರೆ, ಜೋಷುವಾ ಮ್ಯಾಥ್ಯೂ ಬರೆಯದೇ ಇದ್ದಲ್ಲಿ ಇತಿಹಾಸದ ಒಂದು ಕೊನೆಯ ಕೊಂಡಿ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ಸಾಹಸಿ ಹಿನ್ನೆಲೆಯ ಹಲವು ಕಥೆಗಳು ನಮಗೆ ದಕ್ಕುತ್ತಿರಲಿಲ್ಲ. ಎಲ್.ಜಿ. ಮೀರಾ ಕನ್ನಡದ ಅನುವಾದ ಓದಿಸಿಕೊಂಡು ಹೋಗುತ್ತದೆ.

ಆರ್ಕ್ಟಿಕ್‌ನ ಹಿಮಾದ್ರಿಯಲ್ಲಿ ಕನ್ನಡಿಗನ ಪ್ರಯೋಗ



ಪ್ರಯೋಗಾಲಯದಲ್ಲಿ ಗಿರೀಶ್

ಆರ್ಕ್ಟಿಕ್– ಅಂಟಾರ್ಕ್ಟಿಕ್ ವ್ಯತ್ಯಾಸ–ಸವಾಲು

‘ನಾನು ಅಂಟಾರ್ಕ್ಟಿಕ್‌ಗೆ ಈವರೆಗೆ ಹೋಗಿಲ್ಲ. ಅಂಟಾರ್ಕ್ಟಿಕ್‌ನಲ್ಲಿ 1980ರ ದಶಕದಿಂದಲೇ ಸಂಶೋಧನಾ ಯಾತ್ರೆಗಳು ಪ್ರಾರಂಭವಾಗಿವೆ. ಈಗ ಹಲವು ಬೇಸ್ ಸ್ಟೇಷನ್‌ಗಳು ಅಂಟಾರ್ಕ್ಟಿಕ್‌ನಲ್ಲಿವೆ. ಆರ್ಕ್ಟಿಕ್‌ಗೆ ಹೋಲಿಸಿದರೆ, ಅಂಟಾರ್ಕ್ಟಿಕ್‌ನಲ್ಲಿ ಹೆಚ್ಚು ಸೌಲಭ್ಯ–ವ್ಯವಸ್ಥೆ ಇದೆ. ಭಾರತೀಯ ವೈದ್ಯರು, ಶುಶ್ರೂಷಕರು ಎಲ್ಲ ಇದ್ದಾರೆ’ ಎಂದು ಗಿರೀಶ್ ಹೇಳಿದರು.

‘ಆರ್ಕ್ಟಿಕ್‌ನಲ್ಲಿ ಮತ್ತೊಂದು ದೊಡ್ಡ ಸವಾಲು ಅಂದರೆ ಹಿಮ ಕರಡಿಗಳ ಕಾಟ. ಹಿಮ, ಭಾರಿ ಗಾಳಿಯ ಜೊತೆಗೆ ಹಿಮ ಕರಡಿಗಳನ್ನೂ ಎದುರಿಸಬೇಕಾಗುತ್ತದೆ. ಅವು ಪ್ರಯೋಗಾಲಯದೊಳಗೇ ನುಗ್ಗುವ ಅಪಾಯವಿರುತ್ತದೆ. ಅದಕ್ಕಾಗಿ, ರೈಫಲ್, ಫ್ಲೇರ್ ಗನ್‌ನಂತಹ ಶಸ್ತ್ರಾಸ್ತ್ರಗಳನ್ನು ಹೊಂದುವುದು ಅವಶ್ಯಕ’ ಎಂದರು.

10ನೇ ಪುಟದಿಂದ...

ಭಾರತದ್ದಷ್ಟೇ ಅಲ್ಲದೆ, ಸುಮಾರು 11 ಬೇರೆ ದೇಶಗಳ ರಿಸರ್ಚ್ ಸ್ಟೇಷನ್‌ಗಳು ಸದ್ಯ ಆರ್ಕ್ಟಿಕ್‌ನಲ್ಲಿವೆ. ಇವುಗಳಲ್ಲಿ ವರ್ಷದ 365 ದಿನಗಳೂ ಕಾರ್ಯನಿರ್ವಹಿಸುವ ಸ್ಟೇಷನ್‌ಗಳ ಸಂಖ್ಯೆ 4ರಿಂದ 5 ಮಾತ್ರ. ಈ ಎಲ್ಲ ದೇಶಗಳ ಪ್ರತಿನಿಧಿಗಳೂ ಸೇರಿಸಿದರೆ, ಏಕಕಾಲಕ್ಕೆ 30ರಿಂದ 35 ಜನ ಮಾತ್ರ ಚಳಿಗಾಲದಲ್ಲಿ ಆರ್ಕ್ಟಿಕ್‌ನಲ್ಲಿ ಇರುತ್ತಾರೆ.

‘ಈ ಸ್ಥಳದಲ್ಲಿ ಸೂರ್ಯನ ಬೆಳಕು ಇರದ ಕಾರಣ ವಿಟಮಿನ್ ಡಿ ಕೊರತೆ ಬಾಧಿಸುತ್ತದೆ. ಆದರೆ, ನಾವು ಕೇವಲ 25 ದಿನಗಳು ಇದ್ದುದರಿಂದ ಹೆಚ್ಚು ಸಮಸ್ಯೆ ಎನಿಸಲಿಲ್ಲ. ಮೂರರಿಂದ ಐದು ತಿಂಗಳುವರೆಗೆ ಇರುವವರಿಗೆ ಸಮಸ್ಯೆ ಬಾಧಿಸುತ್ತದೆ. ಅಂಥವರಿಗೆ ವಿಟಮಿನ್ ಡಿ ಸಪ್ಲಿಮೆಂಟ್ ಕೊಡುತ್ತಾರೆ. ಮಾಂಸಾಹಾರಿಗಳಿಗೆ ಮೀನಿನ ಆಹಾರ ಸೇವಿಸಲು ಹೇಳುತ್ತಾರೆ. ನಮ್ಮ ಆರೋಗ್ಯ ಪರಿಶೀಲನೆಗಾಗಿ ಒಬ್ಬರು ಶುಶ್ರೂಷಕಿಯನ್ನೂ ಇಟ್ಟಿರುತ್ತಾರೆ’ ಎಂದು ಗಿರೀಶ್ ಹೇಳಿದರು.

ಈ ‘ಹಿಮಾದ್ರಿ’ ವರ್ಕ್‌ಸ್ಟೇಷನ್‌ನ ಸಂಪೂರ್ಣ ಚಟುವಟಿಕೆ ನಿರ್ವಹಿಸುವುದು ಭೂ ವಿಜ್ಞಾನ ಸಚಿವಾಲಯದ ಅಡಿಯಲ್ಲಿ ಬರುವ ರಾಷ್ಟ್ರೀಯ ಧ್ರುವ ಮತ್ತು ಸಾಗರ ಸಂಶೋಧನಾ ಕೇಂದ್ರ (ಎನ್‌ಸಿಪಿಒಆರ್). ವಿಜ್ಞಾನಿಗಳನ್ನು, ಸಂಶೋಧಕರನ್ನು ಆರ್ಕ್ಟಿಕ್‌ಗೆ ಕಳುಹಿಸುವುದು, ಅವರಿಗೆ ಎಲ್ಲ ವ್ಯವಸ್ಥೆ ಮಾಡಿಕೊಡುವುದು ಈ ಕೇಂದ್ರದ ಕೆಲಸ.

‘ನಾನು ರಾಮನ್ ಸಂಶೋಧನಾ ಸಂಸ್ಥೆಯಲ್ಲಿ (ಆರ್‌ಆರ್‌ಐ) ಪ್ರಯೋಗ ಕೈಗೊಂಡಿರುವುದು ರೇಡಿಯೊ ಖಗೋಳವಿಜ್ಞಾನದ ಬಗ್ಗೆ. ಮೂಲತಃ ಎಲೆಕ್ಟ್ರಾನಿಕ್ಸ್ ಎಂಜಿನಿಯರ್ ಆಗಿರುವ ನಾನು, ಆರ್‌ಆರ್‌ಐನ ಸರಸ್ (SARAS) ತಂಡದಲ್ಲಿದ್ದೇನೆ. ರೇಡಿಯೊ ಖಗೋಳವಿಜ್ಞಾನದಲ್ಲಿ ಪ್ರಮುಖವಾಗಿ, ಮೊದಲ ಬಾರಿಗೆ ನಕ್ಷತ್ರಗಳು ಹೇಗೆ ರಚನೆಯಾದವು, ಮೊದಲ ನಕ್ಷತ್ರಪುಂಜಗಳ ಸಂಕೇತಗಳ (ಸಿಗ್ನಲ್ಸ್) ಬಗ್ಗೆ ಅಧ್ಯಯನ ಮಾಡುವುದು ನಮ್ಮ ಆದ್ಯತೆ. ಈ ಬಗ್ಗೆ ಅಧ್ಯಯನ ಮಾಡುವ ಪ್ರಪಂಚದ ಕೆಲವೇ ತಂಡಗಳಲ್ಲಿ ನಮ್ಮ ತಂಡ ಪ್ರಮುಖವಾಗಿದೆ’ ಎಂದು ಗಿರೀಶ್ ತಮ್ಮ ಸಂಶೋಧನೆಯ ಬಗ್ಗೆ ಹೇಳುತ್ತಾರೆ.

ಆರ್ಕ್ಟಿಕ್‌ನಂತಹ ದೂರದ ಪ್ರದೇಶಗಳಲ್ಲಿ ರೇಡಿಯೊ ತರಂಗಾಂತರ ಅಥವಾ ರೇಡಿಯೊ ಫ್ರೀಕ್ವೆನ್ಸಿ ವಾತಾವರಣ ಹೇಗಿದೆ ಎಂದು ಪರೀಕ್ಷೆ ಮಾಡಲು ನಾವು ಆರ್ಕ್ಟಿಕ್‌ಗೆ ತೆರಳಿದ್ದೆವು. ನಮ್ಮ ವಾಯುಮಂಡಲದಲ್ಲಿ ಮಧ್ಯದ ಗೋಳದ ನಂತರ ಇರುವ ಪದರವಾದ ಅಯಾನುಗೋಳ (ಅಯನೊಸ್ಪಿಯರ್) ಸೂರ್ಯ ಇಲ್ಲದೇ ಇರುವ ಸಮಯದಲ್ಲಿ ಯಾವ ರೀತಿ ವರ್ತಿಸುತ್ತದೆ ಎಂದು ತಿಳಿದುಕೊಳ್ಳುವುದು ನಮ್ಮ ಸಂಶೋಧನೆಯ ಮತ್ತೊಂದು ಉದ್ದೇಶ. ಹೀಗಾಗಿ, ದೂರದ ‘ಹಿಮಾದ್ರಿ’ಯಂತಹ ಸ್ಟೇಷನ್‌ಗಳಲ್ಲಿ ಇಂತಹ ಸಂಶೋಧನೆ ಕೈಗೊಂಡಾಗ ನಮಗೆ ಹೆಚ್ಚು ನಿಖರವಾದ ದತ್ತಾಂಶಗಳು ಸಿಗುವ ಸಾಧ್ಯತೆ ಇರುತ್ತದೆ. ಸದ್ಯ, ಅಲ್ಲಿನ ಎಲ್ಲ ದತ್ತಾಂಶಗಳನ್ನು ಸಂಗ್ರಹಿಸಿಕೊಂಡು ಬಂದಿದ್ದೇವೆ. ದತ್ತಾಂಶಗಳನ್ನು ವಿಶ್ಲೇಷಿಸಿದ ನಂತರ, ರೇಡಿಯೊ ಖಗೋಳವಿಜ್ಞಾನ ಸಂಶೋಧನೆಗೆ ಅಗತ್ಯವಾದ ಅತ್ಯಾಧುನಿಕ ಉಪಕರಣಗಳನ್ನು ಆರ್ಕ್ಟಿಕ್‌ಗೆ ತೆಗೆದುಕೊಂಡು ಹೋಗುತ್ತೇವೆ’ ಎಂದು ಅವರು ಹೇಳಿದರು.

ಇಲ್ಲಿ ಹಲವು ದೇಶಗಳು ಸಂಶೋಧನೆಗೆ ಮುಂದಾಗುತ್ತಿರುವುದಕ್ಕೆ ಈಗಿನ ಪ್ರಮುಖ ಕಾರಣ ಹವಾಮಾನ ಬದಲಾವಣೆ. ಆರ್ಕ್ಟಿಕ್‌ನಲ್ಲಿ ಹಿಮಗಡ್ಡೆಗಳು ಕರಗುತ್ತಿವೆ. ಸಮುದ್ರದ ನೀರಿನ ಮಟ್ಟ ಏರುತ್ತಿದೆ. ಅತಿ ವೇಗದ ಪ್ರಮಾಣದಲ್ಲಿ ಹಿಮ ಕರಗುತ್ತಿರುವುದಕ್ಕೆ ಕಾರಣವೇನು, ಸಾಗರ ಜೀವವಿಜ್ಞಾನದ ಮೇಲೆ ಆಗುತ್ತಿರುವ ಪರಿಣಾಮಗಳೇನು ಎನ್ನುವುದರ ಬಗ್ಗೆ ಆಯಾ ಕ್ಷೇತ್ರದ ವಿಜ್ಞಾನಿಗಳು ಬಂದು ಅಧ್ಯಯನ ನಡೆಸುತ್ತಾರೆ.

ಕುಸಿಯುತ್ತಿದೆ ಪ್ರಯೋಗಾಲಯದ ಸ್ಥಳ!:

‘ನಾನು ಇಲ್ಲಿಗೆ (ಹಿಮಾದ್ರಿ) ಬಂದಾಗ ಗಮನಿಸಿದ ಪ್ರಮುಖ ಅಂಶ ಅಂದರೆ ಪರ್ಮಾಫ್ರಾಸ್ಟ್ ಕರಗುವಿಕೆ. ಆ ಜಾಗದಲ್ಲಿ ನೆಲದಿಂದ ಒಂದೂವರೆಯಿಂದ ಎರಡು ಮೀಟರ್ ಒಳಗೆ ಹೋದರೆ ಹಿಮದ ದೊಡ್ಡ ಪದರವೇ ಇದೆ. ಅದು ಒಂದು ರೀತಿಯಲ್ಲಿ ಕಾಂಕ್ರೀಟ್‌ನಂತೆ ಇರುತ್ತದೆ. ಈ ಪದರದ ಮೇಲ್ಭಾಗ, ಸಕ್ರಿಯ ಪದರ ಬೇಸಿಗೆಯಲ್ಲಿ ಕರಗಬೇಕು, ಚಳಿಗಾಲದಲ್ಲಿ ಗಟ್ಟಿಯಾಗಬೇಕು. ಆದರೆ, ಚಳಿಗಾಲದಲ್ಲಿಯೂ ಈ ಹಿಮಪದರ ಎಷ್ಟು ಕರಗುತ್ತಿದೆ ಎಂದರೆ, ನಮ್ಮ ಹಿಮಾದ್ರಿ ಸ್ಟೇಷನ್‌ನಿಂದ ಸುಮಾರು 1.25 ಕಿಲೊಮೀಟರ್ ದೂರ ಇರುವ ಗ್ರುವೆಬಾಡೆಟ್ ಪ್ರಯೋಗಾಲಯದ ಕೆಳಗಿರುವ ಭೂಮಿಯು ಮೊದಲು ಇದ್ದುದಕ್ಕಿಂತ ಈಗ ಒಂದೂವರೆ ಅಡಿಯಷ್ಟು ಕೆಳಗೆ ಕುಸಿದಿರುವುದನ್ನು ಗಮನಿಸಬಹುದು’ ಎಂದು ಅವರು ಆತಂಕ ವ್ಯಕ್ತಪಡಿಸಿದರು.

ಅಕಾಲಿಕವಾಗಿ ಮಳೆ ಸುರಿಯುವುದು, ಕೆಲವೊಮ್ಮೆ ಮಳೆಯೇ ಬಾರದಿರುವುದಕ್ಕೆ ಆರ್ಕ್ಟಿಕ್‌ನಲ್ಲಿ ಆಗುತ್ತಿರುವ ಇಂತಹ ಬದಲಾವಣೆಗಳು ಕಾರಣವಿರಬಹುದು. ಹೀಗೆ, ಮಾನ್ಸೂನ್ ಮೇಲಿನ ಇಂತಹ ಪರಿಣಾಮಗಳು ದೇಶದ ಆರ್ಥಿಕತೆಯ ಮೇಲೆಯೂ ಪರಿಣಾಮ ಬೀರುತ್ತವೆ. ಈ ಕಾರಣಕ್ಕೆ ಆರ್ಕ್ಟಿಕ್‌ನ ಅಧ್ಯಯನಕ್ಕೆ ಪ್ರಮುಖ ದೇಶಗಳು ಮಹತ್ವ ನೀಡುತ್ತಿವೆ.

ಸವಾಲು ಎಸೆಯುವ ಗಡಾಯಿಕಲ್ಲು

ಅಬ್ದುಲ್ ರಹಿಮಾನ್

ಚಾರಣ

ಇತ್ತೀಚಿನ ದಿನಗಳಲ್ಲಿ ಅದ್ಭುತ ಅನುಭವ ನೀಡಿದ್ದು ಅಚಾನಕ್ಕಾಗಿ ಆಯೋಜನೆಗೊಂಡ ಗಡಾಯಿಕಲ್ಲು ಚಾರಣ. ನಮ್ಮ ಮನೆಯ ಸಮೀಪ ಇರುವ, ದೂರದಿಂದ ದೊಡ್ಡ ಆನೆಯೊಂದು ಮೈಚೆಲ್ಲಿ ಮಲಗಿದಂತೆ ಕಾಣುವ ಈ ಕೋಟೆ ಸಣ್ಣ ಚಾರಣಕ್ಕೆ ಸೂಕ್ತ ಸ್ಥಳ. ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ತಾಲ್ಲೂಕಿನ ನಡ ಎನ್ನುವ ಗ್ರಾಮದಲ್ಲಿ ಈ ಕೋಟೆ ಇದೆ. ಕಲ್ಲನ್ನು ಕೊರೆದು ಕೋಟೆಯನ್ನಾಗಿ ಮಾಡಿದ್ದರಿಂದ ಇದನ್ನು ತುಳುವರು 'ಗಡಾಯಿಕಲ್' ಎಂದು ಕರೆಯುತ್ತಾರೆ. ಇದಕ್ಕೆ ಜಮಲಾಬಾದ್, ನರಸಿಂಹಗಡ ಎನ್ನುವ ಹೆಸರೂ ಇದೆ. ಸಮುದ್ರ ಮಟ್ಟದಿಂದ 1,788 ಅಡಿ ಎತ್ತರದಲ್ಲಿರುವ ಈ ಕೋಟೆಯ ತುದಿ ತಲುಪಬೇಕಾದರೆ ಸುಮಾರು 2,800ಕ್ಕೂ ಅಧಿಕ ಮೆಟ್ಟಿಲುಗಳನ್ನು ಏರಬೇಕು. ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ ಇದನ್ನು 'ಸಂರಕ್ಷಿತ ಸ್ಮಾರಕ' ಎಂದು ಘೋಷಿಸಿದೆ. ಕುದುರೆಮುಖ ರಾಷ್ಟ್ರೀಯ ಉದ್ಯಾನದ ವ್ಯಾಪ್ತಿಗೆ ಬರುವುದರಿಂದ ಇಲ್ಲಿಗೆ ಪ್ರವೇಶಕ್ಕೆ ಅನುಮತಿ ಕಡ್ಡಾಯ.

ಈ ಚಾರಣ ನಿಗದಿಯಾಗಿದ್ದೇ ಹಿಂದಿನ ರಾತ್ರಿ. ಮರುದಿನ ಬೆಳಿಗ್ಗೆ 10 ಗಂಟೆಯ ಹೊತ್ತಿಗೆಲ್ಲಾ ಐದು ಮಂದಿಯ ತಂಡ ಕೋಟೆಯ ಬುಡದಲ್ಲಿತ್ತು. ಅಂದು ಕರಾವಳಿಯಲ್ಲಿ ಸೂರ್ಯನ ನೋಟ ಅಷ್ಟೊಂದು ಪ್ರಖರವಾಗಿರಲಿಲ್ಲ. ಅಲ್ಲಿರುವ ಅರಣ್ಯ ಇಲಾಖೆಯ ಚೆಕ್‌ಪೋಸ್ಟ್‌ನಲ್ಲಿ ಟಿಕೆಟ್ ಖರೀದಿಸಿ ಮೆಟ್ಟಿಲುಗಳನ್ನು ಏರುವ ಸಾಹಸ ಆರಂಭವಾಯಿತು. ಆರಂಭದಲ್ಲಿ ಕಲ್ಲುಗಳನ್ನು ಇಟ್ಟು ನಿರ್ಮಾಣ ಮಾಡಲಾಗಿರುವ ದೊಡ್ಡ ದೊಡ್ಡ ಮೆಟ್ಟಿಲುಗಳನ್ನು ಏರಬೇಕು. ಕೆಲವೇ ಮೆಟ್ಟಿಲುಗಳನ್ನು ದಾಟುವಷ್ಟರಲ್ಲಿ ನನ್ನನ್ನು ಸೇರಿಸಿ ಮೂರು ಮಂದಿ ಸುಸ್ತಾಗಿ ಕುಳಿತುಬಿಟ್ಟೆವು. ಅಷ್ಟೊತ್ತಿಗಾಗಲೇ ಕೋಟೆಯ ತುದಿವರೆಗೂ ಹೋಗಿ, ಇನ್ನು ಕೆಲವರು ಸುಸ್ತಾಗಿ ಅರ್ಧದಾರಿಯಿಂದಲೇ ವಾಪಸ್ ಬರುತ್ತಿದ್ದರು.

'ಇದು ಆರಂಭವಷ್ಟೇ.. ಇನ್ನೂ ಎರಡೂವರೆ ಸಾವಿರ ಮೆಟ್ಟಿಲು ಬಾಕಿ ಇದೆ. ಇಲ್ಲೇ ಕುಳಿತರೇ ಹೇಗೆ? ಸುಲಭವಾಗಿ ಏರಬಹುದು' ಎಂದು ಕೋಟೆಯನ್ನು ಹತ್ತಿ ವಾಪಸ್ ಬರುತ್ತಿದ್ದ ಹಿರಿಯ ವ್ಯಕ್ತಿಯೊಬ್ಬರ ಮಾತು ನಮಗೆ ಶಕ್ತಿ ತುಂಬಿತು. ಮತ್ತೆ ಮುಂದುವರಿದೆವು. ಇಳಿಯುತ್ತಿದ್ದವರಲ್ಲಿ ನಮ್ಮದು ಒಂದೇ ಪ್ರಶ್ನೆ, 'ಇನ್ನೆಷ್ಟು ಉಂಟು?'. ಒಬ್ಬೊಬ್ಬರದ್ದು ತರಹೇವಾರಿ ಉತ್ತರ. 15 ವರ್ಷದ ಹಿಂದೊಮ್ಮೆ ಇದೇ ಕಲ್ಲನ್ನು ಹತ್ತಿದ್ದೆಯಾದರೂ, ನನಗೆ ನೆನಪು ಅಸ್ಪಷ್ಟವಾಗಿತ್ತು. ಬದಲಾವಣೆಗಳೂ ಸಾಕಷ್ಟಾಗಿದ್ದವು. ಮೆಟ್ಟಿಲುಗಳಲ್ಲಿ ಕುಳಿತುಕೊಳ್ಳುತ್ತಾ, ಬಂಡೆ ಸಿಕ್ಕಲ್ಲೆಲ್ಲಾ ಮೈ ಒಡ್ಡುತ್ತಾ, ನಮ್ಮ ಏರುವ ಸಾಹಸ ಮುಂದುವರಿದಿತ್ತು.

ಗಂಟೆಯ ಹಾದಿ ಕ್ರಮಿಸಿದ ಬಳಿಕ ವಿಶಾಲ ಬಯಲಿನಂತಹ ಪ್ರದೇಶ ಸಿಕ್ಕಿತು. ಅಲ್ಲಿ ಮೆಟ್ಟಿಲುಗಳು ಇದ್ದವು ಎನ್ನುವ ಕುರುಹುಗಳಷ್ಟೇ ಕಾಣಬಹುದು. ಹಸಿರ ಹೊದಿಕೆ ಹಾಗೂ ಆಕರ್ಷಕ ಮರಗಳು ಇರುವುದರಿಂದ ಅದು ಫೋಟೊಗ್ರಫಿ ತಾಣವಾಗಿ ಮಾರ್ಪಾಡಾಗಿತ್ತು. ಪೂರ್ತಿ ಚಾರಣ ಮುಗಿಸಿ ಬರುತ್ತಿರುವವರ 'ಇನ್ನೊಂದು ಅರ್ಧಗಂಟೆ ಅಷ್ಟೇ.. ಮುಕ್ಕಾಲು ಗಂಟೆ ಅಷ್ಟೇ' ಎನ್ನುವ ಮಾತು ನಮ್ಮನ್ನು ಬಡಿದೆಬ್ಬಿಸುತ್ತಿತ್ತು. ನಡು ನಡುವೆ ಫೋಟೊಗೆ ಕ್ಯಾಮೆರಾ ಎದುರು ನಿಂತಾಗ ಸುಸ್ತೆಲ್ಲಾ ಮಾಯವಾದಂತೆ ನಟಿಸಿ, ಅನಿವಾರ್ಯ ನಗು ಚೆಲ್ಲಿ ನೆನಪುಗಳನ್ನು ಮೊಬೈಲಿನಲ್ಲಿ ಹಿಡಿದಿಡುವ ಪ್ರಯತ್ನ ನಡೆದೇ ಇತ್ತು.

ಚಪ್ಪಲಿ, ಜೀನ್ಸ್ ಪ್ಯಾಂಟ್ ಧರಿಸಿ ಬಂದಿದ್ದವರ ಪಡಿಪಾಟಲು ನಮಗೆ ರಸದೌತಣ. ಮೇಲೆ ಬರಲೊಲ್ಲದವನನ್ನು, ತಂಡದ ಇತರ ಸದಸ್ಯರು ಒತ್ತಾಯಿಸಿ, ಪ್ರೇರೇಪಿಸುವ ದೃಶ್ಯಗಳು, ಫೋಟೊಗಾಗಿ ಮಾಡುವ ಸಾಹಸಗಳು, ಕೈಯಲ್ಲಿ ನಾಲ್ಕೈದು ನೀರಿನ ಬಾಟಲಿಗಳನ್ನು ಹಿಡಿದುಕೊಂಡು, ತಂಡದ ಇತರ ಸದಸ್ಯರಿಗೆ ಹಿಡಿಶಾಪ ಹಾಕುತ್ತಿದ್ದ ವ್ಯಕ್ತಿ, ತಂಡದಿಂದ ಬೇರೆಯಾಗಿ ಒಬ್ಬಂಟಿಯಾಗಿದ್ದವನ ವ್ಯಥೆ, ಯಾವುದೇ ತಯಾರಿ ಇಲ್ಲದೇ ಬಂದು ಸೊರಗಿರುವವರ ಯಾತನೆಗಳು, ನಮಗೆ ತಮಾಷೆಯ ವಸ್ತುಗಳಾಗಿದ್ದವು.

ಕೋಟೆಯ ಮುಕ್ಕಾಲು ಭಾಗ ಏರಿದ ಬಳಿಕ ಕಮಾನು ಗೋಚರಿಸುತ್ತದೆ. ಶಿಥಿಲಾವಸ್ಥೆಯಲ್ಲಿರುವ ಅದರಲ್ಲಿ, ಎಲ್ಲಾ ಪ್ರವಾಸ ತಾಣಗಳಲ್ಲಿ ಇರುವಂತೆ ಪ್ರೇಮಿಗಳು ತಮ್ಮ ಹೆಸರು ಕೆತ್ತಿಟ್ಟಿದ್ದಾರೆ! ಪ್ಲಾಸ್ಟಿಕ್ ತ್ಯಾಜ್ಯಗಳೂ ಬಿದ್ದಿವೆ. ಇದಾಗಿ ಮುಂದೆ ಹೋದರೆ ಕೋಟೆ ಕೆಳಭಾಗಕ್ಕೆ ಗುರಿಯಾಗಿಟ್ಟುಕೊಂಡಿರುವ ಫಿರಂಗಿ ಕಾಣಿಸುತ್ತದೆ. ಟಿಪ್ಪು ಸುಲ್ತಾನನ ಕಾಲದ ಫಿರಂಗಿ ಅದು.

ಅದಾದ ಬಳಿಕ ಬಂಡೆಯನ್ನು ಕೊರೆದು ನಿರ್ಮಿಸಲಾಗಿರುವ ಸುಸಜ್ಜಿತ ಮೆಟ್ಟಲುಗಳಿವೆ. ಬಂಡೆಗಳ ನಡುವಿನಿಂದ ಬರುವ ನೀರು ಮೆಟ್ಟಿಲ ಮೇಲೆ ಇಳಿದು ಹೋಗುವುದರಿಂದ ಅಲ್ಲಿ ಪಾಚಿಗಟ್ಟಿದೆ. ಸುಮಾರು ಎರಡೂವರೆ ಗಂಟೆ ಬಳಿಕ ಕೋಟೆಯ ತುದಿ ತಲುಪಿದೆವು. ಅಲ್ಲಿ ಟಿಪ್ಪು ನಿರ್ಮಿಸಿದ ಶಸ್ತ್ರಾಸ್ತ್ರಗಳ ಕೋಠಿ ಇದೆ. ಅದೂ ಭಾಗಶಃ ಧ್ವಂಸವಾಗಿದೆ. ಅಲ್ಲಿ ಎಂದೂ ಬತ್ತದ ಕೊಳ ಇದೆ.

ಅಂದಹಾಗೆ ಈ ಕೋಟೆ ಕಟ್ಟಿಸಿದ್ದು ಬಂಗವಾಡಿಯ (ಈಗಿನ ಬಂಗಾಡಿ) ಬಂಗ ಅರಸರು. ಬಂಗ ಮನೆತನದ ಮೊದಲ ಅರಸನಾಗಿದ್ದ ವೀರ ನರಸಿಂಹ ಬಂಗ ಕ್ರಿ.ಶ 1157ರಲ್ಲಿ ತನ್ನ ಪ್ರಾಂತ್ಯದ ರಕ್ಷಣೆಗಾಗಿ ಈ ಕೋಟೆಯನ್ನು ಕಟ್ಟಿಸಿದ್ದ. ಬಂಗವಾಡಿಯ ಸಮೀಪವೇ ಇದ್ದ ಈ ಬೃಹತ್ ಗುಡ್ಡವನ್ನೇ ಕೋಟೆಯನ್ನಾಗಿ ಪರಿವರ್ತಿಸಿದ. ಬಳಿಕ ಅದಕ್ಕೆ ತನ್ನ ಹೆಸರನ್ನೇ ಇಟ್ಟ. ಹೀಗಾಗಿ ಇದಕ್ಕೆ ನರಸಿಂಹಗಡ ಎನ್ನುವ ಹೆಸರಿದೆ. 1794ರಲ್ಲಿ ಈ ಕೋಟೆ ಟಿಪ್ಪು ಸುಲ್ತಾನ್ ವಶವಾಗುತ್ತದೆ. ಅಲ್ಲಿರುವ ಕಮಾನು, ಕೋಠಿ ಎಲ್ಲವೂ ಟಿಪ್ಪು ಕಾಲದ್ದೇ. ಟಿಪ್ಪು ತನ್ನ ತಾಯಿಯ ನೆನಪಿಗಾಗಿ 'ಜಮಲಾಬಾದ್' ಎಂದು ನಾಮಕರಣ ಮಾಡುತ್ತಾನೆ. ನರಸಿಂಹಗಡ, ಜಮಲಾಬಾದ್ ಎನ್ನುವ ಹೆಸರುಗಳಿದ್ದರೂ, ಸ್ಥಳೀಯರಿಗೆ ಇದು ಗಡಾಯಿಕಲ್ಲು.

ಕೋಟೆ ಮೇಲೆ ಬೀಸುವ ತಣ್ಣನೆ ಗಾಳಿ ಚಾರಣದ ಎಲ್ಲಾ ದಣಿವು ನಿವಾರಿಸುತ್ತದೆ. ಅಲ್ಲಿಂದ ಕಾಣುವ ನಯನ ಮನೋಹರ ದೃಶ್ಯ ವಿಭಿನ್ನ. ಮೇಲೆ ಅರ್ಧಗಂಟೆ ಕಳೆದರೆ ಪ್ರಕೃತಿಯೇ ನಿಮ್ಮನ್ನು ಸಂತೈಸಿದಂತಾಗಿ ಮನಸ್ಸು ಹಗುರಾಗುತ್ತದೆ. ಕೋಟೆಯನ್ನು ಇಳಿಯುವುದು ಇನ್ನೊಂದು ಬಗೆಯ ಖುಷಿ.

ದೂರದಿಂದ ಮಲಗಿರುವ ಆನೆಯಂತೆ ಕಾಣುವ ಗಡಾಯಿಕಲ್ಲು...



ಕಲ್ಲನ್ನೇ ಕಡಿದು ಮಾಡಿರುವ ಮೆಟ್ಟಿಲುಗಳು



ಆಕಾಶದೆತ್ತರದಿಂದ ಕಾಣುವ ಭುವಿಯ ಸೌಂದರ್ಯ



ಗಡಾಯಿಕಲ್ಲಿನ ಮೇಲ್ಭಾಗದಿಂದ ಕಾಣುವ ನೋಟ

ಗಡಾಯಿಕಲ್ಲಿನ ಮೇಲೆ ಇರುವ ಫಿರಂಗಿ

ತಲುಪುವುದು ಹೇಗೆ?

ಬೆಳ್ತಂಗಡಿ ತಾಲ್ಲೂಕು ಕೇಂದ್ರದಿಂದ ಒಂದು ಕಿ.ಮೀ ದೂರದಲ್ಲಿರುವ ಲಾಯಿಲಾ ಎಂಬಲ್ಲಿಂದ ಕಿಲ್ಲೂರು ಮಾರ್ಗದಲ್ಲಿ 5 ಕಿ.ಮೀ ಸಾಗಿದರೆ ಮಂಜೊಟ್ಟಿ ಎನ್ನುವ ಊರು ಸಿಗುತ್ತದೆ. ಅಲ್ಲಿಂದ 3 ಕಿ.ಮೀ ಹಾದಿ ಕ್ರಮಿಸಿದರೆ ಕೋಟೆಯ ಬುಡಕ್ಕೆ ತಲುಪಬಹುದು. ಮಂಜೊಟ್ಟಿವರೆಗೂ ಬಸ್ ಸೌಕರ್ಯ ಇದೆ. ಬಳಿಕ ಆಟೊ ಹಿಡಿದು ಸಾಗಬೇಕು. ಸ್ವಂತ ಗಾಡಿಗಳಲ್ಲಿ ಬಂದವರಿಗೆ ಕೋಟೆಯ ಸಮೀಪ ಪಾರ್ಕಿಂಗ್ ವ್ಯವಸ್ಥೆ ಇದೆ. ಮಂಗಳೂರು ಜಿಲ್ಲಾ ಕೇಂದ್ರದಿಂದ 2 ಗಂಟೆಯ ದಾರಿ. ಗೂಗಲ್ ಮ್ಯಾಪ್ ಬಳಿ ಕೇಳಿದರೆ, ಗಡಾಯಿಕಲ್ಲಿನ ಬುಡದ ಸಮೀಪಕ್ಕೇ ನಿಮ್ಮನ್ನು ಕರೆದುಕೊಂಡು ಹೋಗಿ ನಿಲ್ಲಿಸುತ್ತದೆ.

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಡಣ್ಣ ಚಕ್ಕು ಕೀಲ್ರುಸ್ಸು ಕಥೆಯ — ನಲ್ಲಿಯಲ್ಲಿ ಮೀನು!

• ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು



ಮೋಜಿನ ENGLISH

ಇಲ್ಲಿ ಕೊಟ್ಟಿರುವ 'A', 'E' ಎಂಬ ಎರಡಕ್ಷರ ಸ್ವರಗಳಿಗೆ ವ್ಯಂಜನ ಪಟ್ಟಿಯಿಂದ ಎರಡಕ್ಷರ ಆಯ್ದು ತುಂಬಿ ನಾಲ್ಕಕ್ಷರದ ಅರ್ಥಬದ್ಧ ಪದರಚಿಸಿ.

G	B	T	K
T	D	R	L
C	L	L	T
T	M	T	K
L	M	R	T

	A		E
	A		E
	A		E
	A		E
	A		E
	A		E
	A		E
	A		E
	A		E
	A		E

ಗಣಿತದಲ್ಲಿ ಗರ್ದಿಗಮ್ಮತ್ತು

ಗುಣವಿಶೇಷ ಗುಣಾಕಾರಗಳು

ಇಲ್ಲಿ ಕೊಟ್ಟಿರುವ ಗುಣಾಕಾರಗಳಲ್ಲಿ ಒಂದರಿಂದ ಒಂಬತ್ತು ಅಂಕಿಗಳು ಒಮ್ಮೆ ಮಾತ್ರ ಬಂದಿದ್ದು, ಎಲ್ಲವಕ್ಕೂ ಪ್ರಾತಿನಿಧ್ಯ ಕೊಟ್ಟಂತಿದೆ.

1. 138X42=5796
2. 12X483=5796
3. 18X297=5346
4. 39X186=7254
5. 48X159=7632
6. 27X198=5346
7. 28X157=4396
8. 4X1738=6952
9. 4X1963=7852

ಜಾಣಪದ ಆಟ

ಇಲ್ಲಿ ಕೊಟ್ಟಿರುವ ಎರಡಕ್ಷರದ ಪದಗಳಿಗೆ ಅಕ್ಷರ ಪಟ್ಟಿಯಿಂದ ಸೂಕ್ತವಾದ ಎರಡು ಅಕ್ಷರಗಳನ್ನು ಆಯ್ದು ತುಂಬಿ ನಾಲ್ಕಕ್ಷರದ ಪದ ರಚಿಸಿ.

ಆ	ಅ	ನಿ	ತ್ತು
ಣಿ	ಣ	ದ	ಡ
ಅ	ರ	ತ	ತಿ
ಥ	ಣ	ವಿ	ರಿ
ನ	ಜ	ಕ	ಪ್ರ

	ಲಂ	ಕಾ	
	ಶ	ರ	
	ಕಾ	ಯಿ	
	ಮಂ	ತ್ರ	
	ಕ	ಸ	
	ನ	ವ	
	ಕ	ರ	
	ಸ	ರ	
	ವ	ನ	
	ವಾ	ರ	

ಕರ್ನಾಟಕ ಕ್ವಿಜ್

1. ಕರ್ನಾಟಕದಲ್ಲಿ ಮೊತ್ತಮೊದಲಿಗೆ ಕಬ್ಬಿಣ ಅದಿರು ತೆಗೆದ ಸ್ಥಳ ಯಾವುದು?
2. ಕರ್ನಾಟಕದ ಯಾವ ಜಿಲ್ಲೆಯಲ್ಲಿ ಅಡಿಕೆಯನ್ನು ಹೆಚ್ಚಾಗಿ ಬೆಳೆಯಲಾಗುತ್ತದೆ?
3. ಕರ್ನಾಟಕದ ಅತಿ ಉದ್ದವಾದ ನದಿ ಯಾವುದು?
4. ಕರ್ನಾಟಕ ರತ್ನ ಪ್ರಶಸ್ತಿ ಪಡೆದ ಮೊದಲಿಗರಾರು?
5. ಕವಿ ಸರ್ವಜ್ಞರ ಹುಟ್ಟಿದ ಊರು ಯಾವುದು?

ಟು ಇನ್ ಒನ್ ಪದಬೆಸುಗೆ

ಇಲ್ಲಿ ಕೊಟ್ಟಿರುವ ಪದಗಳಿಗೆ ಅಕ್ಷರ ಪಟ್ಟಿಯಿಂದ ಸೂಕ್ತವಾದ ಎರಡು ಅಕ್ಷರಗಳನ್ನು ಆಯ್ದು ಪದದ ಆರಂಭಕ್ಕೆ ಹಾಗೂ ಕೊನೆಗೆ ಒಂದೊಂದು ಅಕ್ಷರ ತುಂಬಿದರೆ ಆರಂಭಕ್ಕೆ ಮೂರು ಅಕ್ಷರದ ಒಂದು ಪದ ಹಾಗೂ ಕೊಟ್ಟಿರುವ ಪದದಿಂದ ಮತ್ತೊಂದು ಅಂತ್ಯ ಪದವಾಗುವುದು.

ಸಿಲು | ಸವಿ | ದರ

ರಾಗಿ | ಬಳ | ಹರಾ

ಅಕ್ಷರ ಪಟ್ಟಿ

ಸ	ಸಿಂ	ಟಿ	ಣಿ	ಗ	ಜು
ಲು	ಇ	ಬೈ	ಉ	ತಾ	ಕು

ಸರಿ ಉತ್ತರ ಮುಂದಿನ ವಾರ...

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಬೆಸುಗೆ: 1.ಭೂಕಂಪನ 2.ಅಗಲಭೆ 3.ರಮಣಕ 4.ತಾಮಸಣ 5.ಸಂಗತಿಸು 6.ಭೂಪಾಲಕ

ಜಾಣಪದ ಆಟ: 1.ಕಪಟ 2.ಕೋರಿಕೆ 3.ಕಮಲ 4.ಕೊಳಲು 5.ಕಬೀರ 6.ಉರುಳು 7.ಕವಲು 8.ನಕುಲ 9.ಹಸುಳೆ 10.ಅಮರ 11.ರಗಳೆ 12.ಹುಳುಕು

ಮೋಜಿನ ಇಂಗ್ಲಿಷ್: 1.PUBLIC 2.DEVID 3.BREAD 4.BATCH 5.LALABAG 6.BOMBAY 7.BASIC 8.MUSIC 9.BRAND 10.MAKE

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು

ರಕ್ಷಾ ಹುಬ್ಬಳ್ಳಿ
ನರಗುಂದ

ವಿದ್ಯಾ ಗಿರಡ್ಡಿ
ಧಾರವಾಡ

ಹರ್ಷವರ್ಧನ್ ಕೆ.ಎಂ.
ದಾವಣಗೆರೆ

ವಚನಶ್ರೀ ಸಂತೋಷ ಹೂಗಾರ, ಕಲಬುರಗಿ

ಕೆ.ಎ. ಚೈತನ್ಯ ಕುಮಾರ್
ಬೆಂಗಳೂರು

ವೇದಾ ರೇವಣ್ಣವರ
ವಿಜಯಪುರ

ಟೆಸ್ಟ್: ಆತಿಥೇಯ ತಂಡಕ್ಕೆ ಮೊದಲ ಇನಿಂಗ್ಸ್ ಮುನ್ನಡೆ • ಭಾರತದ ವೇಗಿಯ ಅರ್ಭಟ

ಜೈಸ್ವಾಲ್ 'ಡಬಲ್', ಬೂಮ್ರಾ 'ಸಿಕ್ಸರ್'

ಪ್ರಜಾವಾಣಿ ವಾರ್ತೆ

ಭಾರತದ ಯಶಸ್ವಿ ಜೈಸ್ವಾಲ್ ಬ್ಯಾಟಿಂಗ್ –ಎಎಫ್‌ಪಿ ಚಿತ್ರ

ವಿಶಾಖಪಟ್ಟಣ: ಒಂದು ಕಡೆ ಯಶಸ್ವಿ ಜೈಸ್ವಾಲ್ ದ್ವಿಶತಕದ ಭರಾಟೆ, ಮತ್ತೊಂದೆಡೆ ಜಸ್‌ಪ್ರೀತ್ ಬೂಮ್ರಾ ವೇಗದ ದಾಳಿಯ ಮುಂದೆ ಇಂಗ್ಲೆಂಡ್ ತಂಡವು ತತ್ತರಿಸಿತು.

ಇಲ್ಲಿ ನಡೆಯುತ್ತಿರುವ ಎರಡನೇ ಟೆಸ್ಟ್ ಪಂದ್ಯದಲ್ಲಿ ಭಾರತ ತಂಡವು ಮೊದಲ ಇನಿಂಗ್ಸ್‌ನಲ್ಲಿ ಗಳಿಸಿದ 396 ರನ್ ಮೊತ್ತಕ್ಕೆ ಪ್ರತ್ಯುತ್ತರ ನೀಡುವ ಹಾದಿಯಲ್ಲಿ ಇಂಗ್ಲೆಂಡ್ ಕುಸಿಯಿತು. ಅರ್ಧಡಜನ್ ವಿಕೆಟ್‌ಗಳನ್ನು ತಮ್ಮ ಬುಟ್ಟಿಗೆ ಹಾಕಿಕೊಂಡ ಬೂಮ್ರಾ ಅವರು ಅತಿಥೇಯ ತಂಡಕ್ಕೆ ಮೊದಲ ಇನಿಂಗ್ಸ್‌ನಲ್ಲಿ 143 ರನ್‌ಗಳ ಮುನ್ನಡೆಯ ಕಾಣಿಕೆ ನೀಡಿದರು. ಪ್ರವಾಸಿ ಬಳಗವು 253 ರನ್‌ಗಳಿಗೆ ಎಲ್ಲ ವಿಕೆಟ್ ಕಳೆದುಕೊಂಡಿತು.

ಎರಡನೇ ದಿನವಾದ ಶನಿವಾರ ಸಂಜೆಯ ಹೊತ್ತಿಗೆ ಮತ್ತೆ ಬ್ಯಾಟಿಂಗ್ ಆರಂಭಿಸಿದ ರೋಹಿತ್ ಬಳಗವು 5 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 28 ರನ್ ಗಳಿಸಿದೆ.

ಮುಖ್ಯಾಂಶಗಳು

- ಮೂರು ವಿಕೆಟ್ ಗಳಿಸಿದ ಸ್ಪಿನ್ನರ್ ಕುಲದೀಪ್ ಯಾದವ್
- ಅರ್ಧಶತಕ ದಾಖಲಿಸಿದ ಇಂಗ್ಲೆಂಡ್‌ನ ಜಾಕ್ ಕ್ರಾಲಿ
- ಅಶ್ವಿನ್‌ಗೆ ಒಲಿಯದ ಒಂದೂ ವಿಕೆಟ್

ಮೊದಲ ದಿನವಾದ ಶುಕ್ರವಾರ 6 ವಿಕೆಟ್‌ಗಳಿಗೆ 336 ರನ್ ಗಳಿಸಿದ್ದ ಭಾರತ ತಂಡವು ಎರಡನೇ ದಿನದಾಟದಲ್ಲಿ 400ರ ಗಡಿ ಮುಟ್ಟಲಿಲ್ಲ. ಆದರೆ 179 ರನ್ ಗಳಿಸಿ ಕ್ರೀಸ್‌ನಲ್ಲಿದ್ದ ಯಶಸ್ವಿ ದ್ವಿಶತಕ (209; 290ಎ) ಪೂರೈಸಿ ಸಂಭ್ರಮಿಸಿದರು. ಒಟ್ಟು 19 ಬೌಂಡರಿ ಮತ್ತು ಏಳು ಸಿಕ್ಸರ್‌ಗಳನ್ನು ಅವರು ಸಿಡಿಸಿದರು.

ಟೆಸ್ಟ್ ಕ್ರಿಕೆಟ್‌ನಲ್ಲಿ ತಮ್ಮ ಎರಡನೇ ಶತಕಕ್ಕೆ ದ್ವಿಶತಕದ ರಂಗು ತುಂಬಿದರು. ಲಯಬದ್ಧ ಪಾದಚಲನೆ, ಸುಂದರ ಡ್ರೈವ್‌ಗಳ ಆಟದ ಮೂಲಕ ದಿಗ್ಗಜ ಕ್ರಿಕೆಟಿಗರಿಂದ ಮೆಚ್ಚುಗೆ ಗಳಿಸಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ಅವರ ಆಟಕ್ಕೆ ಶ್ಲಾಘನೆಗಳು ಅಪಾರ ಸಂಖ್ಯೆಯಲ್ಲಿ ಹರಿದು ಬರುತ್ತಿವೆ. ಇಂಗ್ಲೆಂಡ್ ತಂಡದ ಮೂವರು ಸ್ಪಿನ್ನರ್‌ಗಳು ಸೇರಿ ಏಳು ವಿಕೆಟ್ ಗಳಿಸಿದರು. ವೇಗಿ ಆ್ಯಂಡರ್ಸನ್ ಮೂರು ವಿಕೆಟ್ ಗಳಿಸಿದರು.

ಬೂಮ್ರಾ ಬಿರುಗಾಳಿ: ಸ್ಪಿನ್ನರ್‌ಗಳಿಗೆ ನೆರವಾಗುವಂತೆ ಕಾಣುತ್ತಿದ್ದ ಪಿಚ್‌ನಲ್ಲಿ ವೇಗಿ ಜಸ್‌ಪ್ರೀತ್ ಬೂಮ್ರಾ ವಿಜೃಂಭಿಸಿದರು. ಭಾರತದ ಸ್ಪಿನ್ನರ್‌ಗಳಾದ ಅಕ್ಷರ್ ಪಟೇಲ್ ಮತ್ತು ಕುಲದೀಪ್ ಯಾದವ್ ಅವರು ಜಾಕ್ ಕ್ರಾಲಿ ಮತ್ತು ಬೆನ್ ಡಕೆಟ್ ವಿಕೆಟ್‌ಗಳನ್ನು ಗಳಿಸಿ ಮೊದಲ ವಿಕೆಟ್ ಜೊತೆಯಾಟಕ್ಕೆ ತೆರೆ ಎಳೆದರು. ಕ್ರಾಲಿ (76 ರನ್) ಮತ್ತು ಬೆನ್ ಡಕೆಟ್ ಅವರು ಮೊದಲ ವಿಕೆಟ್‌ಗೆ 59 ರನ್ ಸೇರಿಸಿ ಉತ್ತಮ ಆರಂಭ ನೀಡಿದರು.

ಇದರ ನಂತರ ಬೂಮ್ರಾ ದಾಳಿ ರಂಗೇರಿತು. ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳನ್ನು ಕಾಡಿದರು. ಕಳೆದ ಪಂದ್ಯದಲ್ಲಿ ಶತಕ ಬಾರಿಸಿದ್ದ ಓಲಿ ಪೋಪ್, ಅನುಭವಿ ಜೋ ರೂಟ್, ಜಾನಿ ಬೆಸ್ಟೊ, ನಾಯಕ ಬೆನ್ ಸ್ಟೋಕ್ಸ್ (47; 54ಎ) ಮತ್ತು ಟಾಮ್ ಹಾರ್ಟ್ಲಿ ವಿಕೆಟ್‌ಗಳನ್ನು ತಮ್ಮ ಬುಟ್ಟಿಗೆ ಹಾಕಿಕೊಂಡರು.

'ವಿಕೆಟ್ ಟು ವಿಕೆಟ್' ಬೌಲಿಂಗ್ ಮಾಡಿದ ಅವರ ಎಸೆತಗಳನ್ನು ಎದುರಿಸುವಲ್ಲಿ ಬ್ಯಾಟರ್‌ಗಳು ಎಡವಿದರು. ಸ್ಟೋಕ್ಸ್ ಮಾತ್ರ ಸ್ವಲ್ಪ ವಿಶ್ವಾಸಭರಿತ ಆಟವಾಡಿದರು.

ಅರ್ಧಶತಕದ ಸನಿಹ ಸಾಗಿದ್ದ ಅವರೂ ಬೂಮ್ರಾ ಎಸೆತಕ್ಕೆ ಕ್ಲೀನ್‌ಬೌಲ್ಡ್ ಆದರು.

ಜಸ್‌ಪ್ರೀತ್ ಬೂಮ್ರಾ ಅವರನ್ನು ಅಭಿನಂದಿಸಿದ ಸಹ ಆಟಗಾರರು –ಎಎಫ್‌ಪಿ ಚಿತ್ರ

'ಯಶಸ್ವಿ ಸಾಧನೆ, ಬೇಡ ಅತಿರಂಜನೆ'

ಯುವ ಆಟಗಾರ ಯಶಸ್ವಿ ಜೈಸ್ವಾಲ್ ಅವರು ಉತ್ತಮವಾಗಿ ಆಡುತ್ತಿದ್ದಾರೆ. ಅವರನ್ನು ಆಡಲು ಬಿಡಿ. ಈಗ ಅವರು ಮಾಡುತ್ತಿರುವ ಸಾಧನೆಗಳನ್ನು ಅತಿರಂಜಿತಗೊಳಿಸಬಾರದು ಎಂದು ವೀಕ್ಷಕ ವಿವರಣೆಗಾರ ಗೌತಮ್ ಗಂಭೀರ್ ಹೇಳಿದ್ದಾರೆ.

'ಯಶಸ್ವಿ ಅವರ ಸಾಧನೆಗೆ ಅಭಿನಂದನೆಗಳು. ಅವರ ಆಮೋಘವಾಗಿತ್ತು. ಆದರೆ ಯಾರಾದರೂ ಇಂತಹ ಸಾಧನೆ ಮಾಡಿದಾಗ ಅವರನ್ನು ಹೊಗಳಿ ಅಟ್ಟಕ್ಕೇರಿಸಿಬಿಡುವ ಚಾಳಿ ನಮ್ಮಲ್ಲಿದೆ. ಅದು ಸಲ್ಲದು. ಇದರಿಂದ ಆಟಗಾರನ ಮೇಲೆ ಒತ್ತಡ ಹೆಚ್ಚಬಹುದು. ಸಾಮರ್ಥ್ಯ ಕುಗ್ಗಬಹುದು. ಆದ್ದರಿಂದ ಯಶಸ್ವಿ ತನ್ನ ನೈಜ ಸಾಮರ್ಥ್ಯವನ್ನು ಹೊರಹಾಕಲು ಮುಕ್ತ ವಾತಾವರಣ ಇರಬೇಕು. ಅವರ ಸಾಧನೆಗಳನ್ನು ಗೌರವಿಸೋಣ, ಅತಿರಂಜಿತಗೊಳಿಸುವುದು ಬೇಡ' ಎಂದರು.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್

ಭಾರತ: 396 (112 ಓವರುಗಳಲ್ಲಿ) (ಶುಕ್ರವಾರ: 6ಕ್ಕೆ336)

ಯಶಸ್ವಿ ಸಿ ಬೇಸ್ಟೊ ಬಿ ಆ್ಯಂಡರ್ಸನ್ 209 (290ಎ, 4X19, 6X7)
ಅಶ್ವಿನ್ ಸಿ ಫೋಕ್ಸ್ ಬಿ ಆ್ಯಂಡರ್ಸನ್ 20 (37ಎ, 4X4)
ಕುಲದೀಪ್ ಔಟಾಗದೇ 8 (42ಎ)
ಬೂಮ್ರಾ ಸಿ ರೂಟ್ ಬಿ ರೆಹಾನ್ 6 (9ಎ, 4X1)
ಮುಕೇಶ್ ಸಿ ರೂಟ್ ಬಿ ಬಷೀರ್ 0 (3ಎ)

ಇತರೆ: 2 (ಲೆಗ್‌ಬೈ 1, ನೋಬಾಲ್ 1)

ವಿಕೆಟ್ ಪತನ: 7–364 (ರವಿಚಂದ್ರನ್ ಅಶ್ವಿನ್; 100.3), 8–383 (ಯಶಸ್ವಿ ಜೈಸ್ವಾಲ್, 106.5), 9–395 (ಜಸ್‌ಪ್ರೀತ್ ಬುಮ್ರಾ, 110.5), 10–396 (ಮುಕೇಶ್ ಕುಮಾರ್, 111.6).

ಬೌಲಿಂಗ್: ಜೇಮ್ಸ್ ಆ್ಯಂಡರ್ಸನ್ 24–4–47–3, ಜೋ ರೂಟ್ 14–0–71–0, ಟಾಮ್ ಹಾರ್ಟ್ಲಿ 18–2–74–1, ಶೋಯಬ್ ಬಷೀರ್ 38–1–138–3, ರೆಹಾನ್ ಅಹಮದ್ 17–2–65–3

ಇಂಗ್ಲೆಂಡ್: 253 (55.5 ಓವರ್)

ಕ್ರಾಲಿ ಸಿ ಅಯ್ಯರ್ ಬಿ ಪಟೇಲ್ 76 (78ಎ, 4X11, 6X2)
ಡಕೆಟ್ ಸಿ ಪಾಟೀದಾರ್ ಬಿ ಕುಲದೀಪ್ 21 (17ಎ, 4X4)
ಪೋಪ್ ಬಿ ಬೂಮ್ರಾ 23 (55ಎ, 4X2)
ರೂಟ್ ಬಿ ಗಿಲ್ ಬಿ ಬೂಮ್ರಾ 5 (10ಎ, 4x1)
ಬೇಸ್ಟೊ ಬಿ ಗಿಲ್ ಬಿ ಬೂಮ್ರಾ 25 (39ಎ, 4X4)
ಸ್ಟೋಕ್ಸ್ ಬಿ ಬೂಮ್ರಾ 47 (54ಎ, 4X5, 6X1)
ಫೋಕ್ಸ್ ಬಿ ಕುಲದೀಪ್ 6 (10ಎ, 4x1)
ರೆಹಾನ್ ಸಿ ಗಿಲ್ ಬಿ ಕುಲದೀಪ್ 9 (15ಎ, 4x1)
ಹಾರ್ಟ್ಲಿ ಬಿ ಗಿಲ್ ಬಿ ಬೂಮ್ರಾ 21 (24ಎ, 4X2, 6X1)
ಆ್ಯಂಡರ್ಸನ್ ಎಲ್‌ಬಿಡಬ್ಲ್ಯು ಬಿ ಬೂಮ್ರಾ 6 (19ಎ, 4x1)
ಬಷೀರ್ ಔಟಾಗದೇ 8 (15ಎ, 4x1)

ಇತರೆ: 9 (ಬೈ 7, ಲೆಗ್ ಬೈ 1, ನೋಬಾಲ್ 1)

ವಿಕೆಟ್ ಪತನ: 1–59 (ಬೆನ್ ಡಕೆಟ್, 10.2), 2–114 (ಜ್ಯಾಕ್ ಕ್ರಾಲಿ, 22.3), 3–123 (ಜೋ ರೂಟ್, 25.5), 4–136 (ಓಲಿ ಪೋಪ್, 27.5), 5–159 (ಜಾನಿ ಬೇಸ್ಟೊ, 35.4), 6–172 (ಬೆನ್ ಫೋಕ್ಸ್, 38.2), 7–182 (ರೆಹಾನ್ ಅಹ್ಮದ್, 42.3), 8–229 (ಬೆನ್ ಸ್ಟೋಕ್ಸ್, 49.2), 10–253 (ಜೇಮ್ಸ್ ಆ್ಯಂಡರ್ಸನ್ 55.5)

ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 15.5–5–45–6, ಮುಕೇಶ್ ಕುಮಾರ್ 7–1–44–0, ಕುಲದೀಪ್ ಯಾದವ್ 17–1–71–3, ರವಿಚಂದ್ರನ್ ಅಶ್ವಿನ್ 12–0–61–0 , ಅಕ್ಷರ್ ಪಟೇಲ್ 4–0–24–1

ಎರಡನೇ ಇನಿಂಗ್ಸ್:

ಭಾರತ: ವಿಕೆಟ್ ನಷ್ಟವಿಲ್ಲದೇ 28 (5 ಓವರ್)

ಜೈಸ್ವಾಲ್ ಬ್ಯಾಟಿಂಗ್ 15
ರೋಹಿತ್ ಬ್ಯಾಟಿಂಗ್ 13

ಬೌಲಿಂಗ್: ಜೇಮ್ಸ್ ಆ್ಯಂಡರ್ಸನ್ 2–0–6–0; ಶೋಯೆಬ್ ಬಷೀರ್ 2–0–17–0; ರೆಹಾನ್ ಅಹ್ಮದ್ 1–0–5–0

ದ್ವಿಶತಕ: ಮೂರನೇ ಆಟಗಾರ

ಟೆಸ್ಟ್ ಕ್ರಿಕೆಟ್‌ನಲ್ಲಿ ದ್ವಿಶತಕ ಗಳಿಸಿದ ಭಾರತದ ಮೂರನೇ ಅತಿ ಕಿರಿಯ ವಯಸ್ಸಿನ ಆಟಗಾರನೆಂಬ ಹೆಗ್ಗಳಿಕೆಗೆ ಯಶಸ್ವಿ (22 ವರ್ಷ 36 ದಿನ) ಪಾತ್ರರಾದರು. ವಿನೋದ್ ಕಾಂಬ್ಳಿ (21ವರ್ಷ, 32ದಿನ), ಸುನೀಲ್ ಗಾವಸ್ಕರ್ (21 ವರ್ಷ,- 277ದಿನ) ಮೊದಲೆರಡು ಸ್ಥಾನಗಳಲ್ಲಿದ್ದಾರೆ.

ಟೆಸ್ಟ್ ಕ್ರಿಕೆಟ್‌ನಲ್ಲಿ 2008ರ ನಂತರ (ಗೌತಮ್ ಗಂಭೀರ್) ದ್ವಿಶತಕ ದಾಖಲಿಸಿದ ಎರಡನೇ ಎಡಗೈ ಬ್ಯಾಟರ್ ಕೂಡ ಅವರಾಗಿದ್ದಾರೆ. 1993ರಲ್ಲಿ ವಿನೋದ್ ಕಾಂಬ್ಳಿ ದ್ವಿಶತಕ ಗಳಿಸಿದ ಎಡಗೈ ಆಟಗಾರನಾಗಿದ್ದರು.

ಶೇ 50ರಷ್ಟು ರನ್: ಭಾರತ ತಂಡವು ಮೊದಲ ಇನಿಂಗ್ಸ್‌ನಲ್ಲಿ ಗಳಿಸಿದ 396 ರನ್‌ಗಳ ಮೊತ್ತದಲ್ಲಿ ಯಶಸ್ವಿ ಜೈಸ್ವಾಲ್ ಪಾಲು ಶೇ. 50ಕ್ಕಿಂತಲೂ ಹೆಚ್ಚು. ಉಳಿದಂತೆ ಶುಭಮನ್ 34 ಮತ್ತು ರಜತ್ ಪಾಟೀದಾರ್ 32 ರನ್ ಗಳಿಸಿದರು.



ಟೆಸ್ಟ್ ಕ್ರಿಕೆಟ್‌ನಲ್ಲಿ ಡಬಲ್ ಸೆಂಚುರಿ ಬಾರಿಸಿದ ಭಾರತದ 3ನೇ ಯುವ ಕ್ರಿಕೆಟಿಗ।

ಡೆಲ್ಲಿ, ಯೋಧಾಸ್‌ಗೆ ಜಯ

ನವದೆಹಲಿ (ಪಿಟಿಐ): ಪ್ರಮುಖ ರೈಡರ್ ಆಶು ಮಲಿಕ್ ಅವರ 20 ಪಾಯಿಂಟ್ಸ್ ನೆರವಿನಿಂದ ದಬಾಂಗ್ ಡೆಲ್ಲಿ ತಂಡವು, ಪ್ರೊ ಕಬಡ್ಡಿ ಲೀಗ್ ಪಂದ್ಯದಲ್ಲಿ ಪಾಯಿಂಟ್ಸ್ ಪಟ್ಟಿಯ ತಳದಲ್ಲಿರುವ ತೆಲುಗು ಟೈಟನ್ಸ್ ತಂಡವನ್ನು ಶನಿವಾರ 44–33 ಪಾಯಿಂಟ್‌ಗಳಿಂದ ಸೋಲಿಸಿತು.

ತ್ಯಾಗರಾಜ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟೈಟನ್ಸ್ ಪರ ನಾಯಕ ಪವನ್ ಶೆರಾವತ್ 9 ಮತ್ತು ರಾಬಿನ್ ಚೌಧರಿ ಎಂಟು ಪಾಯಿಂಟ್ಸ್ ಗಳಿಸಿದರು.

ಇನ್ನೊಂದು ಪಂದ್ಯದಲ್ಲಿ ಯುಪಿ ಯೋಧಾಸ್ ತಂಡ 39–23 ಪಾಯಿಂಟ್ಸ್‌ಗಳಿಂದ ಯು ಮುಂಬಾ ಮೇಲೆ ಜಯಗಳಿಸಿತು. ಯೋಧಾಸ್ ಪರ ನಾಯಕ ಹಾಗೂ ಪ್ರಮುಖ ರೈಡರ್ ಪ್ರದೀಪ್ ನರ್ವಾಲ್ 12 ಪಾಯಿಂಟ್ಸ್ ಗಳಿಸಿ ಮಿಂಚಿದರು.

ನಕಲಿ ಪ್ರಮಾಣಪತ್ರ ವಿತರಣೆ: ಆರೋಪ

ಜೈಪುರ (ಪಿಟಿಐ): ಭಾರತ ಕುಸ್ತಿ ಸಂಸ್ಥೆಯ (ಡಬ್ಲ್ಯುಎಫ್‌ಐ) ಅಮಾನತುಗೊಂಡಿರುವ ಆಡಳಿತ ಮಂಡಳಿ ಪುಣೆಯಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಕುಸ್ತಿ ಚಾಂಪಿಯನ್‌ಷಿಪ್‌ಗಳಿಗೆ ಯಾವುದೇ ಮಾನ್ಯತೆ ಇಲ್ಲ ಮತ್ತು ವಿತರಿಸಿರುವ ಪ್ರಮಾಣಪತ್ರಗಳು ನಕಲಿ ಎಂದು ಕುಸ್ತಿಪಟುಗಳಾದ ಸಾಕ್ಷಿ ಮಲಿಕ್ ಮತ್ತು ವಿನೇಶಾ ಫೋಗಾಟ್ ಶನಿವಾರ ಆರೋಪಿಸಿದ್ದಾರೆ.

'ಐಒಎ ತಾತ್ಕಾಲಿಕ ಸಮಿತಿಯು ಫೆಬ್ರವರಿ 2-5 ರಿಂದ ಜೈಪುರದಲ್ಲಿ ರಾಷ್ಟ್ರೀಯ ಚಾಂಪಿಯನ್‌ಷಿಪ್ ಆಯೋಜಿಸಿದೆ. ಅಮಾನತುಗೊಂಡ ಡಬ್ಲ್ಯುಎಫ್‌ಐ ಆಡಳಿತ ಮಂಡಳಿ ಪುಣೆಯಲ್ಲಿ ರಾಷ್ಟ್ರೀಯ ಪಂದ್ಯಗಳನ್ನು ಆಯೋಜಿಸುವ ಮೂಲಕ ತನ್ನ ಶಕ್ತಿ ಪ್ರದರ್ಶಿಸುತ್ತಿದೆ' ಎಂದು ಸಾಕ್ಷಿ ಹೇಳಿದರು.

'ಅವರು (ಡಬ್ಲ್ಯುಎಫ್‌ಐ) ರಾಷ್ಟ್ರೀಯ ಚಾಂಪಿಯನ್‌ಷಿಪ್ ನಡೆಸಿ ನಕಲಿ ಪ್ರಮಾಣಪತ್ರ ವಿತರಿಸಿದ್ದಾರೆ' ಎಂದು ಸಾಕ್ಷಿ ತಿಳಿಸಿದರು.

ಪಾಕ್ ವಿರುದ್ಧ ಡೇವಿಸ್ ಕಪ್: ಭಾರತಕ್ಕೆ 2–0 ಮುನ್ನಡೆ

ರಾಮಕುಮಾರ್, ಶ್ರೀರಾಮ್‌ಗೆ ಗೆಲುವು

ಇಸ್ಲಾಮಾಬಾದ್ (ಪಿಟಿಐ): ರಾಮಕುಮಾರ್ ರಾಮನಾಥನ್ ಮತ್ತು ಶ್ರೀರಾಮ್ ಬಾಲಾಜಿ ಅವರು ಪಾಕಿಸ್ತಾನದ ಎದುರಾಳಿಗಳ ವಿರುದ್ಧ ತಮ್ಮ ಸಿಂಗಲ್ಸ್ ಪಂದ್ಯಗಳನ್ನು ವಿಭಿನ್ನ ಶೈಲಿಯಲ್ಲಿ ಗೆಲ್ಲುವುದರೊಂದಿಗೆ ಭಾರತ ತಂಡ, ಕುತೂಹಲ ಕೆರಳಿಸಿದ ಡೇವಿಸ್ ಕಪ್ ವಿಶ್ವ ಗುಂಪಿನ (1) ಪ್ಲೇ ಆಫ್ ಪಂದ್ಯದಲ್ಲಿ ಮೊದಲ ದಿನವಾದ ಶನಿವಾರ 2–0 ಮುನ್ನಡೆ ಸಾಧಿಸಿತು.

ರಾಮಕುಮಾರ್ ವಿರುದ್ಧ ಮೊದಲ ಸಿಂಗಲ್ಸ್‌ನಲ್ಲಿ ಅನುಭವಿ ಐಸಾಮ್ ಉಲ್ ಹಕ್ ಖುರೇಷಿ ಪ್ರಬಲ ಹೋರಾಟವನ್ನೇ ನೀಡಿದರು.

ಆದರೆ ಪಂದ್ಯದ ತೀವ್ರತೆ, ಥರಗುಟ್ಟುವ ಚಳಿ ಮತ್ತು ಮೂರನೇ ಸೆಟ್‌ನಲ್ಲಿ ಮಂಡಿ ರಜ್ಜು (ಹ್ಯಾಮ್‌ಸ್ಟ್ರಿಂಗ್) ನೋವಿನಿಂದ ಬಳಲಿದ ಕಾರಣ ಹೋರಾಟ ಎರಡನೇ ಸೆಟ್‌ವರೆಗೆ ಉಳಿಯಿತು. ಪಂದ್ಯದುದ್ದಕ್ಕೂ ಉತ್ತಮ ಸರ್ವ್ ಮತ್ತು ಎರಡನೇ ಸೆಟ್‌ನಲ್ಲಿ ಉತ್ತಮ ರಿಟರ್ನ್‌ಗಳನ್ನು ಮಾಡಿದ ರಾಮಕುಮಾರ್ 6–7 (3), 7–6 (4), 6–0 ಯಿಂದ 43 ವರ್ಷದ ಐಸಾಮ್ ಸವಾಲನ್ನು ಬದಿಗೊತ್ತಿದರು.

ಪಂದ್ಯದಲ್ಲಿ ಐಸಾಮ್ 10 ಡಬಲ್ ಫಾಲ್ಟ್‌ಗಳನ್ನು ಎಸಗಿದರು. ಇನ್ನೊಂದೆಡೆ ರಾಮನಾಥನ್ ಒಂಬತ್ತು ಗೇಮ್‌ಗಳಲ್ಲಿ ಎದುರಾಳಿಗೆ ಒಂದೂ ಪಾಯಿಂಟ್ ಕೊಡದೇ ಹಿಡಿತ ಪಡೆದರು.

ಮೊದಲ ಸೆಟ್ ಹಿನ್ನಡೆ ಅನುಭವಿಸಿದ್ದ ರಾಮನಾಥನ್, ಎರಡನೇ ಸೆಟ್‌ನ ಎಂಟನೇ ಗೇಮ್‌ನಲ್ಲಿ 15–40 ಹಿನ್ನಡೆಯಲ್ಲಿದ್ದರು. ಆದರೆ ಅಲ್ಲಿಂದ ಚೇತರಿಸಿ ಗೇಮ್ ಗೆದ್ದ ಬಳಿಕ ಅವರು ಪಂದ್ಯದ ಮೇಲೆ ನಿಯಂತ್ರಣ ಪಡೆದರು. ಅವರು 20 ಏಸ್‌ಗಳನ್ನೂ ಸಿಡಿಸಿದರು.

ಡಬಲ್ಸ್ ಪರಿಣತ ಬಾಲಾಜಿ ಅವರು ಎರಡನೇ ಸಿಂಗಲ್ಸ್‌ನಲ್ಲಿ ಅಖೀಲ್ ಖಾನ್ ಅವರನ್ನು 7–5, 6–3 ರಿಂದ ಹಿಮ್ಮೆಟ್ಟಿಸಿದರು.

ರಾಮಕುಮಾರ್ ರಾಮನಾಥನ್ ಎಎಫ್‌ಪಿ ಚಿತ್ರ

ಒಂದೂಕಾಲು ಗಂಟೆ ಕಾಲ ನಡೆದ ಈ ಪಂದ್ಯದ ಮಧ್ಯದಲ್ಲಿ ಕೆಲಕಾಲ ಮಳೆಯೂ ಆಗಿತ್ತು. ಮೊದಲ ಸೆಟ್ ಮತ್ತು ಎರಡನೇ ಸೆಟ್ ನಡುವೆ ಮಳೆಯಾಯಿತು.

ಬಾಲಾಜಿ ಪಂದ್ಯದಲ್ಲಿ ಹಿಡಿತ ಸಾಧಿಸಿದ್ದು, ಎರಡೂ ಸೆಟ್‌ಗಳಲ್ಲಿ ತಲಾ ಒಂದು ಬಾರಿ ಎದುರಾಳಿಯ ಸರ್ವ್ ಬ್ರೇಕ್ ಮಾಡಿದರು.

ಅಂಕಣದಲ್ಲಿ ಚುರುಕಿನ ಚಲನೆ, ಪ್ರಬಲ ಸರ್ವ್, ನಾಜೂಕು 'ಡ್ರಾಪ್'ಗಳಿಂದ ಅವರು ಹೆಚ್ಚು ಹೋರಾಟವಿಲ್ಲದೇ ಗೆಲುವನ್ನು ದಾಖಲಿಸಿದರು.ಭಾರತ ಇನ್ನೊಂದು ಪಂದ್ಯ ಗೆದ್ದರೆ ವಿಶ್ವ ಗುಂಪು 1ಕ್ಕೆ ಮುನ್ನಡೆಯಲಿದೆ.

ಯೂಕಿ ಭಾಂಬ್ರಿ ಮತ್ತು ಸಾಕೇತ್ ಮೈನೇನಿ ಅವರು ಭಾನುವಾರ ನಡೆಯುವ ಡಬಲ್ಸ್ ಪಂದ್ಯದಲ್ಲಿ ಮುಝಾಮಿಲ್ ಮುರ್ತಾಝಾ- ಬರ್ಕತ್ ಉಲ್ಲಾ ಅವರನ್ನು ಎದುರಿಸಲಿದ್ದಾರೆ.

ಸೈಫ್ ಅಜೇಯ ಅರ್ಧಶತಕ; ರೈಲ್ವೇಸ್ ಪ್ರತಿಹೋರಾಟ

ವೈಶಾಖ

ಸೂರತ್ (ಪಿಟಿಐ): ಬ್ಯಾಟರ್ ಮೊಹಮ್ಮದ್ ಸೈಫ್ ಅವರ ಅಜೇಯ ಅರ್ಧ ಶತಕದ (51*, 4x4, 6x1) ನೆರವಿನಿಂದ ರೈಲ್ವೇಸ್ ತಂಡ ರಣಜಿ ಟ್ರೋಫಿ 'ಸಿ' ಗುಂಪಿನ ಪಂದ್ಯದಲ್ಲಿ ಪ್ರತಿಹೋರಾಟ ತೋರಿದ್ದು, ಪಂದ್ಯ ಕುತೂಹಲಕರ ಘಟ್ಟಕ್ಕೆ ತಲುಪಿದೆ. ಇದಕ್ಕೆ ಮೊದಲು, ಕರ್ನಾಟಕ 19 ರನ್‌ಗಳ ಮೊದಲ ಇನಿಂಗ್ಸ್ ಮುನ್ನಡೆ ಪಡೆದಿತ್ತು.

ಶನಿವಾರ ಎರಡನೇ ದಿನದಾಟ ಮುಗಿದಾಗ ರೈಲ್ವೇಸ್ ಎರಡನೇ ಇನಿಂಗ್ಸ್‌ನಲ್ಲಿ 8 ವಿಕೆಟ್‌ಗೆ 209 ರನ್ ಗಳಿಸಿದೆ. ಒಟ್ಟಾರೆ 190 ರನ್‌ಗಳ ಮುನ್ನಡೆ. ಆದರೆ ನಾಯಕ ಮಯಂಕ್ ಅಗರವಾಲ್ ಈ ಪಂದ್ಯದಲ್ಲಿ ಆಡದಿರುವ ಕಾರಣ, ಈ ಮೊತ್ತ ಕರ್ನಾಟಕಕ್ಕೆ ಸವಾಲಾಗುವ ಸಾಧ್ಯತೆಯಿದೆ.

ರೈಲ್ವೇಸ್‌ನ 155 ರನ್‌ಗಳಿಗೆ ಉತ್ತರವಾಗಿ ಶುಕ್ರವಾರ 6 ವಿಕೆಟ್‌ಗೆ 90 ರನ್ ಗಳಿಸಿದ್ದ ಕರ್ನಾಟಕ ಕೆಳಕ್ರಮಾಂಕದ ಆಟಗಾರರ ಪ್ರತಿರೋಧದಿಂದ ಅಲ್ಪ ಮುನ್ನಡೆ ಪಡೆಯುವಲ್ಲಿ ಯಶಸ್ವಿಯಾಯಿತು. ಒಂದು ಹಂತದಲ್ಲಿ 137 ರನ್‌ಗಳಿಗೆ 8 ವಿಕೆಟ್ ಕಳೆದುಕೊಂಡಿದ್ದ ಕರ್ನಾಟಕ ತಂಡಕ್ಕೆ ವಿಕೆಟ್ ಕೀಪರ್ ಶರತ್ ಶ್ರೀನಿವಾಸ್ (24) ಮತ್ತು ವೈಶಾಖ ವಿಜಯಕುಮಾರ್ (24) 30 ರನ್ ಸೇರಿಸಿ ನೆರವಿಗೆ ಬಂದರು.

ಎಡಗೈ ಸ್ಪಿನ್ನರ್‌ಗಳಾದ ಆಕಾಶ್ ಪಾಂಡೆ (63ಕ್ಕೆ5) ಮತ್ತು ಅಯಾನ್ ಚೌಧರಿ (39ಕ್ಕೆ4) ಅವರು ರೈಲ್ವೇಸ್‌ನ ಯಶಸ್ವಿ ಬೌಲರ್‌ಗಳೆನಿಸಿದರು. ರೈಲ್ವೇಸ್ ಎರಡನೇ ಇನಿಂಗ್ಸ್‌ನಲ್ಲಿ 13 ರನ್‌ಗಳಾಗುಷ್ಟರಲ್ಲಿ ಆರಂಭ ಆಟಗಾರರನ್ನು ಕಳೆದುಕೊಂಡಿತ್ತು. ಆದರೆ ಸೈಫ್ ಎರಡು ಉಪಯುಕ್ತ ಜೊತೆಯಾಟಗಳಿಂದ ತಂಡದ ನೆರವಿಗೆ ಬಂದರು.

ನಾಯಕ ಪ್ರಥಮ್ ಸಿಂಗ್ (33) ಜೊತೆ ಮೂರನೇ ವಿಕೆಟ್‌ಗೆ ಬಂದ 69 ರನ್ ಸೇರಿಸಿದ ಸೈಫ್, ನಂತರ ಯುವರಾಜ್ ಸಿಂಗ್ (28) ಸಂಗಡ ನಾಲ್ಕನೇ ವಿಕೆಟ್‌ಗೆ 44 ರನ್ ಸೇರಿಸಿದರು. ವಿಕೆಟ್ ಕೀಪರ್ ಸೂರಜ್ ಅಹುಜಾ 68 ಎಸೆತಗಳಲ್ಲಿ 48 ರನ್ ಹೊಡೆದರು. ಕರ್ನಾಟಕ ಕಡೆ ವೈಶಾಖ ವಿಜಯಕುಮಾರ್ 45 ರನ್ನಿಗೆ 3 ವಿಕೆಟ್ ಪಡೆದು ಯಶಸ್ವಿ ಎನಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ರೈಲ್ವೇಸ್: 155, ಕರ್ನಾಟಕ: 50.5 ಓವರುಗಳಲ್ಲಿ 174 (ಶರತ್ ಶ್ರೀನಿವಾಸ್ 24, ವೈಶಾಖ ವಿಜಯಕುಮರ್ 24; ಅಕ್ಷಯ್ ಪಾಂಡೆ 63ಕ್ಕೆ5, ಅಯಾನ್ ಚೌಧರಿ 39ಕ್ಕೆ4); ಎರಡನೇ ಇನಿಂಗ್ಸ್: ರೈಲ್ವೇಸ್: 62 ಓವರುಗಳಲ್ಲಿ 8 ವಿಕೆಟ್‌ಗೆ 209 (ಪ್ರಥಮ್ ಸಿಂಗ್ 33, ಮೊಹಮ್ಮದ್ ಸೈಫ್ ಬ್ಯಾಟಿಂಗ್ 51, ಸೂರಜ್ ಅಹುಜಾ 48; ವೈಶಾಖ ವಿಜಯಕುಮಾರ್ 45ಕ್ಕೆ3, ವಿದ್ವತ್ ಕಾವೇರಪ್ಪ 35ಕ್ಕೆ2).

ಪಾಕ್‌ಗೆ 5 ರನ್ ಜಯ

ಬೆನೋನಿ (ದಕ್ಷಿಣ ಆಫ್ರಿಕಾ): ವೇಗದ ಬೌಲರ್ ಉಬೇದ್ ಶಾ ಅವರ (44ಕ್ಕೆ5) ಪರಿಣಾಮಕಾರಿ ಬೌಲಿಂಗ್ ನೆರವಿನಿಂದ ಪಾಕಿಸ್ತಾನ ತಂಡ, 19 ವರ್ಷದೊಳಗಿನವರ ಐಸಿಸಿ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಸೂಪರ್ ಸಿಕ್ಸ್ ಪಂದ್ಯದಲ್ಲಿ ಬಾಂಗ್ಲಾದೇಶ ತಂಡದ ಮೇಲೆ ಶನಿವಾರ ಐದು ರನ್‌ಗಳ ರೋಚಕ ಜಯಪಡೆಯಿತು.

ಸಂಕ್ಷಿಪ್ತ ಸ್ಕೋರ್: ಪಾಕಿಸ್ತಾನ: 40.4 ಓವರುಗಳಲ್ಲಿ 155 (ಶಾಜೇಬ್ ಖಾನ್ 26, ಅರಾಫತ್ ಮಿನ್ಹಾಸ್ 34; ರೊಹನತ್ ದೌಲಾ ಬೋರ್ಸನ್ 24ಕ್ಕೆ4,); ಬಾಂಗ್ಲಾದೇಶ: 35.5 ಓವರುಗಳಲ್ಲಿ 150 (ಮೊಹಮ್ಮದ್ ಶಿಹಾಬ್ ಜೇಮ್ಸ್ 26; ಉಬೇದ್ ಖಾನ್ 44ಕ್ಕೆ5, ಅಲಿ ರೇಝಾ 44ಕ್ಕೆ3).

ಬ್ಯಾಡ್ಮಿಂಟನ್ ತಾರೆ ಚಿರಾಗ್ ಶೆಟ್ಟಿ ಸಂತಸ

ಡಬಲ್ಸ್ ಆಕರ್ಷಣೆಯೂ ಈಗ ದುಪ್ಪಟ್ಟು

• ಗಿರೀಶ ದೊಡ್ಡಮನಿ

ಬೆಂಗಳೂರು: ಕೆಲವು ವರ್ಷಗಳ ಹಿಂದಷ್ಟೇ ಭಾರತದ ಬ್ಯಾಡ್ಮಿಂಟನ್ ಕ್ರೀಡೆಯಲ್ಲಿ ಡಬಲ್ಸ್ ವಿಭಾಗದ ಪಂದ್ಯಗಳಿಗೆ ಅಷ್ಟೇನೂ ಆಕರ್ಷಣೆ ಇರುತ್ತಿರಲಿಲ್ಲ. ಸಿಂಗಲ್ಸ್ ಆಟಗಾರರಿಗೆ ಸಿಗುತ್ತಿದ್ದ ತಾರಾಪಟ್ಟ ಕೂಡ ಜೋಡಿ ಆಟಗಾರರಿಗೆ ಸಿಗುತ್ತಿರಲಿಲ್ಲ. ಆದರೆ ಕಳೆದ ನಾಲ್ಕು ವರ್ಷಗಳಲ್ಲಿ ಸ್ಥಿತಿ ಬದಲಾಗಿದೆ. ಯಾವುದೇ ಅಂತರ ರಾಷ್ಟ್ರೀಯ ಬ್ಯಾಡ್ಮಿಂಟನ್ ಇರಲಿ; ಸಿಂಗಲ್ಸ್ ಪಂದ್ಯಗಳಷ್ಟೇ ಡಬಲ್ಸ್ ಆಟಕ್ಕೂ ಆಕರ್ಷಣೆ ಬೆಳೆದಿದೆ.

ಅದಕ್ಕೆ ಪ್ರಮುಖ ಕಾರಣ ಚಿರಾಗ್ ಶೆಟ್ಟಿ ಮತ್ತು ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಜೋಡಿಯ ಯಶಸ್ಸು.

ಶನಿವಾರ ಉದ್ಯಾನನಗರಿಯಲ್ಲಿ ನಿಪ್ಪಾನ್ ಪೇಂಟ್ಸ್ ಏರ್ಪಡಿಸಿದ್ದ ಮೀಟ್ ಆ್ಯಂಡ್ ಗ್ರೀಟ್ ಕಾರ್ಯಕ್ರಮಕ್ಕೆ ಬಂದಿದ್ದ ಚಿರಾಗ್ ಅವರ ಸುತ್ತ ಅಭಿಮಾನಿಗಳ ದೊಡ್ಡ ದಂಡು ಸೇರಿತ್ತು.

ಟೀಶರ್ಟ್, ಕ್ಯಾಪ್, ರೆಕೆಟ್ ಮತ್ತು ಶಟಲ್ ಕಾಕ್‌ಗಳ ಮೇಲೆ ಅವರಿಂದ ಹಸ್ತಾಕ್ಷರ ಪಡೆದವರು ಹಲವರು.

ಸೆಲ್ಫಿ ಕ್ಲಿಕ್ಕಿಸಿಕೊಂಡವರಿ ಗೇನೂ ಕಮ್ಮಿಯಿಲ್ಲ. ಇದರ ಮಧ್ಯೆಯೇ ಅವರು 'ಪ್ರಜಾವಾಣಿ'ಗೆ ನೀಡಿದ ಸಂದರ್ಶನದ ಸಾರ ಇಲ್ಲಿದೆ.

'ಬ್ಯಾಡ್ಮಿಂಟನ್ ಕ್ರೀಡೆಯಲ್ಲಿ ಡಬಲ್ಸ್ ವಿಭಾಗದ ಆಟಕ್ಕೆ ಮೊದಲಿನಿಂದಲೂ ಆಕರ್ಷಣೆ ಕಡಿಮೆ. ನಾನು ಆಡಲು ಆರಂಭಿಸಿದಾಗಲೂ ಅದೇ ರೀತಿ ಇತ್ತು. ವಿಶ್ವ ಚಾಂಪಿಯನ್‌ಪಿಪ್‌ನಲ್ಲಿ ಕಂಚು ಗೆದ್ದ ಭಾರತದ ಮೊದಲ ಜೋಡಿ ನಮ್ಮದು. ನಂತರ ಹಲವು ಟೂರ್ನಿಗಳಲ್ಲಿ ಸಾಧಿಸಿದ ಯಶಸ್ಸಿನಿಂದಾಗಿ ಜನಮನ್ನಣೆ ಹೆಚ್ಚುತ್ತಿದೆ. ಮುಂದಿನ ನಾಲ್ಕೈದು ವರ್ಷಗಳಲ್ಲಿ ಹೆಚ್ಚು ಮಂದಿ ಡಬಲ್ಸ್‌ನತ್ತ ಬರುವ ಭರವಸೆ ಮೂಡಿದೆ' ಎಂದರು.

ಚಿರಾಗ್ ಶೆಟ್ಟಿ

ಕಾಮನ್‌ವೆಲ್ತ್ ಗೇಮ್ಸ್, ಏಷ್ಯನ್ ಗೇಮ್ಸ್ ಹಾಗೂ ಥಾಮಸ್ ಕಪ್ ಸೇರಿದಂತೆ ಹಲವು ಪ್ರಮುಖ ಟೂರ್ನಿಗಳಲ್ಲಿ ಈ ಜೋಡಿಯು ಪದಕ ಸಾಧನೆ ಮಾಡಿದೆ. ಯಶಸ್ಸಿನ ಹಿಂದಿನ ಗುಟ್ಟು ಬಿಚ್ಚಿಟ್ಟರು.

'ನನ್ನ ಹಾಗೂ ಸಾತ್ವಿಕ್ ನಡುವೆ ಉತ್ತಮ ಹೊಂದಾಣಿಕೆ ಇದೆ. ಅವರಲ್ಲಿರುವ ಸಹನೆ ಮತ್ತು ಸ್ನೇಹದ ಗುಣವನ್ನು ನಾನು ಸದಾ ಗೌರವಿಸುತ್ತೇನೆ. ಅವರು ಕೂಡ ನನ್ನ ನಿರ್ಧಾರಗಳನ್ನು ಮತ್ತು ಸಲಹೆಗಳನ್ನು ಒಪ್ಪಿಕೊಳ್ಳುತ್ತಾರೆ. ದೇಶಕ್ಕೆ ಗೆಲುವಿನ ಕಾಣಿಕೆ ನೀಡುವ ಒಂದೇ ಗುರಿ ಮತ್ತು ಮನೋಭಾವ ನಮ್ಮಲ್ಲಿದೆ. ಆದ್ದರಿಂದ ಇಷ್ಟು ದೂರ ಬಂದಿದ್ದೇವೆ. ಇದು ಒಲಿಂಪಿಕ್ ವರ್ಷ. ನಮ್ಮ ಸಿದ್ಧತೆಗಳು ಬಹಳ ಗಂಭೀರವಾಗಿ ಸಾಗುತ್ತಿದೆ. ಒಲಿಂಪಿಕ್ಸ್‌ನಲ್ಲಿ ಪದಕ ಜಯಿಸುವುದು ನಮ್ಮ ಗುರಿ' ಎಂದರು.

'ಗೆಲುವಿನ ನಂತರ ಡ್ಯಾನ್ಸ್ ಮಾಡಿ ಸಂಭ್ರಮಿಸುವುದು ಪೂರ್ವನಿಯೋಜಿತ ವೇನೂ ಆಗಿರಲಿಲ್ಲ. ಥಾಮಸ್ ಕಪ್ ಗೆದ್ದ ಸಂದರ್ಭದಲ್ಲಿ ನಾನು ಜೆರ್ಸಿ ತೆಗೆದುಹಾಕಿ ನರ್ತಿಸಿದೆ. ಸಾತ್ವಿಕ್ ಜೊತೆ ನೀಡಿದರು. ಅದು ನಮ್ಮ ಸಂತಸದ ಭರದಿಂದ ಬಂದಿದ್ದು. ಈಗ ಅದು ನಮ್ಮ ಸಂಭ್ರಮದ ಶೈಲಿಯೇ ಆಗಿಬಿಟ್ಟಿದೆ' ಎಂದರು.

'ನನಗೂ ಕರ್ನಾಟಕಕ್ಕೂ ಬಹಳ ನಂಟಿದೆ. ಮಂಗಳೂರು ನಮ್ಮ ಕುಟುಂಬದ ಮೂಲ ಊರು. ಬಾಲ್ಯದಲ್ಲಿ ಪ್ರಕಾಶ್ ಪಡುಕೋಣೆ ಅಕಾಡೆಮಿಯಲ್ಲಿ ತರಬೇತಿ ಪಡೆದಿದ್ದೇನೆ. ಇಲ್ಲಿಗೆ ಬರುವುದೆಂದರೆ ನನಗೆ ಯಾವಾಗಲೂ ಸಂತೋಷ. ಈ ಊರಿನಲ್ಲಿ ಬಹಳಷ್ಟು ಬ್ಯಾಡ್ಮಿಂಟನ್ ಪ್ರತಿಭೆಗಳಿವೆ. ಅವರ ಬೆಳವಣಿಗೆ ನೋಡಲು ಸಂತಸವಾಗು ತ್ತಿದೆ' ಎಂದು ಚಿರಾಗ್ ಹೇಳಿದರು.

ಸಂಕ್ಷಿಪ್ತ ಸುದ್ದಿ

ವರ್ಷಾ, ಆಕಾಶ್‌ಗೆ ಚಿನ್ನದ ಪದಕ

ಲೇಹ್ (ಲಡಾಖ್), (ಪಿಟಿಐ): ಭಾರತದ ಪ್ರಮುಖ ಐಸ್ ಸ್ಕೇಟರ್ ವರ್ಷಾ ಪುರಾಣಿಕ್ ಮತ್ತೊಮ್ಮೆ ಸಾಮರ್ಥ್ಯ ತೋರಿ ಖೇಲೊ ಇಂಡಿಯಾ ಚಳಿಗಾಲದ ಕ್ರೀಡೆಗಳಲ್ಲಿ ಮಹಿಳೆಯರ 300 ಮೀ. ಶಾರ್ಟ್ ಟ್ರ್ಯಾಕ್ ರೇಸ್ (17 ವರ್ಷದ ಮೇಲ್ಪಟ್ಟವರ ವಿಭಾಗ)ನಲ್ಲಿ ಶನಿವಾರ ಚಿನ್ನ ಗೆದ್ದರು.

ಕರ್ನಾಟಕದ ಮತ್ತೋರ್ವ ಸ್ಕೇಟರ್ ಆಕಾಶ್ ಆರಾಧ್ಯ ಪುರುಷರ ವಿಭಾಗದಲ್ಲಿ ಎರಡನೇ ವೈಯಕ್ತಿಕ ಚಿನ್ನ ಗೆದ್ದರು. ವೃತ್ತಿಯಲ್ಲಿ ಮೈಕ್ರೊ ಬಯಾಲಜಿಸ್ಟ್ ಆಗಿರುವ 37 ವರ್ಷದ ವರ್ಷಾ 39.81 ಸೆ.ಗಳಲ್ಲಿ ಗುರಿಮುಟ್ಟಿದರು.ಕರ್ನಾಟಕ ತಂಡ ಇಲ್ಲಿಯವರೆಗೆ ಇತ್ಯರ್ಥವಾದ ಐದು ಚಿನ್ನಗಳಲ್ಲಿ ಮೂರನ್ನು ಗಳಿಸಿದ್ದು, ಪದಕ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ.

ಪಂಜಾಬ್‌ಗೆ ಮಣಿದ ಬೆಂಗಳೂರು ಎಫ್‌ಸಿ

ನವದೆಹಲಿ (ಪಿಟಿಐ): ಪಂಜಾಬ್ ಎಫ್‌ಸಿ ತಂಡ, ಶನಿವಾರ ನಡೆದ ಇಂಡಿಯನ್ ಸೂಪರ್ ಲೀಗ್ 13ನೇ ಸುತ್ತಿನ ಪಂದ್ಯದಲ್ಲಿ ಬೆಂಗಳೂರು ಎಫ್‌ಸಿ ತಂಡವನ್ನು 3–1 ಗೋಲುಗಳಿಂದ ಸೋಲಿಸಿತು. ವಿಲ್ಮರ್ ಜೋರ್ಡಾನ್ ಗಿಲ್ (23ನೇ ನಿಮಿಷ), ಲ್ಯುಕಾ ಮೆಯ್ಸೆನ್ (71ನೇ) ಮತ್ತು ಮದೀಹ್ ತಲಾಲ್ (77ನೇ) ಅವರು ಆತಿಥೇಯ ತಂಡದ ಪರ ಗೋಲುಗಳನ್ನು ಗಳಿಸಿದರು. ನಾಯಕ ಸುನೀಲ್ ಚೆಟ್ರಿ (15ನೇ ನಿಮಿಷ) ಬೆಂಗಳೂರು ತಂಡದ ಏಕೈಕ ಗೋಲನ್ನು ಗಳಿಸಿದರು. ವಿರಾಮದ ವೇಳೆಗೆ ಸ್ಕೋರ್ 1–1 ರಲ್ಲಿ ಸಮನಾಗಿತ್ತು. ಈ ಹಿನ್ನಡೆಯಿಂದ ಬೆಂಗಳೂರು ಎಫ್‌ಸಿ 9ನೇ ಸ್ಥಾನದಿಂದ 10ನೇ ಸ್ಥಾನಕ್ಕೆ ಕುಸಿಯಿತು. ಬೆಂಗಳೂರು ತಂಡ 11 ಪಾಯಿಂಟ್ಸ್ ಹೊಂದಿದೆ.

ಭಾರತ 'ಎ' ಮೇಲುಗೈ

ಅಹಮದಾಬಾದ್ (ಪಿಟಿಐ): ಬಿ.ಸಾಯಿ ಸುದರ್ಶನ್ (117, 240ಎ) ಅವರ ಶತಕದ ನೆರವಿನಿಂದ ಭಾರತ 'ಎ' ತಂಡ ಮೂರನೇ ಹಾಗೂ ಅಂತಿಮ 'ಟೆಸ್ಟ್' ಪಂದ್ಯದ ಮೂರನೇ ದಿನವಾದ ಶನಿವಾರ ಇಂಗ್ಲೆಂಡ್ ಲಯನ್ಸ್ ವಿರುದ್ಧ ಹಿಡಿತ ಪಡೆದಿದೆ.

ಸಂಕ್ಷಿಪ್ತ ಸ್ಕೋರ್: ಭಾರತ ಎ: 192 ಮತ್ತು 107.1 ಓವರುಗಳಲ್ಲಿ 409 (ಸಾಯಿ ಸುದರ್ಶನ್ 117, ಸಾರಾನ್ಶ್ ಜೈನ್ 63, ಕುಮಾರ ಕುಶಾಗ್ರ 40; ದಾನ್ ಮೊಸ್ಲಿ 43ಕ್ಕೆ3); ಇಂಗ್ಲೆಂಡ್ ಲಯನ್ಸ್: 199 ಮತ್ತು 24 ಓವರುಗಳಲ್ಲಿ 2 ವಿಕೆಟ್‌ಗೆ 83 (ಅಲೆಕ್ಸ್ ಲೀಸ್ ಬ್ಯಾಟಿಂಗ್ 41; ಸಾರಾನ್ಶ್ ಜೈನ್ 16ಕ್ಕೆ2)

ಪ್ರಜಾವಾಣಿ ಭಾನುವಾರ • ಫೆಬ್ರುವರಿ 4, 2024

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

TO LET

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

BDA
APPROVED PLOTS

OFF-MYSORE ROAD,
KENGERI, RAMOHALLI

9972 58 58 58

30 x 40 PLOT STARTS FROM

₹ 54 lakhs*

11 Minutes To Challaghatta Metro Station

scan QR to Location

scan QR to know more
www.vatavarana.in

E-mail
vatavaranaid@gmail.com

Website
www.vatavarana.in

RERA
CERTIFIED
PRM/KA/RERA/1251/310/PR/300923/006298

Vātāvaraṇa
ವಾತಾವರಣ

YOUNIVERSE REALTY

AMENITIES

